ದಕ್ಷಿಣ ಕನ್ನಡದ

ಸಾಹಿತ್ಯೋಪಾಸಕರು!



ನೀರ್ಪಾಜೆ ಭೀಮ ಭಟ್ಟ

ದಕ್ಷಿಣ ಕನ್ನಡದ ಸಾಹಿತ್ಯೋಪಾಸಕರು

ನೀರ್ಪಾಜೆ ಭೀಮ ಭಟ್ಟ

೧೯೯೭

ಅಭ್ಯುದಯ ಪ್ರಕಾಶನ
ಅಂಚೆ : ಕನ್ಯಾನ - 574 279

DAKSHINA KANNADATHA SAHITYOPASAKARU

by
Neerpaje Bheema Bhat
Kanyana

FIRST EDITION : **1997, December**

PAGES : **146+8**

PRICE : **Rupees Sixty**

PUBLISHER : **ABHYUDAYA PRAKASHANA**
P.o. KANYANA - 574 279

PRINTERS : **JANATHA DIGITAL PRINTERS**
VITTAL - 574 243
PH : (O) 52151 (R) 52461

ನಿವೇದನೆ

ಕನ್ನಡಮ್ಮನ ಸೇವೆಯಲ್ಲಿ ದಕ್ಷಿಣ ಕನ್ನಡದ ಸಾಹಿತಿಗಳು ಉತ್ತಮ ದಾಖಲೆ ನಿರ್ಮಿಸಿದ್ದಾರೆ. ಕನ್ನಡ ನವೋದಯದ ಆಚಾರ್ಯ ಪುರುಷರಾಗಿಯೂ ಈ ಜಿಲ್ಲೆಯ ಅನೇಕ ಮಂದಿ ಸಾಹಿತಿಗಳು ವಿರಾಜಮಾನರಾಗಿದ್ದಾರೆ. ಅವರ ಕಿರುಪರಿಚಯ, ಸಾಹಿತ್ಯಕೃತಿಗಳ ಸೂಕ್ಷ್ಮ ನಿರೂಪಣೆಯಿಂದ ನಮ್ಮ ಇಂದಿನ ಯುವ ಜನಾಂಗಕ್ಕೆ ಹೆಚ್ಚಿನ ಲಾಭವಾಗಬಹುದು. ಸಾಹಿತ್ಯದ ಕುರಿತು ಆಸಕ್ತಿ ಹೆಚ್ಚಿಸಲು ಸಾಧ್ಯವಾಗಬಹುದು ಎಂಬ ನಿರೀಕ್ಷೆಯಿಂದ ಈ ಕೃತಿಯನ್ನೂ ಪ್ರಕಟಿಸಲಾಗಿದೆ. ಇಲ್ಲಿ ವರ್ಣಿತರಾದವರಲ್ಲಿ ಹೆಚ್ಚಿನವರೂ ಇಂದು ಇಲ್ಲವಾಗಿದ್ದಾರೆ. ಅಂಥವರನ್ನು ಇಲ್ಲಿ ಸ್ಮರಿಸಲಾಗಿದೆ. ಎಂಭತ್ತರ ಮೇಲಿನ ಬೆರಳೆಣಿಕೆಯ ನಾಡಿನ ಹಿರಿಯ ಮಹಾ ಚೇತನಗಳನ್ನು ಮುಂದಿಟ್ಟುಕೊಳ್ಳಲಾಗಿದೆ. ನಮ್ಮ ಜಿಲ್ಲೆಯ ಸಾಹಿತ್ಯ ಸಂಪತ್ತನ್ನು ಹೆಚ್ಚಿಸುತ್ತಿರುವ ಇನ್ನೆಷ್ಟೋ ಮಂದಿ ಹಿರಿಯ ಕಿರಿಯ ಸಾಹಿತಿಗಳನ್ನು ಸೇರಿಸಿಕೊಳ್ಳಬೇಕಾಗಿತ್ತಾದರೂ ಅದನ್ನು ಇನ್ನೊಂದು ಅವಕಾಶಕ್ಕಾಗಿ ನಿರೀಕ್ಷಿಸಿ ಪ್ರಕೃತದ ಕೃತಿಯನ್ನು ಓದುಗರಿಗೆ ಅರ್ಪಿಸಲಾಗಿದೆ.

ಇಲ್ಲಿರುವ ಹತ್ತಾರು ಲೇಖನಗಳು ಸಾಹಿತ್ಯ ಪರಿಷತ್ತಿನ "ಕನ್ನಡ ನುಡಿ" ಸಂಯುಕ್ತ ಕರ್ನಾಟಕ, ಯುಗಪುರುಷ, ರಾಷ್ಟ್ರಮತ ಮೊದಲಾದ ಪತ್ರಿಕೆಗಳಲ್ಲಿ ಮೂವತ್ತೈದು ವರ್ಷಗಳ ಹಿಂದೆಯೇ ಬೆಳಕು ಕಂಡಿವೆ. ನಾಡಿನ ಇನ್ನೆಷ್ಟೋ ಸಾಹಿತಿಗಳ ಬಗ್ಗೆ (ಉದಾ : ಚೆನ್ನವೀರ ಕಣವಿ, ಬೆಟಗೇರಿ, ಸಾಲಿ, ಮಾಸ್ತಿ ಮುಂತಾದವರ ಬಗ್ಗೆ) ಕೂಡಾ ಲೇಖನಗಳು ಪ್ರಕಟವಾಗಿವೆ. ಆದರೆ ಇಲ್ಲಿ ದಕ್ಷಿಣ ಕನ್ನಡಕ್ಕೆ ಮಾತ್ರ ಮಿತಿಯನ್ನು ಪರ್ಯಾಪ್ತಗೊಳಿಸಲಾಗಿದೆ.

ಅರುವತ್ತಾರನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಮಂಗಳೂರಲ್ಲಿ ನಡೆಯುತ್ತಿರುವ ಸುವರ್ಣ ಸಂದರ್ಭದಲ್ಲೆ ಜಿಲ್ಲೆಯ ಸಾಹಿತ್ಯಿಕ ಕೈಪಿಡಿಯಾಗಿರಲಿ ಎಂಬ ಆಕಾಂಕ್ಷೆ ಲೇಖಕನದು. ಇದರಲ್ಲಿ ಕೆಲ ಹೆಸರುಗಳು ಬಿಟ್ಟು ಹೋಗಿರಬಹುದು. ಅದನ್ನು ತಿದ್ದಿ ಸರಿಪಡಿಸಲು ಬದ್ಧನಿರುತ್ತೇನೆಂದು ನಮ್ರತೆಯಿಂದ ವಿಜ್ಞಾಪಿಸುತ್ತೇನೆ.

ಹೆಸರೇ ಸೂಚಿಸುವಂತೆ 'ಸಾಹಿತ್ಯೋಪಾಸಕರು' ಕೃತಿ ರಚನೆಯ ಹೊರತಾಗಿಯೂ ಸಾಹಿತ್ಯಕ್ಕಾಗಿ ಅಪಾರ ಸೇವೆ ಸಲ್ಲಿಸುತ್ತಿರುವ ಸಾಹಿತಿಗಳನ್ನು ಪ್ರೋತ್ಸಾಹಿಸಿ ಮುನ್ನಡೆಯುತ್ತಿರುವ ಸಹೃದಯ ಮಹನೀಯರು ಇಲ್ಲೆ ಕೀರ್ತಿತರಾಗಿರುವುದರ ಸಂಕೇತವಾಗಿದೆ.

ಈ ಕೃತಿಯಲ್ಲಿ ವರ್ಣಿತರಾದ ಕವಿ - ಸಾಹಿತಿಗಳ ಬಗ್ಗೆ ನನ್ನ ತಿಳುವಳಿಕೆಯ ಪರಿಮಿತಿಯ ನಿರೂಪಣೆಯಲ್ಲದೆ, ಇತರರ ಅಭಿಪ್ರಾಯ - ವಿಚಾರಗಳನ್ನು ಸಂಗ್ರಹಿಸುವ ಪ್ರಯತ್ನವನ್ನು ಮಾಡಿದ್ದೇನೆ. ಇದೊಂದು ಪರಿಚಯಾತ್ಮಕ ಗ್ರಂಥವಾಗಿ, ನಾಡಿನ ಹಿರಿಯ ಸಾಹಿತಿಗಳ ಬಗ್ಗೆ ಗೌರವ ಮೂಡಿಸುವ ಸಾಹಿತ್ಯಾಸಕ್ತಿ ಹೆಚ್ಚಿಸುವ ಲಕ್ಷ್ಯವನ್ನು ತಲುಪಬೇಕಾಗಿದೆ ಅಂತಾಗಲಿ ಎಂದು ಹಾರೈಸುತ್ತೇನೆ.

ಕನ್ಯಾನ — ಇತೀ ಶಮ್

8-12-1997 — (ನೀರ್ಪಾಜೆ ಭೀಮ ಭಟ್ಟ)

ಪರಿವಿಡಿ

ಈ ಲೇಖಕರ ಇತರ ಕೃತಿಗಳು

1.	ಕಾಶ್ಮೀರ ಸಂಧಾನ ಸಮುದ್ಯಮಃ	(ಸಂಸ್ಕೃತ ನಾಟಕ)
2.	ಹೈದರಾಬಾದ ವಿಜಯಂ	(ಸಂಸ್ಕೃತ ನಾಟಕ)
3.	ಗೋವಾ ಸ್ವಾತಂತ್ರ್ಯಂ	(ಸಂಸ್ಕೃತ ನಾಟಕ)
4.	ಮಾಲತೀ ಮಾಧವ	ನಾಟಕ ಕಥೆ
5.	ಊರ್ವಶಿ	ನಾಟಕ ಕಥೆ
6.	ಮಣ್ಣಿನ ಬಂಡಿ	ನಾಟಕ ಕಥೆ
7.	ಮಾಲವಿಕಾಗ್ನಿಮಿತ್ರ	ನಾಟಕ ಕಥೆ
8.	ಕಾವ್ಯ ಸಂಸಾರ	ವಿಮರ್ಶೆ
9.	ಕಾಲಿದಾಸ ಸಮೀಕ್ಷೆ	ವಿಮರ್ಶೆ
10.	ರಸವತ್ ಪ್ರಬಂಧಗಳು	ವಿಮರ್ಶೆ
11.	ಮನನ	(ಚಿಂತನ)
12.	ಕಲ್ಹಣನ ರಾಜ ತರಂಗಿಣಿ	(ಅನುವಾದ)
13.	ಅಂಟಿಕೊಳ್ಳುವ ಆಸಾಮಿಗಳು	(ವಿಡಂಬನೆ)
14.	ಚೌ . . . ಚೌ . . .	(ವಿಡಂಬನೆ)
15.	ಹಸ್ತ ಶುದ್ಧಿ	(ವಿಡಂಬನೆ)
16.	ವಿಕ್ರಮಾಂಕ ದೇವ ಚರಿತಂ (ಸದ್ಯವೇ ಪ್ರಕಟವಾಗಲಿದೆ)	(ಮಹಾಕಾವ್ಯದ ಅನುವಾದ)

ಮಹಾಕವಿ ಸೋಮರಾಜ

ಕನ್ನಡದ ಆದಿಕವಿ ಮಹಾಕವಿ ಪಂಪನೆಂಬ ಖ್ಯಾತಿ ಸರ್ವಸಮ್ಮತವಾದುದು.ದಕ್ಷಿಣ ಕನ್ನಡ ಜಿಲ್ಲೆಯ ಸಾಹಿತ್ಯದ ಕುರಿತು ಅವಲೋಕಿಸಿದಾಗ, ಈ ಜಿಲ್ಲೆಯ ಕವಿಗಳಲ್ಲಿ ಅಗ್ರಗಣ್ಯನಾಗಿ, 'ಜಿಲ್ಲೆಯ ಆದಿಕವಿ' ಎಂಬ ಹೆಸರಿಗೆ ಪಾತ್ರನಾಗಿ ನಾಡಿನಲ್ಲಿಯೂ ಉತ್ತಮ ಕವಿಯೆಂದು ಪರಿಗಣಿತನಾದ ಸೋಮರಾಜನು ಕಣ್ಣ ಮುಂದೆನಿಲ್ಲುತ್ತಾನೆ. ರತ್ನಾಕರ ವರ್ಣಿ, ಮುದ್ದಣ ಮೊದಲಾದವರಂತೆ ಆತನು ಜನರ ಮನದಂಗಳವನ್ನು ಅಷ್ಟಾಗಿ ಸೇರದಿದ್ದರೂ ಉತ್ತಮ ರಚನೆಯಿಂದ ಮಹಾಕವಿ ಎಂಬ ಬಿರುದಿಗೆ ಪಾತ್ರನಾಗಿರುವುದು ಸತ್ಯ!

ಹೆಸರೇ ತಿಳಿಸುವಂತೆ ಈತನು ಒಂದು ಅರಸು ಮನೆತನಕ್ಕೆ ಸೇರಿದವನೆಂದು ಸ್ಪಷ್ಟವಾಗುತ್ತದೆ ! ಪಶ್ಚಿಮ ಕರಾವಳೀ ತೀರದ ರಾಜ್ಯವನ್ನು ಆಳುತ್ತಿದ್ದ ವೀರಶೈವ ಮತಾವಲಂಬಿಗಳಾದ ಚೌಟರಾಜರಲ್ಲಿ ತಿರುಮಲ ರಾಯ, ಚಂದ್ರಶೇಖರ ಎಂಬವರ ಉಲ್ಲೇಖಗಳಿರುವುದರಿಂದ ಅವರ ವಂಶಕ್ಕೆ ಈತನು ಸೇರಿರಬಹುದೆಂಬ ಅಭಿಪ್ರಾಯವಿದೆ. ರಾಯಸದಲಿಂಗರಸನು ಬರೆಸಲು, ತಾನು ನಿರ್ಮಿಸಿದಂತೆ ಕವಿ ಗ್ರಂಥದ ಬಗ್ಗೆ ತಿಳಿಸಿದ್ದಾನೆ. 1144ನೆಯ ಚಿತ್ರಭಾನುವಿನಲ್ಲಿ ಅಂದರೆ ಕ್ರಿ. ಶ. 1222ರಲ್ಲಿ ಗ್ರಂಥ ಬರೆದುದಾಗಿ ಕವಿ ಹೇಳಿದ್ದಾನೆ. ತನ್ನ ಹಿಂದಿನ ಕವಿಗಳಾದ ಹರೀಶ್ವರ, ಕೆರೆಯ ಪದ್ಮರಸ, ಪಾಲ್ಕುರಿಕೆ ಸೋಮನಾಥ ಈ ಕವಿಗಳನ್ನು ಸ್ತುತಿಸಿದ್ದು, ಅಲ್ಲಮಪ್ರಭುವಿನ ಬಗ್ಗೆ ಹೆಚ್ಚಿನ ಭಕ್ತಿ ವ್ಯಕ್ತಪಡಿಸಿದ್ದಾನೆಂದು ಕವಿಚರಿತೆಯಲ್ಲಿ ಹೇಳಿದೆ.

ಉದ್ಭಟಕಾವ್ಯ ಅಥವಾ ಶೃಂಗಾರಸಾರ ಈತನ ಗ್ರಂಥದ ಹೆಸರು ! ವೀರಶೈವ ಕವಿಯಾತ! ಈ ಗ್ರಂಥವು ಕುಮಾರಪಾಲ ಘೂರ್ಜರನ ಅಥವಾ ಉದ್ಭಟನ ಚರಿತೆಯಾದು ದರಿಂದ ಇದಕ್ಕೆ ಉದ್ಭಟಕಾವ್ಯ ಎಂಬ ಹೆಸರು ಬಂದಿದೆ. ಇದು ಹನ್ನೆರಡು ಆಶ್ವಾಸಗಳಾಗಿ ವಿಂಗಡಿಸಲ್ಪಟ್ಟಿದೆ. ಗ್ರಂಥಾರಂಭದಲ್ಲಿ ವಿರೂಪಾಕ್ಷನ ಸ್ತುತಿಯಿದೆ. ಪಂಪಾಂಬಿಕೆ, ವಿಘ್ನೇಶ್ವರ, ವೀರಭದ್ರ, ಷಣ್ಮುಖ, ಅಲ್ಲಮಪ್ರಭು, ಮೊದಲಾದ ಮಹೇಶಪೂಜಕರನ್ನು ಹೊಗಳಿದ್ದಾನೆ. ಈ ಕವಿಯ ಬಂಧವು ಲಲಿತವಾಗಿದೆ. ಕವಿಚರಿತೆಯಿಂದ ಈತನ ಬಗ್ಗೆ ಇಷ್ಟು ವಿವರಗಳು ತಿಳಿದು ಬರುತ್ತವೆ.

ನಲ್ಲಳ ಬೇಟವಾತೊ ಶುಕಚಾರು ನಿನಾದಮೊ ವಾಗ್ವದೂಟಿಕಾ ।
ವಲ್ಲಕಿ ಯೊಪ್ಪುವಿಂಚರಮೊ ಚೈತ್ರಪಿಕ ಧ್ವನಿಯೋ ಸಮಂತಪೂ ॥
ವಿಲ್ಲನ ಚಾಪ ಸಂಜನಿತ ಮೋಹನ ನಾದಮೋ ಸೋಮರಾಜ ಭೂ।
ವಲ್ಲಭನಿಂಪು ವೆತ್ತ ವಚನಾಮೃತಮೊ ವಿಬುದಾನುರಾಗಮೊ ॥

ಕವಿಯ ಸರಸ ವಾಣಿಯ ಸೊಬಗನ್ನು ಈಕ್ಷಿಸಲು ಈ ಕಬ್ಬವನ್ನೋದಿದರೆ ಸಾಕು! ಸೋಮರಾಜ ಭೂವಲ್ಲಭನಿಂಪು ವೆತ್ತ ವಚನಾಮೃತ ವಿಬುದಾನುರಾಗಕ್ಕೆ ಪಾತ್ರವಾಗಿದೆ! ನಲ್ಲೆಯ ಲಲ್ಲೆವಾತು, ಶುಕಚಾರುನಿನಾದ, ವಾಗ್ವಧೂಟಿಕಾ ವಲ್ಲಕಿಯ ಇಂಚರ, ವಸಂತದ ಕಾಲದ ಪಿಕಗಳ ಪಂಚಮದಿಂಚರ, ಹೂ ಬಿಲ್ಲನ ಚಾಪಧ್ವನಿಯ ಮೋಹನನಾದ ಒಂದೊಂದೂ ಕವಿವಾಣಿಯ ಸೊಗಸನ್ನು ಸಾರಿಹೇಳುವ ರಸಮಯ ಸೂಕ್ತಿ ! ವಿದ್ವಾಂಸನಾಗಿ ಸರಸ ಮಧುರ ಕವಿಯಾಗಿ ಈತನು ಮಹಾರಾಜನಾಗಿಯೇ ಮೆರೆದಿದ್ದಾನೆ. ಈತನ ಪದ್ಯಗಳನ್ನು ಷಡಕ್ಷರ ದೇವನಂಥವರು ಉದಾಹರಣೆಗಾಗಿ ಆರಿಸಿಕೊಂಡ ನಿದರ್ಶನಗಳಿವೆ. 'ರಾಜಶೇಖರ ವಿಳಾಸ'ದಂಥ ಗ್ರಂಥಗಳೂ ಈತನ ಸೂಕ್ತಿಗಳನ್ನುದ್ಧರಿಸಿರುವುದರಿಂದ ಕವಿತಾಶಕ್ತಿಯ ಅರಿವು ಸುಲಭವಾಗಿ ತಿಳಿಯುತ್ತದೆ.

ರಸಿಕ ಕವಿ ರತ್ನಾಕರ ವರ್ಣಿ !

ಕನ್ನಡ ಸಾಹಿತ್ಯಾಕಾಶದಲ್ಲಿ ರತ್ನಾಕರ ವರ್ಣಿಯು ಜಾಜ್ವಲ್ಯಮಾನ ಧ್ರುವತಾರೆಯೆಂದು ಪರಿಗಣಿಸಲ್ಪಟ್ಟಿದ್ದಾನೆ. ಕನ್ನಡದ ಕವಿಶ್ರೇಷ್ಠರ ಸಾಲಿನಲ್ಲಿ ಈತನಿಗೆ ಮನ್ನಣೆಯ ಮಣೆಯಿದೆ. ಆದರೂ ಪಂಪ, ರನ್ನ, ಕುಮಾರವ್ಯಾಸರಷ್ಟು ಈತನ ಕುರಿತು ಪ್ರಥೆ-ನಿಚ್ಚಳವಾದ ತಿಳಿವು, ಎಚ್ಚರದ ಇಂಚರವನ್ನು ನಾವು ಕಾಣದಾಗಿದ್ದೇವೆ. ಕವಿ ಅಮ್ಮೆಂಬಳರು ಹೇಳುವಂತೆ "ಪಂಪನು ಚಂಪುವಿನಲ್ಲಿ ಇಂಪು ಪಡೆದಂತೆ, ಹರಿಹರನು ರಗಳೆಯಲ್ಲಿ ಗಗನಕ್ಕೇರಿದಂತೆ, ಕುಮಾರವ್ಯಾಸನು ಹಲಗೆ-ಬಳಪ ಬಳಸದೆ ಬರೆದು ಭಾಮಿನಿಯ ಬೆಡಗಿನಲ್ಲಿ ಬಿಂಕ ಪಡೆದಂತೆ, ಲಕ್ಷ್ಮೀಶನು ವಾರ್ಧಿಕದ ಮೋಡಿಯಲ್ಲಿ ಮೆರೆದು ಸಿದ್ಧಿ ಪಡೆದಂತೆ, ಸರ್ವಜ್ಞನು ತ್ರಿಪದಿಯಲ್ಲಿ ಮೂರು ಲೋಕವನ್ನು ಅಳೆದಂತೆ ನಮ್ಮ ರತ್ನಾಕರನು ಸಾಂಗತ್ಯದ ಸಂಗತಿಯಿಂದ ರಸಿಕರನ್ನು ತಲೆದೂಗಿಸಿರುವನು."

ಭರತ ಚಕ್ರವರ್ತಿಯು 96 ಸಾವಿರ ಮಂದಿ ವನಿತೆಯರೊಡನೆ ಅನುಭವಿಸಿದ ಶೃಂಗಾರ ಲೀಲೆಯನ್ನು ಭೋಗವಿಜಯವನ್ನಾಗಿ ಕಾವ್ಯರಸವ್ಯೆತರಣೆಯನ್ನಾಗಿ ಕವಿ ಹರಿಯಿಸಿದ್ದಾನೆ. ಬಹು ರೂಪಿಣಿ ವಿದ್ಯೆ - ಕಾವ್ಯಕನ್ಯೆ ಗರಿಕೆದರಿ ನವಿಲ ನಾಟ್ಯವಾಡಿ ಕೃತಕೃತ್ಯವೆನಿಸಿತಂತೆ! ಪ್ರಣಯೋನ್ಮಾದದಿಂದ ತಳಮಳಗೊಳ್ಳುವ ಪದ್ಮಿನಿಯಿದಿರು ಚಕ್ರೇಶ-ಯೋಗದ ಮೋಡಿಹಾಕಿದಾಗ ಆಕೆ ಕಾತರದ ಕಾರ್ಮೋಡದಲ್ಲಿ ಕಳವಳಿಸುವ

ವಿದ್ಯುಲ್ಲತೆಯಂತೆ ಆಡುವದನ್ನು ಅಂಗಜಾಗಮಸಿದ್ಧ ರತ್ನಾಕರನೇ ವಿವರಿಸಬೇಕಂತೆ!

"ಹರಿಪನಂದದಿ ಜಾಣನಾಗು ಶುದ್ಧ,
ಹಂಸನ ಪಿಡಿದಿಹ ಆಸೆಗೆ ಸಾಗು
ಹಂಸ ಹಂಸ ಎಂದು ಬೀಗು ಗುರು
ಹಂಸನಾಥನ ನೋಡಿ ಮುಕ್ತಿಗೆ ಹೋಗು"

"ಒಮ್ಮೊಮ್ಮೆ ರತ್ನಾಕರ ನಿರಂಜನ ಸಿದ್ಧನನ್ನು ಚಿದಂಬರ ಪುರುಷನನ್ನು ಕೊನೆಗೆ ಶ್ರೀಮಂದರ ಹಾಗೂ ಅಪರಾಜಿತನನ್ನು ಮರೆಯಬಹುದು. ಆದರೆ ಹಂಸ ಕಲೆಯನ್ನು ಅರೆಚಣವೂ ಮರೆಯಲಾರ! ಭೇದವಿಜ್ಞಾನವನ್ನು ಕನಸಿನಲ್ಲೂ ಕಡೆಗಣಿಸಲಾರ! ಎಲ್ಲಿ ಹಂಸಕಲೆಯಿಂದಾದದೋ ಅಲ್ಲಿ ರತ್ನಾಕರನಿರುವನು! ಎಲ್ಲಿ ಭೇದವಿಜ್ಞಾನ ಉಸಿರಿಡುವುದೋ ಅಲ್ಲೆಲ್ಲ ರತ್ನಾಕರನ ಸ್ಫೂರ್ತಿಗೆ ಗರಿ ಮೂಡುವುದು."

ಭೋಗವಿಜಯ - ದಿಗ್ವಿಜಯ, ಯೋಗವಿಜಯಗಳ ಸರಸ ಸಮನ್ವಯವನ್ನು ಪ್ರತಿಪಾದಿಸಿದ ರತ್ನಾಕರ ವರ್ಣಿಯು ಭರತೇಶ ಚಕ್ರವರ್ತಿಯನ್ನು ಶ್ರೀಕೃಷ್ಣನಂತೆ ಉಂಡು ಉಪವಾಸಿಯೆಂದು ಬಳಸಿ ಬ್ರಹ್ಮಚಾರಿ ಎಂಬಂತೆ ಕಂಡಿದ್ದಾನೆ. ತಾವರೆಲೆಯ ಮೇಲಿನ ನೀರ ಬಿಂದುವಿನಂತೆ ನಿರ್ಲಿಪ್ತ ನೀತಿಯನ್ನು ಮೆರೆಸಿದ್ದಾನೆ.

ಲೋಕದವರ ಮುಂದೆ ತೋರದ ನಿಧಿಯ ತಂ ।
ದೇಕಾಂತದೊಳು ನೋಳ್ಪರಂತೆ
ಆ ಕಡಲೊತ್ತಿನೊಳಾತ್ಮನ ಕಂಡನಾ ।
ಭೂಕಾ ।ಂತ ತನ್ನ ದೇಹದೊಳು

ಭರತೇಶನ ಭೋಗವೈಭವದಲ್ಲಿ ಅಧ್ಯಾತ್ಮವನ್ನರಸುವ ನೀತಿಯ ಪರಿ ಅನನ್ಯವಾದುದು!

ನೊಸಲೊಳ್ ನೊಸಲ ತಾಟಿಸುತ ಮುಂಡಾಡಿ ಚುಂ ।
ಬಿಸುವಳು ಕೊರಳನಪ್ಪುವಳು
ಸಸಿನೆ ಕಣ್ದೆರೆದೊಲ್ದು ನೋಡೆನ್ನ ಪ್ರಾಣದ
ಬೆಸುಗೆಕಾರಯೆಂಬಳೊಡನೆ ।
ಗಿಳಿಯಂತೆ ನುಡಿವಳು ಲತೆಯಂತೆ ತಬ್ಬುವ
ಳಿಳಿದು ಹರಿವ ಹೊಳೆಯಂತೆ ಗಳರವ ತೋರುವಳಪ್ಪಿ ತೂಗಾಡಿ ಕಂ।
ಗಳ ತೆರೆಯೆಂದು ಕಾಡುವಳು

ಇದು ರಸಚರ್ವಣೆಯ ಕ್ಷಣಗಳ ಸುಂದರ ವರ್ಣನೆಯಾಗಿ ಹೃದ್ಯವಾಗುವಂತೆ, ರಸಪರಿಸರದ ಕಲ್ಪನೆಗೆ ಆಸರೆಯಾಗುವ ಮಂಚಗಳ ಗೊಂಚಲನ್ನು ಆತನು ಬಿಡಿಸಿ ತೋರಿಸುವುದನ್ನು ಓದಿ ಆನಂದಿಸಬೇಕು.

"ಕಾಂಚನ ಮಂಚ ಮಾಣಿಕ ಮಂಚ ಶ್ರೀ ಗಂಧ
ಮಂಚಪೊನ್ನುಡಿ ಬೆಳ್ಳಿ ಮಂಚ
ಪಂಚರತ್ನದ ಮಂಚ ನವರತ್ನ ಮಂಚಗ ।
ಳಂಚಿತವಾದುದಲ್ಲಲ್ಲಿ
ಚಪ್ಪರ ಮಂಚ ಗುಜ್ಜರಿಗಲಾ ಮಂಚಮೆ ।
ಉಪ್ಪರ ಮಂಚ ಹೂಮಂಚ
ನಿಪ್ಪಚ್ಚೆ ಶಕುನಿ ತೂಗುವ ಮಂಚ ಸೆಳೆಮಂಚ ।
ವೊಪ್ಪಲಾಂತೆಸೆದುದಲ್ಲಲ್ಲಿ "

ಕಾವ್ಯವನ್ನು ರಸಮಯವನ್ನಾಗಿ ಮಾಡಿ ಕವಿ ಕೃತ ಕೃತ್ಯತೆಯನ್ನು ಪಡೆಯುವದು ಸಹಜ! "ಪೇಳುವೆ ಭರತೇಶ ಚಕ್ರಿಯ ಕಾವ್ಯವ, ಕೇಳಿರೋ ಸಕಲ ಕೋವಿದರು" ಎಂದು ಪ್ರಾರಂಭದಲ್ಲಿಯೇ ಮುಕ್ತಕಂಠನಾಗಿ ಕರೆಯುವ ಕವಿ ಹೇಳುವುದು ರಮ್ಯವಾಗಿದೆ.

ಕನ್ನಡದೊಳಗೊಂದು ಕಥೆಯ ಪೇಳುವೆನಿದು ।
ನಿನ್ನಾಚ್ಚೆ ಕಂಡ್ಯ ನನ್ನೊಡೆಯ
ಕಬ್ಬಿಗರೋದುಗಬ್ಬವ ಹಾಡುಗಬ್ಬವ,
ಕಬ್ಬದೊಳೆರೆವರವೆರಡು
ಕೃತಿಯ ಪೇಳ್ವಾತ ಸಾಮಾನ್ಯನಹುದುಕಾವ್ಯ
ಕೃತಿಗಾದಿನಾಥನ ಕೂರ್ತುಕೇಳ್ವುದೆ ಕಾವ್ಯ
ಕೃತನ ದೋಷವೆ ನೋಡಬೇಡ
ಸಕಲಲಕ್ಷಣವು ವಸ್ತುಕಕಿಷ್ಟು ವರ್ಣಕಕಿಷ್ಟು
ವಿರಳವಾದರು ದೋಷವಿಲ್ಲ
ಸಕಲ ಲಕ್ಷಣಕಾಗಿ ಬಿರುಸು ಮಾಡಿದರೆ ಪು ।
ಸ್ತಕದ ಬದನೆಕಾಯಹುದು
ಚಂದಿರನೊಳಗೆ ಕಪ್ಪುಂಟು ಬೆಳ್ದಿಂಗಳು ಕಂದಿ ಕುಂದಿಹುದೇ ನಿರ್ಮಲವೊ
ಸಂಧಿಸಿ ಶಬ್ದದೋಷಗಳೊಮ್ಮೆ ಸುಕಥೆಗೆ
ಬಂದರೆ ಧರ್ಮಮಾನುವದೇ ?

ರಚಯಿತನಾದ ತಾನು ಸಣ್ಣವನಾದರೂ ವರ್ಣ್ಯನಾದ ಚಕ್ರವರ್ತಿ ದೊಡ್ಡವನು ಎಂಬುದು ಆತನ ವಿನಯವನ್ನು ಪ್ರಾಂಜಲ ಮನಸ್ಸನ್ನು ಸಾರುತ್ತದೆಯಾದರೆ ಕಾವ್ಯ ಲಕ್ಷಣ ಪ್ರಕಾರ ಕಾವ್ಯ ಬರೆಯಲು ಹೊರಡುವ ಕವಿ, ರಸಾಭಾಸಕ್ಕೆ ಗುರಿಯಾಗುವುದನ್ನು ನೆನಪಿಸುತ್ತಾ ಪುಸ್ತಕದ ಬದನೆಕಾಯಿಯನ್ನು ತಿನ್ನಲು ಹವಣಿಸುವ ಮೂರ್ಖನು ಸಲ್ಲದವನೆಂಬುದನ್ನು ಮಾರ್ಮಿಕವಾಗಿ ತಿಳಿಸುತ್ತಾನೆ. ದೋಷ ಯಾರಲ್ಲಿಲ್ಲ ? ಚಂದ್ರನಲ್ಲಿ ಅದು ರೂಢವಾಗಿದ್ದರೂ ಕುಂದಿಲ್ಲದಂತೆ ಚಂದವನ್ನು ಹೆಚ್ಚಿಸುವ ಪರಿ ಆತನ ಕಣ್ಣಲ್ಲಿ ಮಿಂಚಿದೆ. ರತ್ನಾಕರವರ್ಣಿಯ

ಕಾವ್ಯದ ಪ್ರಸ್ತಾವನೆಯಲ್ಲಿ ಆತ್ಮವಿಶ್ವಾಸವನ್ನು ವ್ಯಂಜಿಸಿ, ತನ್ನ ಕಾವ್ಯದ ಆದೇಯತೆಯನ್ನು ಸುರಿದ್ದಾನೆ.

ಅಯ್ಯಯ್ಯಾ ಚೆನ್ನಾದುದೆನೆ ಕನ್ನಡಿಗರು
ರಯ್ಯಾಮಂಚಿದಿಯೆನೆ ತೆಲುಗಾ
ಅಯ್ಯಯ್ಯಾ ಎಂಚ ಪೊರ್ಲಾಂಡೆಂದು ತುಳುವರು
ಮೈಯುಬ್ಬಿ ಕೇಳಬೇಕಣ್ಣಾ"

ಅಷ್ಟೊಂದು ಆತ್ಮವಿಶ್ವಾಸವನ್ನು ಕಾವ್ಯದ ಮೇಲೆ ಇರಿಸಿಕೊಂಡ ರತ್ನಾಕರ ವರ್ಣಿ, ತನ್ನ ತುಳುನಾಡಿನ ಪ್ರೇಮವನ್ನು ತೆಲುಗಿನ ನಂಟನ್ನು ಕನ್ನಡದ ಸವಿಯನ್ನು ಮನೋಹರವಾಗಿ ಹೊರ ತೆಗೆದಿದ್ದಾನೆ.

"ಈತನು ತ್ರಿಲೋಕಶತಕ, ಅಪರಾಜಿತೇಶ್ವರ ಶತಕ, ಭರತೇಶ್ವರ ಚರಿತೆ, ಹಾಡುಗಳು ಇವುಗಳನ್ನು ಬರೆದಿದ್ದಾನೆ. ರತ್ನಾಕರಾಧೀಶ್ವರ ಶತಕವನ್ನು ಈತನೇ ಬರೆದನೆಂದು ಪ್ರತೀತಿಯಿದೆ. ಆದರೆ ಈ ಶತಕವು ಹಂಸರಾಜನೆಂಬ ಬೇರೊಬ್ಬ ಕವಿಯಿಂದ ರಚಿತವಾದಂತೆ ಆ ಗ್ರಂಥದಿಂದ ತಿಳಿಯುತ್ತದೆ. ಅಲ್ಲದೆ ರತ್ನಾಕರ ವರ್ಣಿಯ ಗ್ರಂಥಗಳಲ್ಲಿ ದೊರೆಯುವ ಅಪರಾಜಿತೇಶ್ವರ, ಮಂದರಸ್ವಾಮಿಗಳ ಸ್ತುತಿಯೂ, ಚಿದಂಬರ ಪುರುಷ, ನಿರಂಜನ ಸಿದ್ಧ ಎಂಬ ಅಂಕಿತಗಳೂ ಆ ಶತಕದಲ್ಲಿ ಇಲ್ಲವಾದ್ದರಿಂದ ಅದು ಅನಕವಿಕೃತವೆಂಬುದು ದೃಢವಾಗುತ್ತದೆ. ಇವನು ಜೈನ ಕವಿ ! ಇವನಿಗೆ ರತ್ನಾಕರ ಸಿದ್ಧ, ರತ್ನಾಕರ ಅಣ್ಣಗಳು ಎಂಬ ಹೆಸರೂ ನಿರಂಜನ ಸಿದ್ಧ ಎಂಬ ಬಿರುದೂ ಇದ್ದಂತೆ ತಿಳಿಯುತ್ತದೆ. ತನ್ನನ್ನು ಕ್ಷತ್ರಿಯ ವಂಶ ರಾಜನೆಂದೂ 'ಕರ್ಣಾಟಕ ಕ್ಷೇತ್ರಗಳಣ್ಣಗಳೆಂದೂ ಧಾತ್ರಿ ನುಡಿವುದು' ಎಂದು ಹೇಳುತ್ತಾನೆ. ಜನನ ಮರಣವುಳ್ಳ ಜನಕರ ನಾಮದ ಪೇಳ್ವರು ಉರ್ವಿಯೊಳು ಶ್ರೀ ಮಂದರಸ್ವಾಮಿ ನನ್ನಯ್ಯನೆಂದನು ಸುಖಿಪಡೆದಿಹೆನು ಎನ್ನುತ್ತಾನೆ. ಇವನ ಸ್ಥಳ ವೇಣುಪುರ (ಮೂಡುಬಿದಿರೆ) ದೀಕ್ಷಾಗುರು ದೇಶಿಕಾಗ್ರಣಿ ಚಾರುಕೀರ್ತಿ ಯೋಗಿ ! ಮೋಕ್ಷಗುರು ಹಂಸನಾಥ ! ಈ ಹಂಸನಾಥನ ಆಜ್ಞೆಯಿಂದ ಭರತೇಶ್ವರ ಚರಿತೆಯನ್ನು ಬರೆದಂತೆ ಹೇಳುತ್ತಾನೆ. ತ್ರಿಲೋಕ ಶತಕವನ್ನು ಶಕ. 1479ರಲ್ಲಿ ಅಂದರೆ ಕ್ರಿಸ್ತ ಶಕ 1557ರಲ್ಲಿ ಬರೆದಂತೆ ತಿಳಿಯುತ್ತದೆ. ಸುಮಾರು ಹತ್ತುಸಾವಿರ ಸಾಂಗತ್ಯವುಳ್ಳ ಈ ಗ್ರಂಥವನ್ನು ಕವಿ ಒಂಭತ್ತು ತಿಂಗಳಲ್ಲಿ ರಚಿಸಿದಂತೆ 'ವೃಷಭ ಮಾಸದಿ ತೊಡಗಿತು ಕುಂಭಮಾಸದಿ ಕೃತಿ ಪೂರ್ಣವಾಯಿತು.'ಎಂಬ ಪದ್ಯಭಾಗದಿಂದ ತಿಳಿಯುತ್ತದೆ. 'ಕರ್ಣಾಟಕ ಕವಿ ಚರಿತೆ ಭಾಗ ಎರಡರಲ್ಲಿ ಬರೆದುದನ್ನೋದಿದರೆ ತಿಳಿದುಬರುವ ಮೇಲಿನ ಅಂಶಗಳು ! ತ್ರಿಲೋಕ ಶತಕದಲ್ಲಿ 128 ಕಂದಗಳಿವೆ. ಜೈನ ದರ್ಶನದ ಪ್ರಕಾರ ಜಗತ್ತಿನ ಸ್ಥಿತಿಗತಿಯನ್ನು ಇದರಲ್ಲಿ ವರ್ಣಿಸಲಾಗಿದೆ. 'ಅಪರಾಜಿತೇಶ್ವರ ಶತಕ'ದಲ್ಲಿ 127 ವೃತ್ತಗಳಿವೆ. ಅಪರಾಜಿತೇಶ್ವರ ಎಂಬ ಅಂಕಿತದಲ್ಲಿ ರಚಿತವಾದ ಈ ಕಾವ್ಯದಲ್ಲಿ ನೀತಿ - ಆತ್ಮವಿಚಾರಗಳ ವಿಶ್ಲೇಷಣೆ - ನಿರೂಪಣೆ, ವೈರಾಗ್ಯ ಸೂಚಕ ಸನ್ನಿವೇಶಗಳನ್ನೊಳಗೊಂಡ ನಿರೂಪಣೆ ಧಾರಾಳವಾಗಿದೆ.

ಭರತೇಶ ವೈಭವ - ಭರತೇಶ ಸಂಗತಿ ಎರಡು ಹೆಸರುಗಳಿಂದ ಕರೆಯಲ್ಪಡುವ ಈ ಮಹಾ ಕಾವ್ಯದಲ್ಲಿ ಅಪಾರವಾದ ಶಾಸ್ತ್ರಜ್ಞಾನ, ವಿಪುಲವಾದ ಲೋಕಾನುಭವ, ಅನನ್ಯ ಪ್ರತಿಭೆ, ಅಪ್ರತಿಮ ಪಾಂಡಿತ್ಯಗಳನ್ನು ಗುರುತಿಸಬಹುದು. ಶ್ರೀ ಟಿ. ಎಸ್. ಶಾಮರಾಯರು ಬರೆದ ಭರತೇಶ ವೈಭವ ಸಂಗ್ರಹ ಪೀಠಿಕೆಯಮಾತುಗಳು ಇಂತಿವೆ.

"ರತ್ನಾಕರನ ಧರ್ಮ ಪ್ರತಿಪಾದನೆಯಲ್ಲಿ, ಆತನ ತತ್ತ್ವ ಜಿಜ್ಞಾಸೆಯಲ್ಲಿ ಒಂದು ಅಲೌಕಿಕವಾದ ಔದಾರ್ಯವಿದೆ. ಬಹುಶಃ ಮತ್ತಾವ ಜೈನ ಕವಿಯಲ್ಲಿಯೂ ಕಾಣಬರದ ಒಂದು ಸ್ವತಂತ್ರ ಮನೋವೃತ್ತಿಯಿದೆ. ಮನಗಂಡುದನ್ನು ನಿರ್ದಾಕ್ಷಿಣ್ಯವಾಗಿ ನುಡಿಯಬಲ್ಲ ಕೆಚ್ಚಿದೆ, ತನು, ರೂಪ, ವಿಭವ, ಯೌವನ, ಧನ, ಸೌಭಾಗ್ಯ ಆಯುರಾದಿಗಳ ಮಿಂಚಿನ ಪೊಳಪಿನಂತೆ, ಮುಗಿಲ ನೆಳಲಂತೆ, ಇಂದ್ರ ಧನುಸ್ಸಿನಂತೆ, ಬೊಬ್ಬುಳಿಕೆಯುರ್ಬಿನಂತೆ ಕ್ಷಣಭಂಗುರವೆಂಬ ಜೈನರ ಕ್ಷಣಿಕ ವಾದ ರತ್ನಾಕರನಿಗೆ ರುಚಿಸುವುದಿಲ್ಲ. ಅದೆಲ್ಲ ಕ್ಷಣಿಕವಾದರೂ ಭೋಗಕ್ಕೆ ಅಯೋಗ್ಯವಲ್ಲ. ಕ್ಷಣಿಕವೆಂಬುದನ್ನು ಅರಿತು, ಭೋಗವಿಮುಖನಾಗದೆಯೇ ಶಾಶ್ವತ ಸುಖವನ್ನು ಅರಸುತ್ತಾ ಹೋಗಬೇಕೆಂಬುದು ಆತನ ಸಂದೇಶ ! ಇದೇ ಭಾವವು ಭರತೇಶ ವೈಭವದಲ್ಲಿ ತಾನೇತಾನಾಗಿ ತಾಂಡವವಾಡುತ್ತದೆ.

ಈ ಕವಿಯ ರತ್ನಾಕರ ಶತಕವು ಜೈನರಿಗೆ ಮಾತ್ರವಲ್ಲದೆ ಇತರರಿಗೂ ಆದರಣೀಯವಾದುದು ! ಕವಿಯ ಆತ್ಮ ರೋದನವನ್ನು ಹೃದಯಂಗಮವಾಗಿ ಚಿತ್ರಿಸಿರುವ ಆ ಕಾವ್ಯ ಜೈನೇತರರೂ ಬಳಸಿಕೊಂಡು ಭೋಗಿಸಬಹುದಾದ ಬಹುದೊಡ್ಡ ಆಸ್ತಿ.

ಅಣ್ಣಾಗಳ ಪದಗಳು ಅಥವಾ ರತ್ನಾಕರಣ್ಣಾಗಳ ಪದಜಾತಿ ಎಂಬ ಹೆಸರಿನಿಂದ ಪ್ರಕಟವಾದ ಅವನ ಹಾಡುಗಳಲ್ಲಿಯೂ ಧರ್ಮ, ತತ್ವ, ನೀತಿಗಳು ತುಂಬಿ ತುಳುಕಿವೆ. ಆತನು ರಸಮಯವಾದ ಸಾಂಗತ್ಯಗಳ ಮೂಲಕ ಹಾಡಿರುವುದು ಮೋಹಕವಾಗಿದೆ.

ಒಳಗುಣ್ಮಿದಾನಂದ ರಸತನ್ನ ತುಂಬಿ
ತುಳುಕಿ ಹೊರಗೆ ಸೂಸುವಂತೆ
ತೆಳುವ ಸೂರಿಂದ ಬಾಯ್ದೆರೆಯೊಳುಸುಸ್ವರ
ಹೊಳೆದು ಮೋಹಿಸುತ್ತಿದ್ದವಾಗ ॥
ಸುಳಿನಾಭಿಯೊಳು ಹುಟ್ಟಿ ಮೆಲ್ಲೆದೆಯೊಳು ಬೆಳೆ
ದೊಳಗೊರಲೊಳು ಪ್ರಾಯಪಡೆದು
ಎಳೆಯಳ ಬ್ರಹ್ಮರಂಧ್ರವನ್ನೇರಿ ಬಾಯ್ದೆರೆ
ಗಿಳಿದು ಮೋಹಿಸಿದುದಾಳಾಪ ॥
ಉಕ್ಕಂದಮಾಗಿ ತುಂಬಿದ ಗಾನರಸವನು
ದಿಕ್ಕು ದಿಕ್ಕಿಗೆ ಚಿಮ್ಮುವಂತೆ
ಚೊಕ್ಕ ಚೊಕ್ಕನೆ ತಾನಗಳ ತಂದು ಕೊರಲಲಿ
ಜಕ್ಕುಲಿಸಿದರು ಜಾಣೆಯರು

ಸಂಗೀತದ ಕುರಿತಾದ ನಿರೂಪಣೆಯನ್ನು ಕವಿ ನಿರೂಪಿಸಿದ ಭಂಗಿ ರಮ್ಯವಾಗಿದೆ.

ಕನ್ನಡಿಗರು ಹೆಮ್ಮೆ ಪಡಬಹುದಾದ, ಅದ್ವಿತೀಯ ಕಾವ್ಯರತ್ನವನ್ನಿತ್ತ ತುಳುನಾಡ ಕವಿ ರತ್ನಾಕರ ವರ್ಣಿ ಅತಿ ಎತ್ತರದ ಸ್ಥಾನವನ್ನು ಅಲಂಕರಿಸಿದ್ದಾನೆ. ನಾಡಿಗೆ ಇಂಥ ಮಹಾಕವಿಯನ್ನು ನೀಡಿದ ಹೆಮ್ಮೆ ಈ ಜಿಲ್ಲೆಗೆ ಸರ್ವಥಾ ಸರ್ವದಾ ಇರುವಂಥದೇ ಆಗಿದೆ !

ರಸರತ್ನಾಕರ ಕವಿ ಸಾಳ್ವ

ಸಾಳ್ವಕವಿ ದಕ್ಷಿಣ ಕನ್ನಡ ಜಿಲ್ಲೆಯವನಾಗಿದ್ದು ಉತ್ತಮ ಕವಿಯಾಗಿ ಲಾಕ್ಷಣಿಕನಾಗಿ ಮೆರೆದವನೆಂದು ತಿಳಿದು ಬರುತ್ತದೆ. ಕ್ರಿ. ಶ. ೧೫೫೦ರಲ್ಲಿ ಈತನು ಬದುಕಿದ್ದನೆಂದು ಹೇಳಲಾಗಿದೆ. ಈತನು ಸಾಳ್ವಭಾರತ, ರಸರತ್ನಾಕರ, ವೈದ್ಯವಿಲಾಸ, ಶಾರದಾ ವಿಲಾಸ, ವೈದ್ಯ ಸಾಂಗತ್ಯ ಎಂಬ ಗ್ರಂಥಗಳನ್ನು ಬರೆದಿದ್ದಾನೆ. ಆತನು ಜೈನಮತಾವಲಂಬಿಯಾಗಿದ್ದನೆಂದು ಆತನ ರಚನೆಗಳಿಂದ ಕಂಡುಕೊಳ್ಳಲಾಗಿದೆ. ತಂದೆಯ ಹೆಸರು ಜಯಚಂದ್ರ ! ಗುರುದೇಶಿ ಗಣದ ವಿಜಯ ಕೀರ್ತಿಯ ಮಗ ಶ್ರುತಕೀರ್ತಿ ! ಸಾಜಕವಿ, ಕರ್ಣಾಟಲಕ್ಷಣದೋಜ ಎಂಬ ಬಿರುದುಗಳು ಈತನಿಗಿವೆಯೆಂದು ತಿಳಿದುಬರುತ್ತದೆ.

ಸಾಳ್ವಭಾರತ ಭಾಮಿನೀ ಷಟ್ಪದಿಯಲ್ಲಿರುವ ಗ್ರಂಥ.

ನವರಸದ ನೆಲೆ ಮಧುರ ಭಾವದ
ತವದಲಂಕಾರಂಗಳಿಂದೊ
ಪ್ಪುವ ವಿಮಲಲಲಿತಾಂಗ ಮೃದುಪದ ರಚನೆ ನೆರೆಮೆರೆವ
ವಿವಿಧ ಗುಣ ಗಣನಿಳಯ ಸೊಬಗಿನ
ಸವಿಯ ಸೈವರೆ ಗರೆವ ಮತ್ಕೃತಿ ಯುವತಿ ಚದುರರ
ಮನವನಿಕ್ಕುಳಿಗೊಳ್ವುದುಮಚ್ಚರಿಯೇ !

ತನ್ನ ಕೃತಿ ಯುವತಿಯು ಚದುರರ ಮನವನ್ನು ಸೂರೆಗೊಳ್ಳುವುದರಲ್ಲಿ ಅಚ್ಚರಿಯೇನಿಲ್ಲವೆಂಬ ದೃಢ ವಿಶ್ವಾಸ ಆತನಿಗಿದೆ.

'ರಸರತ್ನಾಕರ' ಆತನ ಮಹತ್ವಪೂರ್ಣ ಗ್ರಂಥ ! ಇದು ಅಲಂಕಾರ ಶಾಸ್ತ್ರಕ್ಕೆ ಸಂಬಂಧಿಸಿದುದು ! ಕನ್ನಡದ ಅಲಂಕಾರ ಗ್ರಂಥಗಳೆಲ್ಲಾ ಸಂಸ್ಕೃತ ಗ್ರಂಥಗಳನ್ನು ಅನುಸರಿಸಿಕೊಂಡೇ ರಚಿತವಾದಂತಿದೆ. ನಾಗವರ್ಮನ ಕಾವ್ಯಾವಲೋಕನ ರೀತಿ ರಸ ಭಾವಗಳನ್ನು ವಿವೇಚಿಸಿದೆ. ಉದಯಾದಿತ್ಯನು ಕಾವ್ಯ ಭೇದಗಳು, ರೀತಿ, ರಸ, ಗುಣ ಶಬ್ದಾಲಂಕಾರ ಅರ್ಥಾಲಂಕಾರಗಳನ್ನೆಲ್ಲಾ ಪ್ರಸ್ತಾಪಿಸಿದ್ದಾನೆ. ಶವಿಕಾಮ, ನಿಜಗುಣ ಶಿವಯೋಗಿ, ಮೊದಲಾದವರು ಸ್ಥಾಯಿಭಾವ, ಆಲಂಬನ ವಿಭಾವ, ಸಾತ್ವಿಕ ಭಾವ, ಸಂಚಾರಿ ಭಾವ, ನವರಸೋತ್ಪತ್ತಿಗಳನ್ನು ನಿರೂಪಿಸಿದ್ದಾನೆ. ನವರಸಗಳಿಗೆ ಪ್ರಾಧಾನ್ಯವನ್ನಿತ್ತು ಸವಿವರ

ಸಮಗ್ರ ರಸ ನಿರೂಪಣೆ ಮಾಡಿದವನು ಸಾಳ್ವಕವಿಯೆಂದೇ ಹೇಳಬೇಕು. ಅಮೃತಾನಂದಿ, ರುದ್ರಭಟ್ಟ, ವಿದ್ಯಾನಾಥ, ಹೇಮಚಂದ್ರ ಮೊದಲಾದವರ ಮಾರ್ಗದಲ್ಲಿಯೇ ತಾಗಿ ಕೃತಿರಚಿಸಿರುವದಾಗಿ ಕವಿಸಾಳ್ವನು ಹೇಳಿಕೊಂಡಿದ್ದಾನೆ. ಪಂಪ, ರನ್ನ, ನೇಮಿಚಂದ್ರ, ನಾಗಚಂದ್ರ, ಮುಂತಾದ ಪ್ರಸಿದ್ಧ ಕವಿಗಳ ಲಕ್ಷ್ಯಗಳನ್ನು ಉದಾಹರಿಸಿ ಲಕ್ಷಣ ಸಮನ್ವಯ ಮಾಡಿರುವದು ಸಾಳ್ವನ ವೈಶಿಷ್ಟ್ಯ ಎಂದು [redacted] ! ಕೆ. ಕೃಷ್ಣಮೂರ್ತಿಯವರು ಹೇಳಿದ್ದಾರೆ. ಶಾಸ್ತ್ರಸಂಪ್ರದಾಯವನ್ನು ಅನುಸರಿಸಿ, ರಸ ವಿಷಯದಲ್ಲಿ ಅನೇಕ ವಿವರಗಳನ್ನು ಸಂಗ್ರಹಿಸಿ ಅಕ್ಲಿಷ್ಟವಾಗಿ ನಿರೂಪಿಸಿ ಸಾಳ್ವನು ಶ್ಲಾಘನೆಗೆ ಪಾತ್ರನಾಗಿದ್ದಾನೆ. ಎಂಬುದು ಸೂಕ್ತ ವಿಮರ್ಶೆ!

ರಸಮಿಲ್ಲದ ಕಾವ್ಯಂ ನೀ
ರಸಮದರಿಂ ಕೃತಿಗೆ ರಸಮೆ ಸಾರಂ ನೆಗಳ್ದೀ
ರಸರತ್ನಾಕರದೊಳ್ ನೆರೆ
ರಸಭಾವಮನರಿದ ಕವಿಯ ಕಬ್ಬಮೆ ಸಾರಂ

ರಸರತ್ನಾಕರವು ಧ್ವನಿಪ್ರಸ್ಥಾನದತ್ತ ಹೆಚ್ಚು ಒತ್ತು ನೀಡುತ್ತದೆ. ಈ ಕೃತಿಯಲ್ಲಿ ಬರುವ ಶೃಂಗಾರಾದಿ ನವರಸ-ನಾಯಕ ನಾಯಿಕಾ ವಿವರಣ, ನವರಸ ಪ್ರಪಂಚ, ವ್ಯಭಿಚಾರಿ ಭಾವ ನಿರೂಪಣೆಗಳು ಅವಕ್ಕೆ ಅನುಗುಣವಾದ ಉದಾಹರಣೆಗಳು ಉತ್ತಮ ಕಾವ್ಯ ಮಾರ್ಗದತ್ತ ಬೊಟ್ಟು ಮಾಡಿ ಪ್ರೇರಣೆ ನೀಡುವದು ರಸರತ್ನಾಕರದ ಮಹತ್ವ.

ಶಾರದಾ ವಿಲಾಸವಂತೂ 'ಕಾವ್ಯಸ್ಯಾತ್ಮಾಧ್ವನಿಃ' ಎಂದು ಸಾರಿದ ಆನಂದ ವರ್ಧನರನ್ನು ಅನುಸರಿಸಿದೆ. ಕನ್ನಡದಲ್ಲಿ ಧ್ವನಿಗೆ ಸಂಬಂಧಿಸಿದ ಗ್ರಂಥವಿದೊಂದೇ ಎಂಬ ಖ್ಯಾತಿ ಪಡೆದಿದೆ. ಈ ಗ್ರಂಥದ ದ್ವಿತೀಯ ಭಾಗ ಮಾತ್ರ ಉಪಲಬ್ಧವಿದೆಯೆಂದೂ ಉಳಿದುದು ಪ್ರಕಟಗೊಂಡಿಲ್ಲವೆಂದೂ ಹೇಳಲಾಗಿದೆ. "ಆವೆಡೆಯೊಳಂ ವಾಚ್ಯದತ್ತಣಿಂದಧಿಕಮಪ್ಪ ವ್ಯಂಗ್ಯ ಮನುಳ್ಳುದುತ್ತಮ ಕಾವ್ಯಂ, ಆ ಕಾವ್ಯಮುಂ ಧ್ವನಿಯೆಂದು ಪೂರ್ವಾಚಾರ್ಯರಿಂ ಪೇಳಲ್ಪಟ್ಟಿತು." ಇದನ್ನು ಸಾಳ್ವನು ಸೋದಾಹರಣವಾಗಿ ಸಮರ್ಥಿಸಿದ್ದಾನೆ. ಇದು ಆತನ ಉತ್ಕೃಷ್ಟ ಕೃತಿ ! ಆತನು ಧ್ವನಿಮಾರ್ಗದಲ್ಲಿ ಸಾಗಿದ ಉತ್ತಮ ಆಲಂಕಾರಿಕನೆಂಬ ಖ್ಯಾತಿಗೆ ಪಾತ್ರನಾಗಿದ್ದಾನೆ.

ವೈದ್ಯ ಸಾಂಗತ್ಯವು ಔಷಧಿಗಳ ವಿಚಾರ, ರೋಗಗಳ ಕಾರಣ, ಪರಿಹಾರೋಪಾಯಗಳನ್ನು ನಿರೂಪಿಸಿರುವ ಗ್ರಂಥ ! ಆತನು ಇಷ್ಟೊಂದು ಮಹತ್ತದ ಕೃತಿಗಳನ್ನು ರಚಿಸಿ, ಈ ಜಿಲ್ಲೆಯನೆಂದು ಹೇಳಲಾಗಿದ್ದರೂ ಆತನ ಊರಿನ ಬಗ್ಗೆ ಖಚಿತ ಮಾಹಿತಿ ಸಿಕ್ಕಿಲ್ಲ. ಆದರೆ ಮೂಡಬಿದ್ರೆ ಚೈತ್ಯಾಲಯಕ್ಕೆ ಸಂಬಂಧಿಸಿದ ಅಭಿವೃದ್ಧಿ ಕಾರ್ಯಗಳಲ್ಲಿ ತೊಡಗಿದ್ದ 'ನಗರ' ರಾಜ್ಯದ ಅರಸನ ಸಂಪರ್ಕ, ತೌಳವ ಅರಸರ ಕಾಲದ ಶಾಸನಗಳಿಂದ ಈತನು ಈ ಜಿಲ್ಲೆಯವನೆಂದು ನಿರ್ಣಯಿಸಿದ್ದಾರೆ.

ಕವಿ ಪದ್ಮನಾಭ

ಕವಿ ಪದ್ಮನಾಭನೆಂಬವನು ಮೂಲ್ಕಿಯಲ್ಲಿ ಜನಿಸಿದವನು. ಇವನ ಕಾಲ ಹದಿನೆಂಟನೆಯ ಶತಮಾನವೆಂದು ಹೇಳಲಾಗಿದೆ. ಹೊಂಬುಜ ಕ್ಷೇತ್ರದಲ್ಲಿ ಪದ್ಮಾವತಿಯನ್ನು ಪ್ರತಿಷ್ಠೆ ಮಾಡಿದ ಜಿನದತ್ತ ರಾಯನ ಚರಿತ್ರೆಯನ್ನು ಈತನು ಕಾವ್ಯವನ್ನಾಗಿ ರಚಿಸಿದ್ದಾನೆ. 'ಶ್ರೀ ಪದ್ಮಾವತೀ ಮಾಹಾತ್ಮೆ' ಅಥವಾ ಜಿನದತ್ತರಾಯನ ಚರಿತ್ರೆ ಈ ಗ್ರಂಥದ ಹೆಸರು.

ಇದೊಂದು ಸುಂದರ ಕಾವ್ಯ ! ದ್ರಾಕ್ಷಾಪಾಕದಲ್ಲಿ ಅದ್ದಿತೆಗೆದ ರಸಗವಳವಿದೆಂದು ಸಹೃದಯರು ಕೊಂಡಾಡಿದ್ದಾರೆ. ಲಲಿತ ಪದಬಂಧ, ಸುಂದರ ವಚನ ರಚನೆಕಾವ್ಯದ ಗರಿಮೆಯನ್ನು ಹೆಚ್ಚಿಸಿದೆ. ಸ್ವಭಾವ ಸಿದ್ಧ ಕಾವ್ಯಶಕ್ತಿಯನ್ನು ಇಲ್ಲಿ ಕಾಣಬಹುದು. ಸಾಂಗತ್ಯದಲ್ಲಿ ಈ ಕೃತಿ ರಚಿತವಾಗಿದೆ.

ಶ್ರೀ ಸುರನರ ನಾಗರಾಜ ಪೂಜಿತಪಾದ
ಭಾಸುರಜ್ಞಾನಪ್ರಕಾಶ
ಸಾಸಿರ ನಾಮದೊಡೆಯ ಪಾರಿಶ್ವೇತ
ಲೇಸನಿತ್ತೆಮ್ಮ ದಕ್ಷಪ್ರಿಯ
ಭೇದಿಸಿ ಸಕಲ ಕರ್ಮವನು ಬೇಗ
ಸಾಧಿಪೆನೆನುತ ಮೋಕ್ಷವನು
ಭೇದವಿಲ್ಲದೆ ಚಿಂತಿಸುತಿರುತಿಹ
ಸಾಮ್ಯಗಳಿಗೆ ನಮೋ ಎಂಬೆ

ಹೀಗೆ ಸಾಂಗತ್ಯವು ಲಲಿತವಾಗಿ ಸಾಗಿದೆ. ಕಾವ್ಯವು ಸುಲಭವೂ - ರಸವತ್ತೂ ಆಗಿ ಜನಾದರವನ್ನು ಗಳಿಸಿದೆ.

ಜರ್ಮನ್ ಕನ್ನಡಿಗ ರೆ. ಫರ್ಡಿನಂಡ್ ಕಿಟ್ಟೆಲ್

ಜರ್ಮನಿಯ ವಿದ್ವಾಂಸ ಮ್ಯಾಕ್ಸ್‌ಮೂಲರ್ ಭಾರತಕ್ಕೆ ಬಂದು ವೇದ - ಸಂಸ್ಕೃತ ಭಾಷಾ ವಿಷಯಕ ಗ್ರಂಥಗಳ ಅಧ್ಯಯನ ನಡೆಸಿ, ಭಾರತೀಯರಿಗಿಂತಲೂ ಮಿಗಿಲಾದ ಸೇವೆ ಸಲ್ಲಿಸಿ, ಸಂಸ್ಕೃತ ಭಾರತೀಯ ಸಂಸ್ಕೃತಿಗಳ ಸಾರವನ್ನು ಜಗತ್ತಿಗೆ ತಿಳಿಯುವಂತೆ ಮಾಡಿದ ಮಹಾ ಪ್ರಾಜ್ಞನಾದರೆ, ಅದೇ ದೇಶದಿಂದ ಬಂದ ರೆ. ಫರ್ಡಿನಂಡ್ ಕಿಟ್ಟೆಲ್ ಕನ್ನಡ ನಾಡಿನಲ್ಲಿ ಬಂದಿಳಿದು ಕನ್ನಡಿಗರಾಗಿಯೇ ಬಾಳಿ ಇಲ್ಲಿನ ಸಾಹಿತ್ಯವನ್ನು ಅಭ್ಯಾಸ ಮಾಡಿ ರಚಿಸಿದ ಪ್ರಬಂಧಗಳು - ವಿಮರ್ಶೆ - ವ್ಯಾಖ್ಯಾನಗಳು, ಎಲ್ಲಕ್ಕಿಂತಲೂ ಮಿಗಿಲಾಗಿ ಕನ್ನಡಕ್ಕೊಂದು ಸಮಗ್ರವಾದ ನಿಘಂಟನ್ನು ರಚಿಸಿದುದು ಒಂದು ಇತಿಹಾಸವೇ ಆಗಿದೆ. ಈ ನಾಡಿನಲ್ಲಿಯೇ ಜನಿಸಿ ಕನ್ನಡದಲ್ಲಿ ಮಾತನಾಡುವುದನ್ನು ಮರೆಯುವ ಜನರಿರುವ ಇಂದಿನ ದಿನಗಳಲ್ಲಿ ಕಿಟ್ಟೆಲರ ಸಾಧನೆ ನಮ್ಮವರಿಗೆ ನಾಚಿಕೆ ತರಿಸುವುದೂ ಇಲ್ಲವಲ್ಲ ಎಂದು ಮರುಕಪಡಬೇಕಾಗಿದೆ.

ಕಿಟ್ಟೆಲರ ಸಾಧನೆ ಅಪಾರ ; ಹದಿನೈದು ವರ್ಷಗಳ ನಿರಂತರ ಪ್ರಯತ್ನದಿಂದ ಅವರು ನಿಘಂಟನ್ನು ಸಿದ್ಧಪಡಿಸಿದರೆಂದು ತಿಳಿದುಬರುತ್ತದೆ. ಹಳೆಗನ್ನಡದ ಕೃತಿಗಳನ್ನು ಅಕ್ಷರಶಃ ಅಧ್ಯಯನ ನಡೆಸಿ, ಪಂಪನ ಆದಿಪುರಾಣದಿಂದ ನಾಗವರ್ಮನ ಛಂದೋಂಬುಧಿ, ಕುಮಾರವ್ಯಾಸನ ಭಾರತ, ಜೈಮಿನಿ ಭಾರತ, ಸೋಮೇಶ್ವರ ಶತಕ, ಪ್ರಭು ಲಿಂಗಲೀಲೆ, ತೊರವೆ ರಾಮಾಯಣ ಮೊದಲಾದ ಗ್ರಂಥಗಳನ್ನು ಓದಿ ಅರಗಿಸಿಕೊಂಡ ಸಾಹಸಿ ಅವರು.ದೇಶೀಯ ಗ್ರಾಮ್ಯ ಶಬ್ದ, ಗಾದೆ ಮಾತುಗಳನ್ನು ಸಂಗ್ರಹಿಸಿ ಪ್ರಾದೇಶಿಕವಾಗಿ ಬರುವ ವಿಭಿನ್ನ ಅರ್ಥಗಳು ಅವುಗಳ ಪ್ರಯೋಗಗಳಲ್ಲಿರುವ ವೈವಿಧ್ಯ, ದ್ರಾವಿಡ ಭಾಷೆಗಳೊಳಗೆ ಸರಿಸಮಾನ ಭಾವನೆಗಳನ್ನು ಬಿಂಬಿಸುವ ನುಡಿಕಟ್ಟುಗಳು, ಕವಿಗಳ ಪ್ರಯೋಗ ವೈಖರಿಗಳನ್ನೆಲ್ಲಾ ಗಮನಿಸಿ ಸ್ಥಳೀಯ ವಿದ್ವಾಂಸರ ಸಹಕಾರ ಪಡೆದುಕೊಂಡು ವಿಸ್ತಾರವಾದ ಅಧ್ಯಯನದ ಮಹಾಕೃತಿಯಾಗಿರುವ ನಿಘಂಟನ್ನು ನೀಡಿದ್ದಾರೆ. ಕನ್ನಡಿಗರು ಕಿಟ್ಟೆಲರನ್ನು ಎಂದೆಂದೂ ಮರೆಯಲು ಸಾಧ್ಯವಿಲ್ಲ.

ಭಾರತೀಯ ತತ್ವ ಜ್ಞಾನವನ್ನುದ್ದೇಶಿಸಿ ಅವರು ಇಂಗ್ಲಿಷಿನಲ್ಲಿ ಮೂರು ಕೃತಿಗಳನ್ನು ಬರೆದಿದ್ದಾರೆ. ಶಬ್ದಮಣಿದರ್ಪಣವನ್ನು ಶಾಸ್ತ್ರೀಯವಾಗಿ ಸಂಪಾದಿಸಿ ಪ್ರಕಟಿಸಿದ್ದಾರೆ. ನಾಗವರ್ಮನ ಛಂದಸ್ಸು ಅವರ ಇನ್ನೊಂದು ಅಧ್ಯಯನಶೀಲ ಸಂಗ್ರಹ. A Grammer of the Kannada Language ಎಂಬ ಕೃತಿಯನ್ನು ಇಂಗ್ಲಿಷ್‌ನಲ್ಲಿ ಪ್ರಕಟಿಸಿದ್ದಾರೆ. ಮಕ್ಕಳಿಗಾಗಿ ಕನ್ನಡ ಪಂಚತಂತ್ರ, ಸಣ್ಣ ಕರ್ನಾಟಕ ಕಾವ್ಯಮಾಲೆ, ಹಳೆಗನ್ನಡ ಸಂಕ್ಷೇಪ ವ್ಯಾಕರಣ ಸೂತ್ರಗಳು ಅವರ ಸಾಧನೆಗಳಾಗಿವೆ. ಇಂಗ್ಲಿಷ್ ಗೀತೆಗಳ ಭಾಷಾಂತರವನ್ನು ಕನ್ನಡಕ್ಕೆ ತಂದಿದ್ದಾರೆ. Tract of sacrifice "ಯಜ್ಞ ಸುಧಾನಿಧಿ" ಅವರ ಪ್ರೌಢ ಕೃತಿ.

ದೂರದ ಜರ್ಮನಿಯಿಂದ ಕನ್ನಡ ನಾಡಿಗೆ ಬಂದು ಕನ್ನಡಿಗರ ಹೃದಯದರ್ಪಣದಲ್ಲಿ ಕನ್ನಡ ಸಂಸ್ಕೃತಿಯ ಅಂತಸ್ಸತ್ವವನ್ನು ಬಿಂಬಿಸಿದ ಪ್ರತಿಭಾವಂತ ಮೇಧಾವಿಯೂ, ಅಪೂರ್ವ ಸಾಹಸಿಯೂ ಕನ್ನಡದ ಅನನ್ಯ ಕಟ್ಟಾಳುವೂ ಆಗಿರುವ ರೆ. ಫರ್ಡಿನಂಡ್ ಕಿಟ್ಟೆಲರು ಕನ್ನಡಿಗರಿಗೆ ಕೊಟ್ಟು

ಹೋಗಿರುವ ಹಾಗೂ ಬಿಟ್ಟುಹೋಗಿರುವ ಸಾಹಿತ್ಯ ಸಂಪತ್ತು ಅನನ್ಯವಾದುದು. ಹಳೆಗನ್ನಡ ಸಾಹಿತ್ಯ ವ್ಯಾಸಂಗಕ್ಕೆ ಬೇಕಾದ ವ್ಯಾಕರಣ, ಛಂದಸ್ಸು, ಅಲಂಕಾರ ಶಬ್ದಕೋಶಗಳನ್ನು ರಚಿಸಿ ಕಿಟ್ಟೆಲರು ಕನ್ನಡ ಭಾಷೆಯ ಪುನರುಜ್ಜೀವನಕ್ಕೆ ಕಾರಣರಾಗಿದ್ದಾರೆ. ತರುಣ ವಯಸ್ಸಿನಲ್ಲಿ ಕರ್ನಾಟಕಕ್ಕೆ ಬಂದು ಕನ್ನಡದ ಕೆಲಸಕ್ಕೆ ತಮ್ಮನ್ನೆ ಸಮರ್ಪಿಸಿಕೊಂಡ ಕಿಟ್ಟೆಲರ ಬದುಕು ಮತ್ತು ಬರಹಗಳು ಪ್ರಪಂಚದಲ್ಲಿ ಕನ್ನಡದ ನುಡಿಗಳು ಇರುವಷ್ಟು ಕಾಲ ಉಳಿಯುತ್ತವೆ. ಕನ್ನಡ ಸಾಹಿತ್ಯದ ಕಣಜಕ್ಕೆ ಕಿಟ್ಟೆಲರು ಕೊಟ್ಟಿರುವುದು ಗಟ್ಟಿ ಕಾಳುಗಳನ್ನು ; ಸಾಧಿಸಿ ತೋರಿಸಿರುವುದು ಗುರಿಮುಟ್ಟುವ ಫಲವನ್ನು ; ಮತ್ತು ಗೆದ್ದಿರುವುದು ಕೋಟಿಕೋಟಿ ಕನ್ನಡಿಗರ ಮನವನ್ನು; ಕನ್ನಡ ನಾಡಿನಲ್ಲಿಯೇ ಹುಟ್ಟಿ, ಕನ್ನಡದ ಉಪ್ಪನ್ನವನ್ನು ಮಣಗಟ್ಟಳೆ ತಿಂದು ಬೆಳೆದವನೂ ಕನ್ನಡಕ್ಕೆ ಇಷ್ಟು ಸೇವೆ ಸಲ್ಲಿಸಿರುವುದು ಅಪರೂಪ ಎಂದು ಬಿಎಲ್ ರೈಸರ ಕುರಿತು ಹಿರಿಯ ಸಾಹಿತಿ ಎ. ಆರ್. ಕೃಷ್ಣ ಶಾಸ್ತ್ರಿಗಳು ಹೇಳಿದ ಮಾತು ರೆ. ಫಾ ಫರ್ಡಿನಂಡ್ ಕಿಟ್ಟೆಲರಿಗೆ ಅನ್ವಯಿಸುತ್ತದೆ ಎಂಬುದಾಗಿ ಪ್ರೊ. ಎ. ಬಿ. ಮೊಳೆಯಾರರು ಕಿಟ್ಟೆಲರ ಕುರಿತಾದ ಪರಿಚಯ ಗ್ರಂಥದಲ್ಲಿ ಬರೆದಿದ್ದಾರೆ.

ಕನ್ನಡದ ಮುದ್ದಿನ ಕವಿ ಮುದ್ದಣ

"ಮುದ್ದಣ" ಕನ್ನಡ ಕಾವ್ಯಲೋಕದಲ್ಲಿ ಮುದ್ದಾದ ಹೆಸರು. "ಕನ್ನಡಂ ಕತ್ತುರಿಯಲ್ತೆ ; ಎಂಬ ಅಭಿಮಾನದಿಂದ "ತಿರುಳ್ಗನ್ನಡದ ಬೆಳ್ನುಡಿಯೊಳೆ ಪುರುಳೊಂದೆ ಪೇಳ್ವುದು" ಆತನ ವಾಂಛಿತ; ಕರ್ಮಣಿ ಸರದೊಳ್ ಚೆಂಬಳವಂ ಕೋದಂತಿರೆ, ರಸಮೊಸರೆ, ಲಕ್ಕಣಂ ಮಿಕ್ಕಿರೆ, ಎಡೆಯೆಡೆಯೊಳ್ ಸಕ್ಕದದ ನಲ್ನುಡಿ ಮೆರೆಯೆ ತಿರುಳ್ಗನ್ನಡದೊಳೆ ಕತೆಯನುಸಿರ್ವೆಂ" ಎಂಬುದಾಗಿ ಕಾವ್ಯ ಪ್ರತಿಜ್ಞೆಯನ್ನು ಮಾಡಿದ ಮುದ್ದಣನು ಹೃದ್ಯವಾದ ಗದ್ಯದಲ್ಲಿ ತನ್ನ ಪ್ರತಿಭಾ ವಿಲಾಸವನ್ನು ರಾಮಾಶ್ವಮೇಧದಲ್ಲಿ ಮಿಂಚಿಸಿದ್ದಾನೆ.

ನವೋದಯ ಸಾಹಿತ್ಯದ "ಮುಂಗೋಳಿ"ಯೆಂದು ಕರೆಯಲ್ಪಟ್ಟ ಮುದ್ದಣನು ಗದ್ಯ ಪದ್ಯಗಳೆರಡರಲ್ಲಿಯೂ ಸಮರ್ಥನಾದ ಕವಿಯಾದರೂ ಹೊಸಗನ್ನಡದ ಗದ್ಯ ಪರಂಪರೆಗೆ ನೂತನ ಮಾರ್ಗವನ್ನು ತುಳಿಯುವ ಮೂಲಕ ನಾಂದಿ ಹಾಡಿದನೆನ್ನಬಹುದು. ಕಾವ್ಯ ಮಾರ್ಗದಲ್ಲಿ ಮುದ್ದಣನು ಹಳೆಯ ಛಂದಸ್ಸನ್ನೇ ಅನುಸರಿಸಿ ಕಾವ್ಯ ರಚನೆ ಮಾಡಿದರೂ ಅದರಲ್ಲಿ ನೂತನತೆಯನ್ನು ಬಿಂಬಿಸಿದ್ದಾನೆ. "ಶ್ರೀರಾಮ ಪಟ್ಟಾಭಿಷೇಕ" ಹೆಸರೇ ಸೂಚಿಸುವಂತೆ ಶ್ರೀರಾಮ ಕಥಾನಕವನ್ನೊಳಗೊಂಡು ಉತ್ತಮ ಕಾವ್ಯದ ಸಾಲನ್ನು ಅಲಂಕರಿಸಿದೆ. 247 ವಾರ್ಧಿಕ ಷಟ್ಪದಿಗಳಲ್ಲಿ ಈ ಕಾವ್ಯ ರಚನೆಯಾಗಿದೆ.

ಆಡಿದಂತಯ್ಯನಡವಿಗೆ ಪೋದುದರಿದಲ್ಲ
ಕಾಡೊಳ್ತೊಳಲ್ದುದತಿಶಯಮಲ್ಲ ರಕ್ಕಸರ
ಕಂಡೆ ಕೈಗೈಯ್ದುದಚ್ಚರಿಯಲ್ಲ
ದೇವರ್ಕಳಂಪೊರೆಯೆ ದೊಡ್ಡಿತಲ್ಲ
ಖೋಡಿ ಪಾತಕಿ ಪಿಸುಣನತಿಕೋಪಿ ಕುಲ
ಗೇಡಿ ಭ್ರಾತೃದ್ರೋಹಿ ತನ್ನೊಳೊರೆದಂತೆ ■
ಪಾಡಲೆಂದೈತಂದುದಿದುವೆ ಪಿರಿದೆಂದು
ಕಾಲ್ಗೆರಗಿದಂ ರಘುರಾಮಗೆ.

ಶ್ರೀರಾಮಚಂದ್ರನು ಲಂಕೆಯಿಂದ ಹಿಂದಿರುಗಿದ ಸಂದರ್ಭದಲ್ಲಿ ಭರತನ ಮಾತುಗಳನ್ನು ಮೇಲಿನಂತೆ ವರ್ಣಿಸಲಾಗಿದೆ.

"ಅದ್ಭುತ ರಾಮಾಯಣ"ವನ್ನು ಕವಿ ಹಳೆಗನ್ನಡದಲ್ಲಿ ಬರೆದಿರುತ್ತಾನೆ. ಅಂಬರೀಷನ ಕತೆ, ನಾರದ ಪರ್ವತಕರ ಜಗಳ, ರಾಮಜನ್ಮೋಪಕ್ರಮ, ಕೌಶಿಕಾದಿ ವೈಕುಂಠ ಲೋಕ ಪ್ರಾಪ್ತಿ, ನಾರದ ಗಾಯನ ಪ್ರಾಪ್ತಿ, ಶ್ರೀ ಸೀತಾಜನ್ಮ ಕಥನ, ಜಮದಗ್ನಿ ವಿಶ್ವರೂಪ ದರ್ಶನ, ಹನುಮದ್ವಿಶ್ವರೂಪ ದರ್ಶನ, ಸೀತಾ ಭಾಷಣ, ಪುಷ್ಕರ ದ್ವೀಪಗಮನ, ಸಂಕುಲಯುದ್ಧ, ರಾಮಮೂರ್ಛಾ ಪ್ರಾಪ್ತಿ, ಸೀತಾರಾಮ ಅಯೋಧ್ಯಾಗಮನ ಇಷ್ಟು ಕಥೆಗಳನ್ನೊಳಗೊಂಡ ಅದ್ಭುತ ರಾಮಾಯಣವು 16 ಆಶ್ವಾಸಗಳ ಮೂಲಕ ಕನ್ನಡ ಕಾವ್ಯಲೋಕದಲ್ಲಿ ಒಂದು ಅದ್ಭುತವನ್ನೇ ಸೃಜಿಸಿದೆಯೆನ್ನಬಹುದು. ಕವಿಯ ಪ್ರತಿಭೆ, ಪಾಂಡಿತ್ಯ, ಹಳೆಗನ್ನಡದ ಓಜಸ್ಸು, ಸಿದ್ಧಿಸಿದುದನ್ನು ನಾವಿಲ್ಲಿ ಕಾಣುತ್ತೇವೆ.

ಕಾವ್ಯ ಪ್ರಕಾರಗಳಲ್ಲಿ ಹೆಸರಾದ ಆತನ ಮೂರು ಕೃತಿಗಳು ರಾಮಾಯಣವನ್ನೇ ಅವಲಂಬಿಸಿ ರಚಿತವಾದುದು ಇನ್ನೊಂದು ವೈಶಿಷ್ಟ್ಯವೆನ್ನಬಹುದು. ಆತನ ಈ ಮೂರು ಕೃತಿಗಳು ಆಕೃತಿಯಲ್ಲಿ ಭೀಮಗಾತ್ರದವುಗಳಲ್ಲ ; ಕಿರಿದರೊಳ್ ಪಿರಿದನ್ನು ಉಸುರುವ ಕಲೆ ಆತನಿಗೆ ಸಿದ್ಧಿಸಿರುವುದಕ್ಕೆ ದೃಷ್ಟಾಂತಗಳಾಗಿ ಮೆರೆದಿದೆ. ತನ್ನ ಅಮರ ಕೃತಿ ರಾಮಾಶ್ವಮೇಧದಲ್ಲಿ ಹಳೆಗನ್ನಡದ ಸೊಗಸನ್ನು ಹೊಸಗನ್ನಡದ ಅಂದವನ್ನು ಮೈಗೂಡಿಸಿ ತನ್ನ ನಿಚ್ಚಳ ಪ್ರತಿಭೆ ವಿಶಾಲಾನುಭವ, ಪಾಂಡಿತ್ಯಗಳ ರಸಗವಳವನ್ನು ಕನ್ನಡಿಗರಿಗೆ ಉಣಬಡಿಸಿದ್ದಾನೆ. ಯಾವುದೇ ಪ್ರಾಚೀನ ಗ್ರಂಥಗಳಿಗಿಂತ ಕಡಿಮೆಯಲ್ಲದ ನೂತನ ಸತ್ತ್ವಾತಿಶಯದ ಶಬ್ದವನ್ನು ನೀಡಿ ಸಹೃದಯರನ್ನು ತಣಿಸಿದ್ದಾನೆ.

"ರಸಭಾವ ಅಲಂಕಾರ ಸಮನ್ವಿತವಾದ ರಾಮಾಶ್ವಮೇಧವು ಪ್ರತಿಭೆ ಪಾಂಡಿತ್ಯಗಳ ಸತ್ಫಲ ; ಪ್ರಾಚೀನ ಅಲಂಕಾರ ಶಾಸ್ತ್ರ ಪರಿಚಯವಿಲ್ಲದೆ ಓದಿದ ಕೃತಿಯ ಓದು ಅದರ ಪೂರ್ಣ ಸೌಂದರ್ಯವನ್ನು ಬಿಟ್ಟುಕೊಡದು. ಪ್ರಾಚೀನ - ನವೀನಗಳ ಸುಂದರ ಸಮನ್ವಯವೇ ರಾಮಾಶ್ವಮೇಧದ ಪರಮ ಸಿದ್ಧಿ" ಎಂಬುದಾಗಿ ಎಂ. ವಿ. ಸೀತಾರಾಮಯ್ಯನವರು ಕೊಂಡಾಡಿದ್ದಾರೆ.

ಮುದ್ದಣನ ಗದ್ಯಬಂಧವನ್ನು ಆಧುನಿಕ ವಿಮರ್ಶೆಯಲ್ಲಿ ಬಳಕೆಯಾಗುವ ಇಂಗ್ಲಿಷಿನ Style ಎಂಬ ಪದಕ್ಕೆ ಸಂವಾದಿಯಾದ ಶೈಲಿ ಎಂಬ ಪದದಿಂದ ಕುರುಹಿಡುವದು ಸರಿಯಾದುದು.

ಶೈಲಿ ಕವಿನಿಷ್ಠ ಎಂಬ ಹೇಳಿಕೆ ಪ್ರಸಿದ್ಧವಾಗಿದೆಯಷ್ಟೆ ; ಮುದ್ದಣನ ಶೈಲಿ ಮುದ್ದಣನದು; ಎಂದು ಹೇಳುವುದು ಸರಿ ಆದರೂ ಇವನ ಕನ್ನಡದ ಶೈಲಿಯ ಸೊಗಸು ರಸ್ಕಿನ್ ಡಿಕ್ಕೆನ್ಸಿಗಳ ಇಂಗ್ಲಿಷ್ ಶೈಲಿಯ ಸೊಗಸಿಗೆ ಸಮಾನವಾಗುತ್ತದೆ. ಎಂಬ ವಿಮರ್ಶೆ ಹೋಲಿಕೆಯ ಮಾತನ್ನು ಗಮನಿಸಬಹುದು. ಎಂದು ಶ್ರೀ ಸೀತಾರಾಮಯ್ಯನವರು ಶೈಲಿಯ ಬಗ್ಗೆ ವಿವರಿಸಿದ್ದಾರೆ. ಪಂಜೆಯವರ ಮಾತಿನಲ್ಲಿ ಹೇಳುವುದಾದರೆ 'ಹಳೆಯ ಕಥೆಯನ್ನು ಹೊಸ ಆಯದಲ್ಲಿ ಕಟ್ಟಿ ಇತ್ತ ಹೊಸ ಶೈಲಿಯು ಅಲ್ಲ ; ಅತ್ತ ಹಳೆಯ ಶೈಲಿಯು ಅಲ್ಲ ; ಇವೆರಡರ ನಡುವಣ ಸರಣಿಯನ್ನು ಒದಗಿಸಿಕೊಳ್ಳಬೇಕಾಯಿತು. ಈ ಸರಣಿಯನ್ನು ಕಲ್ಪಿಸಿಕೊಳ್ಳುವುದಕ್ಕೆ ಚಿಕದೇವರಾಜ ವಂಶಾವಳಿಯನ್ನು ತೆರೆದದ್ದಾಯಿತು ; ಇದರ ಕನ್ನಡವು ಬೆರಳು ಬಿಗಿಯದಷ್ಟು ಪೆಡಸು ; ಅದರ ಹಳೆಗನ್ನಡವು ತಲೆಯೊಡೆಯುವಷ್ಟು ಗಟ್ಟಿ ; ವಾಣೀವಿಲಾಸ ಗ್ರಂಥಗಳನ್ನು ಬಿಚ್ಚಿದ್ದಾಯಿತು. ಒಂದರ ಕಾಠಿಣ್ಯವನ್ನು ಮತ್ತೊಂದರ ಶೈಥಿಲ್ಯವನ್ನು ತೆಗೆದು ಹಾಕಿ ಅವೆರಡನ್ನೂ ಹೊಸೆದು ತುಳುನುಡಿಗಳನ್ನು ಕನ್ನಡದ ಮಾತುಗಳನ್ನು ಸಂದರ್ಭಕ್ಕನುಸಾರವಾಗಿ ಹಳೆಗನ್ನಡದಿಂದ ತಿರುಪಿ ಎಷ್ಟು ಅರ್ಥಭಾರವನ್ನು ಹಾಕಿದರೂ ಕಡಿದು ಹೋಗದಂತೆ ಹಳೆಯ ವ್ಯಾಕರಣ ಸೂತ್ರಗಳಿಂದ ಗಂಟಿಕ್ಕಿ ಎದೆಯನ್ನೂ ತಣ್ಣಗೆ ತೋಯಿಸಿ ಮನಸ್ಸನ್ನು ತಣಿಸುವ ಎಣೆಯಿಲ್ಲದ ಈ ಭಾಷಾಸರಣಿಯು ಇವರನ್ನೇ ಒಲಿದು ಇವರನ್ನೇ ಏವರಿಸಿ ವಿಧೇಯಳಾದ ದಾಸಿಯಂತೆ ಇವರ ವಶವಾಗಿ ಹೋಯಿತು."

ಮುದ್ದಣನ ಬಗ್ಗೆ ಆಳವಾಗಿ ಅಭ್ಯಾಸ ಮಾಡಿ 'ಮುದ್ದಣ ಪದ ಪ್ರಯೋಗ ಕೋಶವನ್ನು ರಚಿಸಿದ ವಿದ್ವಾಂಸರಾದ ಪ್ರೊ. ವೆಂಕಟ ಸುಬ್ಬಯ್ಯನವರು ಹೀಗೆ ಹೇಳುತ್ತಾರೆ.

"ಮುದ್ದಣನು ಕನ್ನಡದ ಪ್ರಾಚೀನ ಗ್ರಂಥಗಳಿಗೂ ನವೀನ ಗ್ರಂಥಗಳಿಗೂ ಸುವರ್ಣ ಸೇತುವೆಯಂತಿದ್ದಾನೆ. ಅವನ ತಾರುಣ್ಯದಲ್ಲಿಯೇ ಅವನು ಎರಡು ಸುಂದರ ಯಕ್ಷಗಾನಗಳನ್ನು ಒಂದು ಪ್ರೌಢ ಷಟ್ಪದಿ ಕಾವ್ಯವನ್ನು ಎರಡು ಸೊಗಸಾದ ಗದ್ಯ ಗ್ರಂಥಗಳನ್ನು ರಚಿಸಿದನು. ಈ ಗ್ರಂಥಗಳಲ್ಲಿರುವ ಶೈಲಿಯ ನೂತನ ಗುಣದಿಂದ ಅವನು ಬಹುಬೇಗ ಜನಪ್ರಿಯ ಕವಿಯಾದನು. ಅವನ ಪಾಂಡಿತ್ಯ, ಸಂಗೀತ ಪ್ರಜ್ಞೆ, ಕವಿತಾ ಸಾಮರ್ಥ್ಯ ಇವು ಮೂರು ಈ ಗ್ರಂಥಗಳಿಂದ ಸ್ಪಷ್ಟವಾಗಿ ಅರಿವಿಗೆ ಬರುತ್ತವೆ. ಎಲ್ಲಕ್ಕಿಂತ ಹೆಚ್ಚಾಗಿ ಅವನು ಸೃಷ್ಟಿಸಿರುವ ಮನೋರಮೆಯೆಂಬ ವಿಮರ್ಶನ ವಿವೇಕವುಳ್ಳ ಯುವತಿಯ ಜೊತೆಯಲ್ಲಿ ಕವಿಯು ನಡೆಸುವ ಸರಸ ಸಂಭಾಷಣೆಯಲ್ಲಿ ಗೃಹಪರಿಸರದಲ್ಲಿ ಒಂದು ರಮ್ಯ ವಾತಾವರಣವೇ ನಿರ್ಮಾಣವಾಗಿದೆ. ಕಲಾವಂತಿಕೆಯಿಂದ ಕೂಡಿದ ಸನ್ನಿವೇಶ ಹೇಗೆ ಬಡತನದಲ್ಲಿಯೂ ಸಿರಿತನವನ್ನು ಅನುಭವಕ್ಕೆ ತರಬಲ್ಲುದು ಎಂಬುದರ ಪರಿಚಯವಾಗುತ್ತದೆ.

ಶ್ರೀ ರಾಮಚಂದ್ರ ಉಚ್ಚಿಲ ಅವರು ಮುದ್ದಣನ ಕೆಲವು ವಿಶಿಷ್ಟ ಪ್ರಯೋಗಗಳ ಬಗ್ಗೆ ಬರೆಯುತ್ತಾ ಹೀಗೆ ಹೇಳುತ್ತಾರೆ.

"ಮುದ್ದಣ ಒಬ್ಬ ಪ್ರಯೋಗ ಶೀಲ ಕವಿ. ಅವನ ಪ್ರಾಯೋಗಿಕ ಪ್ರವೃತ್ತಿ ಅವನ ಐದು ಕೃತಿಗಳಲ್ಲಿ ಬಾಳಿ ಬಂದಿದೆ. ವ್ಯಾಕರಣದ ಕಟ್ಟುಪಾಡುಗಳನ್ನು ಮೀರಿ ಅವನು ಪದಪ್ರಯೋಗ

ಮಾಡಿದ್ದಾನೆ . . . . ಗಿಳಿ ಎಂಬುದನ್ನು ಮುದ್ದಣ ಹಾಗೆ ಬಳಸಲಾರ. ಪಂಡಿತವಕ್ಕಿಯೆಂದೋ ತಾಮ್ರತುಂಡನೆಂದೋ ನುಡಿವಕ್ಕಿಯೆಂದೋ ಹೇಳದಿದ್ದರೆ ಆವನಿಗೆ ಸಮಾಧಾನವಿಲ್ಲ. ರತಿಯೆಂದರೆ ಸಾಲದು ಇಚ್ಚೆಗಾರ್ತಿಯೆಂದು ಸಂಬೋಧಿಸದೆ ಅವನಿಗೆ ಮನಸ್ಸು ತಡೆಯದು. ಚಂದ್ರಕಾಂತ ಶಿಲೆಯೆನ್ನುವುದು ಅವನಿಗಿಷ್ಟವಿಲ್ಲ. ಚಂದದಗಲ್ ಎಂದೇ ಹೇಳುವ ಆತುರ. ಒಪ್ಪೊತ್ತನ್ನು ಒಂದುಣಿಸೆಂದೂ ವಾತಾಯನವನ್ನು ಅತಿಬಲಾನಯನವೆಂದೂ ಮುಚ್ಚಿದ ಬಾಗಿಲನ್ನು ಬೆರೆದ ಪಡಿಯೆಂದೂ, ಒಯ್ಯಾರವನ್ನು ಒಯ್ಯರವೆಂದೂ ಅವನು ಹೇಳುತ್ತಾನೆ."

ಆತನ ಯಕ್ಷಗಾನ ಕೃತಿಗಳೆರಡು ರತ್ನಾವತಿ ಕಲ್ಯಾಣ ಮತ್ತು ಕುಮಾರ ವಿಜಯ. "ಈತನ ಕಾವ್ಯಪ್ರವೇಶಕ್ಕೆ ಈ ಯಕ್ಷಗಾನ ಸಾಹಿತ್ಯವೇ ಪ್ರಥಮ ಸೋಪಾನವಾಗಿದ್ದಿರಬೇಕು. ಈ ಎರಡು ಪ್ರಬಂಧಗಳಲ್ಲಿ ಲಕ್ಷ್ಮೀನಾರಣಪ್ಪ ತನ್ನ ಗುರು ಮಳಲಿ ಸುಬ್ಬರಾಯರಿಗೆ ಕೃತಜ್ಞತೆ ಸಲ್ಲಿಸಿದ್ದಾನೆ. ಅವನ ಗುರುಗಳಾಗಿದ್ದ ಮಳಲಿ ಸುಬ್ಬರಾಯರು ಕೆಲವು ಯಕ್ಷಗಾನ ಪ್ರಬಂಧಗಳನ್ನು ಬರೆದು ಪ್ರಕಟಿಸಿದ್ದರು. . . . . ರತ್ನಾವತೀಕಲ್ಯಾಣ ಇದರಲ್ಲಿನ ಹಾಡುಗಳು ಅಷ್ಟೊಂದು ಸರಳವಾಗಿಲ್ಲವಾದರೂ ಸುಂದರವಾಗಿವೆ. ಕವಿ ಚೆನ್ನಾದ ದಾಟಿ ಆರಿಸಿಕೊಂಡಿರುವುದು ಕಾಣಿಸುತ್ತದೆ. ಆತನಿಗೆ ಹಿಂದೂಸ್ಥಾನೀ ರಾಗಗಳ ಪರಿಚಯವಿದ್ದು ಅವನ್ನು ಬಳಸಲು ಪ್ರಯತ್ನಿಸಿದ್ದು ಕಾಣಿಸುತ್ತದೆ. ಆತ ಒಂದೆಡೆಯಲ್ಲಿ ಭೈರವಿ, ದಕ್ಷಿಣಾದಿಯ ತೋಡಿಗೆ ಸಮವೆಂದು ತಿಳಿಸಿದ್ದಾನೆ. . . . . . ಕುಮಾರ ವಿಜಯದ ಹಾಡುಗಳ ಬಿಗುವು ಮತ್ತಷ್ಟು ಅಧಿಕ. ಒಂದು ಸ್ತುತಿ ಪದ್ಯದಲ್ಲಿ ಕವಿಯು ಸ್ವರ ಪ್ರಸ್ತಾರವನ್ನು ಸೇರಿಸಿ ಬಿಟ್ಟಿದ್ದಾನೆ. ಈ ಕವಿಯು ಪ್ರಯೋಗಶೀಲನೆಂದು ಅದರಿಂದ ಸ್ಪಷ್ಟವಾಗುತ್ತದೆ. . . . ಆದರೆ ಇಂಥಾ ಭಾಷಾಜಾಣ್ಮೆಯನ್ನು ಮಾತಿನ ಡೊಂಬರವನ್ನು ಜೀರ್ಣಿಸಿಕೊಳ್ಳುವ ತ್ರಾಣ ಜನಸಾಮಾನ್ಯರಿಗಿರಲಾರದು. ಅಲ್ಲದೆ ಈ ಬಗೆಯ ಚಮತ್ಕಾರವನ್ನು ಕಲೆಯೆಂದು ತಿಳಿಯಲೇ ಬೇಕಿಲ್ಲ ಎಂಬುದಾಗಿ ಶಿವರಾಮ ಕಾರಂತರು ತಮ್ಮ 'ಯಕ್ಷಗಾನ ಬಯಲಾಟ' ಎಂಬ ಗ್ರಂಥದಲ್ಲಿ ತಿಳಿಸಿದ್ದಾರೆ. ಶ್ರೀ ಕಾರಂತರು ನೋಡುವ ಕಾಲದೃಷ್ಟಿಯಿಂದ ಈ ಮಾತು ಸರಿಯಾದುದೇ ಆದರೂ ಆತನ ಕಾವ್ಯಶಕ್ತಿಯು ಇಲ್ಲಿ ಎದ್ದು ಕಾಣುತ್ತದೆ ಎಂಬುದನ್ನು ನಾವು ಗಮನಿಸಬಹುದು.

ಮಹಾತ್ಮರಾದ ಶಂಕರಾಚಾರ್ಯರು ಅಲ್ಪಾಯುರ್ಮಾನದಲ್ಲಿ ಮಹಾಸಾಧನೆ ಮಾಡಿದ ಪರಂಪರೆ ನಮ್ಮದು. ಮುದ್ದಣನು ಅಂತೆಯೇ ಅಂದರೆ ಕೇವಲ ಮೂವತ್ತೆರಡು ವರ್ಷಗಳಲ್ಲಿಯೇ ತೀರಿಕೊಂಡುದು ನಾಡಿನ ದುರ್ದೈವ. ಕುಸ್ತಿಮೇಷ್ಟರಾಗಿ ಜೀವನ ನಿರ್ವಹಣೆ ಮಾಡುತ್ತಿದ್ದ 'ಮುದ್ದಣ'ನಲ್ಲಿ ಅಡಕವಾಗಿದ್ದ ಸೂಕ್ತ ಪ್ರತಿಭೆ ಅಪಾರ ಪಾಂಡಿತ್ಯಗಳನ್ನು ಗಮನಿಸುವಾಗ ಅದ್ಭುತವೊಂದನ್ನು ಕಂಡಂತಾಗುತ್ತದೆ. ಯಾರದೋ ಕೃತಿಯನ್ನು ತನ್ನದೆಂದು ಹೇಳಿಕೊಳ್ಳುವ ಅದನ್ನು ರೂಪಾಂತರಿಸಿ ಪ್ರಕಟಿಸಿ ಕವಿಯೆಂದು ಹೇಳಿಕೊಳ್ಳಬಯಸುವ ಮಂದಿಯೊಂದೆಡೆ, ತಾನೇ ರಚಿಸಿ ಇದು ತನ್ನದಲ್ಲವೆಂಬಂತೆ ಪ್ರಕಟನೆಗೆ ನೀಡಿದ ಮುದ್ದಣನ ಭವ್ಯ ನಿಸ್ಪೃಹ ವ್ಯಕ್ತಿತ್ವವಿನ್ನೊಂದೆಡೆ. ಇದು ಇಂದಿನ ದಿನಗಳಲ್ಲಿ ಕಂಡುಬರುವ ವಿಲಕ್ಷಣ ವಿದ್ಯಮಾನ.

"ಮುದ್ದಣ ಎಂಬ ಮುದ್ದಾದ ಕಾವ್ಯನಾಮದಿಂದ ಕನ್ನಡಿಗರಿಗೆ ಪ್ರಿಯನಾದ ನಂದಳಿಕೆ ಲಕ್ಷ್ಮೀನಾರಣಪ್ಪ ಕಾಲದೃಷ್ಟಿಯಿಂದ ಮಾತ್ರವಲ್ಲದೆ ಕಾವ್ಯಮಾರ್ಗದ ಅನುಸರಣೆಯ ದೃಷ್ಟಿಯಿಂದಲೂ ಪ್ರಾಚೀನ ಅರ್ವಾಚೀನಗಳ ನಡುವೆ ಒಂದು ಅನ್ಯಾದೃಶವಾದ ಸಮನ್ವಯ ಸೇತು ನಿರ್ಮಾಣವನ್ನು ಮಾಡಿ ರಸ ಯಾತ್ರಿಕರಿಗೆ ಕಾವ್ಯ ವಾಹಿನಿಯ ಎರಡೂ ದಡಗಳಲ್ಲಿ ವಿಹರಿಸುವ ಒಂದು ಅಭೂತಪೂರ್ವ ಅವಕಾಶವನ್ನು ಕಲ್ಪಿಸಿಕೊಟ್ಟಿದ್ದಾನೆ.

ಶ್ರೀ ಎಂ ವಿ ಸೀ ನುಡಿದ ಮೇಲಿನ ಮಾತುಗಳು ಅರ್ಥಪೂರ್ಣವಾಗಿವೆ. ಮುದ್ದಣನಂಥ ಕವಿ ಭುವಿಯ ಭಾಗ್ಯದಿಂದ ಹುಟ್ಟಿರಬೇಕು. ಇದು ಸಾರ್ವಕಾಲಿಕ ಸತ್ಯ.

ಶ್ರೀ ಬೆನಗಲ್ ರಾಮರಾಯರು

"ಕನ್ನಡದ ಸವಿಮಾತು ಮನ್ನಣೆಯ ಪಳವಾತು
ಕನ್ನಡದ ಸರಸ್ವತಿಯು ನವಕಲ್ಪಲತೆಯು
ಕನ್ನಡದ ವರಚರಿತೆ ವಿಮಲ ಗಂಗಾ ಸರಿತೆ
ಕನ್ನಡದ ಸಿರಿಪೆಂಪು ಎನಗೆ ನರುಳಂಪು"

ಕನ್ನಡ ಮಾತೆಯನ್ನು ಶ್ರೀ ಬೆನಗಲ್ ರಾಮರಾಯರು ಬಣ್ಣಿಸಿದ ಬಗೆಯಿದು. ಇಷ್ಟರಿಂದಲೇ ಅವರು ತೃಪ್ತಿ ಪಡಲಿಲ್ಲ. ಕನ್ನಡದ ನೆಲ ಜಲ ಕೂಡಾ ಅವರಿಗೆ ಬಹುದೊಡ್ಡ ಆಸ್ತಿ.

"ಕನ್ನಡದ ಹೊಲಮಣ್ಣು ಎನಗೆ ನವನಿಧಿಹೊನ್ನು
ಕನ್ನಡದ ಹೂ ಗಿಡವು ಎನ್ನೊಡಲಿಗದೆ ತೊಡವು"

ಮಣ್ಣು ಹೊನ್ನಾಗಿ - ಕನ್ನಡದ ಪ್ರಕೃತಿಯ ಸುಮವು ಭೂಷಣವಾಗಿರುವುದನ್ನು ಬಯಸುವ ಕವಿಯ ಸೌಭಾಗ್ಯ ವರ್ಣನಾತೀತ.

"ಕನ್ನಡವನುಳಿದೆನಗೆ ಅನ್ಯಜೀವನವಿಲ್ಲ
ಕನ್ನಡವೆ ಎನ್ನುಸಿರು ಹೆತ್ತೆನ್ನ ತಾಯಿ"

ಇಷ್ಟೊಂದು ಕನ್ನಡದ ಅಭಿಮಾನವನ್ನು ಎದೆಯೊಳಗೆ ತುಂಬಿಕೊಂಡ ಕವಿ ಬೆನಗಲರು ಬಹುಮುಖ ಸಾಧನೆಗಳಿಂದ ಸಾಹಿತ್ಯ ಸರಸ್ವತಿಯ ಆರಾಧನೆ ಮಾಡಿದ್ದಾರೆ.

1876ರಲ್ಲಿ ಜನಿಸಿದ ರಾಮರಾಯರು ಮೂಲ್ಕಿ, ಮಂಗಳೂರು, ಪುತ್ತೂರುಗಳಲ್ಲಿ ವಿದ್ಯಾಭ್ಯಾಸ ಮಾಡಿ ಬಿ ಎ ಪರೀಕ್ಷೆಯಲ್ಲಿ ಮದ್ರಾಸ ರಾಜ್ಯದಲ್ಲಿಯೇ ಎರಡನೆಯವರಾಗಿ ಬಹುಮಾನಿತರಾದರು. ಆಧುನಿಕ ಕನ್ನಡದಲ್ಲಿ ನವೋದಯ ಎಂಬ ಮಹಾ ಪ್ರಬಂಧವನ್ನು ಬರೆದು ಎಂ ಎ ಪದವಿ ಗಳಿಸಿದರು. ಮದ್ರಾಸ ಕ್ರಿಶ್ಚಿಯನ್ ಕಾಲೇಜಿನಲ್ಲಿ ಎರಡು ಮೂರು ವರ್ಷ, ಮೈಸೂರಿನ ಸರಕಾರಿ ಕಾಲೇಜಿನಲ್ಲಿ ಕೆಲಕಾಲ ಪ್ರಾಧ್ಯಾಪಕರಾಗಿ, ಮುಂಬಯಿ ಸರಕಾರದ ಭಾಷಾಂತರ ಇಲಾಖೆಯಲ್ಲಿ ಕೆಲಕಾಲ ಕೆಲಸ ಮಾಡಿದರು. ಮತ್ತೆ ಮದ್ರಾಸ ಸರಕಾರದ ಭಾಷಾಂತರಕಾರರಾಗಿ, ಮುಖ್ಯ ಹುದ್ದೆಯನ್ನು ನಿರ್ವಹಿಸಿದ್ದರು. ಮುಂಬಯಿ ವಿಶ್ವವಿದ್ಯಾನಿಲಯದಲ್ಲಿ ನ್ಯಾಯಶಾಸ್ತ್ರವನ್ನು ಅಭ್ಯಸಿಸಿದರು. ತೆಲುಗಿನಲ್ಲಿ ಎಂ ಎ ಪದವಿಯನ್ನು ಪಡೆದರಲ್ಲದೆ ಸಂಸ್ಕೃತ, ಬಂಗಾಳಿ, ಮರಾಠಿ ಭಾಷೆಗಳನ್ನು ಅಭ್ಯಾಸ ಮಾಡಿದರು.

ಅವರ ಕನ್ನಡ ಪ್ರೇಮ ಅಸಾಧಾರಣವಾದುದು. ಆಗ ಮದ್ರಾಸ ರಾಜ್ಯಕ್ಕೆ ಸೇರಿತ್ತು ನಮ್ಮ ಜಿಲ್ಲೆ. ಹೀಗಾಗಿ ಅಲ್ಲಿ ಕನ್ನಡಿಗರು ತುಂಬಿದ್ದರು. ಆಗಾಗ ದೂರದೂರುಗಳಿಂದ ಬರುತ್ತಲೂ ಇದ್ದರು. ಇವರೆಲ್ಲರಿಗೂ ಬೆನಗಲ್ ರಾಮರಾಯರ ಮನೆಯೊಂದು ಕೇಂದ್ರ ಯಾತ್ರಾಸ್ಥಳವೆನಿಸಿತ್ತು. ಕನ್ನಡದ ಚಟುವಟಿಕೆಗಳಿಗೆ ಅವರು ಮದ್ರಾಸಿನಲ್ಲಿ ಕೇಂದ್ರ ಬಿಂದುವಾಗಿದ್ದರು.

ಅವರ ಸಾಹಿತ್ಯ ರಚನೆಯ ಹರವು ವಿಸ್ತಾರವಾದುದು. ಶಿವತತ್ವ - ರತ್ನಾಕರ, ಕೆಳದಿ ಅರಸರ ವಂಶಾವಳಿ, ಕೊಡಗಿನ ರಾಜೇಂದ್ರ ನಾಮೆ, ಕಮಲಾಚಲ ಕೋಟೆಯ ಕೈಫಿಯತ್ತು, ಜಮಲಾಬಾದು ಕೈಫಿಯತ್ತು, ತಂಜಾವೂರಿನ ನಾಯಕ ಮನೆತನದ ಕೈಫಿಯತ್ತು, ಬಳ್ಳಾರಿಯ ಕೈಫಿಯತ್ತು, ಬಿದನೂರು ಕೈಫಿಯತ್ತು, ರಾಮರಾಜನ ಕೈಫಿಯತ್ತು, ಹೊಳೆಹೊನ್ನೂರಿನ ಕೈಫಿಯತ್ತು, ಬೀಡಿಗೆ ಅರಸರ ವಂಶಾವಳಿ ಮೊದಲಾದ ಕೃತಿಗಳನ್ನು ಪ್ರಕಟಿಸಿದ್ದಾರೆ. ಇದರಿಂದ ಅವರ ಐತಿಹಾಸಿಕ ಪ್ರಜ್ಞೆಯು ಮನವರಿಕೆಯಾಗುತ್ತದೆ. ಕೈಫಿಯತ್ತುಗಳನ್ನು ಸಂಗ್ರಹಿಸಿದ ಅವರ ದಾಖಲೆಯ ಸಾಹಸ ಅವರಿಗೆ ಕೈಫಿಯತ್ ರಾಮರಾಯರು ಎಂಬ ಹೆಸರನ್ನೇ ಕೊಟ್ಟುಬಿಟ್ಟಿದೆಯಂತೆ. ಸಂಗೀತ ಕರಾವಳಿ, ಸಂಗೀತ ರತ್ನಾವಳಿ ಎಂಬ ಎರಡು ಕವಿತಾ ಸಂಕಲನಗಳು. ಅವರ ಕವನಗಳು ಸಂಗೀತ ಪ್ರಧಾನವಾಗಿ ಗೇಯಾಂಶಗಳಿಂದ ಕೂಡಿರುವುದು ಸ್ಪಷ್ಟವಾಗುತ್ತದೆ. ಅಭಿಷೇಕ, ಕುಂದಮಾಲಾ, ಅವಿಮಾರಕ, ಘೋಷಯಾತ್ರೆ, ಸುಭದ್ರಾ ಪರಿಣಯ ಮೊದಲಾದ ಹತ್ತಾರು ನಾಟಕಗಳನ್ನು ಅವರು ರಚಿಸಿರುವರೆಂದು ತಿಳಿದು ಬರುತ್ತದೆ. ಅವಿಮಾರಕ, ಅಭಿಷೇಕರಂಥ ಭಾಸನ ನಾಟಕಗಳು, ದಿಙ್ನಾಗನ ಕುಂದ ಮಾಲೆ ಕೂಡಾ ಅವರಲ್ಲಿ ಕನ್ನಡ ರೂಪ ತಳೆದ ಅಂಶ ಗಮನಾರ್ಹ. ಇರಾವತಿ, ತರುಬಾಲ, ರಮಾಮಾಧವ, ಸತ್ಯರಾಜಾ ಪೂರ್ವದೇಶದ ಯಾತ್ರಿಕರು ಮೊದಲಾದ ಕಾದಂಬರಿಗಳನ್ನೂ ಸಣ್ಣ ಕಥೆಗಳನ್ನೂ ಬರೆದಿದ್ದಾರೆಂದು ಹೇಳಲಾಗಿದೆ. ಚಂಪಮಾಲೆ, ಸುಭದ್ರಾ ವಿಜಯ, ಸದಾಚಾರ ವಿವೇಕ, ಮಹನೀಯರ ಚರಿತ್ರ ಮಾಲೆ, ಚಿಕ್ಕಕತೆಗಳು, ದೂತಾಂಗದ, ಜಯದೇವ, ವಿಜಯ ಪೌರಾತ್ಯರ ವರ್ಣವ್ಯವಸ್ಥೆ, ಪಾಶ್ಚಾತ್ಯರ ವರ್ಣವ್ಯವಸ್ಥೆ, ಕನ್ನಡ ಹಾಡುಗಳು ಕೂಡಾ ಇವರಿಂದ ರಚಿತವಾಗಿವೆ. ಪುರಾಣನಾಮಚೂಡಾಮಣಿ ಎಂಬ ಇವರ ಪ್ರಸಿದ್ಧ ಕೃತಿ ಯಕ್ಷಗಾನ - ಸಾಹಿತ್ಯಾಭ್ಯಾಸಿಗಳಿಗೊಂದು ಕೈಪಿಡಿಯಾಗಿ ವಿಶೇಷವಾಗಿ ಪ್ರಸಿದ್ಧಿ ಪಡೆದಿದೆ.

ಅವರೊಬ್ಬ ಉತ್ತಮ ಪತ್ರಕರ್ತರೆಂದೂ ಹೆಸರಾಗಿದ್ದಾರೆ. ಮಂಗಳೂರಿನ 'ಸುವಾಸಿನಿ'

ಪತ್ರಿಕೆಯನ್ನು ಉತ್ತಮ ಮಟ್ಟದಲ್ಲಿ ಅವರು ನಡೆಸಿದ್ದಾರೆ. 'ವಾಗ್ಭೂಷಣ' ಎಂಬ ಮತ್ತೊಂದು ಪತ್ರಿಕೆಯ ಜೊತೆ ಸಂಪಾದಕರಾಗಿಯೂ ಕೆಲಸ ಮಾಡಿದ್ದರಂತೆ. ಕನ್ನಡ ಸಾಹಿತ್ಯ ಪರಿಷತ್ ಪತ್ರಿಕೆಯ ಸಲಹೆಗಾರರಾಗಿ, ಕರ್ನಾಟಕ ವಿದ್ಯಾವರ್ಧಕ ಸಂಘದ ಆಜೀವ ಸದಸ್ಯರಾಗಿ, ಮದ್ರಾಸಿನ ಸುಗುಣ ವಿಲಾಸ ಸಭೆಯ ಕನ್ನಡ ವಿಭಾಗದ ಕಾರ್ಯದರ್ಶಿಯಾಗಿ ಸೇವೆಸಲ್ಲಿಸಿದ್ದರೆಂದೂ ತಿಳಿದುಬಂದಿದೆ. ಮದ್ರಾಸಿನಲ್ಲಿ ಕನ್ನಡ ನಾಟಕಗಳನ್ನು ಪ್ರದರ್ಶಿಸುವ ಅವಕಾಶವನ್ನು ರಾಮರಾಯರು ಕಲ್ಪಿಸಿದ್ದರು ಎಂಬುದು ಗೌರವದ ಮಾತಾಗಿದೆ.

ಸರಕಾರಿ ಅಧಿಕಾರಿಯಾಗಿದ್ದುಕೊಂಡು ಕನ್ನಡಮ್ಮನ ಸೇವೆಯನ್ನು ಶ್ರದ್ಧೆಯಿಂದ ನಿರ್ವಹಿಸಿ, ಅತುಲವಾದ ಸಾಹಿತ್ಯ - ಸಂಪತ್ತನ್ನು ನೀಡಿದ ಬೆನಗಲ್ ರಾಮರಾಯರನ್ನು ಸಾಹಿತ್ಯ ಸಮ್ಮೇಳನದ ಅಧ್ಯಕ್ಷರನ್ನಾಗಿ ಗೌರವಿಸಲಾಗಿದೆ. 1925ರಲ್ಲಿ ಬೆಳಗಾವಿಯಲ್ಲಿ ಜರಗಿದ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಪೀಠದಿಂದ ಅವರು ನುಡಿದ ಮಾತುಗಳು ಮನನೀಯವಾಗಿವೆ. ನಮ್ಮ ಸಾಹಿತ್ಯದ ವಿಚಾರದಲ್ಲಿ ನಮಗಿರುವ ಅಸಡ್ಡೆಯನ್ನು ಹೋಗಲಾಡಿಸುವಂತೆ ಅವರು ಕೊಟ್ಟ ಕರೆ ಇಂದಿಗೂ ಪ್ರಸ್ತುತವಾಗಿದೆ. ನಮ್ಮ ಜಿಲ್ಲೆಯವರ ಪೈಕಿ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಪೀಠವನ್ನು ಪ್ರಥಮವಾಗಿ ಅಲಂಕರಿಸಿದ ಮಹನೀಯರು ಇವರೇ ಆಗಿದ್ದಾರೆ.

'ಕವಿ ಶಿಷ್ಯ' ನಾಮದ ಗುರು
ಪಂಜೆ ಮಂಗೇಶರಾಯರು.

ಪಂಜೆ ಮಂಗೇಶರಾಯರ ಹೆಸರು ನವೋದಯ ಕನ್ನಡ ಸಾಹಿತ್ಯರಂಗದಲ್ಲಿ ಜಾಜ್ವಲ್ಯಮಾನವಾದುದು. ಇವರನ್ನು 'ಸಣ್ಣಕತೆ'ಗಳ ಜನಕನೆಂದೂ ಆಚಾರ್ಯರೆಂದೂ, ಕರೆದಿದ್ದಾರೆ. ಮಂಗಳೂರಿನ 'ಸುವಾಸಿನಿ' ಪತ್ರಿಕೆಯಲ್ಲಿ 1901ರಲ್ಲಿಯೇ ಇವರ ಕತೆಗಳು ಪ್ರಕಟವಾಗಿ ಹೆಸರು ಪಡೆದಿವೆ. ಅವರು ಬರೆದ 'ಅಜ್ಜಿಕತೆ'ಗಳು ಎಳೆಯರಿಗೆ ಬಹಳಷ್ಟು ರುಚಿಕರವಾಗಿದ್ದವು. ಮಕ್ಕಳಿಗಾಗಿ ನೂರಾರು ಕಥೆಗಳನ್ನು ಅವರು ಬರೆದಿದ್ದಾರೆ. "ಗುಡುಗುಡು ಗುಮ್ಮಟ ದೇವರು, ಕೊಕ್ಕೊಕೋಳಿ, ಕೋಟಿ ಚೆನ್ನಯ" ಮೊದಲಾದ ಕಥೆಗಳು ಬಹಳ ಜನಪ್ರಿಯವಾಗಿವೆ. ಮಕ್ಕಳಿಗಾಗಿ ಕಥೆ ಬರೆಯುವವರಲ್ಲಿ ಅವರು ಎಷ್ಟು ಆಸಕ್ತರಾಗಿದ್ದರೆಂದರೆ ಮಕ್ಕಳಿಗಾಗಿ 'ಬಾಲಸಾಹಿತ್ಯ ಮಂಡಲ' ಎಂಬ ಪುಸ್ತಕ ಪ್ರಕಾಶನ ಸಂಸ್ಥೆಯನ್ನು ಅವರು ಸ್ಥಾಪಿಸಿದ್ದರು. ಅವರು ಮಕ್ಕಳ ಕಥೆ ಮಾತ್ರವಲ್ಲದೆ ವೀರಮತಿ ಮುಂತಾದ ಹಲವು ಐತಿಹಾಸಿಕ ಕಥೆಗಳನ್ನು ಬರೆದಿದ್ದಾರೆ. 'ಕೋಟಿಚೆನ್ನಯ' ಎಂಬ ಕಥೆ ಜಾನಪದ ತುಳು ಪಾಡ್ದನದಿಂದ ಆಯ್ದ ವಸ್ತು. ಹೀಗೆ ಪಂಜೆಯವರು ಕನ್ನಡದ ಸಣ್ಣಕಥೆಗಳಿಗೆ ಆಚಾರ್ಯರೆಂಬ ಕೀರ್ತಿಗೆ ಭಾಜನರಾದರು.

ಪಂಜೆಯವರು ಹಲವಾರು ಪ್ರಬಂಧಗಳನ್ನು ಬರೆದಿದ್ದಾರೆ. ಸಂಶೋಧನೆಯಲ್ಲಿಯೂ ಕೆಲಸ ಮಾಡಿದ್ದಾರೆ. ಮೂಡಬಿದಿರೆಯ ಹೊಸ ಬಸದಿಯ ಶಿಲಾಶಾಸನಗಳು, ಬಿಳಿಗಿರಿಯ ಶಾಸನಗಳು ಎಂಬ ಸಂಶೋಧನಾತ್ಮಕ ಬರಹವನ್ನು ಪ್ರಕಟಿಸಿದ್ದಾರೆ. ಮಂಗಳೂರಿನ 'ಸುವಾಸಿನಿ' ಮತ್ತು 'ಸತ್ಯದೀಪಿಕೆ' ಎಂಬ ಪತ್ರಿಕೆಗಳಲ್ಲಿ ಹರಟೆ ಮಲ್ಲ, ಕವಿಶಿಷ್ಯ, 'ರಾಮಪಂ' ಮೊದಲಾದ ಹೆಸರುಗಳಿಂದಲೂ ಬರೆಯುತ್ತಿದ್ದರು. ಅವರ 'ಕವಿಶಿಷ್ಯ' ಎಂಬ ಹೆಸರು ಪಂಜೆಯವರ ಬಗ್ಗೆ ವಿಶೇಷ ಆದರಣೀಯವಾಗಿದೆ.

ಶ್ರೀ ಪಂಜೆಯವರು ಉತ್ತಮ ಕವಿಯಾಗಿದ್ದರು. ನವೋದಯ ಸಾಹಿತ್ಯಕ್ಕೆ ಅವರ ಕೊಡುಗೆ ಅಪಾರ. ಅವರ ಕವನಗಳಲ್ಲಿ ಇಂಗ್ಲಿಷ್ ಸಾಹಿತ್ಯದ ಪ್ರಭಾವವಿದ್ದಿತೆಂದು ಹೇಳಲಾಗಿದೆ. ಆದರೆ ಅದು ಎಷ್ಟೊಂದು ಸಹಜವಾಗಿ ಸ್ವತಂತ್ರ ರಚನೆಯಾಗಿ ಮೂಡಿಬಂದಿತ್ತು ಎಂಬುದಕ್ಕೆ ಇದೊಂದು ಉದಾಹರಣೆಯಾಗಬಲ್ಲುದು.

"ಮಿನುಗೆಲೆ ಮಿನುಗೆಲೆ ನಕ್ಷತ್ರ
ನನಗಿದು ಚೋದ್ಯವು ಬಲುಚಿತ್ರ
ಘನಗಗನದಿ ಬಲುದೂರದಲಿ
ಮಿನುಗುವೆ ವಜ್ರಾಕಾರದಲಿ"

"ಟ್ವಿಂಕಲ್ ಟ್ವಿಂಕಲ್ ಲಿಟ್ಲ್ ಸ್ಟಾರ್" ಇಂಗ್ಲಿಷ್ ಪದ್ಯದ ಕನ್ನಡ ರೂಪವನ್ನು ಎಷ್ಟೊಂದು ಸೊಗಸಾಗಿ ರೂಪಿಸಿದರು ಎಂಬುದು ಅಚ್ಚರಿಯನ್ನುಂಟುಮಾಡುವಂಥದು.

ತೆಂಕಣಗಾಳಿ ಅವರ ಇನ್ನೊಂದು ಶ್ರೇಷ್ಠ ಕವಿತೆ.

"ಗಿಡಗಿಡದಿಂ ಚೆಲುಗೊಂಚಲು ಮಿಂಚಲು
ಮಿಡಿಯನು ಉದುರಿಸಿ ಕೆದರಿಸಿ
ಎಡದಲಿ ಬಲದಲಿ ಕೆಲದಲಿ ನೆಲದಲಿ
ಪಡುವಣ ಮೋಡವ ಬೆಟ್ಟಕೆ ಘಟ್ಟಕೆ ಹೊಡೆದಟ್ಟುತ ಕೋಲ್‌ಮಿಂಚನು ಮಿರುಗಿಸಿ
ಗುಡುಗನು ಗುಡುಗಿಸಿ ನೆಲವನು ನಡುಗಿಸಿ
ಸಿಡಿಲನು ತಾಳೆಗೆ ಬಾಳೆಗೆ ಎರಗಿಸಿ
ಜಡಿಮಳೆ ಸುರಿವೋಲ್ ಬಿರುಮಳೆ ಬರುವೋಲ್
ಕುಡಿನೀರನು ಒಣಗಿದ ನೆಲಕೆರೆವೋಲ್
ಬಂತೈ ಬಂತೈ ಬೀಸುತ ಬಂತೈ
ತೆಂಕಣ ಗಾಳಿಯು ಕೊಂಕಣ ಸೀಮೆಗೆ ಬಂತೈ ಬಂತೈ ಬಂತೈ ಬಂತೈ

ಎಂಥ ಸುಂದರ ಕವಿತೆಯಿದು !

ಸೂರ್ಯೋದಯದ ವರ್ಣನೆಯು ಹೀಗಿದೆ.

ಇಂಪಾಗಿ ನಗುನಗುವ ಮುಂಬಿಸಿಲ ಮೋರೆಯಲಿ
ಅಂಬುಜಸಖಂ ಬಂದನಂಬರದಲಿ
ತುಂಬಿದ್ದ ಬಲು ಕತ್ತಲೆಯ ಕಂಬಳಿ ಕಳಚಿ
ಚೆಂಬೆಳಕ ಹಾಸಿನಿಂದೊಪ್ಪವಡಿಸಿದನು.
ಕೆಂಪಿನ ಓಕುಳಿ ಸ್ನಾನದಲಿ
ಇಂಪಿನ ಕೋಗಿಲೆ ಗಾನದಲಿ
ಬಾನಿನ ಗದ್ದಿಗೆ ಏರಿದನು
ಭಾನುವು ಹೊಂದಲೆ ತೋರಿದನು.
ಮೂಡುವನೂ ರವಿ ಮೂಡುವನೂ
ಕತ್ತಲೊಡನೆ ಜಗಳಾಡುವನು
ಮೂಡಣ ರಂಗಸ್ಥಳದಲಿ ನೆತ್ತರು ಮಾಡುವನು
ಕುಣಿದಾಡುವನು
ಬಂಗಾರದ ಚೆಲುಬಿಸಿಲ ಕಿರೀಟದ ಶೃಂಗಾರದ ತಲೆವೆತ್ತುವನು
ತೆಂಗಿನ ಕಂಗಿನ ತಾಳೆಯ ಬಾಳೆಯ ಅಂಗಕೆ ರಂಗನು ಮೆತ್ತುವನು

ಮಕ್ಕಳಿಗೆ ಮಾತ್ರವಲ್ಲ ಅವರ ಹೆತ್ತವರಿಗೂ ನಾಡಿನ ಎಲ್ಲಾ ಸಹೃದಯರಿಗೂ ಮೆಚ್ಚುಗೆಯಾಗುವ ಗೀತೆಗಳು ಅವರ ವಿಶಿಷ್ಟ ಸಾಧನೆಗಳು.

ಎಲ್ಲಿ ಸಾಹಸ ಸತ್ವದಳತೆಗೆ
ಬಳ್ಳವಾಗದೊ ಮೈಯ ಬಣ್ಣವು
ಎಲ್ಲಿ ಅನ್ಯಾಯಕ್ಕೆ ಕತ್ತಿಯೂ ಕೊಡದೊ ಬೆಂಬಲವಾ
ಎಲ್ಲಿ ಆತ್ಮೋನ್ನತಿಯ ಹಾದಿಗೆ
ಕಲ್ಲು ಮುಳ್ಳನ್ನಿಡದೆ, ಆಸುಖಿ
ಸಲ್ಲಲಿತ ಸಮಸತ್ಯ ಸೀಮೆಗೆ ತಾಯೆ ನಡೆಸೆನ್ನ,

ನ್ಯಾಯ ನಿಷ್ಠುರತೆ ಕಲ್ಲು ಮುಳ್ಳಿನ ಹಾದಿಯಿಂದ ಆತ್ಮೋನ್ನತಿ ಸುಖವನ್ನು ಬಯಸುವ ಕವಿಯ ವಾಂಛೆ ಅನಿರತವಾದುದು.

ಎಲ್ಲಿ ಭೂರಮೆ ದೇವಸನ್ನಿಧಿ ಬಯಸಿ ಬಿಮ್ಮನೆ ಬಂದಳೋ
ಎಲ್ಲಿ ಮೋಹನಗಿರಿಯ ಬೆರಗಿನ ರೂಪಿನಿಂದಲಿ ನಿಂದಳೋ
ಎಲ್ಲಿ ಮುಗಿಲಲಿ ಮಿಂಚಿನೋಲ್ ಕಾವೇರಿ ಹೊಳೆ ಹೊಳೆ ಹೊಳೆವಳೋ

ಎಲ್ಲಿ ನೆಲವನು ತಣಿಸಿ ಜನಮನ ಹೊಲದ ಕಳೆಕಳೆಕಳೆವಳೋ
ಅಲ್ಲಿ ಆ ಕಡೆ ನೋಡಲಾ
ಅಲ್ಲಿ ಕೊಡವರ ನಾಡಲಾ
ಅಲ್ಲಿ ಕೊಡವರ ಬೀಡಲಾ

ಕೊಡಗಿನ ಬೆಡಗನ್ನು ಪ್ರಕೃತಿಯ ಐಸಿರಿಯನ್ನು ಕಂಡು ಅರಳಿದ ಕವಿ ಹೃದಯದ ಹಾಡು ಎಂಥವರನ್ನು ತಲೆದೂಗಿಸದಿರದು. 'ನಡೆಮ ನೋಡು ಕೊಡಗಿನ ಬೆಡಗಂ' ಎಂಬ ಮಾತು ಇಂಥ ಸೌಂದರ್ಯದ ಆಸ್ವಾದನೆಗಾಗಿ ಹುಟ್ಟಿರಬೇಕು.

ನಾಗರ ಹಾವೇ ಹಾವೊಳು ಹೂವೆ
ದೂರದ ಬಿಲದಲಿ ನಿನ್ನಯ ಠಾವೆ
ಕರವನು ಮುಗಿವೆ ಹಾಲನ್ನೀವೆ
ಬಾ ಬಾ ಬಾ ಬಾ ಬಾ ಬಾ ಬಾ

ಇಂಥ ಪದ್ಯಗಳ ರಚನೆಯೆಂದರೆ ಪಂಜೆಯವರಿಗೆ ತುಂಬ ಇಷ್ಟ. 'ಹೊಲೆಯನ ಹಾಡು' ಅವರ ಪರಿಪಕ್ವ ಸಂಸ್ಕಾರ - ಹೊಲೆತನದ ಕಲ್ಪನೆ - ಗಾಂಧೀವಾದದ ತಿರುಳನ್ನು ಸಾರಿದೆ.

ಹೊಲೆಯನೆನ್ನುತ ದೂರ ಹಾರಬೇಡ
ಹೊಲೆ ಬರದು ಹೊರಗಿಂದೆ, ಒಳಗಡೆಯೆ ಇಹುದೆಂದು
ತಿಳಿದ ದಾಸರು ಎಲ್ಲ ಸಾರಿರುವರು.

ಪಂಜೆಯವರು ಉತ್ತಮ ಕಥೆಗಾರರು, ಸಾಹಿತಿಗಳು, ಕವಿಗಳು, ಶಿಕ್ಷಣಜ್ಞರು. ಕವನಗಳಲ್ಲಿ 'ಪ್ರಾಸ'ದ ಬಗ್ಗೆ ಅವರಿಗೆ ಪ್ರೀತಿಯಿದೆ. ಗೋವಿಂದ ಪೈಗಳು ಪ್ರಾಸವನ್ನು ಬಿಡುವ ಕುರಿತು ಮಾತನಾಡಿದಾಗ, ಪಂಜೆಯವರು ಒಪ್ಪಲಿಲ್ಲವಂತೆ. ಪೈಗಳು ಧೀರ ನಿರ್ಧಾರದಿಂದ ಮುಂದಡಿಯಿಟ್ಟ ವಿಚಾರ ಬೇರೆ. ಪಂಜೆಯವರು ಪ್ರಾಸವನ್ನಿರಿಸಿಕೊಂಡೇ ಕವನ ರಚಿಸಿ ಜನಮನಸೂರೆಗೊಂಡ ವಿಚಾರ ಬೇರೆ.

ಈ ಜಿಲ್ಲೆಯ ಹೆಮ್ಮೆಯ ಕವಿ - ಸಾಹಿತಿ ಎಂದಷ್ಟೇ ಅಲ್ಲ, ಕನ್ನಡ ನಾಡಿನಲ್ಲಿಯೇ ಅವರು ವಿಖ್ಯಾತರಾಗಿದ್ದಾರೆ. ಅವರು ಹುಟ್ಟಿದ್ದು ಬಂಟ್ವಾಳದಲ್ಲಿ, ಅವರ ತಂದೆಯವರ ಮನೆ ಪಂಜ. ಹೀಗೆ ಅವರು ಪಂಜೆ ಎಂಬ ಹೆಸರಿನಿಂದ ಬೆಳಗುವಂತಾಯಿತು. ನಾಗಪ್ಪಯ್ಯ - ಶಾಂತಿಬಾಯಿ (ಸೀತಮ್ಮ ಎಂದು ಕರೆಯುತ್ತಾರಂತೆ) ದಂಪತಿಗಳ ಮಗನಾಗಿ ಜನಿಸಿ ಬಾಲ್ಯದಲ್ಲಿಯೇ ಪಿತೃವಿಯೋಗ ಹೊಂದಿ ಕಷ್ಟದಿಂದ ವಿದ್ಯಾರ್ಜನೆ ಮಾಡಿದರು. ಮಂಗಳೂರು, ಕಾಸರಗೋಡು, ಕೊಡಗುಗಳಲ್ಲಿ ಅವರು ಶಾಲಾಪರೀಕ್ಷಾಧಿಕಾರಿಯಾಗಿ, ಶಿಕ್ಷಕರಾಗಿ ದುಡಿದರು. ಮಡಿಕೇರಿಯ ಹೈಸ್ಕೂಲು ಒಂದರಲ್ಲಿ ಮುಖ್ಯೋಪಾಧ್ಯಾಯರಾಗಿ ನಿವೃತ್ತರಾದರು. ಅಧ್ಯಾಪಕ ವೃತ್ತಿ ಅವರ ಸಾಹಿತ್ಯಕ್ಕೆ ಪ್ರೇರಕವೂ ಪೂರಕವೂ ಆಯಿತು. ಮಕ್ಕಳ ಮನದ ಒಳ ನೋಟವನ್ನು ಬಲ್ಲ ಅವರಿಗೆ ಶಿಶು ಸಾಹಿತ್ಯ ರಚನೆ

ಸುಲಭವಾಯಿತು. ಪ್ರಿಯವಾಯಿತು. ಸಫಲವೂ ಆಯಿತು. ಅಂತೆಯೇ ನಾಡಿನ ವಿವಿಧ ಜನರ ಜೀವನ - ಸಂಸ್ಕಾರಗಳ ಪರಿಚಯಲಾಭ ಪ್ರಕೃತಿ ಪರಿಸರಗಳು ಕಾವ್ಯಶಕ್ತಿಗೆ ಉದ್ದೀಪನಗಳಾದವು.

ಮಕ್ಕಳಿಗಾಗಿ ಅವರು ಪಠ್ಯ ಪುಸ್ತಕಗಳನ್ನು ಬರೆದರು. 1912ರಲ್ಲಿ ಕನ್ನಡ ಮೊದಲನೆಯ ಪಠ್ಯಪುಸ್ತಕ, 1919ರಲ್ಲಿ ಎರಡನೆಯ ಪಠ್ಯಪುಸ್ತಕ, 1927ರಲ್ಲಿ ಮೂರನೆಯ ಪಠ್ಯಪುಸ್ತಕಗಳನ್ನು ರಚಿಸಿ ಪ್ರಕಟಿಸಿದರು. ಮಕ್ಕಳ ಸಾಹಿತ್ಯ ರಚನೆಗೊಂದು ಆಯಾಮವನ್ನು ನೀಡಿ, ಶಿಕ್ಷಣ ರಂಗಕ್ಕೆ ಆದರ್ಶವನ್ನೂ ಭದ್ರ ಬುನಾದಿಯನ್ನೂ ಹಾಕಿಕೊಟ್ಟರು. ಅವರು ಸಮಗ್ರವಾಗಿ ಶಿಕ್ಷಣಜ್ಞರಾಗಿದ್ದುದೇ ಇಂಥ ಸಾಪಲ್ಯಕ್ಕೆ ಕಾರಣವಾಯಿತು.

ಪಂಜೆಯವರು ಕನ್ನಡಕ್ಕೆ ಸಲ್ಲಿಸಿದ ಅಪ್ರತಿಮ ಸೇವೆಗಾಗಿ ರಾಯಚೂರಿನಲ್ಲಿ ಜರಗಿದ (1934) ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಆಯ್ಕೆಗೊಂಡರು. ಹೀಗೆ ಅಖಿಲ ಕರ್ನಾಟಕದ ಗೌರವಾದರಗಳಿಗೆ ಅವರು ಪಾತ್ರರಾದರು. ಅವರು ನಮ್ಮ ಶಿಕ್ಷಣಕ್ಕೆ ನಾಡಿನಲ್ಲಿ - ಕನ್ನಡದಲ್ಲಿ ಆಗಬೇಕಾದ ಸುಧಾರಣೆಗಳಿಗೆ ಮಾರ್ಗದರ್ಶನವನ್ನು ನೀಡಿರುವುದು ಗಮನಾರ್ಹವಾಗಿದೆ.

"ಇಂದಿನ ಕೃತಿಗಾರರು ಅನುಸರಿಸುವದು ಪಾಶ್ಚಾತ್ಯ ಜ್ಞಾನವನ್ನು. ಸಂಸ್ಕೃತಿಯನ್ನಲ್ಲ. ಅದು ಸಾಧ್ಯವಿಲ್ಲ. ಇದ್ದರೂ ಕನ್ನಡ ವಾಙ್ಮಯವು ಇಂಗ್ಲಿಷ್ ಸಂಸ್ಕೃತಿಯ ಅನುಕರಣ ಗ್ರಹಣ ಕಾಲವನ್ನು ಸುಮಾರು 50 ವರ್ಷಗಳ ಹಿಂದೆಯೇ ಕಳೆದು ಬಿಟ್ಟು ಇಂದು ಜ್ಞಾನದ ತೀರ್ಥ ಸ್ನಾನಕ್ಕಾಗಿ ಇಳಿದಿದೆ. ಹಿಂದಿನ ದಾಸಕೂಟದವರೂ, ಕವನಗಾರರೂ, ದೇವರ ವಿಷಯವಾದ ಸಂದೇಹ, ನಿರಾಶೆ, ಸಂಕಟ, ನಶ್ವರತೆ, ಜೀವನ ರಹಸ್ಯ ಇವುಗಳನ್ನು ತಮಗೆ ತಿಳಿದಂತೆ ಹಾಡಿದ ಹಾಗೆ ಇಂದಿನವರು ಇಂದಿನ ಪರಿಸ್ಥಿತಿಗೆ ಅನುಗುಣವಾಗಿ ಹಾಡುತ್ತಿರುವರು."

ಅಧ್ಯಕ್ಷ ಭಾಷಣದಲ್ಲಿ ಶ್ರೀ ಪಂಜೆಯವರು ತಿಳಿಸಿದ ಮಾತುಗಳು ಕನ್ನಡಿಗರಿಗೆ ಎಚ್ಚರಿಕೆಯ ಸ್ವರೂಪದಲ್ಲಿ ಇರುತ್ತವೆ. ಹೀಗೆ ಅವರ ಮಾರ್ಗದರ್ಶನದಲ್ಲಿ ನಾವು ಸಾಗಬೇಕಾಗಿದೆ. ಕನ್ನಡದ ಮಕ್ಕಳನ್ನು ಹೇಗೆ ತರಬೇತುಗೊಳಿಸಬೇಕು ? ಎಂಥ ಕೃತಿಗಳು ಮಕ್ಕಳ ಮನಸ್ಸನ್ನು ಸೂರೆಗೊಳ್ಳ ಬಲ್ಲವು ಎಂಬುದನ್ನು ತಿಳಿಸಿದ ಶಿಕ್ಷಣಜ್ಞರು ಪಂಜೆ ಮಂಗೇಶರಾಯರು.

ಪಂಡಿತ ಮುಳಿಯ ತಿಮ್ಮಪ್ಪಯ್ಯನವರು

ಪಳಗನ್ನಡ ಪೊಸಗನ್ನಡ

ಗಳೊಳಂ ಸದ್ಗದ್ಯ ಪದ್ಯ ನಿರ್ಮಾಣದೊಳಂ

ಪಳಗಿದ ಕೈಯಂ ತಾನೆನೆ

ಬೆಳಗಿರ್ದಂ ಸವ್ಯಸಾಚಿ ತಿಮ್ಮಪ್ಪಯ್ಯಂ.

ತಿಮ್ಮಪ್ಪಯ್ಯನವರ ಬಗ್ಗೆ ಪಂಡಿತರಾದ ಕಡವ ಶಂಭು ಶರ್ಮರು ಬರೆದ ಮೇಲಿನ ಪದ್ಯ ಹೃದ್ಯವಾಗಿದೆ. ಅರ್ಥಪೂರ್ಣವಾಗಿದೆ. ಹಳೆಗನ್ನಡದ ಕಂಪನ್ನು ಹೊಸಗನ್ನಡದ ಸೊಂಪನ್ನು ಮೈಗೂಡಿಸಿ ಕನ್ನಡದಲ್ಲಿ ಹೊಸಬಗೆಯ ಸಾಹಿತ್ಯ ರಚನೆ ಮಾಡಿದ ತಿಮ್ಮಪ್ಪಯ್ಯನವರು ಮುದ್ದಣನಂತೆ ಈ ನಾಡಿನ ಭಾಗ್ಯ ವಿಶೇಷವಾಗಿ ಜನಿಸಿ ಬೆಳಗಿದ ಮಹನೀಯರು.

ಕಂದಳಿತ ಕಾವ್ಯನಂದಾ

ನಂದಳಿಕೆಯನೊರ್ವನಂತೆಯೆರಡನೆಯಮಂ ಮೇ

ಣೆಂದಾದಂ ಮುಳಿಯದವಂ.

ಮುಂದಾರ್ ತೆಂಕನ್ನಡದೊಳೆ ಪೆಸರೆತ್ತುವೊಡಂ ?

ಮಹಾಕವಿ ಮುದ್ದಣನಂತೆ ತಿಮ್ಮಪ್ಪಯ್ಯನವರು ಕನ್ನಡದ ಕಣ್ಮಣಿಯಾಗಿ ಬೆಳಗಿದ್ದಾರೆ. ಇವರ ಪರಂಪರೆಯನ್ನು ಮುಂದೆ ಬೆಳಗುವವರಾರು ಎಂಬ ಪ್ರಶ್ನೆಯನ್ನು ಶಂಭು ಶರ್ಮರು ಕೇಳಿದ್ದಾರೆ. ಕನ್ನಡ ಸಾಹಿತ್ಯ ಪ್ರಕಾರದಲ್ಲಿ ಕವಿಗಳು ವಿಮರ್ಶಕರು ಇಲ್ಲವೆಂದು ಅರ್ಥವಲ್ಲ. ಮುದ್ದಣನೂ ತಿಮ್ಮಪ್ಪಯ್ಯನವರೂ ನಡೆದ ದಾರಿ ಹಳೆಗನ್ನಡದ ಸುಗಂಧದ ಕಂಪಿನೊಂದಿಗೆ, ಕನ್ನಡ ನವೋದಯದ ಮುಂಗನಸನ್ನು ಸವಿಗೊಳಿಸಿದ ಬಗೆ ಅನನ್ಯವಾದುದು ;

ದಕ್ಷಿಣ ಕನ್ನಡದ ಬಂಟ್ವಾಳ ತಾಲೂಕಿಗೆ ಸೇರಿದ ಮುಳಿಯ ಎಂಬ ಹಳ್ಳಿಯಿಂದು ಕನ್ನಡ ನಾಡಿಗೆ ಚಿರಪರಿಚಿತವಾಗಲು ಕಾರಣರಾದವರು ಮುಳಿಯ ತಿಮ್ಮಪ್ಪಯ್ಯನವರು. ಹುಟ್ಟೂರಿನ ಸೌಭಾಗ್ಯ ಅವರ ಪಾಲಿಗೆ ಮುಳುವಾಯಿತು. ಮನೆ - ಮಾರುಗಳು ಅವರ ಕುಟುಂಬದ ಸೌಜನ್ಯದ ದುರ್ಲಾಭವನ್ನು ಪಡೆದವರಿಂದ ಅಪಹೃತವಾದವು. ಆದರೆ ಕನ್ನಡ ನಾಡು ಅವರನ್ನು ತನ್ನ ತೆಕ್ಕೆಯಲ್ಲಿರಿಸಿಕೊಂಡು ಗೌರವಿಸಿತು. 1931 ಕಾರವಾರದಲ್ಲಿ ಜರಗಿದ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಅಧ್ಯಕ್ಷ ಪದವಿ ಮತ್ತು 1941ರಲ್ಲಿ ಜರಗಿದ ಪಂಪನ ಸಹಸ್ರ ಸಾಂವತ್ಸರಿಕೋತ್ಸವದ ಅಧ್ಯಕ್ಷತೆಗಳು ಅವರ ಅರ್ಹತೆ ವಿದ್ವತ್ತೆಗಳಿಗೆ ಸಂದ ಗೌರವ. ನಾಡೋಜನೆಂದು ಕನ್ನಡ ನಾಡು ಪಂಪನನ್ನು ಗೌರವಿಸುವಂತೆ ಆತನ ಕಾವ್ಯಸುಧಾಸಾರವನ್ನುಣಿಸಿದ ತಿಮ್ಮಪ್ಪಯ್ಯರು ನಾಡೋಜರಾಗಿ ಬೆಳಗಿದ್ದಾರೆ.

ತಿಮ್ಮಪ್ಪಯ್ಯನವರು ಸಂಸ್ಕೃತ - ಕನ್ನಡ ಭಾಷೆಗಳೆರಡರಲ್ಲೂ ಅಗಾಧ ಪಾಂಡಿತ್ಯ ಹೊಂದಿದ್ದರು. ಜೀವನದ ಸ್ವಾರಸ್ಯ, ಸಂಕಷ್ಟಗಳನ್ನು ಬಲ್ಲವರಾಗಿ ಜನರ ನಡೆನುಡಿ ಆಡುಮಾತು,

ಗಾದೆಮಾತು, ಜಾನಪದದ ಸೊಗಸನ್ನು ಪೌರಾಣಿಕ - ಪಾರಮಾರ್ಥಿಕ ವಿಚಾರಗಳ ಹೊಳಹನ್ನು ತನ್ನ ಕೃತಿಗಳಲ್ಲಿ ಮೂಡಿಸುವುದರ ಮೂಲಕ ಪ್ರಬುದ್ಧ ಪರಿಪಕ್ವ ಸಾಹಿತಿಯಾಗಿ ಮಾನ್ಯರಾಗಿದ್ದಾರೆ. ಹಿಂದಿನ ದಿನಗಳಲ್ಲಿ ಹಳ್ಳಿ ಹಳ್ಳಿಗಳಲ್ಲಿ ಪುರಾಣ ಪ್ರವಚನ, ಕಾವ್ಯವಾಚನಗಳ ಮೂಲಕ ಜನರ ಹೃದಯವನ್ನರಳಿಸಿ ಮನೆಮನೆಗೆ ಸಾಹಿತ್ಯ ಸರಸ್ವತಿಯನ್ನು ಕೊಂಡೊಯ್ದ ಅವರ ಸಾಹಸವನ್ನು ಇಂದಿಗೂ ನಮ್ಮೂರ ಹಳಬರು ನೆನಪಿಸುತ್ತಾರೆ. ಯಾವುದೇ ಸಂಚಾರ ಸೌಕರ್ಯಗಳಿಲ್ಲ, ಪ್ರಚಾರ ಮಾಧ್ಯಮಗಳಿಲ್ಲ, ಧ್ವನಿವರ್ಧಕಗಳಿಲ್ಲ, ಸರ್ಕಾರದ ನೆರವಂತೂ ಇಲ್ಲವೇ ಇಲ್ಲ. ಸಂಘಸಂಸ್ಥೆಗಳು ಆಗ ಹುಟ್ಟಿಕೊಂಡು ಯಾವ ಸಾಧನೆಗೂ ತೊಡಗಿಲ್ಲ. ಇಂಥ ದಿನಗಳಲ್ಲಿ ಹಳ್ಳಿಹಳ್ಳಿಗಳಿಗೆ ಕಾವ್ಯಸಂದೇಶವನ್ನು ಪೌರಾಣಿಕ ಮನೋಧರ್ಮವನ್ನು ತಿಳಿಯಪಡಿಸಿದ ಕೀರ್ತಿ ಶ್ರೀ ತಿಮ್ಮಪ್ಪಯ್ಯನವರದು.

ನಾಡೋಜ ಪಂಪ ಮತ್ತು ಕವಿರಾಜ ಮಾರ್ಗ ವಿವೇಕ ಎಂಬ ಮೇರು ಕೃತಿಗಳು ಕನ್ನಡ ಸಾಹಿತ್ಯದ ಬಲು ದೊಡ್ಡ ಆಸ್ತಿ. ಆದಿಕವಿ ಪಂಪನ ಕೃತಿಯನ್ನು ಸಮಗ್ರವಾಗಿ ಅಧ್ಯಯನ ಮಾಡಿ ಪಂಪನ ಪೆಂಪನ್ನು ನಾಡಿಗೆ ಧಾರೆ ಎರೆದ ಮಹಾನ್ ಚೇತನ ಮುಳಿಯರು. ಕನ್ನಡ ಮಾರ್ಗ ಸಾಹಿತ್ಯ ನಿರ್ಮಾಣಕ್ಕೆ ಅಡಿಪಾಯದಂತಿರುವ ಕವಿರಾಜ ಮಾರ್ಗದ ಸಮಗ್ರ ವಿವೇಚನೆ ಮಾಡಿದ ಮಹತ್ವದ ಪ್ರತಿಭೆ ಪಾಂಡಿತ್ಯ ಅವರದು. ಈ ಎರಡು ಕೃತಿಗಳೇ ತಿಮ್ಮಪ್ಪಯ್ಯನವರ ಮಹಾ ಪಾಂಡಿತ್ಯ ಪ್ರತಿಭೆ ಸಾಧನೆಗಳಿಗೆ ಸಾಕ್ಷಿಗಳಾಗಿವೆ. ಅವರು ರಚಿಸಿದ ಇನ್ನಷ್ಟು ಕೃತಿಗಳು ನಾಡಿಗೆ ಕಾಣಿಕೆಗಳಾಗಿ ಆದರಣೀಯವಾಗಿದ್ದರೂ ಈ ಮೇಲಿನ ಮಹಾಕೃತಿಗಳು ಅವರನ್ನು ಅಷ್ಟೊಂದು ಎತ್ತರಕ್ಕೇರಿಸಿವೆ.

ಸೊಬಗಿನ ಬಳ್ಳಿ, ಬಡಹುಡುಗಿ, ಪ್ರೇಮ ಪಾಶ, ನವನೀತ ರಾಮಾಯಣ ಎಂಬ ಕಾವ್ಯಗಳನ್ನು ಅವರು ರಚಿಸಿದ್ದಾರೆ. ಅವರ ಪಾಂಡಿತ್ಯ - ರಸಿಕತೆ ಪ್ರತಿಭೆಗಳು ಇವುಗಳಲ್ಲಿ ಮೇಳವಿಸಿವೆ. ಹಳೆಗನ್ನಡ, ತಿರುಳ್ಗನ್ನಡಗಳಲ್ಲಿ ಅವರ ಪ್ರಭುತ್ವವು ವ್ಯಕ್ತವಾಗಿದೆ.

ಚಂದ್ರಾವಲೀವಿಲಾಸಂ, ನಡತೆಯ ನಾಡು, ಹಗಲಿರುಳು, ರಾವುತ - ರಂಗಪ್ಪ ಎಂಬ ನಾಟಕಗಳನ್ನು ರಚಿಸಿ ಆ ರಂಗದಲ್ಲಿಯೂ ತಮ್ಮ ಶಕ್ತಿಯನ್ನು ತೋರಿದ್ದಾರೆ. ಪೌರಾಣಿಕವಾದ ಚಂದ್ರಾವಲೀವಿಲಾಸವು ಒಂದು ರಸಗವಳವಾಗಿ ಆಸ್ವಾದನೀಯವಾಗಿದೆ.

ಆದಿ ಪುರಾಣ ಸಂಗ್ರಹ, ಸಮಸ್ತ ಭಾರತ ಸಾರ, ತ್ರಿಪುರ ದಾಹ ಎಂಬ ಗದ್ಯಾನುವಾದ ಕೃತಿಗಳಲ್ಲಿ ಅವರು ಅಪ್ರತಿಮ ಪ್ರೌಢಿಮೆಯನ್ನು ಮೆರೆದಿದ್ದಾರೆ. ಪಾರ್ತಿಸುಬ್ಬ ಅವರ ಸಂಶೋಧನ ಗ್ರಂಥ. ಯಕ್ಷಗಾನ ಕವಿ ಸುಬ್ಬನ ಬಗ್ಗೆ ಆತನಕ ಯಾವ ಬೆಳಕೂ ಸರಿಯಾಗಿಲ್ಲದೆ ಇದ್ದ ಸಂದರ್ಭದಲ್ಲಿ ಆತನದ್ದೆನ್ನಲಾದ ಕೃತಿಗಳ ಸ್ವಾರಸ್ಯವನ್ನು ಆಸ್ವಾದಿಸುವಂತೆ ಮಾಡಿದ್ದಾರೆ. ಸಂಶೋಧನೆ ಬಗ್ಗೆ ಶ್ರೀ ಶಿವರಾಮ ಕಾರಂತರು ಭಿನ್ನಾಭಿಪ್ರಾಯವನ್ನು ಅನಂತರ ಪ್ರಕಟಿಸಿದ್ದರೂ ಮೊದಲಾಗಿ ಆ ಬಗ್ಗೆ ಕೈ ಹಚ್ಚಿದ ಸಾಧನೆ ಶ್ರೀಯುತರವರದ್ದು.

'ಕನ್ನಡ ನಾಡೂ ದೇಸೀ ಸಾಹಿತ್ಯವೂ' ಎಂಬ ಪ್ರಬಂಧದಲ್ಲಿ ಅವರು ತಮ್ಮ ನಿಶಿತವಾದ ಬುದ್ಧಿಶಕ್ತಿಯನ್ನು ಹರಿಯಬಿಟ್ಟು ಹೊಸದಾದ ಬೆಳಕನ್ನು ಚೆಲ್ಲಿದ್ದಾರೆ. ಪ್ರಾಚೀನ ಕನ್ನಡ ನಾಡಿನ ವ್ಯಾಪ್ತಿ, ನೃಪತುಂಗನಿಂದಲೂ ಹಿಂದಿನ ರಾಜರು, ದಂತಿದುರ್ಗ, ಶುಭತುಂಗ ಕೃಷ್ಣರಾಜ, ಜಗತ್ತುಂಗ

ಗೋವಿಂದ ಮೊದಲಾದವರ ಬಗ್ಗೆ ಆಧಾರ ಸಹಿತ ವಿವರಗಳನ್ನು ನೀಡಿ ತಿರುಳ್ಗನ್ನಡ ಸಂಸ್ಕೃತಿ, ದೇಸಿಗಬ್ಬದ ಒಳಗವಲುಗಳನ್ನು ಬಾಜನೆ ಗಬ್ಬ ದೇಸಿಸಾಹಿತ್ಯದ ಉಗಮಗಳನ್ನೆಲ್ಲಾ ಚಿತ್ರಿಸಿದ್ದಾರೆ. ಆಂಡಯ್ಯನ ಕನ್ನಡಮೆನಿಪ್ಪಾನಾಡು, ಕನ್ನಡ ಸಾಹಿತ್ಯ, ಪಂಪಮಹಾಕವಿ, ಮುದ್ದಣನ ಜಾಣ್ಮೆ, ತುಳುವೂ ಕನ್ನಡವೂ, ಸ್ವಾತಂತ್ರ್ಯದ ಸಾಫಲ್ಯ, ಹೊನ್ನಮ್ಮ, ಅಚ್ಚಗನ್ನಡ ಶಿಶುಮಾಯಣ ಮೊದಲಾದ ಪ್ರಬಂಧಗಳನ್ನು ರಚಿಸಿ ವೈಚಾರಿಕ ಕ್ರಾಂತಿ ನಡೆಸಿದ್ದಾರೆ. ಕನ್ನಡಕೋಗಿಲೆ ಎಂಬ ಪತ್ರಿಕೆ, ಅವರ ಪತ್ರಿಕಾ ವೃತ್ತಿಗೆ ಹಿಡಿದ ಕನ್ನಡಿ. ನಾಡಿನ ಉದ್ಧಗಲಕ್ಕೆ ಹೆಸರಾದ ಈ ಪತ್ರಿಕೆಯ ಮೂಲಕ ಸಾಹಿತ್ಯ ಹಾಗೂ ರಾಜಕೀಯದ ಬಗ್ಗೆ ತಮ್ಮ ನಿಲುವನ್ನು ಪ್ರಕಟಿಸಿದ್ದಾರೆ. ಸ್ವಾತಂತ್ರ್ಯದ ಸವಿಗನಸನ್ನು ಅವರು ಕಂಡ ಬಗೆಯನ್ನು ವಿವರಿಸಿದ ರೀತಿ ಇಂದಿಗೂ ಆದರಣೀಯವಾಗಿದೆ, ಮನನೀಯವಾಗಿದೆ.

ಆಂಡಯ್ಯನಂತೆ ಅಚ್ಚಗನ್ನಡದ ಪ್ರಯೋಗದಲ್ಲಿ ಅವರು ತಮ್ಮ ಸಾಫಲ್ಯವನ್ನು ಮೆರೆದಿದ್ದಾರೆ. 'ಆಂಡಯ್ಯನಂದೆಸಗಿದಚ್ಚಕನ್ನಡ ದಾರಿಯೊಳ್' ನಡೆದು ತೋರಿದ ಸೊಬಗಿನ ಬಳ್ಳಿ ಇಂದಿಗೂ ತಂಪನ್ನೂ ಸೊಂಪನ್ನೂ ನೀಡುತ್ತಿದೆ. ಸಂಸ್ಕೃತದಲ್ಲಿ ಅಗಾಧ ಪಾಂಡಿತ್ಯ ಹೊಂದಿರುವದು. ಅವರ ಕೃತಿಗಳಲ್ಲಿ ಎದ್ದು ಕಾಣುತ್ತಿದ್ದರೂ ಕನ್ನಡದ ಬಗ್ಗೆ ಅವರ ಅಭಿಮಾನ ಪ್ರತ್ಯೇಕ - ವಿಶಿಷ್ಟವಾದುದು. ಅಂಥ ಸಾಮರ್ಥ್ಯವನ್ನು ಅವರು ಮೆರೆದಿದ್ದಾರೆ. ಸಂಸ್ಕೃತವನ್ನು ಬಳಸುವಲ್ಲಿ ಕನ್ನಡದ ಅಂದ - ಚೆಂದದ ಬಗೆಯನ್ನುಳಿಸಿಕೊಳ್ಳುವ ಸ್ವಂತಿಕೆಯನ್ನು ಮೆರೆಯಿಸುವ ಹಿತ - ಮಿತ ಪ್ರಯೋಗದ ವಿಚಾರ ಅವರದಾಗಿತ್ತು.

ಮನೆವಾತು ಪಂಪನಾಡಿದ
ಬನವಸೆ ಕನ್ನಡಮವಂಗೆ ತಿಮ್ಮಪ್ಪಂಗೆ-
ದೆನೆ ಕುರಿತೋದಿದ ಹೈಗಂ
ಗನುಮಾನಮೆ ? ಕನ್ನಡಕ್ಕೆ ಕತ್ತುರಿಯಾತಂ
ಆರಯೆ ಸಮಸ್ತಭಾರತ
ಸಾರಂ ಮೇಣಾದಿ ಕಾವ್ಯಸಂಗ್ರಹಮೆರಡಂ
ಸಾರತರ ಹೃದ್ಯಗದ್ಯಾ
ಕಾರದೆ ವಿರಚಿಸಿದ ತಿಮ್ಮಪ್ಪಾರ್ಯಂ ಧನ್ಯಂ

ವಿದ್ವಾಂಸರಾದ ಕಡವ ಶಂಭು ಶರ್ಮರು ಬರೆದ ಈ ಮೇಲಿನ ಸಾಲುಗಳು ಮುಳಿಯರ ಸಮಗ್ರ ದರ್ಶನವನ್ನು ಮಾಡಿಸುತ್ತವೆ. ಅವರ ಇನ್ನೊಂದು ಪದ್ಯ ಇನ್ನಷ್ಟು ರಸವತ್ತಾಗಿ ಯಥಾರ್ಥವೆನಿಸಿದೆ.

ತಿಮ್ಮಪ್ಪಯ್ಯನ ಪೆಸರಿಂ
ದೆಮ್ಮನೆಲಂ ಪಳ್ಳಿಸೀಮೆ ಹೋಬಳಿಯೂರುಂ
ಘುಮ್ಮನೆ ನಾಡಿಗೆ ನಾಡೇ
ಕಮ್ಮೈಸಿದುದಲ್ತೆ ಕನ್ನಡಂ ಕತ್ತುರಿಯುಂ

ಈ ಶತಮಾನದ ಪೂರ್ವಾರ್ಧದಲ್ಲಿ ಬಾಳಿ, ತನುವನ್ನು ನಾಡು - ನುಡಿಗಳಿಗೆ ಧಾರೆಯೆರೆದು, ಅಪಾರ ಶಿಷ್ಯವರ್ಗವನ್ನೂ ಅಭಿಮಾನಿಗಳನ್ನೂ ನಾಡಿನ ಆದ್ಯಂತಗಳಿಸಿಕೊಂಡ ಪಂಡಿತ ತಿಮ್ಮಪ್ಪಯ್ಯನವರ ಶತಮಾನೋತ್ಸವವನ್ನು ಆಚರಿಸಿ ನಾಡು ಧನ್ಯತೆ ಪಡೆದಿದೆ. ಇತ್ತೀಚೆಗೆ ಅವರ ಹುಟ್ಟೂರು ಮುಳಿಯದಲ್ಲಿ ಅವರ ಸ್ಮಾರಕ ವಿದ್ಯಾಮಂದಿರವೊಂದು ಶ್ರೀ ಬಿ. ಕೆ. ಈಶ್ವರ ಭಟ್ಟ ಮೊದಲಾದವರ ನೇತೃತ್ವದಲ್ಲಿ ತಲೆಯೆತ್ತಿರುವುದು. ಊರವರು ಅವರನ್ನು ಸ್ಮರಿಸಿಕೊಳ್ಳುತ್ತಿರುವುದಕ್ಕೆ ಸಾಕ್ಷಿಯಾಗಿ ನಿಂತಿದೆ. ಶ್ರೀ ಬಿ. ಕೆ. ಈಶ್ವರ ಭಟ್ಟರು ಮತ್ತವರ ಬಳಗದ ಸಾಹಸ ಅಭಿನಂದನೀಯ. ಮುಳಿಯ ತಿಮ್ಮಪ್ಪಯ್ಯ ಸ್ಮಾರಕ ವಿದ್ಯಾಲಯವು (ಪ್ರಕೃತ ಹೈಸ್ಕೂಲ್) ಕಾಲೇಜಾಗಬೇಕು. ವಿಶ್ವವಿದ್ಯಾನಿಲಯದ ಆಶ್ರಯದಲ್ಲಿ ತಿಮ್ಮಪ್ಪಯ್ಯ ಅಧ್ಯಯನ ಪೀಠವೊಂದು ಸ್ಥಾಪನೆಗೊಳ್ಳಬೇಕು ಎಂಬ ಬಯಕೆಯನ್ನು ಊರವರು ಇರಿಸಿಕೊಂಡಿರುವುದು ಅವರಿಗೆ ಸಲ್ಲತಕ್ಕ ಗೌರವದ ಸೂಚನೆಯಾಗಿದೆ.

ಹಟ್ಟಿಯಂಗಡಿ ನಾರಾಯಣ ರಾಯರು.

ಕುಂದಾಪುರ ತಾಲೂಕಿನ ಹಟ್ಟಿಯಂಗಡಿಯ ಹೆಸರು ಕನ್ನಡಿಗರ ಮನದಲ್ಲಿ ಒಂದು ಬಗೆಯ ಸಂತಸವನ್ನು ತರಬಲ್ಲುದು. ಇಲ್ಲಿ ಜನಿಸಿದ ನಾರಾಯಣ ರಾಯರ ಹೆಸರು ಈ ಊರಿನ ಹೆಸರೊಂದಿಗೆ ಸೇರಿಕೊಂಡುದರಿಂದ ಇನ್ನಷ್ಟು ತೃಪ್ತಿಯನ್ನುಂಟುಮಾಡಬಲ್ಲುದು.

"ಶ್ರೀ ನಾರಾಯಣ ರಾಯರು ಇಂಗ್ಲಿಷ್ ಕವನಗಳನ್ನು ಕನ್ನಡಕ್ಕೆ ಅನುವಾದಿಸುತ್ತಿದ್ದರೆಂದು ಶ್ರೀ ಗೋವಿಂದ ಪೈಗಳು ವಿದ್ಯಾರ್ಥಿಯಾಗಿದ್ದಾಗಲೇ ತಮ್ಮ ಗುರು ಪಂಜೆಯವರಿಂದ ಅರಿತಿದ್ದರಂತೆ. ಮೈಸೂರಿನಲ್ಲಿ ಬಿ. ಎಂ. ಶ್ರೀಯವರು "ಅವಳ ತೊಡುಗೆ" "ಇವಳಿಗಿಟ್ಟು" ಹಾಡಬಯಸುವ ಮೊದಲೇ ನಾರಾಯಣ ರಾಯರು, ಶೇಕ್ಸ್‌ಪಿಯರ್, ಮಿಲ್ಟನ್, ಗ್ರೇ ಮೊದಲಾದ ಇಂಗ್ಲಿಷ್ ಮಹಾ ಕವಿಗಳ ಕವನಗಳನ್ನು ಕನ್ನಡ ಜಾಯಮಾನಕ್ಕೆ ಒಗ್ಗಿಸಿಕೊಂಡು ಆದಿ - ಅಂತ್ಯಪ್ರಾಸ ಸಮೇತ ಪ್ರಕಟಿಸಿದರು." ಎಂಬುದಾಗಿ ಕವಿ ಅಮ್ಮೆಂಬಳರು ಬರೆದಿದ್ದಾರೆ. ನಾರಾಯಣ ರಾಯರ 'ಆಂಗ್ಲ ಕವಿತಾವಳಿ'ಯಲ್ಲಿ ನವೋದಯ ಕಾವ್ಯದ ಉಷಃಕಾಲವನ್ನು ಗಮನಿಸಬಹುದೆಂದು ಕವಿ ಅಮ್ಮೆಂಬಳರು ಹೇಳುತ್ತಾರೆ. ಈ ಆಂಗ್ಲ ಕವಿತಾವಳಿ ಫುಲ್‌ಸ್ಕೇಪ್ ಶೋಡಶ ಪತ್ರದ 22 ಪುಟಗಳ ಪುಟ್ಟ ಪುಸ್ತಕವಂತೆ ! ಇದನ್ನು ಮಾರಾಟಕ್ಕಾಗಿ ಪ್ರಕಟಿಸಿದ್ದಲ್ಲ. ಇದರ ಒಂದು ಪ್ರತಿ ಗೋವಿಂದ ಪೈಗಳ ಬಳಿಯಲ್ಲಿತ್ತು ಎಂಬುದನ್ನು ಕವಿ ಅಮ್ಮೆಂಬಳರು ನೋಡಿದ್ದಾರೆ, ಓದಿದ್ದಾರೆ.

ಉದಾಹರಣೆಗಾಗಿ ಎರಡು ಕವನಗಳ ಅನುವಾದವನ್ನು ಅವರು ನೀಡುತ್ತಾರೆ.

ಆರಬ್ದಿಯಲಿ ಕೂಸು ತಾಯ ಕೈಯಲಿ ಮಲಗಿ

ಬೀರುತ್ತ ಕಾರುತ್ತ ಹೊರವಡುವದು
ತೋರುವನು ಹುಡುಗನಾ ಮೇಲೆ ನಡೆಮಠಕೆನಲು
ಮೋರೆ ತೊಳಕೊಂಡಳುತ ಚೀಲ ಹಿಡಿದು

ಇದು ಶೇಕ್ಸ್‌ಪಿಯರನ As you like it ಕವನದ ಭಾವಾನುವಾದ. ಗ್ರೇ ಕವಿಯ ಕವನದ ಅನುವಾದ ಖಂಡವು ಹೀಗಿದೆಯೆಂದಿದ್ದಾರೆ.

"ಮಾನವ ದೃಷ್ಟಿಗೆ ಕಾಣದೆ ಕುಸುಮಗಳೆಷ್ಟೋ ಬೆಳೆಯುವವು ಕಾನನದಲಿ ರಂಜಿಸಿ ಪರಿಮಳವನು ಬರಿದೇ ಬೀರುವವು" ಈ ಶತಮಾನದ ಮೊದಲೇ ಅವರು ತಮ್ಮ ಕವಿತಾ ಸಾಮರ್ಥ್ಯವನ್ನು ಪ್ರಕಟಿಸಿ ನವೋದಯದ ನಾಂದಿ ಹಾಡಿದವರಲ್ಲೊಬ್ಬರು ಎಂಬುದಾಗಿ ಈ ಮೇಲಿನ ವಿಚಾರಗಳಿಂದ ತಿಳಿದುಕೊಳ್ಳಬಹುದಾಗಿದೆ. ಶ್ರೀ ಪಂಜೆಯವರು ಇವರನ್ನು ಚೆನ್ನಾಗಿ ಬಲ್ಲವರಾಗಿದ್ದರು. ಆದರೆ ಆ ಕಾಲದಲ್ಲಿ ಸರಿಯಾದ ಪ್ರಚಾರ ಪ್ರಸಾರಗಳಿಲ್ಲದೆ, ಅವರ ಬಗೆಗೆ ನಾಡವರು ಸಮಗ್ರವಾಗಿ ತಿಳಿಯಲು ಸಾಧ್ಯವಾಗದೆ ಹೋಗಿರಬಹುದು. ಪ್ರಾಸ - ನಿಯಮಾದಿಗಳನ್ನು ಪಾಲಿಸಿಕೊಂಡೆ, ಹೊಸತನದ ದಾರಿಯನ್ನು ತುಳಿದ ಹಟ್ಟಿಯಂಗಡಿಯವರು ಈ ಜಿಲ್ಲೆಯ ಶ್ರೇಷ್ಠ ಕವಿಗಳಲ್ಲೊಬ್ಬರಾಗಿದ್ದರು ಎಂಬುದನ್ನು ನಿಸ್ಸಂದೇಹವಾಗಿ ಹೇಳಬಹುದು.

ನರಲೋಕವೆಲ್ಲ ನಾಟಕದ ಶಾಲೆಯಂತಿರುತ,
ಪುರುಷವನಿತೆಯರು ಬರಿಯಾಟದವರು
ಮೆರೆದರು ನಿಷ್ಕ್ರಮಿಸಿ, ಹೆರರು ಪ್ರವೇಶಿಸುತ,
ಪರಿಪರಿಯ ವೇಷಗಳ ನಟಿಸುತಿಹರು

ಶೇಕ್ಸ್‌ಪಿಯರ್

ನೆರೆಯ ಗುಡಿಲಿನ ಮೇಲೆ ಸುಳಿಯುತಿಹ ಬಿಳಿಯ ಹೊಗೆ
ಹೊರಗೆ ದೀಂಕಿಡುವ ಕಿರಿಯ ಹಸುಳೆಗಳಸವಿಯನಗೆ

1918-20ರಲ್ಲಿ ಕ. ಸಾ. ಪತ್ರಿಕೆಗಳಲ್ಲಿ ಕನ್ನಡ ಕವಿತೆಯ ಭವಿತವ್ಯ - ಕವಿತಾವರ್ಧನ ಎಂಬ ಲೇಖನಗಳಲ್ಲಿ ನವೋದಯ ಕನ್ನಡ ಕಾವ್ಯ ತುಳಿಯಬೇಕಾಗಿದ್ದ ದಾರಿಯನ್ನು ಯೋಚಿಸಿದ್ದಲ್ಲದೆ ಸಮಕಾಲೀನ ಕವಿತೆಗಳ ಛಂದಸ್ಸು ವಸ್ತುರೂಪ ಶೈಲಿಗಳಲ್ಲಿ ನವೀನತೆ ಕಂಡು ಬರುವುದನ್ನು ಪ್ರಪ್ರಾಪಿಸಿದ್ದಾರೆ. ಅವರು ತಮ್ಮ ಕವಿತೆಗಳಲ್ಲಿ ಆದಿಪ್ರಾಸವನ್ನು ಬಿಡದಿದ್ದರೂ ಹಿಂದಿನ ಕವಿಗಳ ಶೈಲಿಯನ್ನು ಅನುಸರಿಸಲಿಲ್ಲ.

ಅವರು ತಮ್ಮ ಲೇಖನದಲ್ಲಿ ಇಂಗ್ಲಿಷ್ ಮಾರ್ಗಗಳ ಅನುಸರಣದಿಂದ ಕವಿಗಳು ಪಾರಮಾರ್ಥಿಕ ವಿಷಯಗಳಿಂದ ರಾಷ್ಟ್ರೀಯ, ಸಾಮಾಜಿಕ, ಚಾರಿತ್ರಿಕ ಮುಂತಾದ ಲೌಕಿಕ ಪ್ರಮೇಯಗಳಿಗೆ ಹೆಚ್ಚಿನ ಗಮನ ಕೊಡುವರೆಂದು ದೀರ್ಘ ಪುರಾಣಗಳ ಬದಲಾಗಿ ಲಘು ಕ್ರಮಗಳನ್ನು ರಚಿಸುವರೆಂದು ಛಂದಸ್ಸಿನಲ್ಲಿ ಹೊಸ ಮಾದರಿಗಳನ್ನು ಕಲ್ಪಿಸಿರುವರೆಂದೂ ಹೇಳಿರುವರು.

ಸಾಹಿತ್ಯ ಕಾಮತರು

ಎಂ. ಎನ್. ಕಾಮತರು

ರಾಷ್ಟ್ರ ಕವಿ ಗೋವಿಂದ ಪೈಗಳ ಸಹಪಾಠಿಯಾಗಿದ್ದ ಎಂ. ಎನ್. ಕಾಮತರ ಹುಟ್ಟೂರು ಮುಂಡ್ಕೂರು. ನಾಟಕ ಕವನ ಕತೆ ಲೇಖನ ಹರಟೆ ಪ್ರತಿಯೊಂದು ವಿಭಾಗದಲ್ಲಿಯೂ ಕಾಮತರು ಸಿದ್ಧಹಸ್ತರಾಗಿ ಹೆಸರು ಪಡೆದಿದ್ದಾರೆ. ಆ ಕಾಲದ ಪತ್ರಿಕೆಗಳಿಗೆ ಅವರ ಬರಹವೇ ಮುಖ್ಯ ಆಕರ್ಷಣೆಯಾಗಿತ್ತು. ಗೋವಿಂದ ಪೈಗಳು, ಕಾಮತರು ಹೈಸ್ಕೂಲು ಓದುತ್ತಿದ್ದಾಗ ಏಂಜೆಲ್ ಎಂಬ ಹಸ್ತ ಪತ್ರಿಕೆ ರಚಿಸಿದ್ದರಂತೆ. ಆ ಪತ್ರಿಕೆಯಲ್ಲಿ ಕಾಮತರ ಇಂಗ್ಲೀಷ್ ಕವನಗಳು ಪ್ರಕಟ ವಾಗಿದ್ದವಂತೆ.

ಎಂ. ಎನ್. ಕಾಮತರು ಹೆಚ್ಚಿನ ನಾಟಕಗಳನ್ನು ಶಾಲಾ ವಾರ್ಷಿಕೋತ್ಸವಗಳಲ್ಲಿ ಪ್ರದರ್ಶಿಸಲೆಂದೇ ಬರೆದರು. ಅವುಗಳೆಲ್ಲ ಮಕ್ಕಳ ನಾಟಕಗಳಲ್ಲ. ಎಲ್ಲಾ ಬಗೆಯ ಪ್ರೇಕ್ಷಕರನ್ನು ಮನಸ್ಸಿನಲ್ಲಿರಿಸಿಕೊಂಡು ಬರೆದವುಗಳು. ಕನ್ನಡ ಸಂಗೀತ ಚಂದ್ರಹಾಸಾಭ್ಯುದಯ ನಾಟಕದಲ್ಲಿ ಅರುವತ್ತು ಹಾಡುಗಳಿವೆ. ಅರ್ಜುನನ ಚಾತುರ್ಮಾಸ, ಕಿರ್ಲೋಸ್ಕರ ಅವರ ಸಂಗೀತ ಸೌಭದ್ರ ನಾಟಕದ ರೂಪಾಂತರ, ಮೌರ್ಯ ಸಿಂಹಾಸನ, ಕ್ಷಾತ್ರತೇಜ (1919) ಚಂದ್ರರಾವ್ ಮೋರೆ, ಪ್ರತಾಪಸಿಂಹ ಮತ್ತಿತರ ಐತಿಹಾಸಿಕ ನಾಟಕಗಳನ್ನು ಕಾಮತರು ಬರೆದಿದ್ದಾರೆ. ಶಿಕ್ಷಣ ಪರೀಕ್ಷೆ ನಮ್ಮ ನಾಟ್ಯಾಭಿನಯ, ಪಂಚಕನ್ಯೆಯರು, ಉದ್ಧಾರಾನಂದ ಇಂಗ್ಲೀಷ್ ಕವನಗಳ ರೂಪಾಂತರಗಳು. ಅಂಚೆ ಮನೆ ರವೀಂದ್ರನಾಥ ಠಾಗೋರರ ನಾಟಕದ ಭಾಷಾಂತರ. ಉದ್ಧಾರಾನಂದದಲ್ಲಿ ಕಾಮತರು ಜಾತಿ ವ್ಯವಸ್ಥೆಯ ಕ್ರೌರ್ಯದ ಪರಿಣಾಮಗಳತ್ತ ಗಮನಸೆಳೆಯುತ್ತಾರೆ. ಗಾಂಧೀ ಯುಗದ ಸುಧಾರಣಪರವಾದ ಹೊಸ ಮೌಲ್ಯಗಳನ್ನು ಅವರು ಹೃತ್ಪೂರ್ವಕವಾಗಿ ಸ್ವಾಗತಿಸಿದರು. ಮರ್ಜಿ (1936) ಮೆಂಬರು ಮತ್ತು ಇತರ ಕೆಲವು ನಾಟಕಗಳಲ್ಲಿ ಖಾರವಾದ ರಾಜಕೀಯ ಸಾಮಾಜಿಕ ವಿಡಂಬನೆಯಿದೆ. ಕಂಪೆನಿ ನಾಟಕಗಳ ವಾಗಾಡಂಬರದ ಸಂಭಾಷಣೆಯನ್ನು ಕಾಮತರು ಅನುಕರಿಸಲಿಲ್ಲ. ಐತಿಹಾಸಿಕ ನಾಟಕಗಳ ಹಾಡುಗಳಲ್ಲಿ ಶ್ಲೇಷೆಯ ಮೂಲಕ ಮಹಾತ್ಮಾ ಗಾಂಧಿಯಂಥ ಸಮಕಾಲೀನ ನಾಯಕರನ್ನು ಸ್ತುತಿಸಿದ್ದಾರೆ. ಹಾರೆ ದೊರೆ, ಮರಗಳ ಕೂಗು, ಸೊಕ್ಕಿನ ಬೆಕ್ಕು, ಯುದ್ಧಾಂತ್ಯ ಕಾಮತರ ಈ ಮಕ್ಕಳ ನಾಟಕಗಳಲ್ಲಿ ಮರಗಿಡಗಳು, ಪ್ರಾಣಿಪಕ್ಷಿಗಳು ಪಾತ್ರಗಳಾಗಿ ಬರುತ್ತವೆ. ಯುದ್ಧಾಂತ್ಯದಲ್ಲಿ ಮನುಷ್ಯಕುಲದ ನಾಶವನ್ನು ಕಂಡು ಹುಲಿ, ಎತ್ತು, ಕುದುರೆಗಳು, ಮಂಗಗಳು ಆನಂದಿಸುತ್ತವೆ. ಕಾಮತರು ಕನ್ನಡದಲ್ಲಿ ಮಕ್ಕಳಿಗಾಗಿ ನಾಟಕಗಳನ್ನು ಬರೆದ ಮೊದಲಿಗರಲ್ಲಿ ಒಬ್ಬರು.

ಶ್ರೀ ಮುರಳೀಧರ ಉಪಾಧ್ಯ ಹಿರಿಯಡ್ಕ ಇವರು ಕಾಮತರ ಬಗ್ಗೆ ಮೇಲಿನಂತೆ ಬರೆದಿದ್ದಾರೆ. ಶ್ರೀ ಗೋವಿಂದ ಪೈಗಳು ಕಾಮತರ ಬಗ್ಗೆ ಹೇಳಿದ ಮಾತು ಅರ್ಥವತ್ತಾದುದು.

"ಬಿಸಿಲಿನ ಕಾವನ್ನು ನೀರಿನ ಅಭಾವವನ್ನು ತನಗಲ್ಲವೆಂದು ಈಡಾಡಿ ಈ ಬಟ್ಟ ಬೇಸಗೆಯ ಹೂವು ತೋರಿದ ಸೊಂಪು ಬೀರಿದ ತಂಪು ವಿಸ್ಮಯನೀಯವೇ ಸೈ."

ಶ್ರೀ ಕಾಮತರು ಆನಂದ ಎಂಬ ಸ್ವಂತ ಪತ್ರಿಕೆಯನ್ನು ನಡೆಸಿದ್ದರಂತೆ. ಸ್ವದೇಶಾಭಿಮಾನಿ ಪ್ರಭಾತ, ಉದಯಭಾರತ, ಕಂಠೀರವ, ಬೋಧಿನಿ, ಮಧುರವಾಣಿ, ಶ್ರೀ ಕೃಷ್ಣ ಸೂಕ್ತಿ, ಭಾರತಿ, ಕನ್ನಡ ಸಹಕಾರಿ ಮೊದಲಾದ ಪತ್ರಿಕೆಗಳಿಗೆ ಲೇಖನಗಳನ್ನೀಯುತ್ತಿದ್ದರು. ಇವರ ಲೇಖನಗಳೇ ಪತ್ರಿಕೆಗಳ ಜೀವಾಳವೆನ್ನುವಂತಿತ್ತು.

ಗದಾಯುದ್ಧದ ಕತೆ ಕಾಮತರು ರನ್ನನ ಭಂಡಾರದ ಮುದ್ರೆಯನ್ನು ಒಡೆದು ರತ್ನಗಳನ್ನು ಹೊರತೆಗೆದು ದಾನವೀಯುವ ಸುಂದರ ನಲ್ಗತೆ. ಬಾಲಕರ ಮಹಾಭಾರತ, ಕರ್ಣನ ಕತೆ, ಯಾದವಕೃಷ್ಣ ಮೊದಲಾದುವು ಉತ್ತಮ ಕತೆಗಳು.

ರಾಷ್ಟ್ರಕವಿ ಮಂಜೇಶ್ವರ ಗೋವಿಂದ ಪೈ

ಗಂಭೀರವಾದ ಪಡುವಣ ಕಡಲಿನ ತಡಿಯಾದ ಮಂಜೇಶ್ವರದಲ್ಲಿ ಕಡಲಿನ ಅಬ್ಬರ - ಉಬ್ಬರಗಳು ಈ ಶತಮಾನದ ಆರನೆ ದಶಕದ ತನಕ ಇದ್ದ ಬಗೆಯೇ ಬೇರೆ. ಯಾಕೆಂದರೆ ಕಡಲಿಗೆ ಇದಿರಾಗಿ ತಮ್ಮ ಮನೆಯ ಪೋರ್ಟಿಕೋದಲ್ಲಾಗಲಿ, ಮಹಡಿಯ ಮೇಲಾಗಲಿ ಶ್ರೀ ಗೋವಿಂದ ಪೈಗಳು ಕಾವ್ಯ, - ಸಂಶೋಧನೆ, ಕಾವ್ಯ ಚರ್ಚೆ ನಡೆಸುತ್ತಿದ್ದಾರೆ ಎಂಬುದನ್ನರಿತ ಅರಬ್ಬೀ ಸಾಗರವು ತನ್ನ ನಿರ್ಘೋಷವನ್ನು ಬಿಟ್ಟು ಶಾಂತವಾಗಿ ಅದನ್ನು ಆಲಿಸುವಂತಿರುತ್ತದೆ. ತನಗೆ ಇದಿರಾಗಿರುವ ಪಾಂಡಿತ್ಯದ ಕಡಲನ್ನು ಕಂಡೇ ಅದು ವಿನಯದಿಂದ ತಲೆಬಾಗುವಂತೆ ನಡೆದುಕೊಂಡಿದೆ.

ಗೋವಿಂದ ಪೈಗಳನ್ನು ಕಾಣಲೆಂದು ಅಲ್ಲಿಗೆ ಬರುತ್ತಿದ್ದ ಜನಸಾಗರವೂ ಹಾಗೆಯೇ ಅವರೊಡನೆ ಪೈಗಳು ಚರ್ಚಿಸಿ ತಮಗೆ ಕಂಡುದನ್ನು ಇದ್ದಕ್ಕಿದ್ದಂತೆ, ತಿಳಿಸಿ ಬಿಡುತ್ತಿದ್ದರು. ಸಂಶೋಧನೆಯ ಬಗೆಗಂತೂ ತಿಥಿ ವಾರ ನಕ್ಷತ್ರ ಸಂವತ್ಸರಗಳನ್ನು ಲೆಕ್ಕ ಹಾಕಿ ಸಾಧಾರವಾಗಿ ನಿರೂಪಿಸಿ, ಸತ್ಯವನ್ನು ಖಂಡ ತುಂಡವಾಗಿ ಹೇಳುತ್ತಿದ್ದರು. ಅವರಿಗೆ ದೊಡ್ಡವನು - ಬಡವರು ಎಂಬ ಭೇದವಿರಲಿಲ್ಲ. ಎಲ್ಲರನ್ನೂ ಆದರದಿಂದ ಸ್ವಾಗತಿಸಿ, ಸತ್ಕರಿಸಿ ಕಳಿಸುವ ಪರಿಪಾಠ ಅವರದು. ಮಾತನಾಡುತ್ತಿದ್ದಂತೆಯೇ ಪಾನೀಯ ತಿಂಡಿ ಕೂಡ ಅತಿಥಿಗಳಿಗೆ ಒದಗಿಸುವುದು ಅವರ ಮನೆಯ ಸಂಪ್ರದಾಯವಾಗಿತ್ತು. ಕೆಲವೊಮ್ಮೆ ಶ್ರೀ ಪೈಗಳೇ ಎದ್ದು ಹೋಗಿ ತಾವೇ ತಂದುಕೊಡುತ್ತಿದ್ದುದೂ ಉಂಟು. ಆರಾಮವಾಗಿದ್ದಲ್ಲಿ ಕಡಲತಡಿಗೆ ಅತಿಥಿಗಳನ್ನು ಕರೆದೊಯ್ಯುವುದು ಅವರ ಕ್ರಮವಾಗಿತ್ತು.

ಶ್ರೀ ಪೈಗಳನ್ನು ನೋಡಲೆಂದು ಬರುವ ಹಿರಿಯ ಸಾಹಿತಿಗಳಿಂದ ತೊಡಗಿ - ಕಿರಿಯರ ತನಕ ಪ್ರತಿಯೊಬ್ಬರಿಗೂ ಅಲ್ಲಿ ಉಚಿತವಾದ ಸ್ವಾಗತ ಕಾದಿದೆ. ಕೆಲವರು ಪೈಗಳ ಕಾಲವನ್ನು ದುರುಪಯೋಗಪಡಿಸಿದವರು ಉಂಟು. ಮುನ್ನುಡಿಗಾಗಿ ಬಂದವರಿಗೆ ಅವರೆಂದೂ ನಿರಾಶೆ ಹುಟ್ಟಿಸಿದವರೂ ಅಲ್ಲ. ಏನಿಲ್ಲದಿದ್ದರೂ 'ದೇವರು ಹರಸಲಿ ಇತಿಶಮ್' ಎಂಬ ಆಶೀರ್ವಾದದೊಂದಿಗೆ ಪುಸ್ತಕದ ಅಂದಚೆಂದವನ್ನಾದರೂ ಅವರು ಪ್ರಶಂಸಿಸದೆ ಕಳಿಸಿದ್ದಿಲ್ಲ.

ಶ್ರೀ ಪೈಗಳು ಸ್ವಭಾವತಃ ಕವಿಗಳು. ಒಂದೊಂದು ಘಟನೆಯೂ ಅವರ ಕಾವ್ಯ ರಚನೆಗೆ ಪ್ರೇರಕವಾಗಿ ಅವರು ಕಾವ್ಯ ರಚಿಸಿದರೆಂದು ತಿಳಿದು ಬರುತ್ತದೆ. 1895ನೇ ಇಸವಿಯಲ್ಲಿ ಅವರ ಮನೆಯಲ್ಲಿ ಕೇಳಿ ಬಂದ 'ಅಡವಿಗೆ ಪೋಪರೇನೆ ಕಂದಯ್ಯ' ಎಂಬ ಹಾಡನ್ನು ಕೇಳಿ ಇಳಿ ಹೊತ್ತಿನಲ್ಲಿ ಇವರೊಂದು ನಾಟಕವನ್ನು ಬರೆದು ಮುಗಿಸಿದರಂತೆ. ಹೀಗೆ ಪ್ರತಿಯೊಂದು ರಚನೆಗೂ ಒಂದೊಂದು ಘಟನೆ ಕಾರಣವಾಯಿತಂತೆ. 'ಕವಿತೆ ಬರೆದರೆ ಹುಚ್ಚು ಹಿಡಿಯುವುದು' ಎಂಬ ಕಲ್ಪನೆಯಿಂದ ಇವರ ತಾಯಿ ತಡೆಯುತ್ತಿದ್ದುದರಿಂದ, ನಡೆದಾಡುವಾಗ ಬೀದಿಯಲ್ಲೂ, ಬಿಡುವಾದಾಗ ಸಾಲೆಯಲ್ಲೂ ಕವನಿಸುತ್ತಿದ್ದೆ ಎಂದಿದ್ದಾರೆ. 1903ರಿಂದ 1910ರವರೆಗೆ ಪ್ರಾಸವನ್ನು ಇಟ್ಟೋ ಬಿಟ್ಟೋ ಕವನಿಸುತ್ತಿದ್ದು ಪ್ರಾಸವಿರುವ ಕವನಗಳನ್ನು ಪ್ರಕಟಿಸುತ್ತಿದ್ದರಂತೆ. ಅವರು ಪ್ರಾಸ ಬಿಟ್ಟು ಬರೆಯಲು ತೊಡಗಿದ ಪೂರ್ವನಿರ್ಧಾರ ಬಹಳ ಮಹತ್ವದ್ದು.

ಛಂದಸ್ಸನ್ನು ವ್ಯಾಕರಣವನ್ನೂ ಕೂಡ ತಮಗೆ ಬೇಕಾದಂತೆ ಮಾರ್ಪಡಿಸಿಯೂ ನೇರ್ಪಡಿಸಿಯೂ ಸರಿಪಡಿಸಲು ಕವಿಗೆ ಅಧಿಕಾರವಿದೆ. ಬೇಕಾದವರು ಈ ಹೊಸ ಹಾದಿಯನ್ನು ಹಿಡಿಯಲಿ. ಬೇಡದವರು ಹಳೆಯ ಹಾದಿಯಲ್ಲೇ ನಡೆಯಲಿ. "ಇಂದು ಒಬ್ಬನೇ ನಡೆದ ಮೇಕೆ ದಾರಿಯೇ ಮುಂದೆ ತೇರು ಎಳೆವ ಹೆದ್ದಾರಿ" ಎಂದು ಸಾರಿ ಪ್ರಾಸ ರಾಹಿತ್ಯವನ್ನು ಘೋಷಿಸಿ ಮುಂದೆ ಸಾಗಿದರು.

'ಚತುರ್ದಶಪದಿ'ಯೆಂದು ಹೆಸರಿಸಲಾದ ಸಾನೆಟ್ ಅವರದ್ದೇ ಆದ ನೂತನ ಪ್ರಯೋಗವಾಗಿ ಕಾವ್ಯ ಲೋಕದಲ್ಲಿ ಕ್ರಾಂತಿ ಮಾಡಿತು. ಗೊಲ್ಗೊಥಾ, ವೈಶಾಖಿ ಎಂಬ ಖಂಡ ಕಾವ್ಯಗಳು ಮತ್ತು 'ಹೆಬ್ಬೆರಳು' ಎಂಬ ಕಾವ್ಯ ನಾಟಕ ಸರಳ ರಗಳೆಯಲ್ಲಿ ಅವರು ರಚಿಸಿದ ಕಾವ್ಯಗಳು. ಹೊಸ ಬಗೆಯ ಕವನಗಳನ್ನು ಬರೆದು ಸಾಗಿದರು. ರವೀಂದ್ರರ ಗೀತಾಂಜಲಿಯಂತೆ 'ನಂದಾದೀಪ' ಎಂಬ ಕಾವ್ಯಾಂಜಲಿ ರಚಿಸಿದರು. 'ಗಿಳಿವಿಂಡು' ಅವರ ಆಳವಾದ ಅಧ್ಯಯನ - ಅಭಿರುಚಿ - ಭಾವವಿಲಾಸದ ವೈಖರಿ, ಹಳತು - ಹೊಸತುಗಳ ಸಮ್ಮಿಶ್ರಣದ ಹೆಗ್ಗುರುತು. ಪ್ರಾಸರಹಿತವಾದರೂ ಅವರ ಕವನಗಳು ಗೇಯ ಮಾಧುರ್ಯದಿಂದ ರಂಜಕವಾಗಿದೆ.

'ಹೊಲೆಯನಾರು' ಎಂಬ ಪ್ರಾಸರಹಿತ ಕವಿತೆ' ಕನ್ನಡ ಕಾವ್ಯ - ಮಾರ್ಗದಲ್ಲಿ ಹುಲಿಹುಲಿ' ಎಂಬ ಆಕ್ರೋಶಕ್ಕೆ ಕಾರಣವಾಯಿತಂತೆ. ಒಂದೆಡೆಯಿಂದ ಸಂಪ್ರದಾಯಸ್ಥರ ಹುಯಿಲು, ಮತ್ತೊಂದೆಡೆ ಪ್ರಾಸರಾಹಿತ್ಯದ ಗುಲ್ಲು. ಹೀಗೆ ಪೈಗಳು ಎಲ್ಲವನ್ನೂ ನಿರ್ಭೀತಿಯಿಂದ ಎದುರಿಸಿದರು. ಪಂಜೆಯವರಲ್ಲೂ ಪೈಗಳಿಗೆ ಅಪಾರ ಅಭಿಮಾನವಿದ್ದುದರಿಂದ ಅವರ ಆಶಯವನ್ನು ಕೇಳಿದ್ದರಂತೆ. ಪಂಜೆಯವರು ಪ್ರಾರಂಭದಲ್ಲಿ ಆಕ್ಷೇಪಿಸಿದರೂ ಮತ್ತೆ ಆ ಕವನಗಳಲ್ಲಿರುವ ಪಾಂಡಿತ್ಯ, ಪ್ರತಿಭೆ, ನೂತನ ಚಾತುರ್ಯವನ್ನು ಕಂಡು ಮೆಚ್ಚಿದರೆಂದು ಹೇಳುತ್ತಾರೆ.

ಹಕ್ಕಿ, ಆನಂದವಾದಾಗ ಹಾಡಿದರೆ, ತಾವೂ ನೊಂದಾಗ ಹಾಡುವುದಾಗಿ ಪೈಗಳು ಹೇಳಿದ್ದಾರೆ. ಅವರ ಧರ್ಮಪತ್ನಿ ತೀರಿಕೊಂಡಾಗ ಅಗಲಿಕೆಯ ಬೇನೆಯಿಂದ ರಚಿಸಿದ ಕೃತಿಯೇ 'ನಂದಾದೀಪ' ವೇದನೆಯಾದಾಗ ಕವನ ರಚಿಸಿ ಆತ್ಮಾನಂದ ಹೊಂದುವುದು ಅವರ ಅಭ್ಯಾಸ. ತುಳಸೀದಾಸರು ಹೇಳುವಂತೆ ತಮ್ಮ ರಚನೆ ಸ್ವಾಂತಸ್ಸು ಖಾಯ ಎಂದು ಅವರು ಹೇಳಿದ್ದಾರೆ. ತಾವು ಕೆಲವು ವರ್ಷ ಕಾವ್ಯ ರಚನೆಯನ್ನು ದೂರ ಮಾಡಿದ್ದುಂಟು ಎಂದಿದ್ದಾರೆ "ನಡುವಯಸ್ಸಿನಲ್ಲಿ ಅವೆಷ್ಟೊ ವರ್ಷ ಶಾರದೆಯನ್ನು ವನವಾಸಕ್ಕೆ ಅಟ್ಟಿಬಿಟ್ಟೆ...... ಕವಿಧರ್ಮದಿಂದ ಆಕೆಯನ್ನೋಲೈಸುವಲ್ಲಿ ಆಕೆಯ ಸಂದೇಶಗಳನ್ನು ನಂಬುಗೆಯಿಂದ ನೆರವೇರಿಸುವಲ್ಲಿ ನಾನು ಅಸಡ್ಡೆ ಮಾಡಿರುತ್ತೇನೆಂಬುದನ್ನು ಪಶ್ಚಾತ್ತಾಪದಿಂದ ಒಪ್ಪಿಕೊಳ್ಳುತ್ತೇನೆ" ಎಂದಿದ್ದಾರೆ. ಇದೇ ವೇಳೆಯಲ್ಲಿ ಅವರು ಸಂಶೋಧನೆಯಲ್ಲಿ ತಲ್ಲೀನರಾಗಿದ್ದರಂತೆ. ಆಗ ಕವಿ ಪಾಂಡೇಶ್ವರ ಗಣಪತಿರಾಯರು ಪೈಗಳ ಬಗ್ಗೆ ಹೀಗೆ ಹಾಡಿದ್ದರು.

"ರನ್ನ ಪಂಪಾದಿಗಳ ಕಾವ್ಯ ಕಾನನದ ಉನ್ನತೋನ್ನತ ವೃಕ್ಷರಾಜ ಸಂಪದದ, ನಿನ್ನೆಗಳ ನೆನೆ ನೆನೆದು ಮರುಳ ಮೌನದಲಿ...... ಹಾಡುವುದ ಮರೆತಿಂತು ಕುಳಿತೆಯೋ ಹಕ್ಕಿ, ಹಾಡಲರಿಯದೆ ನಾವು ಕುಳಿತಿಹೆವು ಬಿಕ್ಕಿ" "ಇತಿಹಾಸ ಸೂತ್ರದಲಿ ಕೋದ ಮುತ್ತುಗಳ

ಸತ್ಯ ಮಿಥ್ಯೆಗಳ ಸಂವಾದ ಬಿತ್ತುಗಳ

ತಿಂದಿನಿಸು ತೃಪ್ತಿಯನು ತೋರದಿದೆ ಹಕ್ಕಿ"

ಪೈಗಳ ಕಾವ್ಯ - ಸಂಶೋಧನೆಗಳ ಬಗೆಗೆ ಕವಿಯೊಬ್ಬರು ಕಂಡು ಸತ್ಯ ಚಿತ್ರವನ್ನು ನಾವಿಲ್ಲಿ ಕಾಣಬಹುದು.

ಶ್ರೀಯುತರು ಸಂಶೋಧನ ಕಾರ್ಯಕ್ಕೆಳಸಿದುದು ಒಂದು ಕಥೆಯೇ ಆಗಿದೆ. ಇವರು ಸಾರಸ್ವತ ಬ್ರಾಹ್ಮಣರು. ಇವರ ಪೂರ್ವಜರು ಗೋವೆಯಿಂದ ಬಂದವರಾದುದರಿಂದ ಆ ಕುರಿತು ಸಂಶೋಧಿಸಲು ಇವರು ತೊಡಗಿದರಂತೆ. ಅವರ ವಿಶಾಲ ಹೃದಯಕ್ಕೆ ಈ ಸಣ್ಣ ಕ್ಷೇತ್ರ ಪರಿಮಿತವೆನಿಸಲಿಲ್ಲ. ಇಡಿಯ ಭಾರತದ ಇತಿಹಾಸ, ಕನ್ನಡ ನಾಡು ನುಡಿಗಳ ಕುರಿತು ಇವರು ಸಂಶೋಧನೆಗೆ ತೊಡಗಿ ಯಶಸ್ವಿಯಾದರು. ಗ್ರಂಥಗಳ ರಾಶಿ ಒಟ್ಟೈಸಿದರು. ಓಲೆ ಗರಿ, ಶಾಸನ ಸಂಗ್ರಹಿಸಿದರು. ಅಪಾರ ಹಣ ವ್ಯಯಿಸಿದರು. ನಿರಂತರ ಶ್ರಮದಿಂದ ಅಗ್ರಮಾನ್ಯ ಸಂಶೋಧಕರಾದರು. ಇಂಗ್ಲೀಷಿನಲ್ಲಿಯೂ ಇವರ ಬರಹಗಳು ಪ್ರಕಟವಾಗಿದೆ. ಇತ್ತೀಚೆಗೆ ಉಡುಪಿಯಲ್ಲಿ ಮಂಜೇಶ್ವರ ಗೋವಿಂದ ಪೈ ಪ್ರತಿಷ್ಠಾನದಿಂದ ಅವರ ಇಂಗ್ಲಿಷ್ ಕೃತಿಗಳು ಪ್ರಕಟವಾಗಿವೆ. ನಾಡಿಗೆ ನಾಡೇ ಇವರ ಸಂಶೋಧನೆಯನ್ನು ಪ್ರಾಮಾಣಿಕ ಹಾಗೂ ಸತ್ಯವೆಂದು ಗೌರವಿಸಿದೆ.

ಕವಿತಾಮಾರ್ಗ ಬೇರೆ, ಸಂಶೋಧನ ಮಾರ್ಗ ಬೇರೆ. ವಿಶಿಷ್ಟ ದೈವ ಕೃಪೆಯಿಂದ ಅವೆರಡನ್ನೂ ಸಾಧಿಸಬಹುದು ಎಂಬುದು ಪೈಗಳ ನಂಬಿಕೆ. ಹಾಲು ಕಾಸಲಿಕ್ಕೂ ಹುರುಳಿ ಉರಿಯಲಿಕ್ಕೂ ಸರಿಯಾಗಿದೆ. ಅವನ್ನು ಸರಿಪಡಿಸಲಿಕ್ಕೆ ಯತ್ನಿಸುವಲ್ಲಿ ಒಂದು ಒರೆಯಲ್ಲಿ ಎರಡು ಕತ್ತಿಗಳನ್ನು ಸಿಲುಕಿಸಲಿಕ್ಕೆ ಪೇಚಾಡುತ್ತೇನೆ ಎಂದಿದ್ದಾರೆ ಶ್ರೀಯುತರು.

ಕವಿತೆ ಸಹೃದಯ ಮೃದು - ಮಧುರ ಬಂಧುರವಾದರೆ, ಸಂಶೋಧನೆ ವಿದ್ವತ್ತಾಪೂರ್ಣ ಗಹನ ಜಟಿಲ ಕಾರ್ಯ. ಇವೆರಡನ್ನೂ ಶ್ರೀ ಪೈಗಳು ಸಾಧಿಸಿದ ಧೀರರಾಗಿದ್ದಾರೆ. 'ಸಂಶೋಧನೆಯ ಶಿಲಾತಲದಲ್ಲಿ ನಿಂತಿದ್ದರೂ ಕಾವ್ಯ ಭಾಗೀರಥಿಗೆ ಕಾಣಿಕೆ ಸಲ್ಲಿಸುವವರೆಂದು ಕುವೆಂಪುರವರು ಪೈಗಳನ್ನು ಕೊಂಡಾಡಿದ್ದಾರೆ.

ಶ್ರೀ ಪೈಗಳ ಕವನಗಳ ಕೆಳಗೊಂದು ಟಿಪ್ಪಣಿಯಿರುವ ಬಗ್ಗೆ ಕ್ಲಿಷ್ಟತೆಯ ಆರೋಪ ಹೊರಿಸಿದವರುಂಟು. ಆದರೆ ಅದರೊಳಗಿನ ಭಾವನೆಯನ್ನು ಕಂಡಾಗ ತಲೆಬಾಗದವರಿಲ್ಲ. ಉತ್ತಮ ತತ್ವ, ಪ್ರೇರಣೆ ಇಲ್ಲದೆ ತಾವು ಕವಿತೆ ರಚಿಸುವುದಿಲ್ಲವೆಂದು ಅವರೆನ್ನುತ್ತಾರೆ. ಹೊಸ ವಿಷಯ ಭಾವನಾ ವಿಶೇಷತೆಯಿರಬೇಕೆಂದು ಹೊಸ ಕವಿಗಳಿಗೆ ಅವರು ಸಂದೇಶ ನೀಡಿದ್ದಾರೆ. ಪೈಗಳು ಉತ್ತಮಾಂಶವನ್ನು ಸ್ವೀಕರಿಸುವ ಗುಣಗ್ರಾಹಿಗಳು. ಹೂವಿನಂತೆ ಮೃದುವಾದ ಹೃದಯ. ಕೋಮಲವಾದ ಮನಸ್ಸು ಅವರದು. ಅವರನ್ನು ಸಮೀಪದಿಂದ ಎಷ್ಟೋ ಬಾರಿ ಕಂಡು ಅನುಭವದಿಂದ ಈ ಮಾತನ್ನು ಹೇಳಲೇಬೇಕಾಗಿದೆ.

ಶ್ರೀ ಪೈಗಳ ಭಾಷೆ ಪ್ರಯೋಗಗಳ ವೈಶಿಷ್ಟ್ಯ ಅಸಾಧಾರಣ. ಪೈಗಳ ಶಬ್ದದಲ್ಲೇ ಹೇಳುವುದಾದರೆ ಅದೊಂದು 'ಅಮಗ'. ಖಂಡಿತ ಅವರಲ್ಲಿ 'ಕಂಡಿತ'. ಅಚ್ಚಕನ್ನಡದ ಹಳೆಗನ್ನಡದ ಪ್ರಭಾವದ ಪ್ರಯೋಗಗಳು ಅವರ ವಿಶೇಷತೆ. ಇಸು ಪ್ರತ್ಯಯವನ್ನು ಹಚ್ಚುವಲ್ಲಿ ಸ್ವಾತಂತ್ರ್ಯವನ್ನು ಚೆನ್ನಾಗಿ ಬಳಸಿಕೊಂಡಿದ್ದಾರೆ. ಸವ್ಯಸಾಚಿಸು, ಕವನಿಸು ಮುಂತಾದ ಪದ ಪ್ರಯೋಗಗಳ ಧಾರಾಳತನ ಅವರ ಗುಣಗಳಷ್ಟೇ ಇವೆ. ದೇಸಿ ಪದಗಳಲ್ಲಿ ಅವರಿಗೆ ಬಹಳ ಆಸಕ್ತಿ. ನಾಣ್ನುಡಿಗಳು ಅವರಿಗೆ ಪ್ರಿಯವಾಗಿವೆ.

ಇವರ ಸೇವೆ - ಪ್ರತಿಭೆ - ಪಾಂಡಿತ್ಯ ಅಪಾರವಾದುದು. ಕಾಂಗ್ರೆಸಿನ ರಾಷ್ಟ್ರೀಯ ಹೋರಾಟ ದಲ್ಲಿ ಇವರು ಸಕ್ರಿಯವಾಗಿಯೂ ದುಡಿಯಲು ಮುಂದಾಗಿದ್ದರು. ಗಾಂಧೀಜಿಯನ್ನು ಕೊಂದಾಗ ಇವರು ನೊಂದು ನುಡಿದ ಮಾತು "ಇನ್ನಿನಿಸು ನೀ ಮಹಾತ್ಮಾ ಬದುಕಬೇಕಿತ್ತು". "ತಾಯೆ ಬಾರ ಮೊಗವ ತೋರ ಕನ್ನಡಿಗರ ಮಾತೆಯೇ" ಇವರು ಕನ್ನಡಮ್ಮನ ಬಗ್ಗೆ ಬರೆದ ಸುಂದರ ಕವನ.

"ಈ ಸಂಸಾರದಲ್ಲಿ ಸಾಹಿತ್ಯವು ಕಪ್ಪಾನೆ ನಿಕಷದಲ್ಲಿ ಬೆಳಗುತ್ತಿರುವ ಚಿನ್ನದ ಬರೆಯಂತಿರ ಬೇಕು. ದಪ್ಪಾನೆ ಮುಗಿಲಲ್ಲಿ ಬೆಳಗುತ್ತಿರುವ ಮಿಂಚಿನ ಗೆರೆಯಂತಿರಬೇಕು. ಈ ಸಾಹಿತ್ಯವು "ಸತ್ಯಂ ಶಿವಂ ಸುಂದರಂ" ಆಗಿರಬೇಕು. ಇದರಲ್ಲಿ ಮಧುರವೂ, ಲಲಿತವೂ, ಶಾಂತವೂ, ಶೃಂಗಾರವೂ, ಹಾಸ್ಯವೂ, ವೀರವೂ, ರುದ್ರವೂ ಮೊದಲಾದ ಗುಣಗಳೆಲ್ಲವೂ ಅಡಕವಾಗಿವೆ. ಮಳೆ ಬಿಲ್ಲಿನ ಏಳು ಬಣ್ಣಗಳ ಬೆರಕೆಯಿಂದ ನೇಸರಿನ ಬೆಳಗಾಗುವಂತೆ, ಇದೆಲ್ಲವೂ ಕೂಡಿದಲ್ಲೇ ಸಾಹಿತ್ಯ.

ಇದು ಸಾಹಿತ್ಯದ ಬಗೆಗೆ ಶ್ರೀ ಪೈಗಳ ನಿಲುವು.

ನಲ್ಮೆಯ ಕವಿ ಕಡೆಂಗೋಡ್ಲು

ಸನ್ಮಾನ್ಯ ಕಡೆಂಗೋಡ್ಲು ಶಂಕರಭಟ್ಟರು ದಿ! ಮುಳಿಯ ತಿಮ್ಮಪ್ಪಯ್ಯನವರ ಬಾರಿಯಲ್ಲಿ ಸಾಗಿದ ಧೀಮಂತ ಸಾಹಿತಿ ! ಉತ್ತಮ ಕವಿ ! ಆದರ್ಶ ಪತ್ರಕರ್ತ ! ಕನ್ನಡ ನವೋದಯದ ಹರಿಕಾರರಲ್ಲೊಬ್ಬರಾಗಿ ಅಗ್ರಸ್ಥಾನವನ್ನಲಂಕರಿಸಿ, ತನ್ನ ಧೀರೋದಾತ್ತ ನಿಲುವು, ಖಚಿತವಾಣಿ, ನಿಶ್ಚಿತ ಧೋರಣೆ, ರಾಷ್ಟ್ರೀಯ ವಿಚಾರಧಾರೆ, ಪ್ರಾಚೀನ - ಅರ್ವಾಚೀನ ಸಾಹಿತ್ಯ ಧಾರೆಯ ಸುಂದರ ಸಮನ್ವಯಗಳಿಂದ ಬೆಳಗಿದ ಮಹನೀಯರು. 1965ರಲ್ಲಿ ಕಾರವಾರದಲ್ಲಿ ಜರಗಿದ ಅ.ಭಾ. ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಕನ್ನಡಿಗರ ಪ್ರೇಮಾದರಗಳಿಗೆ ಪಾತ್ರರಾಗಿದ್ದಾರೆ. ಕಡೆಂಗೋಡ್ಲು ಅವರ ನಿಕಟ ಬಂಧು - ಸಾಹಿತ್ಯದ ಮಾರ್ಗದರ್ಶಿ ತಿಮ್ಮಪ್ಪಯ್ಯನವರನ್ನು ಸಮ್ಮೇಳನಾಧ್ಯಕ್ಷರನ್ನಾಗಿ ಗೌರವಿಸಿದ ಕಾರವಾರವೇ ಕಡೆಂಗೋಡ್ಲು ಅವರನ್ನು ಗೌರವಿಸಿ ಕೃತಾರ್ಥವಾಗಿದೆ.

ಕಡೆಂಗೋಡ್ಲು ಕನ್ನಡದ ಹೆಸರಾಂತ ಕವಿ. "ಅನುಭವವು ಸವಿಯಲ್ಲ, ಅದರ ನೆನಪೇ ಸವಿಯು" ಎಂದು ಸಾರಿದ ಈ ಕವಿ 'ಅತ್ತವರ ಸತ್ತವರ ಸಾಯದಿಹ ನೆನಹುಗಳು ಸುತ್ತುವವು ಬಳ್ಳಿ ಜೊಂಪದಲಿ, ಅಳಲಾಗಿ ನೆಳಲಾಗಿ ಗುಹೆಯ ಪಡಿನುಡಿಯಾಗಿ, ಕಾಣುತಿವೆ ಪ್ರಕೃತಿರೂಪದಲಿ' ಎಂದುಸುರಿ ಅನುಭವಾಮೃತಾಸ್ವಾದನೆಯ ಸೊಗಸು ಅರಳಿ ಬಂದ ಬಗೆಯನ್ನು ಕಂಡಿದ್ದಾರೆ. "ಕಾಲದಡವಿಯ ಮಡಿದವರ ಕತೆಗೊರಡಿನಲಿ ಕಾಂಬುದದೊ ಕೊನರಿಡುವ ಕುಡಿಯು" ಅನುಭವಕ್ಕೆ ಒತ್ತು ಕೊಡುವ ಗತಕಾಲದ ಸ್ಮೃತಿಯನ್ನು ಪ್ರತ್ಯಕ್ಷೀಕರಿಸುವ ಕವಿಯ ಅಂತರಂಗ ಕೊನರಿ ಕುಡಿಯಿಡುವ ರಸಪ್ರಜ್ಞೆಯಿಲ್ಲಿ ಅರಳಿದೆ.

ಕಾಣಿಕೆ, ಹಣ್ಣುಕಾಯಿ, ನಲ್ಮೆ, ಪತ್ರ ಪುಷ್ಪ ಎಂಬ ನಾಲ್ಕು ಕವನ ಸಂಕಲನಗಳನ್ನು ಅವರು ನೀಡಿದ್ದಾರೆ. 'ಕವಿಯೆ, ಎಲ್ಲಾ ರಸಗಳು ನಿನ್ನಲಿ, ಒಡ್ಡುತ ಒಂದೇ ಹೊನಲಲಿ ಹರಿಯಲಿ' ಎಂಬ ಆಕಾಂಕ್ಷೆ ಅವರದು. ಕಾವ್ಯ ಸಮಾಧಿಯಲ್ಲಿ ಅವರಿಗೆ ಪರಬ್ರಹ್ಮಸ ಬ್ರಹ್ಮಚಾರಿಯಾದ ಆನಂದ. ಕವಿಯೇ ಕಾವ್ಯ ಸಮಾಧಿಯೊಳಗಗ್ಗೆ ಎಂದು ಹಾರೈಸುವ ಮೂಲಕ ಕಾವ್ಯದ ಲೋಕೋತ್ತರತ್ತ್ವವನ್ನು ನಿರೂಪಿಸಿದ್ದಾರೆ. 'ಪಂಡಿತನ ಪಯಣ'ದಂತಹ ಕವಿತೆಗಳ ಮೂಲಕ ಶುಷ್ಕ ಪಾಂಡಿತ್ಯ, ಅಹಮಿಕೆಗಳನ್ನು ಕರ್ಮರಹಿತ ಜ್ಞಾನವನ್ನು ಖಂಡಿಸಿದ್ದಾರೆ. 'ಹುಟ್ಟು ನಾಡು' ಕವಿತೆಯ ಮೂಲಕ ತಾಯ್ನಾಡಿನ ಪ್ರೇಮ - ರಾಷ್ಟ್ರೀಯತೆಯನ್ನು ನಿರೂಪಿಸಿದ್ದಾರೆ. ಸ್ವಾತಂತ್ರ್ಯ ಹೋರಾಟದ ದಿನಗಳಲ್ಲಿ ಅವರು ಮುಂಚೂಣಿಯಲ್ಲಿ ಹೋರಾಡಿದವರು ಧ್ಯೇಯವಾದಿಗಳಾಗಿ ರಾಷ್ಟ್ರೀಯವಾದಿ ಗಳಾಗಿರುವುದನ್ನು ಅವರ ಕವನಗಳು ತೋರಿಸಿಕೊಟ್ಟಿವೆ. ನಲ್ಮೆ ಅವರ ಉತ್ತಮ ಕವನ ಸಂಕಲನವೆಂದು ಹೆಸರಾಗಿದೆ. ಕನ್ನಡದಲ್ಲಿ ಕಥನಕವನಗಳ ರಚನೆಯಲ್ಲಿ ಅವರು ಎತ್ತಿದ ಕೈಯಾಗಿ, ಹೊಸ ಪ್ರಕಾರದ ಸೃಷ್ಟಿಗೆ ಇಳಿದ ಕವಿ ಪ್ರಜಾಪತಿಗಳಲ್ಲೊಬ್ಬರು - ಅಗ್ರಣಿಗಳು ಎಂದು ಹೆಸರಾಗಿದ್ದಾರೆ. "ನಲ್ಮೆಯ ಕವಿ" ಎಂಬುದು ಅವರಿಗೆ ಕಾವ್ಯಾಸಕ್ತರು ನೀಡಿದ ಗೌರವ ! ನಲ್ಮೆಯ ಗೌರವದ ದ್ಯೋತಕ.

"ಪಡುವಣ ಕಡಲಿನ ತೆಂಗಿನ ಮಡಲಿನ ಮರೆಯಲಿ ಮೆರೆಯುವುದು ನಾಡೊಂದು, ಸೃಷ್ಟಿಯ ಮಾತೆಯ ಮೀಸಲು ಸೊಬಗಿನ ಹೊದಿಕೆಯ ಹೊದ್ದಿಹ ಬೀಡೊಂದು" ಕರಾವಳಿ ತೆಂಗು - ಕಂಗುಗಳ ತಮ್ಮ ತಾಯ್ನಾಡನ್ನು ಬಣ್ಣಿಸುವಲ್ಲಿ ಕವಿಯ ಆಸಕ್ತಿ ವಿಶಿಷ್ಟವಾಗಿದೆ. "ಪಡುವಣ ತೀರದ ಕನ್ನಡನಾಡಿನ ಕಾರ್ಗಾಲದ ವೈಭವವೇನು ?" ಬಗೆ ಬಗೆಯಲಿ ತುಂಬಿ ಬಂದ ಭಾವನೆಗಳನ್ನು ಎಷ್ಟು ಬಣ್ಣಿಸಿದರೂ ಕವಿಗೆ ತೃಪ್ತಿಯಿಲ್ಲ. ಹಳ್ಳಿಯ ಹುಡುಗಿಯನ್ನು ಅವರು ಕಂಡ ರೀತಿಯೂ ಅಂಥದೆ. "ಲೋಭಿಯ ಹಣವೂ ಈಕೆಯ ಗುಣವೂ ಒಂದೇ ತೆರದವು, ಒಂದೇ ತರದವು" "ಅದೊಂದು ತರ, ಇದೊಂದು ತರ" ಎಂಬ ಸುಂದರವಾದ ಕವಿತೆ ಅವರ ರಸಿಕತೆಯ ಉಚ್ಚ ಮಟ್ಟವನ್ನು ಬಿಂಬಿಸಿದೆ.

ಧೂಮಕೇತು, ಲೋಕದ ಕಣ್ಣು ಕಾದಂಬರಿಗಳನ್ನು ಅವರು ಬರೆದಿದ್ದಾರೆ. ಅವರು ಕಾದಂಬರಿ ರಚನೆಯಲ್ಲಿ ತಮ್ಮದೇ ಆದ ನಿಲುವನ್ನು ರೂಪಿಸಿದ್ದಾರೆ. ದೊಡ್ಡಣ್ಣ, ಅದ್ದಿಟ್ಟು ಮೊದಲಾದ ಕಥೆಗಳ ಮೂಲಕ ಸಣ್ಣ ಕತೆಗಳ ಪ್ರಕಾರಕ್ಕೆ ಉತ್ತಮ ಕಾಣಿಕೆ ಸಲ್ಲಿಸಿದ್ದಾರೆ. ದುಡಿಯುವ ಮಕ್ಕಳು, ಗಾಜಿನ ಬಳೆ ಮತ್ತು ಇತರ ಕತೆಗಳು, ಹಿಂದಿನ ಕತೆಗಳು, ಚೂರಿಯ ಕತೆ ಎಂಬ ಕಥಾಸಂಕಲನಗಳಲ್ಲದೆ ನಿರಾಶೆ, ಎಂಬ ನೀಳ್ಗತೆ ಅವರ ಕಥಾ ಸಾಹಿತ್ಯ. ಘೋಷಯಾತ್ರೆ, ವಸ್ತ್ರಾಪಹರಣ, ಗಾಂಧಿ ಸಂದೇಶ ಎಂಬ ಖಂಡ ಕಾವ್ಯಗಳು, ಉಷೆ, ಹಿಡಿಂಬೆ, ವಿರಾಮ, ಗುರುದಕ್ಷಿಣೆ, ಅಜಾತಶತ್ರು, ಯಜ್ಞಕುಂಡ, ಮಹಾಯೋಗಿ ಎಂಬ ನಾಟಕ ಗ್ರಂಥಗಳು, ಸ್ವರಾಜ್ಯಯುದ್ಧ ಎಂಬ ಅನುವಾದ ಕೃತಿ, ಲೇಖನ ಸಂಕಲನ (1965)ಗಳಿಂದ ಅವರು ಕನ್ನಡ ಸಾಹಿತ್ಯವನ್ನು ಸಮೃದ್ಧಗೊಳಿಸಿದ್ದಾರೆ.

ಅವರ ಇನ್ನೊಂದು ವಿಶಿಷ್ಟ ಸಾಧನೆ, ಪತ್ರಿಕೋದ್ಯಮ, ರಾಷ್ಟ್ರ ಬಂಧು, ಪತ್ರಿಕೆಯನ್ನು ಇಪ್ಪತ್ತೈದು ವರ್ಷಗಳ ಕಾಲ ನಡೆಸಿ, ಪತ್ರಿಕಾ ಧರ್ಮದ ಧ್ಯೇಯವನ್ನು ಎತ್ತಿ ಹಿಡಿದು ಅದೇ ನೀತಿಯನ್ನು ಮುಂದುವರಿಸುವ ಸಲುವಾಗಿ ಸ್ವತಂತ್ರವಾಗಿ 'ರಾಷ್ಟ್ರಮತ' ಪತ್ರಿಕೆಯನ್ನು ಹುಟ್ಟು ಹಾಕಿ ಕೆಲಕಾಲ ನಡೆಸಿದ್ದಾರೆ. ಅವರು ರಾಷ್ಟ್ರದ ವಿವಿಧ ವಿಚಾರಗಳ ಬಗ್ಗೆ ಉದ್ಬೋಧಕವಾದ ಅಗ್ರ ಲೇಖನವನ್ನು ನೀಡಿ ಸಮಾಜಕ್ಕೆ ಪ್ರಚೋದನೆಯನ್ನೂ, ಸರಕಾರಕ್ಕೆ ಮಾರ್ಗದರ್ಶನವನ್ನೂ ನೀಡಿದ್ದಾರೆ. ಇತ್ತೀಚೆಗೆ ಕಡೆಂಗೋಡ್ಲು ಅಗ್ರ ಲೇಖನಗಳು' ಎಂಬ ಹೆಸರಿನಿಂದ ಶ್ರೀ ಮುಳಿಯ ಮಹಾಬಲ ಭಟ್ಟರ ಸಂಪಾದಕತ್ವದಲ್ಲಿ ಪುತ್ತೂರು ಕರ್ನಾಟಕ ಸಂಘವು ಉತ್ತಮ ಗ್ರಂಥವೊಂದನ್ನು ಹೊರತಂದಿದೆ. ಪತ್ರಿಕೋದ್ಯಮದಲ್ಲಿ ಭೀಷ್ಮನಾಗಿ, ಸ್ವಾತಂತ್ರ್ಯದ ಹೋರಾಟದಲ್ಲಿ ಮುಂಚೂಣಿಯಲ್ಲಿ ಸಾಗಿದ ಧೀರ ಸತ್ಯಾಗ್ರಹಿಯಾಗಿ, ಸಮಾಜದ ಅಂಕುಡೊಂಕುಗಳಿಗೆ ಕನ್ನಡಿ ಹಿಡಿಯುವ ಮೂಲಕ ರೋಗ ನಿವಾರಣ ವೈದ್ಯರಾಗಿ ಅವರು ಬಾಳಿದ್ದಾರೆ. ಕನ್ನಡದಲ್ಲಿ ಅವರ ಪ್ರೌಢಿಮೆಯಿದ್ದಷ್ಟೆ ಇಂಗ್ಲೀಷ್ ಸಾಹಿತ್ಯದಲ್ಲಿಯೂ ಅವರು ನಿಷ್ಣಾತರಾಗಿದ್ದರು. ಸಂಸ್ಕೃತ ಪದಪ್ರಯೋಗ ಅವರ ಶೈಲಿಯ ಅಂದವನ್ನು ಹೆಚ್ಚಿಸಿದೆ. ಹಾಗೆಂದು ಕನ್ನಡದ ಪದಪ್ರಯೋಗದಲ್ಲಿ ಅವರು ಉತ್ತಮ ವ್ರತಸ್ಥರಾಗಿದ್ದರು. ಭಾಷಾಶುದ್ಧಿಯ ಬಗ್ಗೆ ಅವರಿಗೆ ವಿಶೇಷ ಶ್ರದ್ಧೆಯಿತ್ತು.

ಅವರ ನಿಸರ್ಗ ಸಹಜ ಗಂಭೀರ ನಿಲುವು, ಭಾಷಣದ ಅನನ್ಯ ನಿರರ್ಗಳ ಶೈಲಿ ಅದ್ವಿತೀಯವಾಗಿತ್ತು. ಎಳೆಯ ಸಾಹಿತಿಗಳ ಬಗ್ಗೆ ಅವರಿಗೆ ವಾತ್ಸಲ್ಯವಿತ್ತು. ಅವರ ಮಾರ್ಗದರ್ಶನವು ಈ ಲೇಖಕನ ಸಾಹಿತ್ಯದ ರಚನೆಗೆ ಸಾಕಷ್ಟು ಪ್ರಭಾವಶಾಲಿಯಾಗಿತ್ತು ಎಂಬುದನ್ನು ಕೃತಜ್ಞನಾಗಿ ನೆನಪಿಸಲೇಬೇಕಾಗಿದೆ.

ರಾಷ್ಟ್ರಭಕ್ತ ಕವಿ
ಶ್ರೀ ಪುಂಡೂರು ಲಕ್ಷ್ಮೀನಾರಾಯಣ ಪುಣಿಂಚತ್ತಾಯರು

ಮಹಾತ್ಮಾ ಗಾಂಧೀಜಿಯವರ ಹತ್ಯೆಯ ಸುದ್ದಿ ಕೇಳಿ ಪುಂಡೂರು ಲಕ್ಷ್ಮೀನಾರಾಯಣ ಪುಣಿಂಚತ್ತಾಯರು ಅಂದಿನ ನವಭಾರತದ ದೈನಿಕದಲ್ಲಿ ಬರೆದ 'ಶ್ರದ್ಧಾಂಜಲಿ'ಯ ಪದ್ಯ ಕರುಣಾಜನಕವಾಗಿದ್ದು, ಅದರ ಒಂದು ಸಾಲು ಇಂದಿಗೂ ನನ್ನ ಮನದಲ್ಲಿ ಅಚ್ಚಳಿಯದೆ ಉಳಿದಿದೆ.

" 'ನಾ - ಥೂ' ರಾಮ ವಿನಾಯಕ ಗೋಡಸೆ,

ಘಾತಿಸಿದನು ಸಂತನ ಹರನೆ"

ದೇಶಭಕ್ತರಾದ ಪುಣಿಂಚತ್ತಾಯರು ಸ್ವರಾಜ್ಯಗೀತಾಮೃತ, ರಾಷ್ಟ್ರಗೀತಾರತ್ನಾಕರ, ಹರಿಜನ ಸಂಧಾನ ಮೊದಲಾದ ಕವನ ಸಂಕಲನಗಳನ್ನು ಪ್ರಕಟಿಸಿ ಸ್ವಾತಂತ್ರ್ಯ ಹೋರಾಟಕ್ಕೆ ಸ್ಫೂರ್ತಿಯನ್ನು ನೀಡಿದ್ದರು. ಸ್ವಾತಂತ್ರ್ಯೋತ್ಸವ, ಗಾಂಧೀಜಯಂತಿ ಮೊದಲಾದ ದಿನಗಳಲ್ಲಿ ಪ್ರಕಟವಾಗುತ್ತಿದ್ದ ಅವರ ನೂತನ ಕವಿತೆಗಳು ಓದುಗರಿಗೆ ನವಚೈತನ್ಯ - ಸ್ಫೂರ್ತಿಗಳನ್ನು ನೀಡುತ್ತಿದ್ದವು.

ಶ್ರೀ ಪುಣಿಂಚತ್ತಾಯರ ಬಗ್ಗೆ ನಾಡಿನ ಹಿರಿಯರಿಗಿದ್ದ ಗೌರವಾದರಗಳು ಅಪ್ರತಿಮವಾಗಿದ್ದವು. ಪ್ರಾಕ್ತನ ವಿಮರ್ಶನವಿಚಕ್ಷಣ, ರಾವ್ ಬಹದೂರ್, ಆರ್. ಎ. ನರಸಿಂಹಾಚಾರ್ಯರು ಪುಣಿಂಚತ್ತಾಯರಿಗೆ ಬರೆದ ಪತ್ರವೊಂದು ಹೀಗಿದೆ.

"ತಾವು ಪ್ರೀತಿಪೂರ್ವಕವಾಗಿ ಕಳುಹಿಸಿದ ಪತ್ರವೂ ತಿಲಕಕಾವ್ಯಾಂಜಲಿ, ಗಾಂಧೀಜಿ ವಿಜಯ ಎಂಬ ಪುಸ್ತಕಗಳೂ ತಲಪಿದವು. ತಮ್ಮ ಆದರ ಪುರಸ್ಸರವಾದ ಗೌರವಕ್ಕೆ ನಾನು ಬಹಳ ಕೃತಜ್ಞನಾಗಿದ್ದೇನೆ. ಈ ಪುಸ್ತಕಗಳನ್ನು ಓದಿನೋಡಿದೆನು. ಮನಸ್ಸಿಗೆ ಬಹಳ ಹರ್ಷವಾಯಿತು."

ಫಲಾಭಿಸಂಧಿ ಇಲ್ಲದೆ ದೇಶಕ್ಕಾಗಿ "ಸೂಕ್ಷ್ಮೀಭೂಯಸ್ಸ್ವಯಮಪಿ ಸಮಾನಂದ ನಿಶ್ಚಂದನದ್ರುಃ" ಎಂಬಂತೆ ದುಡಿದು ಕೆಲಸ ಮಾಡುವ ಮಹನೀಯರುಗಳ ಚರಿತ್ರವು ಆದರ್ಶಪ್ರಾಯವಾಗಿ ಲೋಕಕ್ಕೆ ಉಪಕಾರಕವಾಗುವುದರಲ್ಲಿ ಎಳ್ಳಷ್ಟೂ ಸಂಶಯವಿಲ್ಲ. ಈ ಕಾರ್ಯವನ್ನು ಪರಾರ್ಥವಾಗಿ ಕೈಗೊಂಡಿರುವವರು ಜನರ ಕೃತಜ್ಞತೆಗೂ ಗೌರವಾದರಕ್ಕೂ ಪಾತ್ರರೇ ಸರಿ. ಈ ಚರಿತ್ರವು ಪದ್ಯ ರೂಪವಾಗಿ ಸುಲಭಶೈಲಿಯಲ್ಲಿ ರಚಿತವಾಗಿರುವುದು,

ಹೃದಯಂಗಮವಾಗಿದೆ ತಮ್ಮ ಬಂಧುವು (ಬಾಲಗಂಗಾಧರಸ್ತವ ಇತ್ಯಾದಿ) ಲಾಲಿತ್ಯಗುಣವಿಶಿಷ್ಟವಾಗಿ ಕರುಣಾರಸಭರಿತವಾಗಿ ಚಿತ್ತಾಕರ್ಷಕವಾಗಿದೆ. ಈ ಗ್ರಂಥಗಳನ್ನು ಓದಿ ನನಗೆ ಬಹಳ ಸಂತೋಷವಾಯಿತು."

ಸ್ವದೇಶಾಭಿಮಾನಿಗಳಾದ ಶ್ರೀ ಆಚಾರ್ಯರ ಮಾತು ಶ್ರೀ ಪುಣಿಂಚತ್ತಾಯರ ವಾಸ್ತವ ಚಿತ್ರವನ್ನು ತೆರೆದಿಟ್ಟಿದೆ.

'ರಾಷ್ಟ್ರಗೀತ ರತ್ನಾಕರ' ಗ್ರಂಥಕ್ಕೆ ದೇಶಭಕ್ತ ಗಂಗಾಧರರಾವ್ ದೇಶಪಾಂಡೆಯವರು ಮುನ್ನುಡಿ ಬರೆದಿರುವರು. ದೇಶಭಕ್ತ ಮುದವೀಡು ಕೃಷ್ಣರಾಯರು ತಮ್ಮ, 'ಕರ್ನಾಟಕ ವೃತ್ತ' ಪತ್ರಿಕೆಯಲ್ಲಿ ಕವಿತೆಗಳ ಬಗ್ಗೆ ಹೀಗೆ ಹೇಳಿರುವರು.

"ಭಾರತರಾಣಿ, ಎದ್ದೇಳಿರೆದ್ದೇಳಿ ಭಾರತೀಯರಿರಾ, ಗಾಂಧಿದೀರ್ಘಾಯುರಾರೋಗ್ಯದಿಂದಿರಲಿ, ಭಾರತೀಯರ ಮೊರೆ, ಧ್ವಜ ಗೀತೆ, ಗಾಂಧಿವಿಜಯ, ಈ ಕವಿತಾಮಯ ಪುಸ್ತಕಗಳನ್ನು ಮಂಗಳೂರಿನಲ್ಲಿರುವ ಶ್ರೀ ಪುಂಡೂರು ಲಕ್ಷ್ಮೀನಾರಾಯಣ ಪುಣಿಂಚತ್ತಾಯರು ಬರೆದಿರುವರು. ಕನ್ನಡ ವಾಙ್ಮಯದಲ್ಲಿ ಇಂಥ ಕವಿಗಳು ತೀರ ದುರ್ಲಭ. ಇವರು ಬರೆದ ತಿಲಕಕಾವ್ಯಾಂಜಲಿ ಹಾಗೂ ಸ್ವರಾಜ್ಯ ಭಕ್ತೋಲ್ಲಾಸ ಇವುಗಳನ್ನು ಓದಿದರಂತೂ ಕವಿಗಳ ಕವಿತ್ವ ಪ್ರತಿಭೆಯ ಪರಮಾವಧಿಯೆಂದೇ ಅನ್ನಿಸುವುದು. ಸ್ವರಾಜ್ಯ ಭಕ್ತೋಲ್ಲಾಸದಲ್ಲಿ ಜೋಗುಳ ಪದಗಳನ್ನು ತಿಲಕಕಾವ್ಯಾಂಜಲಿಯಲ್ಲಿಯ ಬಾಲಗಂಗಾಧರಸ್ತವವನ್ನು ಎಷ್ಟು ಸಾರಿ ಓದಿದರೂ ತೃಪ್ತಿಯಾಗುವುದಿಲ್ಲ. ತಿಲಕಕಾವ್ಯಾಂಜಲಿಯಲ್ಲಿ ಶ್ರೀ ಲಕ್ಷ್ಮೀ ನಾರಾಯಣರು ದಕ್ಷಿಣ ಕನ್ನಡ ದಲ್ಲಿರುವ ಕವಿಗಳ ಕವಿತೆಗಳನ್ನು ಮುದ್ರಿಸಿ ಕವಿಗಳಲ್ಲಿ ಪರಸ್ಪರ ಮಾತ್ಸರ್ಯವಿರುವುದೆಂಬ ಕಲಂಕವನ್ನು ತೊಡೆದುಹಾಕಲು ನಿರ್ಧರಿಸಿದ್ದಾರೆ. ಕರ್ನಾಟಕ ಕವಿವ್ಯಾಪ್ತಿಯ ಬಾಂಧವರು ಇಂಥ ಪುಸ್ತಕಗಳನ್ನು ಒಮ್ಮೆಯಾದರೂ ಓದಲೇಬೇಕೆಂದು ಬಿನ್ನಹ.

ಜಯಕರ್ನಾಟಕವೆಂಬ ಹೆಮ್ಮೆಯ ಪತ್ರಿಕೆ ಹೀಗೆ ಹೇಳುತ್ತದೆ.

"ಇನ್ನೊಂದು ಮಹತ್ವದ ಮಾತು ಅಸಹಯೋಗವು ಆರಂಭಿಸಿದ ನಂತರ ರಾಷ್ಟ್ರೀಯ ಪದ್ಯಗಳ ವಾಙ್ಮಯವನ್ನು ಕರ್ನಾಟಕದಲ್ಲಿ ಮುಖ್ಯವಾಗಿ ಮಂಗಳೂರು - ಧಾರವಾಡಗಳು ಮೊದಲು ಮಾಡಿವೆ. ಇವೆರಡರಲ್ಲಿ ಮಂಗಳೂರೇ ಮುಂದೆ. ಬಹುತರವಾಗಿ ಅಲ್ಲಿಯ ಎಲ್ಲಾ ಪದ್ಯಗಳನ್ನು ಪ್ರಸಿದ್ಧಿಸಿದವರು ಅಲ್ಲಿಯ ಶ್ರೀಮಂತರಾದ ಪುಣಿಂಚತ್ತಾಯರೇ. ಇವರ ರಾಷ್ಟ್ರವಾಙ್ಮಯ ಪ್ರೇಮವನ್ನು ನೋಡಿ ಕರ್ನಾಟಕದ ಇತರ ಶ್ರೀಮಂತ ಜನರು ಇಂಥ ಕೆಲಸಗಳಿಗೆ ಮೊದಲು ಮಾಡಿದ ದಿನವೇ ಸುದಿನವು"

ಇಂಥ ನೂರಾರು ರಾಷ್ಟ್ರೀಯ ಕವನಗಳನ್ನು ಸ್ವತಃ ಬರೆದು ಇತರರು ಬರೆದುದನ್ನು ಅಚ್ಚು ಹಾಕಿಸಿ ಪ್ರಕಟಿಸಿದ ಶ್ರೀ ಪುಣಿಂಚತ್ತಾಯರ ಔದಾರ್ಯ ಬಲು ದೊಡ್ಡದು. 'ಕರ್ನಾಟಕ ಪರಿಸ್ಥಿತಿ' ಎಂಬ ಶ್ರೀ ಬಡೆಕಿಲರ ಕೃತಿಯನ್ನು ಇವರು ಪ್ರಕಟಿಸಿರುವುದು ಇದಕ್ಕೆ ಮತ್ತೊಂದು ಸಾಕ್ಷಿ. ರಾಷ್ಟ್ರೀಯ ಕಲೆ, ಸಾಹಿತ್ಯ, ಯಕ್ಷಗಾನ ಔದಾರ್ಯಗಳಿಗೆ ಹೆಸರಾದ ಊರು ಪುಂಡೂರು ಎಂಬುದನ್ನು ನಾವಿಂದು ಗುರುತಿಸುವುದಿದ್ದರೆ ಶ್ರೀ ಲಕ್ಷ್ಮೀ ನಾರಾಯಣ ಪುಣಿಂಚತ್ತಾಯರ ಹೆಸರನ್ನು ಮೊದಲಾಗಿ ನೆನಪಿಸಿಕೊಳ್ಳಬೇಕು.

ಶ್ರೀ ಪೇಜಾವರ ಸದಾಶಿವರಾಯರು

ಶ್ರೀ ಪೇಜಾವರ ಸದಾಶಿವರಾಯರು ಎಳವೆಯಲ್ಲಿಯೇ ಕಣ್ಮರೆಯಾದ ಪ್ರತಿಭಾವಂತ ಕವಿ. ಇವರ ಪ್ರತಿಭೆ ವಿಶೇಷ ರೀತಿಯದಾಗಿತ್ತು. ಕವಿತೆಗಳನ್ನು ರಚಿಸಿ ಪ್ರಕಟಿಸಿ ಅವರು ತಮ್ಮನ್ನು ಅರ್ಪಿಸಿಕೊಂಡವರು. ಅವರ ನಿಧನಾನಂತರ ಕನ್ನಡದ ಹಿರಿಯ ಸಾಹಿತಿ 'ರಂ. ಶ್ರೀ ಮುಗುಳಿಯವರು' 'ವರುಣ' ಎಂಬ ಕವನಸಂಕಲನದ ಮೂಲಕ ಪೇಜಾವರರ ಕವನಗಳನ್ನು ಪ್ರಕಟಿಸಿದ್ದರು. ರಂ. ಶ್ರೀ ಮುಗುಳಿ, ವಿ. ಕೃ. ಗೋಕಾಕರಂಥವರು ಪೇಜಾವರರನ್ನು ಮೆಚ್ಚಿಕೊಂಡಿದ್ದರು. ಇವರ ಪ್ರತಿಭೆಯನ್ನು ಗುರುತಿಸಿದುದರಿಂದಲೇ ಅವರು 'ವರುಣ'ದ ಪ್ರಕಟಣೆಗೆ ಮನಮಾಡಿದರೆನ್ನಬಹುದು.

'ಮಿತ್ರಮಂಡಳಿ' ಎಂಬ ಕಾವ್ಯಾಭ್ಯಾಸಿಗಳ ಗುಂಪೊಂದನ್ನು ಪೇಜಾವರರು ಕಟ್ಟಿಕೊಂಡಿದ್ದರಂತೆ. ಗೆಳೆಯರೆಲ್ಲ ರಚಿಸಿದ ಕವನಗಳನ್ನು ಒಟ್ಟು ಮಾಡಿ ಅಳಿಲ ಸೇವೆ 'ಅಲರು' ಎಂಬ ಎರಡು ಸಂಕಲನಗಳನ್ನು ಹೊರತಂದಿದ್ದರಂತೆ. ಇವರ ಕಾವ್ಯ ಪ್ರತಿಭೆ ಶ್ರೇಷ್ಠ ಮಟ್ಟದ್ದಾಗಿತ್ತು.

ಪೇಜಾವರ ಸದಾಶಿವರಾಯರು 'ಸಾಹಿತ್ಯವಾಚಿಕೆ' ಪುಸ್ತಕ ನಾ. ದಾಮೋದರ ಶೆಟ್ಟಿಯವರ ಸಂಪಾದಕತ್ವದಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿಯಿಂದ ಇತ್ತೀಚೆಗೆ ಪ್ರಕಟವಾಗಿದೆ. ಶ್ರೀ ರಾಯರು ಉಚ್ಚ ವಿದ್ಯಾಭ್ಯಾಸಕ್ಕಾಗಿ ಇಟೆಲಿಗೆ ತೆರಳಿದ್ದವರು ಅಲ್ಲಿಯೇ ಸಾವನ್ನಪ್ಪಿದರೆಂಬುದು ದುರ್ದೈವದ ಸಂಗತಿ. ಶ್ರೀ ಪೇಜಾವರರು ಇಟೆಲಿಯಲ್ಲಿದ್ದಾಗ ಬೇರೆ ದೇಶಗಳಿಂದ ಬಂದ ಸುಂದರಿಯರ ನರ್ತನವನ್ನು ಚಿತ್ರಿಸುವ ಕವನವನ್ನು 'ನಾಟ್ಯೋತ್ಸವ' ಎಂಬ ಹೆಸರಿನಿಂದ ಬರೆದಿದ್ದರಂತೆ. ಈ ಕವನವು ಜೀವನ ಪ್ರೇಮದ ಕುರಿತಾದ ಸಾವಿನ ನೋವನ್ನು ಮರೆಸಬಹುದಾದ ಕವನ ಎನ್ನಲಾಗಿದೆ. ತನ್ನ ಇಪ್ಪತ್ತಾರನೇ ವರ್ಷದಲ್ಲಿ ತೀರಿಕೊಂಡ ಸದಾಶಿವರಾಯರು ನಾಡಿನ ಗಣ್ಯ ಕವಿಗಳ ಸಾಲಿಗೆ ಸೇರಬಹುದಾದ ಪ್ರತಿಭೆ ಸಾಮರ್ಥ್ಯ ಉಳ್ಳವರೆಂಬುದು ಅವರ ಕೃತಿಗಳಿಂದ ಸಾಬೀತಾಗುತ್ತದೆ. ಶ್ರೀಯುತರು ಗೋಕಾಕರಿಗೆ ಬರೆತ ಪತ್ರದಿಂದ ಆ ಕಾಲದ ಕಾವ್ಯ ಪ್ರಕಟಣೆಯ ವಿಧಿಯನ್ನು ಮನಗಾಣಬಹುದು. "ನನ್ನ ಕವಿತೆಗಳನ್ನು ಅಚ್ಚು ಹಾಕಿಸಬೇಕೆಂದು ಬರೆದಿದ್ದೀರಿ. ನನ್ನ ಊರಿನಲ್ಲಿ ಕವನಗಳಿಗೆ ಎಷ್ಟು ಮಮತೆ ಇದೆ ಎಂಬುದು ಪ್ರಕಟವಾದ ಕಾವ್ಯ ಗ್ರಂಥಗಳ ಪಟ್ಟಿಯನ್ನು ನೋಡಿದರೆ ತಿಳಿದೀತು. ಮಿತ್ರ ಮಂಡಲಿಯ ಮೂರು ನಾಲ್ಕು ಕಾವ್ಯ ಸಂಗ್ರಹಗಳನ್ನು ಬಿಟ್ಟರೆ ಕವಿತೆಗಳ ಸಂಗ್ರಹವು ಪ್ರಕಟವಾದುದು ಮಂಗಳೂರಿನಲ್ಲಿ ಈ ಐದಾರು ವರ್ಷಗಳಲ್ಲಿ ಮೂರು ನಾಲ್ಕು ಮಾತ್ರ. ಪಠ್ಯ ಪುಸ್ತಕವಾಗುವ ಸಂದರ್ಭವಿಲ್ಲದ ಪುಸ್ತಕಗಳಿಗೆ ನಮ್ಮ ಕಡೆಯ ಪ್ರಕಾಶಕರು ಗಮನವನ್ನು ಕೊಡಲಾರರು."

"ಯಾವ ಕಾಲದ್ದೇ ಆಗಲಿ, ಯಾವ ಭಾಷೆಯದ್ದೇ ಆಗಲಿ ಯಾವ ಉತ್ತಮ ಕವನಗಳನ್ನಾದರೂ ಸರಿಗಟ್ಟಿ ನಿಲ್ಲಬಹುದು" ಎಂಬುದಾಗಿ 'ವರುಣ'ದ ಬಗ್ಗೆ ಗೋಕಾಕರು ಹೇಳಿದ್ದಾರೆ. ಅಟಿಯ ಹುಣ್ಣಿಮೆ, ಲಕ್ಕಣ, ನಾಟ್ಯೋತ್ಸವಗಳು ಭಾವ ಬಂಧುರತೆ ಛಂದೋ ವೈವಿಧ್ಯಗಳಲ್ಲಿ ಮೇಲ್ಮಟ್ಟದವುಗಳೆಂದು ಕವಿ ಅಮ್ಮೆಂಬಳರು ಪ್ರಶಂಸಿಸಿದ್ದಾರೆ. ಈ ಶತಮಾನದ ಮೂರನೇ ದಶಕದಲ್ಲಿ ಆಗಿ ಹೋದ ಈ ಕವಿಯ ಕತೆ ಕರುಣಾಜನಕವಾದುದು.

'ಗೀತಾಸಾರ'ದ ಕವಿ ಬಡೆಕಿಲ ವೆಂಕಟರಮಣ ಭಟ್ಟರು

ನಾನಿನ್ನೂ ಹತ್ತರ ಹರೆಯದವನಾಗಿದ್ದಾಗ ಒಂದು ರಾತ್ರಿ ನಮ್ಮಲ್ಲಿ ಮಹನೀಯರೊಬ್ಬರು ಗೀತೆಯ ಕನ್ನಡ ಅನುವಾದವನ್ನು ಓದಿ ಹೇಳಿದ ನೆನಪು ಇಂದಿಗೂ ಹಸಿರಾಗಿಯೇ ಇದೆ. ನನ್ನ ತೀರ್ಥರೂಪರು ಪ್ರತಿದಿನ ಗೀತಾಪಾರಾಯಣ ಮಾಡುತ್ತಿದ್ದುದರಿಂದ ಗೀತೆಯ ಶ್ಲೋಕಗಳು ನನಗೆ ಹೆಚ್ಚಾಗಿ ಕಂಠಸ್ಥವಾಗಿದ್ದವು. ಗೀತೆಯು ಭಾಮಿನಿ ಷಟ್ಪದಿಯಲ್ಲಿ ಬಂದುದನ್ನು ಕೇಳಿ ನನ್ನ ಕಿವಿ ನೆಟ್ಟಗಾಯಿತು. ರಾತ್ರಿಯಿಡೀ ನನ್ನ ತೀರ್ಥರೂಪರೊಡನೆ ಆ ವಿದ್ವಾಂಸರು ಗೀತೆಯ ಕುರಿತು ಮಾತುಕತೆ ನಡೆಸಿಕೊಂಡಿದ್ದು ರಾತ್ರಿ ಕಳೆದುದೇ ತಿಳಿಯಲಿಲ್ಲವಂತೆ.

ಶ್ರೀ ಬಡೆಕಿಲ ವೆಂಕಟರಮಣ ಭಟ್ಟರು ತಮ್ಮ ಗೀತಾಸಾರವನ್ನು ಸಂಸ್ಕೃತ ಕನ್ನಡ ಬಲ್ಲ ವಿದ್ವಾಂಸರಿಗೆ ಓದಿ ಹೇಳಿ ಜನಸಾಮಾನ್ಯರಿಗೆ ಅದನ್ನು ವಿವರಿಸುವ ಸಲುವಾಗಿ ಅಲ್ಲಲ್ಲಿ ಸಂಚರಿಸುತ್ತಿದ್ದರು. ವಿದ್ವಾಂಸರ ಮನೆತನವಾದ ಪರಕಜೆ, ಕಮ್ಮಾಜೆ ಸಂಸ್ಕೃತ ವಿದ್ಯಾಲಯಗಳು ಅವರ ಆಸಕ್ತಿಯ ಕೇಂದ್ರಗಳಾಗಿದ್ದವು. ಅದೇ ವಿದ್ಯಾಲಯದಲ್ಲಿ ಅಧ್ಯಾಪಕರಾಗಿದ್ದ ನನ್ನ ತೀರ್ಥರೂಪರೊಡನೆ ಚರ್ಚಿಸುವ ಸಲುವಾಗಿ ಅವರು ಬಂದಿದ್ದರು. ಇದು ಹಿಂದಿನ ಕಾಲದ ವಿದ್ವಾಂಸರ ಸಾಹಿತ್ಯ ಪ್ರಚಾರ - ಪ್ರಸಾರ ನಿರೂಪಣೆಯ ವೈಖರಿಯಾಗಿತ್ತು.

ಗೀತಸಾರವು ಒಂದು ಉತ್ಕೃಷ್ಟ ಕೃತಿ. ಹಿರಿಯ ಸಾಹಿತಿ ಶಿವರಾಮ ಕಾರಂತರೇ ಈ ಕೃತಿಯ ಪ್ರಕಾಶಕರಾಗಿದ್ದರು ಎಂದ ಮೇಲೆ ಕೃತಿಯ ಯೋಗ್ಯತೆಯ ಬಗ್ಗೆ ಯಾರೂ ಏನೂ ಹೇಳಬೇಕಾದ್ದಿಲ್ಲ. ಶ್ರೀ ಬಡೆಕಿಲ ವೆಂಕಟರಮಣ ಭಟ್ಟರು ಹಲವಾರು ಕೃತಿಗಳನ್ನು ರಚಿಸಿದ್ದಾರೆ. ವಾಜಿಗ್ರಹಣ ಅಥವಾ ಯೌವನಾಶ್ವಕಾಳಗ ಅವರ ಯಕ್ಷಗಾನ ಕೃತಿ. ಈ ಕೃತಿಯ ಮುನ್ನುಡಿಯಲ್ಲಿ ಶ್ರೀ ಮುಳಿಯ ಮಹಾಬಲಭಟ್ಟರು ಬರೆದ ಸಾಲುಗಳು ಶ್ರೀ ಬಡಕಿಲರ ವ್ಯಕ್ತಿತ್ವವನ್ನು ನಿರೂಪಿಸುತ್ತವೆ.

"ಸಾಹಿತ್ಯ ವೇದಾಂತಗಳ ಕುರಿತು ಪಂಡಿತರೊಡನೆ ಹಗಲಿರುಳು ಚರ್ಚಿಸಬಲ್ಲ ಶ್ರೀಯುತರು ಯಕ್ಷಗಾನದ ಅರ್ಥಗಾರಿಕೆಯಲ್ಲಿ ಪಳಗಿದವರು. ಪಾತ್ರದ ಮರ್ಯಾದೆ ಕುರಿತು ಗತಿ (ಗತ್ತು) ಬದ್ಧವಾದ ಮಿತ ವಾಕ್ಯಗಳಿಂದ ರಸಾಭಿವ್ಯಕ್ತಿಯನ್ನೆಸಗಬಲ್ಲ ನೈಪುಣ್ಯ ಅವರಿಗೆ ನಿಸರ್ಗ ಪ್ರಾಪ್ತವಾದುದು. ಯಕ್ಷಗಾನದ ಹಾಡುಗಾರಿಕೆ, ಹಿಮ್ಮೇಳಗಳ ಬಗೆಗೆ ವಿವೇಚನಾತ್ಮಕವಾದ ಜ್ಞಾನ ಅವರದು. ಪ್ರತಿಷ್ಠೆಯನ್ನವರು ಬಯಸಿಲ್ಲ."

ಶ್ರೀಯುತರು ತಾಳಮದ್ದಲೆಗಳಲ್ಲಿ ಅರ್ಥದಾರಿಗಳಾಗಿ ಮಿಂಚಿರುವುದಕ್ಕೆ ಶ್ರೀ ಮಹಾಬಲ ಭಟ್ಟರು ಹೇಳುವ ಅರ್ಹತೆಗಳೇ ಕಾರಣವೆಂಬುದು ಎಲ್ಲರೂ ಬಲ್ಲ ವಿಚಾರ. "ಅವರ ಪ್ರತಿಭೆಯ ಪೂರ್ಣ ದರ್ಶನವಾಗುವುದು ಗೀತಾಸಾರದಲ್ಲಿ." ಎಂಬ ಮುಳಿಯರ ಮಾತು ನೂರಕ್ಕೆ ನೂರು ಸತ್ಯವೆನ್ನಬಹುದಾಗಿದೆ.

"ಶ್ರೀ ವೆಂಕಟರಮಣಭಟ್ಟರು ಹಲವಾರು ಕೃತಿಗಳನ್ನು ರಚಿಸಿದ್ದಾರೆ. ಇವುಗಳೆಲ್ಲವೂ ರಸಬಾಳೆಯ ಹಣ್ಣುಗಳಂತೆ ಮಧುರ, ರುಚಿಕರ. ಇವು ಉಬ್ಬೆಯಲ್ಲಿಟ್ಟು ಮಾಗಿಸಿ ಹಣ್ಣೆಸಿದವುಗಳಲ್ಲ. ತಾವಾಗಿಯೇ ಬೆಳೆದು ಮಾಗಿದವುಗಳು. ಇವರು ಬರೆದ ಕೃತಿಗಳಲ್ಲಿ ವಾಜಿಗ್ರಹಣ

ಮತ್ತು ಭೀಮವಿಜಯ ಇವೆರಡೂ ಯಕ್ಷಗಾನ ಕೃತಿಗಳು. ಪಾರ್ತಿಸುಬ್ಬನ ಸರಳತೆ ಮತ್ತು ನಂದಳಿಕೆಯ ಅರ್ಥಗೌರವಗಳ ವೈಭವವನ್ನು ನಾವಿಲ್ಲಿ ಕಾಣಬಹುದು. ಶ್ರೀಮದ್ಭಗವದ್ಗೀತೆಯ ಸಾರವನ್ನು ಸಂಗ್ರಹಿಸಿ ಗೀತಾಸಾರವನ್ನು ರಚಿಸಿದ ಶ್ರೀ ಭಟ್ಟರು ಇಲ್ಲಿ ನಾರಣಪ್ಪನನ್ನು ಹೋಲುತ್ತಾರೆ. ಶ್ರೀ ಡಿ. ವಿ. ಗುಂಡಪ್ಪನವರು ಮಂಕುತಿಮ್ಮನ ಕಗ್ಗವನ್ನು ಬರೆದಂತೆ, ಶ್ರೀ ಭಟ್ಟರೂ ಸೂಕ್ತಿವಾದವನ್ನು ಬರೆದರು. ಇದರಲ್ಲಿ ಪ್ರಚಲಿತ ಪರಿಸ್ಥಿತಿಯಿಂದ ತಮಗಾದ ಕೊಳ್ಳುದಿಯನ್ನು ಶಬ್ದ ರೂಪದಲ್ಲಿ ತೋಡಿಕೊಂಡಿದ್ದಾರೆ. 'ಸಮಾಜ ಸಂಗೀತ' ಸಾಂಗತ್ಯ ಛಂದಸ್ಸಿನಲ್ಲಿದ್ದು ಸಮಾಜ - ಮತಸಂಸ್ಥಾಪನೆಗಳಿಗೆ ಸಂಬಂಧಿಸಿದ ವಿಷಯಗಳಿಂದ ಕೂಡಿ ರತ್ನಾಕರವರ್ಣಿಯ ಶೈಲಿಯನ್ನು ಸ್ಮರಣೆಗೆ ತರುವ ಕೃತಿರತ್ನವದು. 'ಹೊಟ್ಟೆಯೂ ಅವಯವಗಳೂ' ಎಂಬ ಚಂಪೂ ಕೃತಿಯನ್ನು ಶ್ರೀ ಭಟ್ಟರು ಬರೆದಿದ್ದಾರೆ. 'ಭಾರತರಾಜ್ಯ ಭಾರಂ' ಕಂದದಲ್ಲಿಯೂ ಕರ್ನಾಟಕದ ಪರಿಸ್ಥಿತಿ ವಾರ್ಧಿಕ ಷಟ್ಪದಿಯಲ್ಲಿಯೂ ರಚಿತವಾದ ಕೃತಿಗಳು.

ಶ್ರೀ ಭಟ್ಟರು ತಮ್ಮ ಅನುಭವದ ಗಂಗಾತೀರ್ಥವನ್ನು ತಮ್ಮ ಕೃತಿಗಳಲ್ಲಿ ಸುರಿದು ಕನ್ನಡಿಗರಿಗೆ ಕುಡಿಸಿದ್ದಾರೆ. . . . ಶ್ರೀ ಬಡೆಕಿಲ ಭಟ್ಟರಿಗೆ . . . . ಶಬ್ದ ಪ್ರವಾಹ ಅಪೇಕ್ಷಿತ ಛಂದೋಮೂಸೆಯಲ್ಲಿ ತಡೆಯಿಲ್ಲದೆ ಹರಿದು ಬರುತ್ತದೆ. ಇದು ಅವರ ದೈವದತ್ತ ಶಕ್ತಿ !! ಶ್ರೀ ಭಟ್ಟರು ಸ್ವಾಂತಸ್ಸುಖಾಯ ಕಾವ್ಯಾರಾಧನೆಗೆ ಇಳಿದವರು. . . . ಪರಿಮಳದ ಹೂವು ತನ್ನನ್ನು ಮುಡಿದುಕೊಳ್ಳಿರೆಂದು ಕೈಯೆತ್ತಿ ಕರೆಯುವುದಿಲ್ಲ. ತಾನರಳಿ ಸುತ್ತ ಮುತ್ತ ಕಂಪು ಬೀರುತ್ತದೆ. ಅದನ್ನು ಆಘ್ರಾಣಿಸುವುದು ಜನತೆಯ ಕರ್ತವ್ಯ. ಜನಕ್ಕೆ ಶೀತಬಾಧೆಯಾದರೆ ಹೂವಿನದೇನೂ ತಪ್ಪಿಲ್ಲ. ಅದು ಅರಳುತ್ತದೆ. ಕಂಪು ಹರಡುತ್ತದೆ. ಮುಂದೊಂದು ದಿನ ಬಾಡಿ ಉದುರುತ್ತದೆ. ಜನ ಮಾತ್ರ ಕರ್ತವ್ಯ ಲೋಪದ ಅಪವಾದಕ್ಕೆ ಗುರಿಯಾಗುತ್ತಾರೆ.

ಶ್ರೀ ಕೆ. ಹೊನ್ನಯ ಶೆಟ್ಟರು ಶ್ರೀ ಬಡೆಕಿಲದವರ ಬಗ್ಗೆ ಬರೆದ ಮೇಲಿನ ಸಾಲುಗಳಲ್ಲಿ ಅವರ ಕಾವ್ಯ - ಜೀವನದ ಸಮಗ್ರ ಚಿತ್ರವನ್ನು ನಾವು ಕಾಣಬಹುದು.

ಶ್ರೀ ಬಡೆಕಿಲರ "ಗೀತಾಮಂದಿರ"ವನ್ನು ಪ್ರವೇಶಿಸಿದಾಗ ಸಾಮಾನ್ಯ ಮಧ್ಯಮ ಗಾತ್ರದ ಹೊಳೆವ ಹೊಂಬಣ್ಣದ ಮೈಯ, ಕಾಂತಿಯ, ನಸುನಗುವಿನ, ತುಸು ಊರ್ಧ್ವವೃತ್ತ ವಾಗದ ಉಜ್ವಲ ನೇತ್ರಗಳ ಉತ್ತುಂಗ ನಾಸಿಕದ, ದೀರ್ಘ ಶ್ರವಣೇಂದ್ರಿಯಗಳ, ಕಂಬು ಕಂಧರದ, ಗಂಭೀರ ದನಿಯ, ಹಿತಮಿತ ಮಾತಿನ, ಹೇಳಬೇಕಾದುದನ್ನು ಕೇಳುವವರಿಗೆ ನೋವಾಗದಂತೆ ಹೇಳಿಬಿಡುವ, ಅನುಪಮ ಶಾಂತಿಯ, ತೇಜೋರಾಶಿಯ ದರ್ಶನವಾಗುತ್ತದೆ. ಮತ್ತೆ ಈ ವ್ಯಕ್ತಿಯನ್ನು ಮರೆಯುವುದು ಅಸಾಧ್ಯ. ಅವರ ವ್ಯಕ್ತಿತ್ವದ ವೈಶಿಷ್ಟ್ಯ ಅಂತಹುದು. . . . ಶ್ರೀ ಬಡೆಕಿಲರ ಗೀತಾಸಾರವನ್ನು ಕಂಡು ಇವರೇ ಈ ಶತಮಾನದ ಕವಿಯೆಂದು ಹಿಗ್ಗಿನಿಂದ ಹೇಳಿದವರು ರಾಷ್ಟ್ರಕವಿ ಗೋವಿಂದ ಪೈಯವರು. ಪ್ರಸಿದ್ಧ ಸಾಮಾಜಿಕ ಕಾರ್ಯಕರ್ತ ಸಾಹಿತಿ ನಾರಾಯಣ ರಾವ್ ಕಲ್ಲೆಯವರು ಶ್ರೀ ಬಡೆಕಿಲರ ಬಗ್ಗೆ ಮೇಲಿನಂತೆ ಬರೆದಿದ್ದಾರೆ.

ಪ್ರಸಿದ್ಧ ಕವಿ ಪುಂಡೂರು ಲಕ್ಷ್ಮೀನಾರಾಯಣ ಪುಣಿಂಚತ್ತಾಯರು ಬಡೆಕಿಲರ "ಕರ್ನಾಟಕ ಪರಿಸ್ಥಿತಿ" ಗ್ರಂಥಕ್ಕೆ ಬರೆದ ಮುನ್ನುಡಿ ಕನ್ನಡಿ ಹಿಡಿದಿದೆ.

"ಇದರಲ್ಲಿ ಉಕ್ತವಾಗಿರುವ ನಮ್ಮ ಕನ್ನಡ ನಾಡಿನ ದುಃಸ್ಥಿತಿಯನ್ನು ಗ್ರಹಿಸುವಾಗ ಖೇದವಾಗುತ್ತದೆ. ಆಗಲೇ ಗ್ರಂಥಕರ್ತರ ಕವಿತಾಸಾಮರ್ಥ್ಯವನ್ನು ನೆನೆಸುವಾಗ ಮೋದವಾಗುತ್ತದೆ. ಪೂರ್ವಕವಿಮಾರ್ಗವನ್ನು ಸ್ವಲ್ಪವಾದರೂ ಬಿಟ್ಟಿರದೆ ಗಂಭೀರವಾದ ಶೈಲಿಯಲ್ಲಿ ನಮ್ಮ ನಾಡಿನ ಇಂದಿನ ರೀತಿ - ನೀತಿಗಳನ್ನು ಸ್ಥಿತಿ - ಗತಿಗಳನ್ನು, ಯಥಾರ್ಥವಾಗಿ - ನಿರ್ಭೀತಿಯಿಂದ ವರ್ಣಿಸಿರುವ ಇಂತಹ ರಸಭರಿತವಾದ ಪದ್ಯ ಗ್ರಂಥವು ಆಧುನಿಕ ಕರ್ನಾಟಕ ವಾಙ್ಮಯದಲ್ಲಿ ಇನ್ನೊಂದಿರುವುದೇ? ಪ್ರತಿಯೊಬ್ಬ ಕನ್ನಡಿಗನ ಕನ್ನಡಿಯಂತೆ ಏಕೆ, ಕೈಪಿಡಿಯಂತೆ ಇರಬೇಕಾದ ಕಾವ್ಯವಿದು. ಮನೋಹರವಾಗಿರುವುದು."

ಶ್ರೀ ಕವಿ ಪುಣಿಂಚತ್ತಾಯರು 1924ರಲ್ಲಿ ಪ್ರಕಟವಾದ ಈ ಕೃತಿಗೆ ಬರೆದ ಮುನ್ನುಡಿಯ ಮುಖ್ಯಾಂಶವಿದು.

"ಲೋಕ ಹಿತಾಹಿತಗಳನವ
ಲೋಕಿಸುವುದನುಳಿದು ತಮ್ಮ ಹಿತರಕ್ಷಣೆಯಂ
ಬೇಕಾದಂತೆಸಗುವ ಪೀ
ಡಾಕರರಿಂ ಪೀಡ್ಯಮಾಯ್ತು ಕೃಷಿಕ ಜನಾಂಗಂ"

ನಮ್ಮ ನಾಡಿನ ಬವಣೆ, ರಾಮರಾಜ್ಯ ಸ್ವಪ್ನದ ಬಗೆಗೆ ಅವರಿಗಿದ್ದ ನೋವು, ಕಾಳಜಿಗಳನ್ನಿಲ್ಲಿ ಕಾಣಬಹುದು.

"ಸಾಮದಾನಗಳಿಂದ ಸರಿದಾರಿಗೆಳಸದ
ತಾಮಸರಹ ಶುದ್ಧ ಶಠರ,
ಧೀಮಂತರೊರೆವಂತೆ ಭೇದದಂಡಗಳಿಂದ
ಲಾ ಮೂರ್ಖಜನರ ತಿರ್ದುವದು"

ಶ್ರೀ ವೆಂಕಟರಮಣ ಭಟ್ಟರು ಸಮಾಜ ಸಂಗೀತದಲ್ಲಿ ನೀಡುವ ಸಂದೇಶಗಳಲ್ಲಿ ಇದೊಂದು.

ಸೂಕ್ತಿವಾದ, ಹೊನ್ನಯ ಶೆಟ್ಟರು ತಿಳಿಸಿದಂತೆ, ಡಿವಿಜಿಯವರ ಕಗ್ಗದಂಥ ಮಹತ್ವಪೂರ್ಣ ಕೃತಿ.

ಘೋಷಣಗಳಿಂದೇನು ಭೂಷಣವೊ ಜನರ ಗುಣ
ದೋಷಗಳ ತೂಗಿ ನೋಡುವೊಡರಿಯದಿರಲು
ಭಾಷಣದೆ ಬಂದ ಭಾಗ್ಯಾಧಿಕಗಳೇನರ್ಥ,
ಶೋಷಣಕೆ ಗತಿಮಿತಿಗಳಿನ್ನೆಂದು ತಮ್ಮ,
ಹಲವು ಮಾತೇನು ಪಲ್ಲಿಲಿವಾಯಿಯಿದಿರು ಚ
ಕ್ಕುಲಿಯ ತಿನಲೆಂದಿತ್ತೊಡವಗೆ ನಲವೆಂತು

ಲಲಿತಾನುಬಂಧ ರಸಭಾವಗಳನೊಳಗೊಂಡ

ವಿಲಸತ್ ಕೃತಿಗೆ ಮೂಢನೊಲವೊಂತು ತಮ್ಮ.

'ಮಂಕುತಿಮ್ಮ'ನಂತೆ "ತಮ್ಮ" ಇಲ್ಲಿ ಕವಿಯ ಗುರಿ, ತನ್ಮೂಲಕ ಸಮಾಜದ - ರಾಷ್ಟ್ರದ - ರಾಜಕಾರಣದ ಅಂಕುಡೊಂಕುಗಳನ್ನು ಕವಿ ವಿಡಂಬಿಸಿ ಸರಿದಾರಿಗೆ ಹಚ್ಚುವ ಕೆಲಸ ಮಾಡಿದ್ದಾರೆ.

ಶ್ರೀ ವೆಂಕಟರಮಣ ಭಟ್ಟರು ಕವಿಯಾಗಿ, ಯಕ್ಷಗಾನ ಕವಿ - ಅರ್ಥಧಾರಿಯಾಗಿ, ಸಮಾಜದ ಓರ್ವ ಮುಖ್ಯಸ್ಥನಾಗಿರುವಂತೆ, ವ್ಯವಹಾರಗಳಲ್ಲಿ ನಿಷ್ಣಾತರಾಗಿದ್ದರು. 'ಸಾಹುಕಾರ'ರೆಂದೇ ಜನರಿಗೆ ಅವರು ಪರಿಚಿತರು. ಅಡಿಕೆ ವ್ಯವಸಾಯಿಯಾಗಿದ್ದಂತೆ, ಅವರು ವ್ಯಾಪಾರಿಯಾಗಿ ವ್ಯವಹಾರಿಯಾಗಿ ಸಾಮಾಜಿಕ ನ್ಯಾಯವೊದಗಿಸಲು ಹೆಣಗಿದ್ದಾರೆ.

ಸರಸತಿಯ ಕಾಲ್ವಿಡಿದು, ತಿರುಳುಗಬ್ಬವನೊರೆದು,

ಸರಸ ಕವಿ ಸಾಲಿನಲಿ ಸೇರಿಹೋದೆ,

'ಸರಸತಿ'ಯ ಕೈವಿಡಿದು, ಕರುಳ ಕುಡಿಗಳ ಪಡೆದು

ಹಿರಿದಾದ ಬಾಳ್ವೆಯಲಿ ಧನ್ಯನಾದೆ.

ಕವಿ ಶ್ರೀ ಕೈಂತಜೆ ನರಸಿಂಹ ಭಟ್ಟರು ಶ್ರೀ ಬಡೆಕಿಲರಿಗೆ ಸಲ್ಲಿಸಿದ ನಮನಗಳು ನಮ್ಮೆಲ್ಲರ ನಮನಗಳಾಗಿವೆ.

ಪ್ರಗಲ್ಭ ವಿದ್ವಾಂಸ ಕವಿ
ಕಡವ ಶಂಭು ಶರ್ಮರು

ಪುತ್ತೂರು ಪರಿಸರದ ಸಾಹಿತ್ಯ ಪರಿಜ್ಞಾನವಿಲ್ಲದ ಸಾಮಾನ್ಯ ಮಂದಿ ಕೂಡಾ ಬಲ್ಲ ಹೆಸರು ಶರ್ಮರದು. ಸಾಹಿತ್ಯಾಭಿಮಾನಿಗಳಿಗೆ, ಸಾಹಿತ್ಯಜ್ಞರಿಗಂತೂ ಅವರೆಂದರೆ ವಿಶೇಷ. ಪುತ್ತೂರಿನಲ್ಲಿ ಅವರು ಶಿಕ್ಷಕರಾಗಿದ್ದುದರಿಂದ ಅವರ ಶಿಷ್ಯ ಪರಿವಾರವೂ ದೊಡ್ಡದು. ಅವರ ಪಾಠ ಕೇಳಿಸಿಕೊಂಡ ಯಾವ ವಿದ್ಯಾರ್ಥಿಯೂ ಅವರನ್ನು ಮರೆಯುವಂತಿಲ್ಲ. ಪುತ್ತೂರು ಬೋರ್ಡ್ ಹೈಸ್ಕೂಲಿನಲ್ಲಿ ಅವರು ಪಂಡಿತರಾಗಿದ್ದುದನ್ನು ನೆನಪಿಸುವ ಮಂದಿ ಇಂದಿಗೂ ಇದ್ದಾರೆ.

ಪುತ್ತೂರು - ಮುತ್ತೂರು ಎಂಬ ಹೆಸರಿಗೆ ಬಂದುದೂ ಅವರು ಮತ್ತು ಶಿವರಾಮ ಕಾರಂತರು ಒಟ್ಟು ಸೇರಿದ ದಿನಗಳಲ್ಲಿ. ಪುತ್ತೂರಿನ ವಕೀಲ ಸಿ. ಎಸ್. ಶಾಸ್ತ್ರಿಗಳು, ಮೊಳಹಳ್ಳಿ ಶಿವರಾಯರು, ಸದಾಶಿವರಾಯರು, ಉಗ್ರಾಣ ಮಂಗೇಶ ರಾಯರು ಬಡೆಕಿಲ ಶಂಭು ಶರ್ಮರು ಆಗ ಒಂದಾಗಿ ಸಾಹಿತ್ಯ ಸಭೆ, ನಾಡ ಹಬ್ಬಗಳನ್ನೇರ್ಪಡಿಸಿ ಪುತ್ತೂರಿನ ಹೆಸರನ್ನು ಕನ್ನಡ ಸಾಹಿತ್ಯ ದಿಗಂತದಲ್ಲೂ ಬೆಳಗುವಂತೆ ಮಾಡಿದ್ದರು. ಬೆಂಗಳೂರು, ಮೈಸೂರು ಕಡೆಯಿಂದ ಬರುತ್ತಿದ್ದ ಸಾಹಿತಿಗಳು ಇಲ್ಲಿನ ಸಾಹಿತ್ಯ ಸಂಪತ್ತನ್ನು ನೋಡಿ ಬೆರಗಾಗಿದ್ದರು. ಕಡವ ಶಂಭು ಶರ್ಮರು ಇಂಥ ಉತ್ಸವದ ಸ್ವಾಗತಾಧ್ಯಕ್ಷರಾಗಿ ಮಾಡಿದ ಭಾಷಣ ಮನನೀಯವಾಗಿತ್ತು.

ಸ್ವಾಗತವು ನಿಮಗೆ ಓ ಕರ್ನಾಟಕ ಬಂಧುಗಳೇ ಎಂದು ಪ್ರಾರಂಭವಾಗುವ ಅವರ ಸ್ವಾಗತ ಗೀತೆ ಹೀಗೆ ಸಾಗುತ್ತದೆ.

ಹಲವು ಮಕ್ಕಳ ತಾಯಿ ನಮ್ಮ ಕನ್ನಡ ನಾಡು
ಕೆಳಗಿಸುವರೇನು ? ನಮ್ಮೊಡಹುಟ್ಟಿದವರಿವರ
ಕಲೆತು ಕೆಲೆಯಿಸಬೇಕು, ಕಲೆಯ ನೆಲೆಯಿಸಬೇಕು
ಕಲೆಗೊಳಿಸಬೇಕಿವರ ಕಲೆಯ ಕಳೆಯಿಸಬೇಕು
ಮಲೆ, ಗಟ್ಟ, ಬೆಟ್ಟವೊಂದೇನು ತಡೆ ? ಎಂದೆಣಿಸಿ
ನವರಾತ್ರಿಯುತ್ಸವದ ಸಾಹಿತ್ಯದುತ್ಸವದ
ನೆಪಮಾಡಿ ನಮ್ಮನ್ನು ನೇವರಿಸ ಬಂದಿರಾ ?
ನವ್ಯ ಕಾವ್ಯ ಕಲೆಯ ಬಿತ್ತನ್ನಿಲ್ಲಿ ತಂದಿರಾ
ಸವಿಯಾದ ಸಾಹಿತ್ಯ ರಸವನ್ನು ಸವಿಯುವ
ತವಕದಿಂದಲೆ ಬಂದಿರ ಬಹುದು"

"ಕನ್ನಡದ ಕಸ್ತೂರಿ ಮಿರುಗವಾ ಸಂಸ್ಕೃತದ ಚಿನ್ನಕರಡಿಗೆಯಲ್ಲಿ ತಾನಡಗಿಕೊಂಡಿತ್ತು" ಎನ್ನುವ ಕವಿಯಿಂದು ಪಾಶ್ಚಾತ್ಯರ ಸೆಂಟು, ಬಾಟಲಿಯ ಗಂಟಲೊಳಗಿದ್ದಧಿಕಗಂಧ ಬಂಧುರವಾಗಿ ಹೊಗೆ ತೋರಿಸಿಕೊಂಡು ಚೆಂದವೆಂದೆನ್ನಿಸಿದೆ ಎಂದುಸುರಿದ್ದಾರೆ. "ಮುಂದೆ ನಾವೊಂದಾಗಿ ಕೂಡಿ ಕನ್ನಡ ನಾಡ ಬೆಳಗಿ ಕನ್ನಡಿ ನಾಡು ಮಾಡಿತೋರಿಸಬೇಕು." ಎಂಬ ಹಂಬಲವನ್ನು ಶರ್ಮರು ವ್ಯಕ್ತಪಡಿಸಿದ್ದಾರೆ.

ತುಳುದೇಶ ಭಾಷಾ ವಿಚಾರವು ಇವರು ತುಳುವಿನ ಬಗ್ಗೆ ರಚಿಸಿದ ಅಮೋಘ ಕೃತಿ ಮದ್ರಾಸ ಸರಕಾರದಿಂದ ಬಹುಮಾನ ಗಳಿಸಿದೆ. ಪಾಡ್ದನಗಳ ಸಂಗ್ರಹ ತುಳುನಾಡಿನ ರಾಜರು, ಹಲವಾರು ಮತಧರ್ಮ ಗ್ರಂಥ ಪರಿಶೀಲನೆಯಿಂದ ಮೌಲಿಕ ಕೃತಿಯೆನಿಸಿದೆ. ಇವರು ವಿದ್ಯಾರ್ಥಿಯಾಗಿದ್ದಾಗಲೇ ಶ್ರೀ ಹರ್ಷನ ನಾಗಾನಂದವನ್ನು ಭಾಸನ ಪ್ರತಿಮಾ ನಾಟಕವನ್ನು ಕನ್ನಡಿಸಿದರು. ಗಾಂಧೀನಿರ್ವಾಹಂ, ಖಂಡಕಾವ್ಯ, ವಾರ್ಧಿಕ ಷಟ್ಪದಿಯಲ್ಲಿ ದ್ವಿತೀಯಾಕ್ಷರ ಪ್ರಾಸ ತ್ಯಜಿಸಿ ಬರೆದ ಕಾವ್ಯ. ಗಾಂಧೀ ಲಹರಿ, ಗಾಂಧಿವಿಜಯಂ ಹಸ್ತಪ್ರತಿ ರೂಪದಲ್ಲಿದೆಯೆಂದು ಅವರ ಮಗ ಕೆ. ವಿ. ಶರ್ಮರ ಸಂಗ್ರಹದಿಂದ ತಿಳಿದಿದ್ದೇನೆ. ಗೀತೆಯನ್ನು ಅನುಷ್ಟುಪ್ ಛಂದಸ್ಸಿನಲ್ಲಿ ಮಾಡಿದ ಅನುವಾದವನ್ನು ಅವರು ಓದಿ ಹೇಳಿದುದನ್ನು ಕೇಳಿದ್ದೇನೆ. 'ಮಾಮಕಾಃ ಪಾಂಡವಾಶ್ಚೈವ, ಕಿಮಕುರ್ವತ, ಸಂಜಯ ಎಂಬುದನ್ನು 'ಎನ್ನವರ್ ಪಾಂಡವರ್ ಮೇಣ್ ಏಂಮಾಡಿದರೊ ಸಂಜಯ' ಎಂಬ ಸುಂದರ ಅನುವಾದ ನನಗೆ ಇಂದಿಗೂ ನೆನಪಿನಲ್ಲಿದೆ. ಅಪ್ರಕಟಿತ ಕೃತಿಯಿದು. 'ಸೌಂದರನಂದ' ಅಶ್ವಘೋಷನ ಮಹಾ ಕಾವ್ಯದ ಅನುವಾದ, ಬೌದ್ಧ ಧರ್ಮ ವಿವೇಚನ ಪ್ರಧಾನವಾಗಿರುವ ಈ ಸುಂದರ ಕಾವ್ಯ ಅವರಿಗೆ ಮದ್ರಾಸ್ ಸರಕಾರದ ಬಹುಮಾನವನ್ನು ಉತ್ತಮ ಪ್ರಸಿದ್ಧಿಯನ್ನು ತಂದಿದೆ. ರಘು ವಂಶದ ಪದ್ಯಾನುವಾದ, ಶಬ್ದಾರ್ಥ ವಿಶ್ಲೇಷಣೆ ಮೊದಲಾದವು ಅವರ ಸಾಧನೆಗಳು. ಬುದ್ಧ ಚರಿತಂ, ತುಳಸೀ ರಾಮಾಯಣಗಳನ್ನು ಅವರು ಅನುವಾದಿಸಿದ್ದಾರೆಂದು ಅವರ ಪುಸ್ತಕ ಸಂಗ್ರಹದಿಂದ ಬೆಳಕಿಗೆ ಬಂದಿದೆ.

'ಗಾಂಧಿ ನಿರ್ವಾಣಂ' ಮಹಾತ್ಮಾಜಿ ಬಗ್ಗೆ ಅವರು ಬರೆದ ಸಂಸ್ಕೃತ ಕಾವ್ಯದ ಕೆಲ ಶ್ಲೋಕಗಳನ್ನು ಅವರ ಬಾಯಿಯಿಂದಲೇ ಕೇಳಿದ್ದೇನೆ. ಕದಲೀಯೋಗಿ ರಾಜಚರಿತ್ರಂ, ಡಿವಿಜಿಯವರ ಮಂಕುತಿಮ್ಮನ ಕಗ್ಗದ ಅನುವಾದವನ್ನು ಸಂಸ್ಕೃತದಲ್ಲಿ ರಚಿಸಿದ್ದು ಪ್ರತಿಭಾದಲ್ಲಿ (ಸಾಹಿತ್ಯ ಅಕಾಡೆಮಿಯ ಪತ್ರಿಕೆ) ಪ್ರಕಟವಾಗಿದೆ.

ಸಿದ್ಧಸಂಪ್ರದಾಯದ 'ಸಿದ್ಧ ಸಿದ್ಧಾಂತ ಪದ್ಧತಿ, ಚರ್ಪಟನಾಥ ಶತಕಂ, ಸಿದ್ಧಸಿದ್ಧಾಂತ ಸಂಗ್ರಹ, ಅಮರೌಘಶಾಸನಂ, ಅಮರಕಥಾ, ಅಮರಲೋಕ ಕಾವ್ಯಂ, ಆತ್ಮವಾದ, ನವನಾಥ ಕಥಾ, ಯೋಗಬೀಜಂ ಮತ್ತು ಗೋರಕ್ಷಪದ್ಧತಿ ಮುಂತಾದ ಸಂಸ್ಕೃತ ಗ್ರಂಥಗಳ ಅನುವಾದ ಮಾಡಿ ನಾಥ ಪಂಥದ ಪರಿಚಯವನ್ನು ಕನ್ನಡಿಗರಿಗೆ ಮಾಡಿಕೊಟ್ಟಿದ್ದಾರೆ.

"ವೇದಾಂತ ತರ್ಕಶಾಸ್ತ್ರಗಳ ಖಚಿತ ಪಾಂಡಿತ್ಯ, ಸಂಸ್ಕೃತ ಮತ್ತು ಕನ್ನಡಗಳಲ್ಲಿ ಅದ್ವಿತೀಯ ವಿದ್ವತ್ತು, ಆಯುರ್ವೇದದಲ್ಲಿ ಅಸಾಧಾರಣ ಪರಿಣತಿ, ಪ್ರಯೋಗಶೀಲ ಸಾಹಸ, ನಿಃಸ್ವಾರ್ಥ ನಿರ್ಲಿಪ್ತ ಧೋರಣೆಯ ಜೀವನಕ್ರಮ ಭಾಷೆಯ ಕುರಿತು ಕಟ್ಟುನಿಟ್ಟಿನ ದೃಷ್ಟಿ, ಎಲ್ಲವನ್ನೂ ಮೀರಿದ ಉದಾರ ಮನಸ್ಸಿನ ಕಡವ ಶಂಭು ಶರ್ಮರು ಜನಾದರಣೀಯರಾಗಿದ್ದರು. ಸಾಹಿತ್ಯ ದಿಗ್ಗಜರಾದ ಡಿವಿಜಿ ಮತ್ತು ಮಂಜೇಶ್ವರ ಗೋವಿಂದ ಪೈಗಳ ಮೆಚ್ಚುಗೆಗೆ ಪಾತ್ರರಾಗಿದ್ದರು. ದಕ್ಷಿಣ ಕನ್ನಡ ಜಿಲ್ಲೆಯ ಪಂಡಿತಮಾನ್ಯರಾಗಿದ್ದರು." ಶ್ರೀ ವಿ. ಬಿ. ಮೊಳೆಯಾರರು ಶರ್ಮರ ಬಗ್ಗೆ ಬರೆದ ಈ ಸಾಲುಗಳು ಅವರ ಅಸಾಮಾನ್ಯ ವ್ಯಕ್ತಿತ್ವಕ್ಕೆ ಹಿಡಿದ ಕನ್ನಡಿಯಾಗಿದೆ.

ಅವರು ಶ್ರೀ ಶಿವರಾಮ ಕಾರಂತರ ಒಡನಾಡಿಯಾಗಿದ್ದರು. ಕಾರಂತರು ಶ್ರೀಯುತರ ಬಗ್ಗೆ ಹೀಗೆ ಬರೆದಿದ್ದಾರೆ.

'ಅವರ ಧೀಮಂತ ಸಾಹಸಪ್ರಿಯ ಜೀವನ ನನಗೆ ತುಂಬಾ ಮೆಚ್ಚುಗೆಯಾದುದು. ಅವರು ಬದುಕಿನೊಡನೆ ಎಲ್ಲಾ ನೋವುಗಳನ್ನು ಶ್ರೀಕಂಠನಂತೆ ನುಂಗಿ ಕಾದಾಡಿದ ಸತ್ಯಪ್ರಿಯ ವ್ಯಕ್ತಿ. ಅವರದೊಂದು ಆದರ್ಶ ಜೀವನ. . . ಅವರ ಮನಸ್ಸು ಕೊನೆಗಾಲದ ತನಕವೂ ಜಡವಾಗಿ ಕುಳಿತಿರುವ ಹರಿತವಾದ ಪ್ರವಾಹವಾಗಿತ್ತು. ಕಾಲನ್ನು ಕಳೆದುಕೊಂಡು ಮನೆಯಲ್ಲಿ ಅಜ್ಞಾತವಾಸ ಮಾಡುತ್ತಿದ್ದ ಮುಪ್ಪಿನಲ್ಲೂ ಅವರ ಮನಸ್ಸು ಮಾತ್ರ ಎಂದೂ ವಿರಕ್ತಿಯನ್ನು ಪಡೆಯಲಿಲ್ಲ. ಹಲವರಿಗೆ ಪಾಠ ಹೇಳಿದರು. ಹಲವು ಗ್ರಂಥಗಳನ್ನು ಅನುವಾದ ಮಾಡಿದರು. ಹಳೆಯ ಕಾವ್ಯ ಪ್ರಕಾರಗಳಲ್ಲಿ ಇಂದೂ ಬರೆದು ಗೆಲ್ಲಬಹುದು ಎಂದು ಪ್ರಯೋಗದಿಂದ ಸಾಧಿಸಿ ತೋರಿಸಿದರು. ಅವರ ಬದುಕು ಪವಿತ್ರ. ಮಾತುಗಳು ಸ್ಪಷ್ಟ, ಮನಸ್ಸು ಉದಾರ. . . . ಹಳೆಯ ಪಂಡಿತ ವರ್ಗಕ್ಕೆ ಅವರೊಂದು ಮಾದರಿಯಾಗಿದ್ದರು. ಆದರೆ ಪಾಂಡಿತ್ಯ ಪ್ರದರ್ಶನ ಎಂದೂ ಅವರ ದಾರಿಯಾಗಿರಲಿಲ್ಲ."

ಶ್ರೀ ಕಾರಂತರು ಹೇಳುವಂತೆ, ಕಾಲು ಕಳೆದು ಕೊಂಡದ್ದು ಅವರಿಗೆ ವೈಯಕ್ತಿಕವಾಗಿ ಆಘಾತ ತಂದರೂ ಅವರ ಸಾಹಿತ್ಯ ಸಾಧನೆಗೆ ವರವಾಗಿ ಪರಿಣಮಿಸಿತಂತೆ. ಯಾಕೆಂದರೆ ಅವರು ಕುಳಿತಲ್ಲಿ ಇರತಕ್ಕಂತಹ ನಿಷ್ಕ್ರಿಯ ವ್ಯಕ್ತಿಯಲ್ಲ. ಪಾದರಸದಂತೆ ಪಾರದರ್ಶಕ ವ್ಯಕ್ತಿತ್ವ ಅವರದು. ಅವರು ಒಳ್ಳೆಯ ಮಾದರಿ ಕೃಷಿಕರಾಗಿ ದುಡಿದವರು. ಗೋಪಾಲನೆ ಮಾಡಿ ಮನೆಮನೆಗೆ ಹಾಲುಪೊಟ್ಟಣ

ಒದಗಿಸಿದವರು. ತರಕಾರಿ ಕಟ್ಟಿಗೆ ಕೂಡಾ ಸರಬರಾಜು ಮಾಡಿದವರು. ಜನರೊಡನೆ ಸದಾ ಮಾತನಾಡುವುದು, ಹೊಸ ಪ್ರಯೋಗ ನಡೆಸುವುದು, ಹಳೆಯ ಅಭಿರುಚಿ ಸಾಹಿತ್ಯದ ಸ್ವಾರಸ್ಯವನ್ನು ತಾವುಂಡು ಇತರರಿಗೂ ನೀಡುವುದು ಅವರ ಜಾಯಮಾನವಾಗಿತ್ತು.

ಪ್ರಕಾಂಡ ಪಂಡಿತ ಕವಿ
ಸೇಡಿಯಾಪು ಕೃಷ್ಣ ಭಟ್ಟರು

1953ರ ಒಂದು ರಾತ್ರಿ. ಪುತ್ತೂರಿನಲ್ಲಿ ಪ್ರಸಿದ್ಧ ನ್ಯಾಯವಾದಿಗಳೂ ವಿದ್ವಾಂಸರೂ ಆಗಿದ್ದ ಶ್ರೀ ಸಿ. ಎಸ್. ಶಾಸ್ತ್ರಿಗಳಲ್ಲಿ ನನ್ನ ಚೊಚ್ಚಲ ಕೃತಿ ಸಂಸ್ಕೃತ ನಾಟಕಕ್ಕೆ ಮುನ್ನುಡಿಗಾಗಿ ಕೊಟ್ಟಿದ್ದು ಅವರ ಬಳಿಗೆ ಹೋಗಿದ್ದೆ. ಅಂದು ಅಲ್ಲಿಗೆ ಶುಭ್ರ ಖಾದೀಧಾರಿಯಾದ ಮಹನೀಯರೊಬ್ಬರ ಆಗಮನವಾಯಿತು. ಹಿರಿಯರಾದ ಶ್ರೀ ಶಾಸ್ತ್ರಿಗಳು ಅವರನ್ನು ನನಗೆ ಪರಿಚಯ ಮಾಡಿಕೊಟ್ಟರು. ನನ್ನನ್ನು ಸಂಸ್ಕೃತಾಭ್ಯಾಸಿ ಬರೆಹಗಾರ ಎಂದು ಅವರಿಗೆ ಹೇಳಿದರು. ಅದು ನನಗೆ ಸೇಡಿಯಾಪು ಕೃಷ್ಣಭಟ್ಟರ ಪ್ರಥಮ ದರ್ಶನ. ಶ್ರೀ ಶಾಸ್ತ್ರಿಗಳೊಡನೆ ಸಾಹಿತ್ಯದ ವಿವಿಧ ಪ್ರಕಾರಗಳು ಹಾಗೂ ವಿಚಾರಗಳ ಮೇಲೆ ನಡುರಾತ್ರಿಯ ತನಕ ಚರ್ಚೆ ಸಾಗುತ್ತಲೇ ಇತ್ತು. ಅದನ್ನು ಕೇಳುವ ಸುಯೋಗ ಲಭಿಸಿದ್ದಕ್ಕೆ ನನಗೆ ಬಹಳ ತೃಪ್ತಿಯೆನಿಸಿತು.

ಶ್ರೀ ಸೇಡಿಯಾಪು ಕೃಷ್ಣಭಟ್ಟರು ಕನ್ನಡದ ಮೊದಲ ಸಾಲಿನ ಕವಿ, ಕತೆಗಾರ, ಬರೆಹಗಾರ, ವಿದ್ವಾಂಸ ಎಂಬ ಖ್ಯಾತಿಯನ್ನು ಆಗಲೇ ಗಳಿಸಿದ್ದರು. ಅವರ ಪುಣ್ಯ ಲಹರಿ ಅಥವಾ ಶಬರಿ, ಅಶ್ವಮೇಧ, ಕೃಷ್ಣಾಕುಮಾರಿ, ತರುಣ ಧಮನಿ ಉತ್ತಮ ಕಥನ ಕವನಗಳೆಂದು ಹೆಸರಾಗಿದ್ದವು. ಕನ್ನಡದಲ್ಲಿ ಕಥನ ಕವನವನ್ನು ತಂದ ಆದ್ಯಪ್ರವರ್ತಕರಲ್ಲಿ ಕಡೆಂಗೋಡ್ಲು - ಸೇಡಿಯಾಪು ಪ್ರಮುಖರೆಂದು ಆಗಲೇ ಖ್ಯಾತರಾಗಿದ್ದರು. "ಚಂದ್ರ ಖಂಡ" ಎಂಬ ಸಂಕಲನದಲ್ಲಿ ಅವರ ಈ ಕವನಗಳು ಸಂಕಲಿತವಾಗಿ ಆಪ್ಯಾಯಮಾನವಾಗಿದೆ. 'ಶಬರಿ' ಪಿರಿಯಕ್ಕರದಲ್ಲಿ ಬರೆದ ಕಾವ್ಯ. ಇದು ಸೇಡಿಯಾಪು ಅವರಿಗೆ ವಿಶೇಷ ಅರ್ಹತೆಯನ್ನು ಒದಗಿಸಿದ ಕಾವ್ಯ. 'ಪಳಮೆಗಳು' ಎಂಬ ಕಥಾಸಂಕಲನವನ್ನು ಅವರು ನೀಡಿದ್ದಾರೆ. ಸಣ್ಣ ಕಥೆಗಳ ಉದಯದ ಕಾಲವದು, ಪಳಮೆಗಳು ಅಂಥ ದಿನಗಳಲ್ಲಿ ವಿಶೇಷ ಖ್ಯಾತಿಯನ್ನು ಪಡೆದಿದೆ. ಅವರು ತಾವೇ ಹೇಳುವಂತೆ "ಹೆಚ್ಚು ಬರೆದವನಲ್ಲ"ವಾದರೂ ಬರೆದುದೆಲ್ಲವೂ ಅಪ್ಪಟ ಚಿನ್ನ. ಪುಟವಿಟ್ಟ ಪುತ್ಥಳಿ. ಕಾಲಾಂತರಕ್ಕೂ ಉಳಿಯುವ ಯೋಗ್ಯತೆಯುಳ್ಳದ್ದು.

ವ್ಯಾಕರಣ, ಛಂದಸ್ಸುಗಳ ಬಗ್ಗೆ ನಿಖರವಾಗಿ ಹೇಳಬಲ್ಲವರು ಸೇಡಿಯಾಪು. 1932ರಲ್ಲಿ ಮಡಿಕೇರಿಯಲ್ಲಿ ಜರಗಿದ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ 'ಕನ್ನಡ ಛಂದಸ್ಸು' ಎಂಬ ಲೇಖನವನ್ನು

ಓದಿ ಡಿ. ವಿ. ಗುಂಡಪ್ಪನವರು, ಸುಬೋಧ ರಾಮರಾಯರು, ಬೆಳ್ಳಾವೆಯವರು ಮುಂತಾದ ಹಿರಿಯರಿಂದಲೂ ಸಭಾಸದರಿಂದಲೂ ಮೆಚ್ಚುಗೆ ಗಳಿಸಿದರು. ಪಂಚಮೀ ವಿಭಕ್ತಿ ವಿಷಯದಲ್ಲಿ ಅವರು ಬರೆದ ಲೇಖನ ವಿಶೇಷ ಮೆಚ್ಚುಗೆಗೆ ಪಾತ್ರವಾಯಿತು. ತೀನಂಶ್ರೀಯವರು ಸೇಡಿಯಾಪು ಅವರನ್ನು 'ಪಂಚಮೀವಿಭಕ್ತಿ' ಎಂದೇ ಕರೆಯುವ ಮೂಲಕ ಗೌರವಿಸುತ್ತಿದ್ದರಂತೆ. ಹೀಗೆ ಅವರೊಬ್ಬ ವೈಯಾಕರಣ ಎಂಬ ಖ್ಯಾತಿಗೆ ಪಾತ್ರರಾದರು.

'ಕನ್ನಡ ವರ್ಣಗಳು' ಎಂಬ ಪುಸ್ತಕದಲ್ಲಿ ವ್ಯಾಕರಣಕ್ಕೆ ಸಂಬಂಧಿಸಿದ ಮೂರು ಉಪನ್ಯಾಸಗಳಿದ್ದವು. ಧಾರವಾಡದಲ್ಲಿ ಅವರು ಓದಿದ ಈ ಪ್ರಬಂಧಗಳು ವಿಚಾರಪರಿಪ್ಲುತವಾಗಿ ವಿದ್ವಾಂಸರಿಂದ ಮಾನ್ಯವಾಗಿದ್ದವು. ಈ ಉಪನ್ಯಾಸವನ್ನು ಕೇಳಲು ಮಾಸ್ತಿ, ಬೆಟಗೇರಿ, ಶಂಬಾ ಜೋಶಿ ಬಂದಿದ್ದರಂತೆ. ಪಂಚಮುಖಿ ಅಧ್ಯಕ್ಷರಾಗಿದ್ದರಂತೆ. ಈ ಕೃತಿಗೆ ಮದ್ರಾಸ ಸರಕಾರದಿಂದ ಬಹುಮಾನ ಬಂದಿತು.

ಛಂದಸ್ಸಿನ ಬಗ್ಗೆ ಅವರು ವ್ಯಾಕರಣದಷ್ಟೇ ಆಸಕ್ತಿ ವಹಿಸಿದ್ದರು. ಅನುಷ್ಟುಪ್‌ನಲ್ಲಿ ಅಕ್ಷರಗಳೆಷ್ಟು ಎಂಬ ಬಗ್ಗೆ ಅವರು ತಲೆಕೆಡಿಸಿಕೊಂಡಿರುವರು. ವೇದದಲ್ಲಿರುವ ಏಳು ತೆರನಾದ ಛಂದಸ್ಸುಗಳು ಛಂದೋ ನಿಯಮವನ್ನು ಅವರು ಅಭ್ಯಾಸ ಮಾಡಿದ್ದಾರೆ. ಗಾಯತ್ರೀ ಛಂದಸ್ಸಿನ ಲಕ್ಷಣವನ್ನು ವಿಶ್ಲೇಷಿಸಿದ್ದಾರೆ. ಹೀಗೆ ಕ್ಲಿಷ್ಟವಾದ ಸಮಸ್ಯೆಗಳನ್ನೆತ್ತಿಕೊಂಡು ಮಥನ ಮಾಡಿ ತೀರ್ಮಾನಕ್ಕೆ ಬರುವ ಕೆಲಸ ಸಂಶೋಧನೆಯ ತೆರನಾದುದು. ಅದರಲ್ಲಿ ಅವರು ಯಶಸ್ವಿಯಾದ ವಿದ್ವಾಂಸರು, ಎಲ್ಲರಿಂದಲೂ ಸೈ ಎನಿಸಿಕೊಂಡವರು.

'ತಥ್ಯದರ್ಶನ' ಅವರ ಮಹತ್ವದ ಕೃತಿ. ಆರ್ಯದ್ರಾವಿಡ ಮೊದಲಾದ ವಿಚಾರಗಳಲ್ಲಿ ಸಾಕಷ್ಟು ಆಳವಾದ ಅಭ್ಯಾಸ ನಡೆಸಿ ಭಾರತದ ಪ್ರಾಚೀನ ಗ್ರಂಥಗಳ ಅಧ್ಯಯನ, ಪಾಶ್ಚಾತ್ಯ ಸಿದ್ಧಾಂತಗಳಲ್ಲಿರುವ ದೋಷಗಳ ಅರಿವಿನಿಂದ ಸತ್ಯವನ್ನು ಕಂಡಿದ್ದಾರೆ. ಆರ್ಯರು ಯಾರು ? ಅವರ ನೆಲೆಯೇನು ? ಎಂಬುದನ್ನು ಭಾರತೀಯ ಸಿದ್ಧಾಂತದಂತೆ ನಿರೂಪಿಸಿದ ಕೀರ್ತಿ ಅವರದು. ಇದನ್ನು ಶ್ರೀ ಪಾದೆಕಲ್ಲು ನರಸಿಂಹ ಭಟ್ಟರು ಇಂಗ್ಲಿಷ್‌ಗೆ ಅನುವಾದಿಸಿದ್ದಾರೆ. ಈ ಅನುವಾದ ಗ್ರಂಥದ ಬಿಡುಗಡೆಯಂದೇ ಅವರು ವಿಧಿವಶರಾದುದು. ಕಾಕತಾಳೀಯವಾದರೂ ಅವರ ಚೇತನಕ್ಕೆ ಸಂದ ಗೌರವ ! ಮರಣೋತ್ತರ ಪಂಪ ಪ್ರಶಸ್ತಿಯನ್ನು ನೀಡಿ ಸರಕಾರ ಅವರನ್ನು ಕೊನೆಗಾದರೂ ಸೂಕ್ತವಾಗಿ ಗೌರವಿಸಿದೆ. ಉಡುಪಿಯ ಗೋವಿಂದ ಪೈ ಸಂಶೋಧನ ಕೇಂದ್ರವು ಸೇಡಿಯಾಪು ಅವರ ಹೆಸರಿನಲ್ಲಿ ದತ್ತಿಯನ್ನು ಸ್ಥಾಪಿಸಿ ಕಾರ್ಯವೆಸಗುವಂತೆ ಅವರ ಪುತ್ರರು ಹಾಗೂ ಅಭಿಮಾನಿಗಳು ವ್ಯವಸ್ಥೆ ಮಾಡಿದ್ದಾರೆ.

"ಹೆಚ್ಚು ಬರೆದವನಲ್ಲ, ನಿಚ್ಚ ಬರೆದವನಲ್ಲ, ಮೆಚ್ಚಿಸಲು ಬರೆಯುವ
ಭ್ಯಾಸವಿಲ್ಲ, ಇಚ್ಚೆಗೆದೆಯೊಪ್ಪಿ ಬಗೆ, ಬಿಚ್ಚಿದರೆ ಕಣ್ಗೆಮಾಯ್, ಮೆಚ್ಚುವಂದದಿ
ತಿದ್ದಿತೀಡಿ ಬರೆದೆ"

ಇದು ಸೇಡಿಯಾಪು ಅವರ ನಿಲುವು. ಅವರ ಪ್ರತಿಯೊಂದು ಅಕ್ಷರ ವಿನ್ಯಾಸವೂ ಅಷ್ಟೊಂದು ಅಚ್ಚುಕಟ್ಟು. ಅಷ್ಟೊಂದು ಗರಿಮೆಯುಳ್ಳದ್ದು.

ಸಾಹಿತ್ಯ ಉಗ್ರಾಣ
ಉಗ್ರಾಣ ಮಂಗೇಶರಾಯರು

ಕನ್ಯಾನದಲ್ಲಿ ಧರ್ಮಸ್ಥಳ ಮೇಳದವರು ನಡೆಸುವ ಯಕ್ಷಗಾನ ಪ್ರದರ್ಶನ ನೋಡಲು ಹಿರಿಯ ವಕೀಲರೂ ವಿದ್ವಾಂಸರೂ ಆದ ಶ್ರೀ ಸಿ. ಎಸ್. ಶಾಸ್ತ್ರಿಗಳು ಉಗ್ರಾಣ ಮಂಗೇಶ ರಾಯರು ಬರುವರೆಂದು ಕಲಾವಿದ ಕುರಿಯ ವಿಠಲ ಶಾಸ್ತ್ರಿಗಳು ನನಗೆ ತಿಳಿಸಿದ್ದರು. ಶ್ರೀ ವಿಠಲ ಶಾಸ್ತ್ರಿ - ಕೋಳ್ಯೂರು ರಾಮಚಂದ್ರ ರಾಯರ ಜೋಡಿ ಆಗ ಕನ್ನಡ ನಾಡಿನಲ್ಲಿಯೇ ದಿಗ್ವಿಜಯ ಸಾಧಿಸಿದ ದಿನಗಳವು. ಶ್ರೀ ಸಿ. ಎಸ್. ಶಾಸ್ತ್ರಿಗಳೊಂದಿಗೆ ಉಗ್ರಾಣ ಮಂಗೇಶ ರಾಯರನ್ನು ಅಂದು ನೋಡುವ ಅವಕಾಶ ನನಗೆ ಲಭ್ಯವಾದುದು ಮತ್ತು ಅವರನ್ನು ಉಪಚರಿಸುವ ಹಾಗೂ ಮಾತನಾಡುವ ಸುಯೋಗ ಒದಗಿದುದು ಮನಸ್ಸಿಗೆ ಮುದ ತಂದಿತ್ತು. ಕಲೆಯ ಬಗ್ಗೆ ಅವರ ಆಸಕ್ತಿ ಸಾಹಿತ್ಯದ ಬಗೆಗೆ ಅವರು ಇರಿಸಿ ಕೊಂಡಷ್ಟೇ ಪ್ರಬಲ ಎಂಬುದನ್ನು ಆಗ ನಾನು ಮನಗಂಡೆ.

"ಬಾಲಸಾಹಿತ್ಯ"ದಲ್ಲಿ ಪಂಜೆ, ಎಂ. ಎನ್. ಕಾಮತ್ ಕಾರಂತರಂತೆ ಉಗ್ರಾಣರ ಹೆಸರು ಚಿರಸ್ಥಾಯಿಯಾದುದು. ಕನ್ನಡದ ಎಷ್ಟೋ ಪಠ್ಯಪುಸ್ತಕಗಳಲ್ಲಿ 'ಉಮರಾ' ಎಂಬ ಹೆಸರಿನ ಬರಹಗಳನ್ನು ಓದಿದ ನೆನಪು ಹಸಿರಾಗಿಯೇ ಇದೆ. ಯಕ್ಷಗಾನ ಬಯಲಾಟದಲ್ಲಿ ಅವರಿಗೆ ಆಸಕ್ತಿ ಇದ್ದಂತೆಯೇ ತಾಳಮದ್ದಳೆ, ಸಂಗೀತ ಗೋಷ್ಠಿಗಳಲ್ಲಿಯೂ ಆದರವಿತ್ತು. ವಿದ್ಯಾರ್ಥಿಗಳನ್ನು ಪ್ರೀತಿಸುತ್ತಿದ್ದ ಆದರ್ಶ ಅಧ್ಯಾಪಕರಾಗಿದ್ದರು. ಭಾಷಾ ಸೇವೆ, ಸಾಹಿತ್ಯ ಸೇವೆ, ಸಮಾಜ ಸೇವೆ ಎಲ್ಲವೂ ಅವರ ದೃಷ್ಟಿಯಲ್ಲಿ ಕರ್ತವ್ಯ ಕರ್ಮಗಳೆನಿಸಿದ್ದವು.

ಅವರು ಮಾಡುತ್ತಿದ್ದ ಪಾಠ ವಿದ್ಯಾರ್ಥಿಗಳಿಗೆ ಖುಷಿ ನೀಡುತ್ತಿತ್ತು. ಅಂದವಾಗಿ ಹಾಡುವುದನ್ನು ಬಲ್ಲ ಅವರು ಅಭಿನಯವನ್ನು ಜೊತೆಗೂಡಿಸಿ ಮಕ್ಕಳ ಮನಸ್ಸನ್ನು ಗೆಲ್ಲುತ್ತಿದ್ದರು. ಕಾವ್ಯಾಭ್ಯಾಸ ವಿಮರ್ಶೆಯಲ್ಲಿ ಅವರು ಪರಿಣತರಾಗಿದ್ದರು. ವ್ಯಾಕರಣವನ್ನು ಕೂಡಾ ಸ್ವಾರಸ್ಯಪೂರ್ಣವಾಗಿ ವಿವರಿಸುವ ಕಲೆ ಅವರದಾಗಿತ್ತು. ಎಂದೂ ಅವರ ವಿದ್ಯಾರ್ಥಿಗಳಿಂದ ಕೇಳಿದ್ದೇನೆ. ನೂತನ ಬಾಲ ವ್ಯಾಕರಣ ಮತ್ತು ನೂತನ ಶಾಲಾ ವ್ಯಾಕರಣ ಅವರು ರಚಿಸಿದ ಅಚ್ಚು ಮೆಚ್ಚಿನ ಪಠ್ಯಪುಸ್ತಕಗಳಾಗಿದ್ದವು. ಅವರು ಮಕ್ಕಳಿಗಾಗಿ ಬರೆದ ವೆಂಕಣ್ಣ ಭಟ್ಟರು ಮೂರು ಕಾಗೆ ಹಾರಿದ ನಾಟಕದಲ್ಲಿ ನನಗೆ ಅಭಿನಯಿಸಿದ ನೆನಪಿದೆ. ದ್ರೋಣ ದ್ರುಪದ ಸಂವಾದವನ್ನಂತೂ ಹತ್ತಾರು ಬಾರಿ ನಾವು ವಿದ್ಯಾರ್ಥಿಗಳಾಗಿರುವಾಗ ಆಡಿದ್ದುಂಟು. ಸೊಹ್ರಾಬ್ - ರುಸ್ತುಂ ಕೂಡಾ ಅಭಿನಯಿಸಿದ ನಾಟಕವೇ.

"ಉಗ್ರಾಣರ ಸಾಹಿತ್ಯ ಕ್ಷೇತ್ರ ವಿಸ್ತಾರವಾದುದು. ಅವರು ಸುಮಾರು 50 ಕವನಗಳನ್ನು 50 ಸಾಹಿತ್ಯ ವಿಮರ್ಶೆ ಮತ್ತು ಲೇಖನಗಳನ್ನು ಮಕ್ಕಳಿಗಾಗಿ 10 ಚಿಕ್ಕ ಕಥೆಗಳನ್ನು ಮೂರು ನಾಲ್ಕು ನಾಟಕಗಳನ್ನು ಬರೆದಿದ್ದಾರೆ. ಅವರು ಬರೆದುದರಲ್ಲಿ ಪದ್ಯಕ್ಕಿಂತ ಹೆಚ್ಚು ಭಾಗ ಗದ್ಯ ಭಾಗ. ಅವರು ಪ್ರಮುಖವಾಗಿ ಗದ್ಯ ಲೇಖಕರು. ಹೊಸಗನ್ನಡ ಭಾಷೆಯ ಬೆಳವಣಿಗೆಗೆ ಕಾರಣರಾದವರಲ್ಲಿ

ಉಗ್ರಾಣರು ಒಬ್ಬರು. ಅವರು ಬರೆದ ನೇಮಿಚಂದ್ರ, ರತ್ನಾಕರ ವರ್ಣಿ, ಜನ್ನ ಮೊದಲಾದ ಅವರ ಕಾವ್ಯ ವಿಮರ್ಶೆ ಇಂದು ಬಾಲ ಸಾಹಿತ್ಯವೆಂದು ಹೇಳಲಾರೆವು. ಆದರೆ ಹಿಂದೆ ನಾಲ್ಕರಿಂದ ಎಂಟನೆಯ ತರಗತಿಯವರೆಗಿನ ಪಠ್ಯಪುಸ್ತಕಗಳಲ್ಲಿ ಉಗ್ರಾಣರ ಹೆಚ್ಚಿನ ಲೇಖನಗಳು ಸೇರ್ಪಡೆಯಾಗಿದ್ದವು. ಕವಿಶಿಷ್ಯ ಮುದ್ದಣ, ಕುಮಾರ ವ್ಯಾಸ ಮೊದಲಾದವರ ಜೀವನ ಚಿತ್ರಗಳು ಸರಳವಾದ ಶೈಲಿಯಲ್ಲಿ ಬಾಲ ಸಾಹಿತ್ಯವೇ ಆಗಿದ್ದಿತು. ಅವರ ಮಹತ್ತರ ಸಾಧನೆಯೆಂದರೆ ರತ್ನಾಕರವರ್ಣಿಯ ಭರತೇಶ ವೈಭವವೆಂಬ ಮಹಾಕಾವ್ಯವನ್ನು ತಾಳೆಯ ಓಲೆಗಳಿಂದ ಸಂಪಾದಿಸಿ ಪ್ರಕಟಿಸಿದುದು. ಇದೇನೂ ಬಾಲಸಾಹಿತ್ಯವಲ್ಲ. ಆದರೆ ಮಂಗೇಶ ರಾಯರಿಗೆ ಕೀರ್ತಿ ತಂದ ಕಾವ್ಯ ಭರತೇಶ ವೈಭವ ! ಯಾವ ಮಂಗೇಶ ರಾಯರು ? ಭರತೇಶ ವೈಭವದ ಮಂಗೇಶ ರಾಯರೇ ? ಎಂದು ಜನ ಪ್ರಶ್ನಿಸುತ್ತಿದ್ದರು."

ಬಿ. ಲೀಲಾ ಭಟ್ ಅವರು ಉಗ್ರಾಣರ ಬಗ್ಗೆ ಬರೆದ ಸಾಲುಗಳು ಅವರ ಸಹಜ ವ್ಯಕ್ತಿತ್ವವನ್ನು ಸೂಚಿಸುತ್ತವೆ. ಶ್ರೀಮತಿಯವರು ಉಗ್ರಾಣರ ಕೃತಿಗಳ ಬಗ್ಗೆ ಸಾಕಷ್ಟು ಅಧ್ಯಯನ ನಡೆಸಿ ಕೃತಿ ರಚಿಸಿದ್ದಾರೆ.

"ಹೆಸರಿಲ್ಲದೊಂದು ಪಟ್ಟಣವಿದೆ
ಅದರಲ್ಲಿ ಹೆಸರಾಂತ ಯಾರಿಲ್ಲಅರಸು
ಹುಸಿ ದೇವಿಯೊಡನೆ ಸಂತಸದಿಂದ
ರಾಜ್ಯವಾಳುತ್ತಿದ್ದನು ಮುದದಿ"

"ಹಲ್ಲಿ ಕೂತಿರುವೆ ಏಕಲ್ಲಿ ? ಆ ಬಿಲ್ಲಿ ನಿನಗಾಗಿ ಕಾಯುವುದು ಹಸಿವಾಗಿ" "ಎನ್ನ ಮುದ್ದಿನ ಗಿಣಿಯೇ ಬಾರೆನ್ನ ಮುದ್ದಿನರಗಿಣಿ" ಎಂಬ ಕವನಗಳು ವಾತ್ಸಲ್ಯವನ್ನು ಸೂಸುವ ಕವನಗಳಾಗಿವೆ. ಅವರ ಕವನಗಳಲ್ಲಿ ನೀತಿ ಬೋಧೆ ಹಾಸುಹೊಕ್ಕಾಗಿದೆ. ಕಾವ್ಯದ ಕೊನೆಗೆ ಬುದ್ಧಿವಾದದ ಮಾತುಗಳು ತುಂಬಿವೆ. ಮಕ್ಕಳ ಮನಸ್ಸಿನಲ್ಲಿ ಅಂಟಿನಿಲ್ಲಬಲ್ಲ ಮಾತುಗಳನ್ನು ಅವರು ಕವಿತೆಗಳಲ್ಲಿ ಸೇರಿಸಿದ್ದಾರೆ.ಚಿಕ್ಕ ಮಕ್ಕಳ ಮನಸ್ಸಿಗೊಪ್ಪುವ ಕತೆಗಳನ್ನು ಅವರು ರಚಿಸಿದ್ದಾರೆ. 'ಹುಲಿ ಮಾದಣ್ಣ' ನಮಗೆ ಚಿಕ್ಕಂದಿನಲ್ಲಿ ಪಾಠಪುಸ್ತಕದಲ್ಲಿ ಇದ್ದ ಕತೆ. ಹುಲಿಯ ಬೇಟೆಗೆ ಹೋದಾಗ ಹುಲಿಯನ್ನು ಕಂಡು ಹೆದರಿ ಓಡಿಹೋದ ಮಾದಣ್ಣ ಬಿದ್ದು, ಹುಲಿ ಅವನ ಮೇಲೆ ಎರಗಿದಾಗ ಕೋವಿಯಿಂದ ಹೊರಬಿದ್ದ ಗುಂಡೇಟಿಗೆ ಹುಲಿ ಸತ್ತು ಹೋಗುತ್ತದೆ. ಮಾದಣ್ಣ ಮಾತ್ರ ಹುಲಿಯನ್ನು ಕೊಂದ ವೀರ ಎನಿಸುತ್ತಾನೆ. ಕಂಬಳಿಯ ಕತೆ, ಇಲಿಯ ಕತೆಗಳೆಲ್ಲ ನೀತಿ ಬೋಧಕವಾಗಿವೆ. ಇಲಿ ಬೆಕ್ಕಿಗೆ ಹೆದರಿದಾಗ ಸುಂದರ ಹುಡುಗಿಯನ್ನಾಗಿ ಮಾಡಿ ಮದುವೆ ಮಾಡಲು ಹೊರಟಾಗ ಯಾರೂ ಅವಳಿಗೆ ತಕ್ಕವರು ಸಿಗುವುದಿಲ್ಲ. ಬೆಟ್ಟದ ಮೇಲೊಂದು ಇಲಿ ಕೊರೆಯುತ್ತಿರುವುದನ್ನು ಕಂಡ ಹುಡುಗಿ ಅವನಷ್ಟು ಶೂರನು ಇನ್ನೊಬ್ಬನಿಲ್ಲ ಎನ್ನುವಾಗ ಮತ್ತೆ ಇಲಿಯಾಗುವ ಕತೆ 'ಹುಟ್ಟುಗುಣ ಗಟ್ಟ ಹತ್ತಿದರೂ ಬಿಡದು' ಎಂಬ ನೀತಿಯನ್ನು ಬೋಧಿಸುವಂತೆ, ಇವರು ಮಕ್ಕಳ ಮನಸ್ಸನ್ನು ಸೆರೆಹಿಡಿಯಲು ಶಕ್ತರಾದರು.

ಕುಂದಾಪುರದಲ್ಲಿ 1903ರಲ್ಲಿ ಜನಿಸಿದ ಶ್ರೀಯುತರು ಪುತ್ತೂರಿನಲ್ಲಿ ಸೇವೆ ಸಲ್ಲಿಸುತ್ತಿದ್ದರು. ಕನ್ನಡ ಸಾಹಿತ್ಯದ ಉಗ್ರಾಣವೆನಿಸಿದ ಮಂಗೇಶ ರಾಯರು ಸಾಹಿತಿಯಾಗಿ ನಾಡಿನ ಮಕ್ಕಳ ಅಚ್ಚುಮೆಚ್ಚುನವರಾಗಿ ಬಾಳಿದ ಮಹನೀಯರು.

ಚೆಂಗಲವೆಯ
ಶ್ರೀ ಪಾಂಡೇಶ್ವರ ಗಣಪತಿರಾಯರು

"ಶ್ರೀ ಪಾಂಡೇಶ್ವರ ಗಣಪತಿರಾಯರೆಂದರೆ ನಮ್ಮ ತುಳುನಾಡಿನದೊಂದು ಹಾಡು ಹಕ್ಕಿ, ಹಾರು ಹಕ್ಕಿ, ಹಾಡಿ ಏರುತ್ತಲೂ ಏರಿ ಹಾಡುತ್ತಲೂ ಇರುವ ಶೆಲ್ಲಿಯ ಬಾನಕ್ಕಿಯಂತೆ, ಇದೂ ರೆಂಬೆಗಳಲ್ಲಿ ತಂಗಿರುವಂದಲ್ಲ. ರೆಕ್ಕೆಗಳಲ್ಲಿ ಈಸಾಡುವಂದು ಗೂಡಿನ ನೆರೆಯಿಂದಲ್ಲ, ಮೋಡಗಳ ಮರೆಯಿಂದ ಹಾಡುವ ಹಕ್ಕಿ, ತನಗೆ ಗರಿ ಚಿಗುರುವಂದಿಗೆ ಬಯಲಾದ ಸುಖಗಳ ಕನಸು ರೆಕ್ಕೆ ನಿಗುರುವೊಂದಕ್ಕೆ ಕವಿತಂದ ದುಖಗಳ ನೆನಸೂ ಅವಷ್ಟೇ ಅದರ ಬೆಳವಣಿಗೆಯ ತಿನಿಸು. ಈ ಇಬ್ಬನಿಗಳನ್ನು ಸೇದಿ ಬೆಳೆದ ಹಕ್ಕಿ ಹೇಗೆ ತನೇ ಹಾಡದಿರಬೇಕು, ಅದರ ಹಾಡು ಹೇಗೆ ತಾನೇ ಸವಿಗೊಡದಿರಬೇಕು ?"

ರಾಷ್ಟ್ರ ಕವಿ ಮಂಜೇಶ್ವರ ಗೋವಿಂದ ಪೈಗಳು ಶ್ರೀ ಪಾಂಡೇಶ್ವರರ 'ಚೆಂಗಲವೆ'ಗೆ ಮುನ್ನುಡಿ ಬರೆಯುತ್ತಾ ಮೇಲಿನಂತತೆ ಹೇಳಿದ್ದಾರೆ. (1940) ದಕ್ಷಿಣ ಕನ್ನಡದ ಬ್ರಹ್ಮಾವರ ಬಳಿಯ ಪಾಂಡೇಶ್ವರ ಎಂಬಲ್ಲಿ ಬಹುದೊಡ್ಡ ಮನೆತನದಲ್ಲಿ ಹುಟ್ಟಿದರೂ ಸಂಕಷ್ಟ ಪರಂಪರೆಗೆ ಬಲಿಯಾಗಿ ಕರ್ನಾಟಕವನ್ನೆಲ್ಲಾ ಸುತ್ತಾಡಿ ಗಾಂಧಿ ತತ್ವ ಚಿಂತನೆಯಲ್ಲಿ ಮುಳುಗಿ ಹರಿಜನ ಸೇವಕ ಸಂಘದ ಕಾರ್ಯದರ್ಶಿಯಾಗಿ ಅಕದಾಸರ ವಿಧವಾ ವಿವಾಹದಂಥ ಸಮಾಜ ಸುಧಾರಣೆಯ ಯಜ್ಞದಲ್ಲಿ ಭಾಗಿಯಾಗಿ ಸ್ವತಃ ಬಾಲ ವಿಧವೆಯನ್ನು ವಿವಾಹವಾಗಿ ಧಾರವಾಡದಲ್ಲಿ ನೆಲೆಯೂರಿದರೂ ಆಗಾಗ ಮದ್ರಾಸು, ಬೆಂಗಳೂರುಗಳಲ್ಲಿಯೂ ವೃತ್ತಿನಿರತರಾಗಿ ದಕ್ಷಿಣ ಭಾರತ ಬುಕ್‌ಟ್ರಸ್ಟ್ ಖಾದೀಗ್ರಾಮೋದ್ಯೋಗದಲ್ಲಿ ದುಡಿದು, ನವಯುಗ, ಜಯಕರ್ನಾಟಕ, ಜನತಾ ಮೊದಲಾದ ಪತ್ರಿಕೆಗಳಲ್ಲಿ ಕೆಲಸ ಮಾಡಿ ಹೆಸರಾಗಿದ್ದಾರೆ. ವಿವೇಕಾನಂದ ಚರಿತಂ, ಕೊಳಲ ಕೃಷ್ಣ, ಹೂಗೊಂಚಲು, ಕವನಗಳನ್ನು ನೀಡಿದ ಮೇಲೆ ಅವರ 'ಚೆಂಗಲವೆ' ಪ್ರಕಟವಾದಾಗ ಗೋವಿಂದ ಪೈಗಳು ಅದರ ಕುರಿತು ಮೇಲಿನಂತೆ ಮುನ್ನುಡಿ ಬರೆದು ತಮ್ಮ ಸಹೃದಯತೆಯನ್ನು ತೋರಿಸಿದ್ದರು.

"ಎದೆಯೊಳಾವುದೋ ಅರಳಿ ಉಲಿಸುತಿಹುದೆನ್ನ" ಕವಿಯ ಹೃದಯದಲ್ಲಿ ಮೂಡಿ ಬಂದ ಸಹೃದಯತೆ - ನೋವು ನಲಿವುಗಳ ಪರಿಪಾಕ ಕಾವ್ಯದ ರೂಪವನ್ನು ತಳೆದುದಾಗಿ ಕಂಡು ಬರುತ್ತದೆ. "ಎದೆಯ ಗುಹೆಯನು ತುಂಬಿ ತುಂಬಿ ಹೊರಹೊಮ್ಮಿ" ಹರಿದು ಬರುವ ಭಾವನಾವೇಶ ಅವರ ಕಾವ್ಯದ ಉದ್ಗಮಕ್ಕೆ ಹೇತುವಾಗಿರುತ್ತದೆ. ಕವಿಗೆ ಮನೆಯ ನೆನಪು ಬಂದಾಗ ಮನೆಯೇ ಇಲ್ಲದಾಗಿ ಹೋದುದು ವೇದನೆಗೆ ಕಾರಣವಾಗುತ್ತದೆ. ಹಕ್ಕಿ ಗೂಡು ಸೇರುವುದನ್ನು ಕಂಡ ಕವಿಗೆ ತನ್ನ ಪಾಡು ಅದಕ್ಕಿಂತಲೂ ಕೀಳಾದುದು ಗಮ್ಯವಾಗಿ ದುಃಖವುಮ್ಮಳಿಸುತ್ತದೆ. ರೆಕ್ಕೆ ಬಿಚ್ಚುತದರವೋಲ್ ಹಾರಬಾದೆಸೂರಿಗೆ ಎಂದು ವ್ಯಥಿಸುವುದರಿಂದ ಕವಿಯ ನೋವು ಮರಕಳಿಸಿದುದು. 'ಕಡಲ ಗಾಳಿ ಕರೆಯುತಿಹುದು' ತಾಯ್ನಾಡಿನ ಪ್ರೀತಿ ಅಭಿಮಾನಗಳನ್ನು ಉಕ್ಕೇರಿಸುತ್ತದೆ. 'ಕನ್ನಡ ಕುಲವೊಂದೆ ಮಲಂ' ಎಂದು ಸಾರುವ ಮೂಲಕ ನಾಡಿನ ಅಭಿಮಾನವನ್ನು ಕವಿ ತೋರಿಸಿದ್ದಾರೆ. ಧ್ವಜಗೀತೆ,

ಸ್ವರಾಜ್ಯ ಗೀತೆ, ಭಾರತಾಂಬೆಯುತ್ಸವ, ರಾಷ್ಟ್ರ ಪಿತ ತರ್ಪಣ ಮೊದಲಾದ ಕವನಗಳು ಅವರ ರಾಷ್ಟ್ರೀಯತೆಯನ್ನು ಪ್ರಕಟಿಸಿವೆ. 'ಸುಪಂಥಾ' ಕವನ ಸಂಕಲನದಲ್ಲಿ ಪ್ರಕಟವಾದ ಮೇಲಿನ ಕವನಗಳು ಮಾನವೀಯತೆಯನ್ನು ಪ್ರದರ್ಶಿಸುವುದು ಹೃದ್ಯವಾಗಿದೆ.

"ನ್ಯಾಯಪೀಠದ ಮೇಲೆ ಸತ್ಯ ಕೂತಿತ್ತು ಮುಂದೆ ಸೌಂದರ್ಯ ಕೈ ಕಟ್ಟಿ ನಿಂತಿತ್ತು ಅಲ್ಲಿಗೆ ನೂರಾರು ಹೊತ್ತಗೆಗಳನ್ನು ಹೊರಲಾರದೆ ಹೊತ್ತು ಗದ್ಯ ಬರುತ್ತದೆ. ಉದ್ಬುದ್ಧ ಮಾತನಾಡುತ್ತದೆ. ಸತ್ಯ ಮೌನ ತಳೆದಿರುತ್ತದೆ. ಅಷ್ಟರಲ್ಲಿ ಗಾಳಿ ಹೂವಿನಿಂದ ಪರಿಮಳ ತರುವಂತೆ ಮೋಡ ಮಿಂಚೆಸೆದಂತೆ ಸತ್ಯ ಬರುತ್ತದೆ. ಪದ್ಯದ ಸ್ವರ್ಣಕಣ, ಗದ್ಯದ ಅದುರು ಸತ್ಯಸೂತ್ರದ ಗಾತ್ರ ಎಂದಿಗೂ ಕಿರಿದಂತೆ ಆದರೂ ಸೌಂದರ್ಯ ಮಿಡಿಯುತ್ತದೆ. ಸತ್ಯ ಹಾಡುತ್ತದೆ. ಗದ್ಯ ಸೋತುಹೋಗುತ್ತದೆ. ಇದು ಅವರ ಕವನವೊಂದರಲ್ಲಿ ಬರುವ ಚಿತ್ರ.

"ಕೃಷಿ ಗೋರಕ್ಷಣ, ಪ್ರಗತಿಗೆ ಶಿಕ್ಷಣ ಅದೆ ಸಮತಾವಾದ, ಗಿರಿತರು ವೃದ್ಧಿಯು ಯಜ್ಞದ ಸಿದ್ಧಿಯು ಅದೇ ಋಷಿಗಳ ವೇದ, ಕಾಪುರುಷರಿಗಿದು ಮದ್ದರೆದನು ಹರಿ ಅದೆ ರಾಸವಿನೋದಾ" ಇದು ಕವಿಯ ತತ್ವ ನಿರೂಪಣೆಯನ್ನು ಸಾರುತ್ತದೆ. ಸಾಮಾಜಿಕ ವ್ಯವಸ್ಥೆ, ಕೃಷಿ - ಪರಿಸರ ಪ್ರೇಮ ಜೀವನದ ಪಾವನ ನೀತಿಯನ್ನು ನಿರೂಪಿಸುವ ಮೂಲಕ ಉದಾತ್ತ ಚಿಂತನೆಗೆ ಮೂರ್ತಸ್ವರೂಪ ನೀಡುತ್ತದೆ.

ಗೀತ ನಾಟಕಗಳ ರಚನೆಯಲ್ಲಿ ಅವರು ಸಿದ್ಧ ಹಸ್ತರು. ಬಲಿವಾಮನ ಮೊದಲಾದ ಹತ್ತಾರು ಗೀತನಾಟಕಗಳನ್ನು ಧಾರವಾಡ ಆಕಾಶವಾಣೀ ಕೇಂದ್ರ ಪ್ರಸಾರ ಮಾಡಿದೆ. ಭೌತಿಕ ಪ್ರಗತಿಯನ್ನು ನೆಚ್ಚಿರುವ ಜನರ ಕಣ್ಣಿಗೆ ಅಂಜನ ಹಾಕುವಂತೆ 'ಬಲಿವಾಮನ' ರೂಪಕವು ಸಾಧನೆಯ ಪಥದಲ್ಲಿ ಸಾಗಿದೆ.

ಶ್ರೀ ಪಾಂಡೇಶ್ವರರು ಯಕ್ಷಗಾನದಲ್ಲಿ ಹೆಚ್ಚು ಆಸಕ್ತರಾಗಿದ್ದರು. ಮೂರಾವತಾರ ಎಂಬ ಅವರ ಯಕ್ಷಗಾನ ಕೃತಿ ಒಂದು ನೂತನ ಪ್ರಯೋಗ. ಯಕ್ಷಗಾನದ ಹುಟ್ಟು - ಬೆಳವಣಿಗೆ ಸುಧಾರಣೆ-ಸಾಧನೆಗಳ ಬಗ್ಗೆ ಅವರು ತಳಮಟ್ಟದಿಂದ ವಿವೇಚಿಸಿದ್ದಾರೆ. ಶಿರಸಿಯಲ್ಲಿ ಜರಗಿದ ಪ್ರಥಮ ಯಕ್ಷಗಾನ ಪರಿಷತ್ತಿಗೆ ಅವರು ಅಧ್ಯಕ್ಷರಾಗಿ ಮಾಡಿದ ಭಾಷಣ ಅವರ ಪಾಂಡಿತ್ಯ - ಯಕ್ಷಗಾನ ಸಿದ್ಧಿಗಳನ್ನು ಪ್ರಕಟಿಸಿದೆ. ಬದಿಯಡ್ಕದಲ್ಲಿ ಜರಗಿದ ಯಕ್ಷಗಾನ ಸಮ್ಮೇಳನದಲ್ಲಿಯೂ ಅವರು ಅಧ್ಯಕ್ಷರಾಗಿ ಮಾಡಿದ ಭಾಷಣ ಅಸಾಧಾರಣವೆನಿಸಿದೆ. ಭರತನ ರಸಚರ್ವಣೆ ಯಕ್ಷಗಾನದ ಮೂಲಕ ಎಷ್ಟು ಯಶಸ್ವಿಯೆಂಬುದನ್ನು ಅವರು ಹೃದಯಂಗಮವಾಗಿ ವಿವರಿಸಿದ್ದಾರೆ.

ಅವರು ಕನ್ನಡದ ಕವಿಯಷ್ಟೇ ಅಲ್ಲ. ಇಂಗ್ಲೀಷಿನಲ್ಲಿಯೂ ಕವನಗಳನ್ನು ರಚಿಸಿದವರು. ಅವರ ಬಹುಮುಖ ಪ್ರತಿಭೆ - ಪಾಂಡಿತ್ಯ ಅನನ್ಯವಾದುದು. "ಬೆಳಕಿನ ಬೀಜ" ಎಂಬ ಹೆಸರಿನಿಂದ ಗುಂಡ್ಮಿ ಚಂದ್ರಶೇಖರ ಐತಾಳರು ಶ್ರೀ ಪಾಂಡೇಶ್ವರ ಸಮಗ್ರ ಚಿತ್ರವನ್ನು ನೀಡಿದ್ದಾರೆ. 'ಬೆಳಕಿನ ಬೀಜ'ಗಳು ಎಂಬ ಪಾಂಡೇಶ್ವರರ ವಿಶಿಷ್ಟ ಪದ ಪ್ರಯೋಗ ಅವರ ವ್ಯಕ್ತಿತ್ವವನ್ನು ಚಿತ್ರಿಸಿದ ಬಗೆ ಹೃದಯಂಗಮವಾದುದು.

ಉಳ್ಳಾಲ ಮಂಗೇಶರಾಯರು

"ಉರುಟುರುಟಂಬೊಡೆ ತಿನ್ನಲು ರುಚಿ ಇದೆ
ದೊರಗಿನ ಅಂಬೊಡೆ ಉರುಳಲು ಸರಿಯಿದೆ
ಹಾರುತ ಬನ್ನಿರಿ ಓಡುತ ಬನ್ನಿರಿ
ಚೀರುತ ಬನ್ನಿರಿ, ಮಾರುದ್ದ ಕಾಲಿಡಿ"

ಹೀಗೆ ಮಕ್ಕಳನ್ನು ಮುದ್ದಿಸಿ ಅವರೊಡನೆ ಕಲೆತು ಮಾತನಾಡುವ ಸುಂದರ ಪದ್ಯಗಳಿಂದ ಉಳ್ಳಾಲ ಮಂಗೇಶ ರಾಯರು ಬಾಲ ಸಾಹಿತ್ಯದಲ್ಲಿ ಹೆಸರಾಗಿದ್ದಾರೆ. ಅವರು ಮಕ್ಕಳಿಗೆ ಪ್ರಕೃತಿಯ ಚಿತ್ರಗಳನ್ನು ವಿವರಿಸಲು ಆರಿಸುವ ಕವನಗಳು ಬಹಳಷ್ಟು ಮೋಡಿಯಿಂದ ಕೂಡಿವೆ. ವಿಷಯ ಜ್ಞಾನ-ಭಾಷಾ ಜ್ಞಾನವನ್ನು ಹೆಚ್ಚಿಸುವ ಪಾಠಗಳ ಮೂಲಕ ಪಾಠಮಾಲೆ ರಚಿಸಿದ್ದಾರೆ. ಒಂದರಿಂದ ಆರನೆಯ ತರಗತಿಯ ತನಕ ಅವರು ಬರೆದ ಪುಸ್ತಕಗಳಲ್ಲಿ ಮಕ್ಕಳಿಗೆ ಸಾಹಿತ್ಯ - ಪ್ರವಾಸ, ಕುಶಲ ಕರ್ಮಗಳ ಬಗೆಗೆ ಆಸಕ್ತಿ ಹುಟ್ಟಿಸುವ ಬರಹಗಳನ್ನು ಬರೆದಿದ್ದಾರೆ. "ನೂತನ ಬಾಲಗಣಿತ"ವನ್ನು ಬರೆದು ಮಕ್ಕಳನ್ನು ಲೆಕ್ಕದ ಕಡೆಗೆ ಸೆಳೆದಿದ್ದಾರೆ. ಅವರ 'ಕೊಕ್ಕೊಕ್ಕೊ ಕೋಳಿ' ತಟಪಟ ಹನಿಯಪ್ಪ, ಜೋಡು ನಕ್ಷತ್ರ, ಅಜ್ಜಿಸಾಕಿದ ಮಗು ಮೊದಲಾದ ಕತೆಗಳು ಜನಪ್ರಿಯವಾಗಿವೆ. ಮಂಗಳೂರಿನಲ್ಲಿ ಜರಗಿದ ಮಕ್ಕಳ ಸಾಹಿತ್ಯ ಸಮ್ಮೇಳನದ ಯಶಸ್ವಿಗೆ ಅವರು ಕಾರ್ಯದರ್ಶಿಯಾಗಿ ದುಡಿದವರು. ಸಹಕಾರ ತತ್ವದ ಬೆಳವಣಿಗೆಗಾಗಿ ದುಡಿದರು. ಕನ್ನಡ ಸಹಕಾರಿ - ಬೋಧಿನೀ ಮೊದಲಾದ ಪತ್ರಿಕೆಗಳಲ್ಲಿ ಸಹಕಾರದ ಬಗ್ಗೆ ಬರೆದರು. ಬಾಲಚಂದ್ರ ಎಂಬ ಪಾಕ್ಷಿಕ ಪತ್ರಿಕೆಯನ್ನು ನಡೆಸಿದರು. ಶಿಕ್ಷಣದ ಬಗ್ಗೆ ಅವರು 'ಶಿಕ್ಷಣ' ಎಂಬ ಗ್ರಂಥ ಬರೆದರು. ನಿಷ್ಕಾಮ ಪ್ರೇಮ ಎಂಬ ಅನುವಾದಿತ ಕಾದಂಬರಿ, ಖಗೋಳ ವೈಚಿತ್ರ್ಯ ಎಂಬ ವಿಜ್ಞಾನ ಸಂಬಂಧಿ ಕೃತಿಗಳನ್ನು ರಚಿಸಿದರು. ಹೀಗೆ ಮಕ್ಕಳಿಗೆ ಸಮಾಜಕ್ಕೆ ಉಪಕಾರಿಯಾಗಿ ಬಾಳಿದ ಪಂಜೆಯವರಂತೆ ಇವರೂ ಮಕ್ಕಳಿಗಾಗಿ ಬರೆದ ಹಿರಿಯರು.

ಶ್ರೀ ಎಸ್. ಯು. ಪಣಿಯಾಡಿ

'ಅಂತರಂಗ' ಉಡುಪಿಯಲ್ಲಿ ಜನ್ಮ ತಳೆದು ಹೆಸರಾದ ಪತ್ರಿಕೆ. ಅದು ಹಲವಾರು ಲೇಖಕರಿಗೆ ಆಸರೆ ನೀಡಿದ ಕತೆ ರೋಮಾಂಚಕ. ಇಂಥ ಒಂದು ಪತ್ರಿಕೆಯ ಸ್ಥಾಪಕರಾಗಿ - ಉಡುಪಿಯ ಬದುಕಿನಲ್ಲಿ ಹೊಸ ಪ್ರೇರಣೆಗಳಿಗೆ ಕಾರಣರಾದ ಪಣಿಯಾಡಿಯುವರು ನಾಡಿಗೆಲ್ಲ ಪರಿಚಿತರು. ವೈಚಾರಿಕ, ಸಾಮಾಜಿಕ, ಸಾಹಿತ್ಯಿಕ ಪತ್ರಿಕಾ ಕ್ಷೇತ್ರಗಳಿಗೆ ಸ್ಫೂರ್ತಿ, ಚೈತನ್ಯ, ನೀಡಿದ ಪಣಿಯಾಡಿಯವರದು ಆದರ್ಶವೆನ್ನಬಹುದಾದ ವ್ಯಕ್ತಿತ್ವ. ಅವರೊಬ್ಬ ಹಿರಿಯ ರಾಷ್ಟ್ರೀಯ ವಾದಿಯೆಂದು ಹೆಸರಾಗಿದ್ದಾರೆ. ಖಾದಿ ಭಂಡಾರ, ತುಳುನಾಡ ಪ್ರೆಸ್, ಮಣಿಪಾಲ ಪ್ರೆಸ್, ತುಳುನಾಡ ಬ್ಯಾಂಕು, ಸ್ವಾತಂತ್ರ್ಯ ಹೋರಾಟ, ತುಳುನಾಡು ನಿರ್ಮಾಣದ ಹೋರಾಟ ಅಂತರಂಗ ಪತ್ರಿಕೆ ಅವರ ಸಾಧನೆಯ ಮಜಲುಗಳು, ಅವರ ಪತ್ರಿಕಾ ವೃತ್ತಿ ಮಾದರಿಯದಾಗಿ ನಾಡಿನ ಎಲ್ಲಾ ಪತ್ರಿಕೆಗಳಿಗೆ ಹೆಗಲೆಣೆಯಾಗಿ ಹೋರಾಟ ನಡೆಸಿದೆ.

ಪಣಿಯಾಡಿಯವರ ಸಾಹಿತ್ಯ ಪ್ರೇಮವೇ ಇದೆಲ್ಲಕ್ಕೂ ಮೂಲ ಕಾರಣ. ಕನ್ನಡ - ತುಳು ಇವೆರಡನ್ನು ಅವರು ಸಮಾನವಾಗಿ ಪ್ರೀತಿಸುತ್ತಿದ್ದರು. ತುಳು ಭಾಷೆ ಮೂಲೆಗುಂಪಾಗಿ, ಸಾಹಿತ್ಯ ರಂಗಕ್ಕೆ ಹೊರತಾಗಿದ್ದುದನ್ನು ಮುಂದೆ ತಂದು 'ಅಸ್ಪೃಶ್ಯತಾನಿವಾರಣೆ' ಮಾಡಿದ ಗಾಂಧೀ ವಾದಿ ಪಣಿಯಾಡಿಯವರು. ಕನ್ನಡದೊಂದಿಗೆ ತುಳುವಿಗೂ ಮನ್ನಣೆಯಿತ್ತ ಮಹಾನುಭಾವರು. ಇಂದಿನ ತುಳು ಅಕಾಡೆಮಿ, ತುಳು ಸಾಹಿತ್ಯ ಅಕಾಡೆಮಿ, ತುಳು ಸಾಹಿತ್ಯ ರಚನೆಗಳೆಲ್ಲಾ ಮುಂದೆ ಬರಲು, ಅಂದು ಪಣಿಯಾಡಿಯವರು ತುಳುವಿನ ಬಗ್ಗೆ ನಡೆಸಿದ ಹೋರಾಟವೇ ಕಾರಣ. ತುಳುವಿನ ಬಗ್ಗೆ ಅಪಾರವಾದ ಕಾಳಜಿಯುಳ್ಳ ಶ್ರೀಯುತರು ಭಾಷೆಯ ಬಗ್ಗೆ ಅಗಾಧವಾದ ತಿಳಿವು - ಸಂಗ್ರಹ, ಅಭಿಮಾನ ಹೊಂದಿರುವದರಿಂಧಲ್ಲೇ ಇಂದು ತುಳು ಕನ್ನಡಗಳ - ಸಾಂಸ್ಕೃತಿಕ ಸಾಹಿತ್ಯಕ ಬದುಕಿನಲ್ಲಿ ಪಣಿಯಾಡಿ ಶ್ರೀನಿವಾಸ ಉಪಾಧ್ಯಾಯ ಎಂಬ ಹೆಸರು ಶಾಶ್ವತವಾಗಿ ಇರುವಂಥದು.

ಕನ್ನಡ - ಕಂಠೀರವ

ಹುರುಳಿ ಭೀಮರಾಯರು

ಅವರ ಹೆಸರೇನೋ ಭೀಮರಾವ್. ಆದರೆ ದೇಹ ಮಾತ್ರ ಕೃಶ. ಎದೆಗಾರಿಕೆ - ಧೈರ್ಯದ ಮಟ್ಟಿಗೆ ಅವರು ಭೀಮನೇ ಆಗಿದ್ದರು. ಕಂಠೀರವದ ಹೆಸರು ಕೇಳಿದರೆ ಯಾರಾದರೂ ನಡುಗಲೇ ಬೇಕು. ಭೀಮರಾಯರು ಅಂಥ ಬರವಣಿಗೆಯಿಂದ ರಂಜಿಸಿದವರು. ಕಂಠೀರವ ನಿರ್ಘೋಷ ಮುಗಿಲು ಮುಟ್ಟಿದೆ.

"ಮುರುಕು ದಂಬೂಕು" ಅವರಿಗೆ ಹೆಚ್ಚಿನ ಪ್ರಸಿದ್ಧಿ ತಂದುಕೊಟ್ಟ ಕಾದಂಬರಿ. ಹುರುಳಿಯವರ ಹುರುಳು ಇಲ್ಲಿ ಹೊರಬಿದ್ದಿದೆ.

ಕನ್ನಡದಲ್ಲಿ ಬರೆಯುವುದು ಪತ್ರಿಕೆ ನಡೆಸುವುದು ಎಂದರೆ ಅದಕ್ಕೊಂದು ವಿಶೇಷವಾದ ಧೃತಿ-ಧಾರ್ಷ್ಟ್ಯ ಬೇಕಾಗಿದ್ದ ದಿನಗಳಲ್ಲಿ ಅವರು ಏಕಾಂಗವೀರರಾಗಿ ಪತ್ರಿಕಾವೃತ್ತಿಗಿಳಿದವರು. ಉತ್ತಮ ರೀತಿಯ ವರದಿ ವಿಚಾರಧಾರೆ ಸಂಪಾದಕೀಯಗಳ ಮೂಲಕ ಜನಜಾಗೃತಿ ಮೂಡಿಸುವ ನಿಟ್ಟಿನಲ್ಲಿ ದುಡಿದಿದ್ದಾರೆ. ಪ್ರಸಾರ - ಪ್ರಚಾರಗಳಿಗೆ ಕಷ್ಟವಾಗಿದ್ದ ಅಂದಿನ ದಿನಗಳಲ್ಲಿ - ಓದುಗರನ್ನು ಬಡಿದೆಬ್ಬಿಸುವ ಲೇಖನಗಳಿಂದ ಅವರು ಯಶಸ್ಸುಗಳಿಸಿದ್ದಾರೆ. 50 ವರ್ಷಗಳ ಕಾಲ ಕಂಠೀರವವನ್ನು ಅವರು ನಡೆಸಿಕೊಂಡು ಬಂದ ಸಾಹಸ ಅಸಾಮಾನ್ಯವೇ ಸರಿ.

ಸಾಹಿತ್ಯರಂಗವೂ ಅವರಿಗೆ ಪ್ರಿಯವಾಗಿತ್ತು. 'ದಾಸಯ್ಯ' ಎಂಬ ಕವಿನಾಮದಿಂದ ಅವರು ಲೇಖನಗಳನ್ನು ಬರೆದು ಪ್ರಕಟಿಸುತ್ತಿದ್ದರು. ವಿನೋದ ಲೇಖನಗಳನ್ನು ಬರೆಯುವುದರಲ್ಲಿ ಅವರು ಸಿದ್ಧ ಹಸ್ತರೆಂದು ಖ್ಯಾತರಾಗಿದ್ದಾರೆ. ಮೊನಚಾದ - ಚೂಪಾದ - ನವಿರಾದ ವಿಡಂಬನೆಗಳಲ್ಲಿ ಅವರು ಜನರನ್ನು ಸೆಳೆದಿದ್ದಾರೆ.

ತಾರಾ ಎಂಬ ಐತಿಹಾಸಿಕ ಕಾದಂಬರಿ 'ಪಾಪ ಪುಣ್ಯ' ಎಂಬ ಕಾದಂಬರಿಯ (ಅನುವಾದ) ಹಾಸನಟೋಪಿ ಎಂಬ ನೀಳ್ಗತೆ, ಸ್ವಲ್ಪ ನಗಬಾರದೇ ? ಎಂಬ ಹಾಸ್ಯ ಲೇಖನಗಳ ಸಂಗ್ರಹ, ಗಡ್ಡದ ಅಜ್ಜಯ್ಯ, ಗುಬ್ಬಿ ಪಾಯಸ, ಪಾಪೋಸಿನ ಫಜೀತಿ ಎಂಬ ಮಕ್ಕಳ ಕತೆಗಳನ್ನು ಆಧುನಿಕ ಭಾರತ, ಮುರುಕು ದಂಬೂಕು, ರಜೀಯಾ ಬೇಗಂ ಕೃತಿಗಳನ್ನು ರಚಿಸಿದ್ದಾರೆ. ಅವು ಪ್ರಕಟವಾಗಿ ಮೆಚ್ಚುಗೆ ಗಳಿಸಿವೆ. ಆಂಗ್ಲ ಕಥಾ ವಸ್ತುವನ್ನು ಕನ್ನಡದ ನೆಲ - ಜಲ - ವಾತಾವರಣಕ್ಕೆ ತಕ್ಕಂತೆ ನಿರೂಪಿಸಿದ ಅವರ ಕೃತಿ ಸ್ವತಂತ್ರವೇ ಎನಿಸುವಂತೆ ಸಹಜವಾಗಿದೆ. ಹಾಸನ ಟೋಪಿ ಅಥವಾ ಹಳೆಯ ಮ್ಯಟ್ರಿಕ್ - ಮುರುಕು ದಂಬೂಕುಗಳಲ್ಲಿ ಇದನ್ನು ಗಮನಿಸಬಹುದು.

ಕಬ್ಬಿಗರ ಬಲ್ಲಹ ಮುದ್ದಣನನ್ನು ಕಂಡವರೆಂಬ ಹೆಮ್ಮೆ ಹುರುಳಿಯವರಿಗಿದೆ. ತನ್ನ ಅಣ್ಣನೊಂದಿಗೆ ಮುದ್ದಣನ ಮಾಹಿತಿ ಪಡೆದವರು - ಒಡನಾಡಿದವರು ಎನ್ನುತ್ತಾರೆ. ಮುದ್ದಣನ ಬಗ್ಗೆ ಹಲವು ವಿಚಾರಗಳನ್ನು ಉಪನ್ಯಾಸಗಳನ್ನು ಅವರು ನೀಡಿದ್ದಾರೆ. ವೃದ್ಧಾಪ್ಯದ ದಿವಸಗಳಲ್ಲಿ ಮಂಗಳೂರಿನ ಹಲವಾರು ಸಾಹಿತ್ಯಕ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಿದ್ದ ಭೀಮರಾಯರನ್ನು ಕಂಡ ನೆನಪು ನನಗೆ ಚೆನ್ನಾಗಿ ಇದೆ.

ಪರಿಪಕ್ವ ಪಂಡಿತ
ಕಾವೇರಿಕಾನ ಕೃಷ್ಣ ಭಟ್ಟರು

ಮದ್ರಾಸಿನಲ್ಲಿ ಆಚಾರ್ಯರಾಗಿದ್ದ ಕಾವೇರಿಕಾನ ಕೃಷ್ಣ ಭಟ್ಟರು ಬಹುಶ್ರುತ ವಿದ್ವಾಂತರು ಕನ್ನಡ - ಇಂಗ್ಲಿಷ್ ಸಂಸ್ಕೃತಗಳಲ್ಲಿ ಅಪಾರ ಪಾಂಡಿತ್ಯವುಳ್ಳವರಾಗಿದ್ದರು. ಮದ್ರಾಸಿನಲ್ಲಿ ಟ್ರಾಮಿನಲ್ಲಿ ಪಯಣಿಸುತ್ತಿದ್ದಾಗ ಅಪಘಾತಕ್ಕೊಳಗಾಗಿ ಕಾಲನ್ನು ಕಳೆದುಕೊಂಡು ಬಹಳಷ್ಟು ಸಂಕಟಪಟ್ಟರು.

ಶ್ರೀಯುತರ ವಿದ್ವತ್ತು ಆಗಲೇ ಪ್ರಸಿದ್ಧವಾಗಿತ್ತು. ಪಂಚಾಮೃತ, ಕರ್ಣರಸಾಯನ ಎಂಬ ಎರಡು ಕೃತಿಗಳನ್ನು ರಚಿಸಿ ಅವರು ತಮ್ಮ ಹಾಸ್ಯದ ಹೊನಲನ್ನು ಹರಿಸಿದ್ದರು. ವಿದ್ವತ್ ಪೂರ್ಣವಾದ ಸುಸಂಸ್ಕೃತ ಹಾಸ್ಯ ಶೈಲಿ ಅವರಿಗೆ ಕರಗತವಾಗಿತ್ತು. ವಿಡಂಬನೆ ವ್ಯಂಗ್ಯದಿಂದ ಅವರು ಸಮಾಜವನ್ನು ಜಾಗೃತಿಗೊಳಿಸುತ್ತಿದ್ದರು.

ಅವರ ಪಾಂಡಿತ್ಯ - ಪ್ರತಿಭೆ ಅಪಾರವಾದುದು. ಕಾಲಿನ ಆಘಾತದಿಂದ ಅವರು ಸಂಕಟ ಪಟ್ಟರೂ ಕಾವ್ಯಾಸ್ವಾದನೆಯಲ್ಲಿ ಸಾಹಿತ್ಯರಚನೆಯಲ್ಲಿ ತಮ್ಮನ್ನು ತೊಡಗಿಸಿಕೊಂಡು ವಿಶೇಷವಾಗಿ ಕೆಲಸ ಮಾಡಿ ನೋವನ್ನು ಮರೆಯುವ ಯತ್ನ ಮಾಡಿದರು. ಅದೇ ಸಂದರ್ಭದಲ್ಲಿ ರನ್ನನ ಸಾಹಸ ಭೀಮ ವಿಜಯವನ್ನು ಸಂಸ್ಕರಿಸಿ ಪ್ರಕಟಿಸಿ ಬಹುದೊಡ್ಡ ಕೆಲಸ ಮಾಡಿದರು. ಸಂಘ - ಸಂಸ್ಥೆ ಪರಿಷತ್ತಿನಂಥವರು ಮಾಡುವ ಸಾಧನೆಯನ್ನು ಅವರು ವ್ಯಕ್ತಿಯಾಗಿ ಮಾಡಿ ತಮ್ಮ ಸಾಹಸವನ್ನು ಮೆರೆದರು. ಸಾಹಸಭೀಮ ವಿಜಯವು ಅವರ ಸಾಹಸಕೃಷ್ಣ ವಿಜಯವಾಯಿತು. ಈ ಕೃತಿ ಪ್ರಕಟಣೆಯ ಕಾಲದಲ್ಲಿ ಅವರು ನೀರ್ಚಾಲಿಗೆ ಆಗಾಗ ಬರುತ್ತಿದ್ದರು. ಪೆರಡಾಲ ಕೃಷ್ಣಯ್ಯ, ದರ್ಭೆನಾರಾಯಣ ಶಾಸ್ತ್ರಿಗಳು ಖಂಡಿಗೆ ಶಾಮಭಟ್ಟರಂಥವರನ್ನು ಸಂಪರ್ಕಿಸಿದರು. ಕಾವ್ಯ ರಚನೆಯ ಬಗ್ಗೆ ಅವರೊಡನೆ ಚರ್ಚಿಸಿದ್ದರು. ನನ್ನ ವಿದ್ಯಾರ್ಥಿ ಜೀವನದ ಅಂದಿನ ದಿನಗಳಲ್ಲಿ ಅವರ ಸಾಹಸ ಭೀಮ ವಿಜಯ ಅಥವಾ ಗದಾ ಯುದ್ಧದ ಪ್ರತಿಗಳನ್ನು ಕಾಲೇಜಿನ ಸ್ಟೇಶನರಿ ವಿಭಾಗದಲ್ಲಿ ಮಾರಲಾಗುತ್ತಿತ್ತು. ಆಗ ನಾನು ಆ ವಿಭಾಗದ ಕಾರ್ಯದರ್ಶಿಯಾಗಿ ಪುಸ್ತಕಗಳನ್ನು ಸಾಕಷ್ಟು ಮಾರಾಟ ಮಾಡಿದ್ದೆ. ಕವಿಗಳ ನಿಕಟ ಪರಿಚಯವನ್ನು ಹೊಂದಿದ್ದೆ. 'ಗದಾಯುದ್ಧ'ವು ಆಗ ಸಿಗುತ್ತಿರಲಿಲ್ಲ. ವಿದ್ವಾನ್ ಪರೀಕ್ಷೆಗೆ ಅದು ಪಾಠ್ಯವಾಗಿದ್ದುದರಿಂದ ಶ್ರೀಯುತರ ಸಾಹಸ ವಿದ್ಯಾರ್ಥಿಗಳಿಗೆ ವರದಾನವಾಗಿಯೇ ಪರಿಣಮಿಸಿತು.

'ಕರ್ಣರಸಾಯನಂ' ಅವರ ಮತ್ತೊಂದು ಸಾಧನೆ. ಪಂಪ ಭಾರತವೆಂದು ಖ್ಯಾತವಾದ ವಿಕ್ರಮಾರ್ಜುನವಿಜಯದೊಳಗಣ ಕರ್ಣನ ವೃತ್ತಾಂತವು 'ಕರ್ಣರಸಾಯ'ನವಾಗಿ ಆದರಣೀಯವಾಗಿದೆ.

"ಮಹಾಕವಿಯ ಕಾವ್ಯವನ್ನು ಮನನಮಾಡುವರು ಕನ್ನಡಿಗರೆಲ್ಲರ ಕರ್ತವ್ಯವು. ಆ ಸೌಭಾಗ್ಯದಿಂದ ನಾವು ವಂಚಿತರಾದರೆ ನಮ್ಮ ಕರ್ತವ್ಯಕ್ಕೆ ಲೋಪ ತಂದು ಕೊಂಡಂತೆಯೇ ಸರಿ. ಆದರೆ ಮಾಡುವುದೇನು ? ಅದು ಸುಶ್ರಾವ್ಯವಾದ ಮಧುರಪಾಕವಾದರೂ ಕಾರಣಾಂತರದಿಂದ

ನೀರಿಳಿಯದ ಗಂಟಲಲ್ಲಿ ಕಡುಬನ್ನು ತುರುಕುವುದಕ್ಕಿಂತಲೂ ಕಷ್ಟಕರವಾಗುತ್ತಿರುವುದೆಂದೂ ಪಂಪರನ್ನರ ಭಾಷೆಯು ಕೇವಲ ಪಂಡಿತರಿಗೆ ಮೀಸಲಾಗಿರುವುದೆಂದೂ ದೂರಿಕೊಳ್ಳುತ್ತಿರುವ ಕೋಲಾಹಲವೇ ಕೇಳಿಸುತ್ತಿರುವುದು. ಪಂಪನ ಪ್ರಸಾದವು ಸರ್ವಜನರಿಗೂ ಸಾಮಾನ್ಯವಾಗಿರಬೇಕು. ಆತನ ಕಾವ್ಯಮಾರ್ಗದಲ್ಲಿ ನಿರ್ಭಯವಾಗಿ ಎಲ್ಲರೂ ಸಂಚರಿಸಿದರೇನೇ ಅದು ರಾರಾಜಿಸುವ ರಾಜಮಾರ್ಗವಾಗುವುದು. ತರುಣರಿಗೆ ಅದು ಸುಗಮವಾಗುವಂತೆ ಮಾಡುವುದು. ಪ್ರತಿಯೊಬ್ಬ ಕನ್ನಡಿಗನಿಗೂ ಇರುವ ಹೊಣೆಗಾರಿಕೆಯು ಎಂಬ ವಿಚಾರದಿಂದ 'ಪಂಪನು ತನ್ನ ಭಾರತದಲ್ಲಿ ಹುದುಗಿಸಿಟ್ಟಿರುವ ಬೇರೊಂದು ಕಾವ್ಯವೆಂಬಂತೆ ಭಾಸವಾಗುವ, ಮುಕ್ತಕಂಠವಾಗಿ 'ಕರ್ಣರಸಾಯನ'ವೆಂದು ಕೊಂಡಾಡಿದ ತನ್ನ ಅಚ್ಚುಮೆಚ್ಚಿನ ಕರ್ಣನ ಚರಿತ್ರೆಯನ್ನು ಸಂಶೋಧಿಸಿ ಒಂಭತ್ತು ಪ್ರಾಸಗಳನ್ನಾಗಿ ವಿಂಗಡಿಸಿಕೊಂಡು "ಯಥಾರ್ಥಬೋಧಿನಿ" ಎಂಬ ವ್ಯಾಖ್ಯಾನವನ್ನು ಬರೆಯುವ ಸಾಹಸ ಮಾಡಲಾಯಿತು. ಈ ಕರ್ಣರಸಾಯನವು ತರುಣರ ಆಸ್ವಾದನೆಗೆ ದೊರೆಯುವಂತಾಗಿ ಆ ನಾಡೋಜನ ಒಸ್ಪಿತೆಯು ತಿಳಿದುಕೊಳ್ಳುವಂತಾದರೆ ನಮ್ಮ ಪರಿಶ್ರಮವು ಪರಿಹಾರವಾದಂತಾಗುವುದು'.

ಘನವಿದ್ವಾಂಸರಾದ ಕಾವೇರಿಕಾನ ಕೃಷ್ಣ ಭಟ್ಟರು 'ಕರ್ಣರಸಾಯನಮಲ್ತೆಭಾರತಂ' ಎಂಬ ಪಂಪನ ಗ್ರಾಸಗಳ ರೂಪದಲ್ಲಿ ನೀಡಿದ್ದಾರೆ. "ಕುಬೇರನ ಸಂಪತ್ತು ಕ್ಷೀಣಿಸಿ ಹೋದರೂ ಮಹಾಕವಿ ಪಂಪನ ನುಡಿಯನ್ನು ಒಂಭತ್ತು ಸಾಹಿತ್ಯ ಸಂಪತ್ತು ಶಾಶ್ವತವಾಗಿ ಮೆರೆಯುವುದರಲ್ಲಿ ಸಂದೇಹವಿಲ್ಲ" ಆತನ ನಿರರ್ಗಳವಾದ ವಾಗ್ಝುರಿಗೆ ತಲೆವಾಗದ ಸಾಹಿತಿಯಿರಲಾರನೆಂದರೆ ಆ ಮಹಾಕವಿಯನ್ನ ಪಡೆದ ಕರ್ಣಾಟಕ ಕಾಂಬೆಯ ಧನ್ಯತೆಗೆ ಎಣೆಯಿಲ್ಲ. ಸತ್ಪುತ್ರನು ವೃದ್ಧ ಮಾತೆಗೆ ಕಾಣಿಕೆಯಾಗಿತ್ತ ಕಣ್ಣಾಡಕದಂತೆ ವಿಕ್ರಮಾರ್ಜುನ ವಿಜಯ '(ಪಂಪ ಭಾರತ) ಆದಿಪುರಾಣ (ಆದಿತೀರ್ಥಂಕರರ ಚರಿತ್ರೆ)ಗಳೆಂಬ ಲೌಕಿಕ ಹಾಗೂ ಅಲೌಕಿಕ ವರಗಳಾದ ಗ್ರಂಥರತ್ನಗಳನ್ನು ನೀಡಿ ಕನ್ನಡಮ್ಮನ ಸೇವೆ ಸಲ್ಲಿಸಿದ ಪಂಪನು ಸಂಸ್ಕೃತ ಸಾಹಿತ್ಯದಲ್ಲಿ ವಾಲ್ಮೀಕಿಯ ಹಾಗೆ ಕನ್ನಡದಲ್ಲಿ ಆದಿ ಕವಿಯೆನಿಸಿ ನಾಡೋಜನೆಂದು ಪ್ರಸಿದ್ಧನಾದನು" ಇದು ಕೃಷ್ಣಭಟ್ಟರು ಬರೆದ ಮುನ್ನುಡಿಯು, ಅವರ ಮರಣೋತ್ತರ ಪ್ರಕಟವಾದ ಈ ಕೃತಿ ಹಸ್ತಪ್ರತಿ ರೂಪದಲ್ಲಿತ್ತಂತೆ. ಅವರ ಅಕಾಲ ನಿಧನದಿಂದ ನಮ್ಮ ಕನ್ನಡ ಸಾಹಿತ್ಯ ಪರಂಪರೆ ಪ್ರಕಾಂಡ ಪಂಡಿತರೊಬ್ಬರನ್ನು ಕಳೆದುಕೊಂಡು, ಇನ್ನೆಷ್ಟೋ ವಿಚಾರಗಳು ಬರಬಹುದಾಗಿದ್ದುದು ಇಲ್ಲವಾಗಿದೆ.

ಕವಿ - ಶ್ರೀ ಮುಳಿಯ ಶಂಕರ ಭಟ್ಟರು

ಶ್ರೀ ಮುಳಿಯ ಶಂಕರ ಭಟ್ಟರು ಒಬ್ಬ ಮಹಾನ್ ಪಂಡಿತ, ಕವಿಯಾಗಿ ನಾಡಿನ ಗಮನವನ್ನು ಸೆಳೆದಿದ್ದಾರೆ. ಪಂಡಿತ ತಿಮ್ಮಪ್ಪಯ್ಯನವರ ಸೋದರ ಎಂಬ ಗುಣಾಂಶದಿಂದಲೇ ಅಲ್ಲ ಸ್ವಯಂ ಪ್ರತಿಭಾವಂತ - ವಿದ್ವಾಂಸರಾಗಿ ಅವರು ಗಮನ ಸೆಳೆಯುತ್ತಾರೆ. ತಿಮ್ಮಪ್ಪಯ್ಯನವರ ಸಹವಾಸ, ಆದರ್ಶ, ಪಾಂಡಿತ್ಯ ಪ್ರತಿಭೆಗಳ ಪ್ರಭಾವ ತಮ್ಮ ಶಂಕರ ಭಟ್ಟರ ಮೇಲೆ ಸಹಜವಾಗಿ ಬಿದ್ದಿರಬಹುದು. ಆದರೆ ಅವರ ಸ್ವಂತ ಪ್ರತಿಭೆಯೇನೂ ಕಿರಿದಲ್ಲ.

ಸಾಹಿತ್ಯ - ಯಕ್ಷಗಾನಗಳೆರಡಲ್ಲಿಯೂ ಅವರಿಗೆ ಅನನ್ಯ ಆಸಕ್ತಿಯಿತ್ತು. ಆದರೆ ಕಾವ್ಯ ಪ್ರಕಾರದಲ್ಲಿ ಅವರ ಕೃಷಿ ಅನಿತರಸಾಧಾರಣವೆನಿಸಿದೆ. ತಿಲಕಪುರಾಣ ಅವರ ವಿಶಿಷ್ಟ ರಚನೆ. ವಾರ್ಧಿಕ ಷಟ್ಪದಿಯಲ್ಲಿ ರಚಿತವಾದ ಈ ಕಾವ್ಯ ಲೋಕಮಾನ್ಯ ಬಾಲಗಂಗಾಧರ ತಿಲಕರ ಕುರಿತಾದುದು ಎಂಬುದನ್ನು ಹೆಸರೇ ಸೂಚಿಸುತ್ತದೆ. ರಾಷ್ಟ್ರದ ದಾಸ್ಯ ಶೃಂಖಲೆಯನ್ನು ಕಿತ್ತೆಸೆಯಲು ಹೋರಾಡಿದ ರಾಷ್ಟ್ರದ ಮುಂಚೂಣಿಯ ನಾಯಕರೆನಿಸಿದ ತಿಲಕರು ಸಾಹಿತ್ಯದಲ್ಲಿಯೂ ವಿಶಿಷ್ಟ ಸ್ಥಾನ ಗಳಿಸಿದವರು ಗೀತಾರಹಸ್ಯದಂಥ ಉದ್ಗ್ರಂಥಗಳನ್ನು ರಚಿಸಿ, ಮಾನವನ ಜೀವನದ ವಿಕಾಸಕ್ಕಾಗಿ ಹೆಣಗಾಡಿದ ತಿಲಕರ ಜೀವನ ವೃತ್ತವನ್ನು ಚಿತ್ತರಿಸಿದ ಕಾವ್ಯವೇ ತಿಲಕ ಪುರಾಣ.

ರಸಿಕ ಕವಿ ಮುದ್ದಣನ ರಾಮಾಶ್ವಮೇಧದ ಹೊಸಗನ್ನಡ ರಚನೆ ಶ್ರೀಯುತರ ಮತ್ತೊಂದು ಸಾಧನೆ. ಚಾಣಕ್ಯತಂತ್ರ ಎಂಬುದೊಂದು ಕಾದಂಬರಿ ಕೂಡಾ ಇವರಿಂದ ರಚಿತವಾಗಿದೆ. ಬಾಲ ಸಾಹಿತ್ಯ ಮಂಡಲದವರು ಇದನ್ನು ಪ್ರಕಾಶ ಪಡಿಸಿದ್ದಾರೆ. ಅವರು ಹಲವಾರು ಅಮೂಲ್ಯ ಲೇಖನಗಳನ್ನು ಬರೆದು ದೇಹಾರೋಗ್ಯ, ಸಂಘ ರಚನೆ ಮೊದಲಾದ ವಿಚಾರಗಳಲ್ಲಿ ತಮ್ಮ ಅನಿಸಿಕೆಗಳನ್ನು ಹಂಚಿಗದ್ದಾರೆ. ಪಂ. ತಿಮ್ಮಪ್ಪಯ್ಯನವರ 'ಕನ್ನಡಕೋಗಿಲೆ'ಯಲ್ಲಿ ಅವರು ತಮ್ಮ ಅಮೂಲ್ಯ ವಿಚಾರಧಾರೆಗಳನ್ನು ಲೇಖನಗಳ ಮೂಲಕ ಹರಿಯಗೊಡುತ್ತಿದ್ದರು. ಚಂಡಭೀಮ ಕಾವ್ಯ ಎಂಬ ಕೃತಿಯೊಂದು ಅಪ್ರಕಟಿತವಾಗಿದೆಯೆಂದು ತಿಳಿದು ಬಂದಿದೆ.

ಪಂಡಿತಪರಂಪರೆಯ ಕವಿಯಾಗಿ, ಅಪೂರ್ವಸಾಧಕರಾಗಿ ಶ್ರೀ ಶಂಕರ ಭಟ್ಟರು ಹೆಚ್ಚು ಕಾಲ ಬದುಕಲಿಲ್ಲ ಎನ್ನುವದು ವಿಷಾದಕರ. ಉತ್ತಮ ಕವಿಯೊಬ್ಬರ ಸಾಹಿತ್ಯ ಸಂಪತ್ತಿನ ಲಾಭ ನಾಡಿಗೆ ಸಿಗಬಹುದಾದಷ್ಟು ಸಿಗದೆ ಹೋದುದಕ್ಕಾಗಿ ಖತಿ ಪಡಬೇಕಾಗಿದೆ. ಇದು ನಾಡಿನ ದುರದೃಷ್ಟವೆಂದೆ ಹೇಳಬೇಕಾಗಿದೆ.

ಸಾಹಿತ್ಯರಾಧಕ

ಶ್ರೀ ಬಿ. ದಾಮೋದರ ಬಾಳಿಗರು

ದಾಮೋದರ ಬಾಳಿಗರ ಹೆಸರನ್ನು ಕೇಳದ ಸಾಹಿತ್ಯಪ್ರಿಯರು ಯಾರು ? ಪುತ್ತೂರಿನಲ್ಲಿ ಜನಿಸಿ ಮಂಗಳೂರಿನಲ್ಲಿ ನೆಲೆಸಿದ ಶ್ರೀಯುತರು ಬಂಟ್ವಾಳದವರು. ಕನ್ನಡಿಗರಿಗೆ ಅತಿ ಸಮೀಪದ ಬಂಧುವಾಗಿ ಚಿರಪರಿಚಿತರಾದ ಬಾಳಿಗರು ರಾಷ್ಟ್ರಕವಿ ಗೋವಿಂದ ಪೈಗಳ ಅಚ್ಚುಮೆಚ್ಚಿನ ಸಂಗಾತಿ. ಶ್ರೀ ಪೈಗಳು ಮಂಗಳೂರಿಗೆ ಬಂದು ಬಾಳಿಗರೊಡನೆ ಮಾತನಾಡುತ್ತಿದ್ದ ಸಂದರ್ಭವೊಂದು ರಸಪ್ರಸಂಗವೆಂದು ಕೇಳುಗರ, ಸಾಹಿತ್ಯಾಭಿಮಾನಿಗಳ ಅಂಬೋಣ, ಶ್ರೀ ಪೈಗಳ ಗೋಲ್ಗೊಥಾ ವೈಶಾಖಿ, ಹೆಬ್ಬೆರಳು, ಚಿತ್ರಭಾನು ಮೊದಲಾದ ಕೃತಿಗಳ ಪ್ರಕಾಶಕರಾಗಿ ಅವರು ಹೆಸರಾದವರು.

ಬಾಳಿಗರು ಸ್ವಯಂ ಕವಿಗಳು, ಬರಹಗಾರರು, ಮಕ್ಕಳ ಸಾಹಿತ್ಯದಲ್ಲಿ ಅನನ್ಯ ಸಾಧನೆ ಮಾಡಿದವರು. ವಯಸ್ಕರ ಶಿಕ್ಷಣದಲ್ಲಿಯೂ ಅವರ ಆಸಕ್ತಿ ವಿಶೇಷವಾಗಿತ್ತು. ಆ ಸಂಬಂಧ ಮಾದರಿಯಾಗಬಲ್ಲ ಕೃತಿಗಳನ್ನು ಅವರು ರಚಿಸಿದ್ದಾರೆ. ಸರಳ ಭಾಷೆಯಲ್ಲಿ ವಿಜ್ಞಾನವನ್ನು ಕಲಿಸಬಲ್ಲ ವಿಧಾನವನ್ನು ಅವರ ಕೃತಿ ರಚನೆಯ ಮೂಲಕ ತೋರಿಸಿಕೊಟ್ಟಿದ್ದಾರೆ. ಅಂಥ ಉಪಯುಕ್ತ ಕೃತಿಗಳನ್ನು ಅವರು ರಚಿಸಿದ್ದಾರೆ. ಹಲವಾರು ಅನುವಾದ ಕೃತಿಗಳಿಂದಲೂ ತಿಳಿಗನ್ನಡದ ರಚನೆಗಳಿಂದಲೂ ಅವರು ವಿಶಿಷ್ಟತೆಯನ್ನು ಮೆರೆದಿದ್ದಾರೆ. ಗೋವಿಂದ ಪೈಗಳ ಗೊಲ್ಗೊಥಾವನ್ನು ಅವರು ಇಂಗ್ಲಿಷಿಗೆ ಪರಿವರ್ತಿಸಿದ ಹೆಮ್ಮೆಯನ್ನು ಪಡೆದವರಾಗಿದ್ದಾರೆ. ಆ ಭಾಷೆಯಲ್ಲಿಯೂ ಅವರ ಪ್ರಭುತ್ವ ಇದರಿಂದ ಪ್ರಕಟವಾಗಿದೆ.

ಅಳಿಲ ಸೇವೆ, ಅಜ್ಜಿ ಕತೆ, ಅತ್ತೆಯ ಕರಾರು ಮತ್ತು ಇತರ ಕತೆಗಳು, ಇಲಿಮನೆ ಗಲಿಬಿಲಿ, ಉಂಡಾಡಿ ತೋಳ, ಗೋವಿನ ಕತೆ, ಚಾಡಿ ಮತ್ತು ಇತರ ಕತೆಗಳು, ನೂಲುವ ತಕಲಿ, ಬೆಲ್ಲದ ಮಲ್ಲ, ಮತ್ತು ಇತರ ಕತೆಗಳು, ಸೀನಿನ ಸೀನ, ಮಾತಾಳಿ ಆಮೆ ಮತ್ತು ಇತರ ಕಥೆಗಳು, ಅವರ ರಸವತ್ತಾದ ಮಕ್ಕಳ ಸಾಹಿತ್ಯದ ರಚನೆಗಳು, ಮಕ್ಕಳ ಮನೋಧರ್ಮಕ್ಕೆ ತಕ್ಕಂಥ ಭಾಷೆ - ವಿಷಯ: ನಿರೂಪಣೆಗಳಲ್ಲಿ ಅವರು ಎತ್ತಿದ ಕೈಯೆನಿಸಿದ್ದರು. ಅಕ್ಷರಾಭ್ಯಾಸಿಗಳಾದ ವಯಸ್ಕರಿಗೂ ಅವರ ರಚನೆಗಳು ಅಚ್ಚುಮೆಚ್ಚಾಗಿದ್ದವು. ನವನಿಧಿ ಸಾಹಿತ್ಯ ಮಾಲೆ ಎಂಬ ಪ್ರಕಟಣ ಸಂಸ್ಥೆ ಮೂಲಕ ಅವರು ಕೃತಿಗಳನ್ನು ಬೆಳಕಿಗೆ ಸಂದಿದ್ದಾರೆ.

ಸರಳ ಭಾಷೆಯಲ್ಲಿ ವಿಜ್ಞಾನವನ್ನು ವಿವರಿಸುವ 'ನಮ್ಮ ಭೂಮಿ' ಎಂಬ ಸಚಿತ್ರ ಪುಸ್ತಕ ಅವರ ಬಹುಮಾನಿತ ಕೃತಿ ಚರಕ - ತಕಲಿ, ಕರಕೌಶಲದ ಹೊತ್ತಗೆಗಳು, ಗಡಗಡಿಗೆ ತುಪ್ಪದೋಸೆ, ಕಟ್ಟುಕತೆಗಳು, ಉತ್ತಮ ಚಿಕ್ಕ ಹೊತ್ತಗೆಗಳು.

'ಭಾರತ ಜ್ಯೋತಿ ಮಹಾತ್ಮಾ' ಎಂಬ ಇವರ ಕೃತಿ ಉತ್ತಮ ರಚನೆಯೆಂದು ಹೆಸರಾಗಿದೆ.

ಉತ್ತಮ ಪಠ್ಯ ಪುಸ್ತಕಗಳನ್ನು ರಚಿಸುವುದರಲ್ಲಿಯೂ ಇವರು ಸಿದ್ಧಹಸ್ತರೆನಿಸಿದ್ದರು. ನೂತನ ಕನ್ನಡ ಪಾಠಮಾಲೆ ಎಂಬ ಪಠ್ಯಪುಸ್ತಕಮಾಲೆ ಇವರದು. ಇದರಲ್ಲಿ ಇವರು ಮಕ್ಕಳ - ಶಿಕ್ಷಕರಿಬ್ಬರ ಮನಸ್ಸನ್ನೂ ಗೆದ್ದಿದ್ದಾರೆ. ಉತ್ತಮ ಶಿಕ್ಷಣದ ನಿರೂಪಕರಾಗಿ ಹೆಸರಾಗಿದ್ದಾರೆ.

ಸಾಹಿತ್ಯ ಸಂಪನ್ನ
ಕಡೆಕಾರ್ ರಾಜಗೋಪಾಲಕೃಷ್ಣರಾಯರು

ಉಡುಪಿಯಲ್ಲಿ ರಾಜರಂತೆ ಮೆರೆದು, ಜನಾದರಕ್ಕೆ ಪಾತ್ರರಾಗಿ ಸಾಹಿತ್ಯ - ಸಾಂಸ್ಕೃತಿ ಬದುಕಿಗೆ ಹೆಸರಾದ ರಾಜಗೋಪಾಲ ಕೃಷ್ಣ ರಾಯರು ಎಲ್ಲದರಲ್ಲಿಯೂ ಮೊದಲಿಗರಾಗಿ ಮೆರೆದವರು. ಅಗರ್ಭ ಶ್ರೀಮಂತರಾದ ಅವರು ಉಡುಪಿಗೆ ಬಂದವರನ್ನು ಸತ್ಕರಿಸುವುದರಲ್ಲಿ ಅಗ್ರಗಣ್ಯರಾಗಿ ತಮ್ಮ ಶ್ರೀಮಂತಿಕೆಯನ್ನು ಉತ್ತಮರೀತಿಯಿಂದ ವಿನಿಯೋಗಿಸಿದರು. ಎಲ್ಲಾ ರಂಗಗಳಲ್ಲಿಯೂ ಅವರು ಕೇಂದ್ರ ಬಿಂದುವಾಗಿ ಜನಾದರಣೀಯರಾಗಿ ಸ್ವತಃ ಸಾಹಿತ್ಯಜ್ಞರೂ ಸಾಹಿತ್ಯಾಭಿಮಾನಿಯೂ ಆಗಿ ಉಡುಪಿಗೆ ಒಳ್ಳೆಯ ಹೆಸರನ್ನು ತಂದವರು.

ಕರ್ನಾಟಕ ಸಂಘ ಉಡುಪಿಯಲ್ಲಿ ಸ್ಥಾಪನೆಗೊಳ್ಳಲು ರಾಯರೇ ಮೂಲ ಪುರುಷರೆಂದು ಹೇಳುತ್ತಾರೆ. ಕೊರಡಕ್ಕಲ್ ಶ್ರೀನಿವಾಸರಾಯರು ಇವರ ಜೊತೆಯಲ್ಲಿ ಎಲ್ಲಾ ಸಾಹಿತ್ಯಕ - ಸಾಂಸ್ಕೃತಿಕ ಚಟುವಟಿಕೆಗಳಲ್ಲಿದ್ದರು.

'ಶ್ರೀ ಕೃಷ್ಣ ಸೂಕ್ತಿ' ಮಾಸ ಪತ್ರಿಕೆ ಪತ್ರಿಕೋದ್ಯಮದಲ್ಲಿ ಶ್ರೇಷ್ಠ ಸ್ಥಾನವನ್ನು ಪಡೆಯಲು ರಾಜಗೋಪಾಲ ಕೃಷ್ಣ ರಾಯರೇ ಕಾರಣವಂತೆ. ಪತ್ರಿಕೆ ಕೈರೋಡಿ ಸುಬ್ಬರಾಯರ ಸಂಪಾದಕತ್ವದಲ್ಲಿ ಜನಿಸಿದ್ದು, ಮಧ್ಯದಲ್ಲಿ ನಿಲ್ಲುವಂತಾದರೂ ಶ್ರೀ ರಾಯರು ಅದಕ್ಕೆ ಪುನರ್ಜನ್ಮ ನೀಡಿದವರು, ಕಾಯಕಲ್ಪ ಮಾಡಿದವರು, ಪತ್ರಕರ್ತರ ನುಡಿಗನ್ನಡಿ, ವರ್ತಮಾನ ಸಂಗ್ರಹ, ಪತ್ರಾಂತರಾಭಿಪ್ರಾಯ, ವಿವಿಧ ವಿಷಯಾವಳಿ, ಹಾಸ್ಯಲಹರಿ, ಗ್ರಂಥವಿಮರ್ಶೆ ಮೊದಲಾದ ಅಂಕಣಗಳನ್ನು ರಾಯರು ಪ್ರಾರಂಭಿಸಿದರೆಂದು ಡಾ: ಉಪ್ಪಂಗಳ ರಾಮಭಟ್ಟರು ಬರೆದಿದ್ದಾರೆ. ಕಾರವಾರದಿಂದ ಪ್ರಕಟವಾಗುತ್ತಿದ್ದ ವಿನೋದಿನಿ ಎಂಬ ಮಾಸ ಪತ್ರಿಕೆಯು ಶ್ರೀ ಕೃಷ್ಣ ಸೂಕ್ತಿಯಲ್ಲಿ ವಿಲೀನವಾಗಿ "ಸವಿನೋದ ಶ್ರೀ ಕೃಷ್ಣಸೂಕ್ತಿಯಾಯಿತೆಂದು ಭಟ್ಟರು ತಿಳಿಸುತ್ತಾರೆ. ಅಂತೂ ಆಗಾಗ ಎಡರು ತೊಡರುಗಳನ್ನೆದುರಿಸಿದರೂ ಈ ಪತ್ರಿಕೆ 9 ವರ್ಷ ಕಾಲ ನಡೆಯಿತಂತೆ. ನಾಡಿನ ಹಿರಿಯ ಸಾಹಿತಿಗಳ ಬರಹಗಳನ್ನು ಪ್ರಕಟಿಸಿದ ಕೀರ್ತಿ ಈ ಪತ್ರಿಕೆಗಿದೆ.

ಶ್ರೀ ಕಡೆಕಾರ್ ರಾಜಗೋಪಾಲಕೃಷ್ಣ ರಾಯರು ಶ್ರೀಮಂತ ಮನೆತನದ ಆದರ್ಶ, ಉಜ್ವಲ ವ್ಯಕ್ತಿತ್ವದ ಸಾಹಿತ್ಯಾಭಿಮಾನಿ, ಉನ್ನತ ಭಾವನಾದರ್ಶಗಳ ಸಂಗಮವಾಗಿ ಸಾಹಿತ್ಯದ ಹುಲುಸಾದ ಬೆಳೆತೆಗೆದು ಉತ್ತಮ ಹೆಸರನ್ನು ಪಡೆದ ಮಹನೀಯರಾಗಿದ್ದಾರೆ.

ಮಂಜೇಶ್ವರ ಅನಂತ ರಾಯರು

ಅನಂತ ರಾಯರು ಮಂಜೇಶ್ವರದವರು ಎಂಬುದು ಹೆಸರಿನಿಂದ ತಿಳಿದು ಬರುತ್ತದೆಯಾದರೂ ಅವರು ನೆಲೆಸಿದ್ದುದು ಪುತ್ತೂರಿನಲ್ಲಿ. ಉಗ್ರಾಣ ಮಂಗೇಶರಾಯರ ಆಪ್ತಮಿತ್ರರಾಗಿ ಜೊತೆಯಾಗಿ ಸಾಹಿತ್ಯ ಚರ್ಚೆನಡೆಸಿಕೊಂಡು ಅನ್ಯೋನ್ಯವಾಗಿ ಬಾಳಿದವರು. ಚಿಕ್ಕಂದಿನಲ್ಲಿ ಅವರನ್ನು ನೋಡಿದ ನೆನಪೇನೋ ಇದೆ. ಆದರೆ ಅವರನ್ನು ಓದಿ ತಿಳಿದುಕೊಂಡುದು ಆಮೇಲೆ. 'ಕಲಸು ಮೇಲೋಗರ' ಎಂಬ ಕವನ ಸಂಕಲನವನ್ನು ಅವರು ರಚಿಸಿದ್ದಾರೆ. ಬಾಳಿಗಾ ಎಂಡ್ ಸನ್ಸ್‌ನವರ ಪ್ರಕಟಣೆಯದು. ಸುಲಭಶೈಲಿಯ ಸುಂದರ ಪದ್ಯಗಳ ಈ ಸಂಗ್ರಹ ವಿದ್ಯಾರ್ಥಿಗಳಿಗೆ ಓದಲು ಖುಶಿಕೊಡಬಲ್ಲವುಗಳಾಗಿದೆ. ಬೇರೆ ಬೇರೆ ಪತ್ರಿಕೆಗಳಲ್ಲಿ ಅವರ ಕವಿತೆಗಳು ಪ್ರಕಟವಾಗಿದ್ದವು. ಇಂಗ್ಲಿಷ್ ಕವನಗಳಿಂದ ಪ್ರೇರಿತರಾಗಿ ಕವನಗಳನ್ನು ರಚಿಸಿರುವುದಾಗಿ ಅವರು ಹೇಳಿಕೊಂಡದ್ದುಂಟು. ಕನ್ನಡ ಸಹಕಾರಿ, ಕನ್ನಡ ಕೇಸರಿ ಮಾಸಪತ್ರಿಕೆಗಳಲ್ಲಿ ಅವು ಪ್ರಕಟವಾಗುತ್ತಿದ್ದವು. ರಾಷ್ಟ್ರಬಂಧು, ಕಂಠೀರವ ಪ್ರಬುದ್ಧ ಕರ್ಣಾಟಕಗಳಲ್ಲಿಯೂ ಇವರು ಬರೆಯುತ್ತಿದ್ದರು.

ಇವರು ವಕೀಲ ಪದವಿಯನ್ನು ಗಳಿಸಿದವರು. ಬೆಂಗಳೂರು, ಮದ್ರಾಸುಗಳಲ್ಲಿ ಪದವಿ ಶಿಕ್ಷಣ ಪಡೆದ ಇವರು ಉತ್ತಮ ಅಭಿರುಚಿಯ ಸಾಹಿತಿಯಾಗಿದ್ದರು. ಪುತ್ತೂರಿನಲ್ಲಿ ಕಾರಂತ ಉಗ್ರಾಣ ಸಿ. ಎಸ್. ಶಾಸ್ತ್ರಿ, ಬೆಳ್ಳೆ ಕಡವ ಮೊದಲಾದವರ ಸಾಹಿತ್ಯ ಚಟುವಟಿಕೆಗಳಲ್ಲಿ ಇವರು ಪಾಲ್ಗೊಳ್ಳುತ್ತಿದ್ದರು. ಉತ್ತಮ ಸಹೃದಯರಾದ ಇವರ ಆಶಯವನ್ನು ಈ ಪದ್ಯ ತಿಳಿಸುತ್ತದೆ.

"ಮಳೆ ಬಂದು ಬೆಳೆಬೆಳೆದು ಧರೆ ತಣಿಯಲೆಂದು

ತಿಳಿನೀರಿನಿಂ ಬಾವಿಗಳು ತುಂಬಲೆಂದು

ನಳಿನ ಮುಖಿಯರು ಸುಪುತ್ರರ ಪಡೆಯಲೆಂದು

ಇಳೆಯೊಳಗೆ ಹರಿಸಿದೆವು ಬಾಲಕರು ಬಂದು"

ಇವರ ಕನ್ನಡ ಪದ್ಯ ಗೀತೆ ಬಹಳ ಉತ್ತಮ ರಚನೆಯೆಂದು ಹೆಸರಾಗಿದೆ. ಭಗವದ್ಗೀತೆಯ ಅನುವಾದ ಪದ್ಯಗಳು ತುಂಬ ಪ್ರಕಟವಾಗಿವೆ. ಆದರೆ ಅನಂತರಾಯರ ಈ ಕೃತಿ ಅಮೂಲ್ಯವೆನಿಸಿದೆ.

ಕರ್ಣಾಟಕ ಕೇಸರಿ ಎಂಬ ಪತ್ರಿಕೆಗ ಪ್ರಸಿದ್ಧಿ ಬರಲು ಅನಂತರಾಯರೇ ಕಾರಣವಂತೆ ಸಹಕಾರಿ ಪತ್ರಿಕೆಯ ಸಂಪಾದಕರಾಗಿಯೂ ಅವರು ಕೆಲಸಮಾಡಿದ್ದಾರೆ. ಸಹಕಾರಿ ರಂಗದಲ್ಲಿ ಮೊಳಹಳ್ಳಿ ಯವರ ಸಹವರ್ತಿಯಾಗಿ ದುಡಿದಿದ್ದಾರೆ. ಬ್ಯಾಂಕಿಂಗ್ ಉದ್ಯಮದಲ್ಲಿಯೂ ಅವರು ಹೆಸರು ಗಳಿಸಿದ್ದಾರೆ. ಜಯಲಕ್ಷ್ಮಿ ಬ್ಯಾಂಕಿನ ಸ್ಥಾಪಕರಾದವರು ಶ್ರೀ ರಾಯರು.

ಸಾಹಿತ್ಯದ ಕುಡಿ

ಕೊರಡ್ಕಲ್ ಶ್ರೀನಿವಾಸರಾಯರು

ಉಡುಪಿಯ ಹೆಸರೆತ್ತಿದೊಡನೆ ಸಾಹಿತಿಗಳಿಗೆ ಕೊರಡ್ಕಲ್ ಶ್ರೀನಿವಾಸರಾಯರ ನೆನಪು ಬರುವ ಕಾಲವದು. ಈ ಶತಮಾನದ ಪೂರ್ವ ಭಾಗದಲ್ಲಿ ಅವರು ಸಾಹಿತ್ಯ ಸಾಮ್ರಾಜ್ಯವನ್ನು ಉಡುಪಿಯಲ್ಲಿ ವಿಸ್ತರಿಸಲು ಕಾರಣರಾದವರು. ಹೊನ್ನಯ್ಯ ಶೆಟ್ಟರಂತೆ ಅವರು ವಿವಿಧ ರಂಗಗಳಲ್ಲಿ ಸಾಹಿತ್ಯದ ಸೇವೆ ಮಾಡಿದರು. ಕತೆ ನಾಟಕ ಮಕ್ಕಳ ಕವಿತೆಗಳು ಸಮಾಜ ಜಾಗೃತಿಗೆ ಸಂಬಂಧಿಸಿದ ಲೇಖನಗಳನ್ನು ಬರೆದರು. ಸಾಹಿತ್ಯ ಮತ್ತು ಸಾಮಾಜಿಕ ಜಾಗೃತಿಯನ್ನು ನೆರವೇರಿಸುವಲ್ಲಿ ಅವರು ಮುಂಚೂಣಿಯವರಾಗಿದ್ದರು. ಉಡುಪಿಯ ಕರ್ನಾಟಕ ಸಂಘದ ಆಧಾರಸ್ತಂಭವಾಗಿದ್ದು ಆದರ್ಶ ಸಮಾಜದ ನಿರ್ಮಾಣಕ್ಕೂ, ಉತ್ತಮ ಸಾಹಿತ್ಯ ರಚನೆಗೂ, ಸಾಮಾಜಿಕ ಕಳಕಳಿಗೂ ಅವರು ಜೀವಿತದ ಕೊನೆಯ ತನಕವೂ ಹೋರಾಡಿದರು. ಅವರು ಉಡುಪಿಯ ಸಾಂಸ್ಕೃತಿಕ ಸಂಘಟನೆಯ ಜೀವನಾಡಿಯಾಗಿ ಮಾದರಿಯ ಅಧ್ಯಾಪಕರಾಗಿ ಹೆಸರುಗಳಿಸಿದ್ದರು.

ಮಕ್ಕಳಿಗಾಗಿ ಇವರು ಬರೆದ ಪದ್ಯಾವಳಿ ಜನಪ್ರಿಯವಾಗಿದೆಯೆಂಬುದಕ್ಕೆ ಅದರ 12ನೆಯ ಅವೃತ್ತಿ ಪ್ರಕಟವಾದುದೇ ಸಾಕ್ಷಿ. ನಾಟಕ ರಚಿಸಿ ಆಡಿಸಿ ಜನರಿಗೆ ಖುಶಿಕೊಟ್ಟರು. ಇವರಿಗೆ ನಾಟಕ ರಚನೆ - ಪ್ರದರ್ಶನಕ್ಕಾಗಿ ಆರು ಚಿನ್ನದ ಪದಕಗಳು ಲಭಿಸಿದವಂತೆ. ಉತ್ತಮ ಪ್ರದರ್ಶನಗಳನ್ನು ಅವರು ಧಚಿಸಿ ಜನರನ್ನು ರಂಜಿಸಿದರು. ಟೊಪ್ಪಿ, ವಶೀಕರಣ, ರಂಗುರಂಗಿನ ಬುಡುಬುಡಿಕೆ ಮುಂತಾದ ಪ್ರಹಸನಗಳು ಅವರಿಗೆ ಒಳ್ಳೆಯ ಹೆಸನ್ನು ತಂದಿವೆ. ಆರೋಗ್ಯ ಪ್ರತಾಪ, ಧರ್ಮ ವಿಜಯ ನಾಟಕಗಳು, ಭಾರತಿಯ ಕಥೆಗಳು, ಅಡ್ಡ ಬೆಳೆದ ಗಿಡ್ಡಿಯ ಮದುವೆ, ಥಕ ಥೈ ರಾಧೆ, ನಂದಾದೀಪ ಮುದುಕನ ಹೆಂಡತಿ ಮುಂತಾದ ಕತೆಗಳನ್ನು ಬರೆದು ಅವರು ಜನಪ್ರಿಯರಾಗಿದ್ದಾರೆ. 'ಸುಲಭದಲ್ಲಿ ಇಂಗ್ಲಿಷ್' ಇವರು ಇಂಗ್ಲಿಷ್ ಕಲಿಯುವರಿಗಾಗಿ ರಚಿಸಿದ ಪುಸ್ತಕ. ಹೀಗೆ ಹತ್ತು ಹಲವಾರು ವಿಧಾನಗಳಿಂದ ಅವರು ಉಡುಪಿಯಲ್ಲಿ ಸಾಹಿತ್ಯದ ಬೆಳಕನ್ನು ಪಸರಿಸುವುದರಲ್ಲಿ ಶಕ್ತರಾದರು. ಮಾನ್ಯತೆ ಗಳಿಸಿದರು. ಅಂದಿನ ದಿನಗಳಲ್ಲಿ ಅವರು ನಡೆಸಿದ ಕೆಲಸ ಬಹುದೊಡ್ಡದು.

ಕಾರ್ಯಹಳ್ಳ ರಾಮಕೃಷ್ಣ ಶೆಟ್ಟರು

"ನಾಡಾಡಿಯಾಗಿ ಊರೂರು ಬೇಡಿದರೂ

ಕನ್ನಡದಿ ಕವಿಯಾಗಿ ಜನಿಸಬೇಡ !"

ಈ ಸಾಲುಗಳನ್ನು ಐದು ದಶಕಗಳ ಹಿಂದೆ ಕೇಳಿದ ನೆನಪು. ಇದನ್ನು ರಚಿಸಿದವರು ಕಾರ್ಯಹಳ್ಳ ರಾಮಕೃಷ್ಣ ಶೆಟ್ಟಿ ಎಂಬುದೂ ಆಗಲೇ ಗೊತ್ತು. ಆದರೆ ಇದರ ಹಿನ್ನೆಲೆ, ಅರ್ಥ ಸರಿಯಾಗಿ ಹೊಳೆಯತೊಡಗಿದುದು ಇತ್ತೀಚೆಗೆ.

ಕನ್ನಡದಲ್ಲಿ ಕವಿಯಾಗಿ ಜನಿಸಿ ಅವರು ಪಟ್ಟಪಾಡನ್ನು ಮೇಲಿನ ಸಾಲು ಹೇಳುತ್ತದೆ. ಅದೂ ಕನ್ನಡದಿ ಕವಿಯಾಗಿ ಜನಿಸುವುದು ಅಷ್ಟೊಂದು ಕಷ್ಟಕರ ಪರಿಸ್ಥಿತಿಯಾಗಿತ್ತೆಂಬುದು ಆ ಸಂಬಂಧವಾಗಿ ಅವರು ಅನುಭವಿಸಿದ ನೋವು ಇಲ್ಲಿ ವ್ಯಕ್ತವಾಗಿ. ಇದರೊಂದಿಗೆ ಕನ್ನಡದ ದೈನ್ಯಾವಸ್ಥೆಯೂ ಪ್ರಕಟವಾಗಿದೆ. ರಾಜಾಶ್ರಯದಲ್ಲಿ, ಯಾವುದೇ ತೆರನಾದ ಪ್ರೋತ್ಸಾಹವಿಲ್ಲ, ಯಾವುದೇ ಮಾಧ್ಯಮದ ಹಿನ್ನೆಲೆಯಿಲ್ಲ ಅದಿನಗಳಲ್ಲಿ ಕವಿಗಳು ಬದುಕಿದ್ದು - ನಾಡನ್ನು ಬೆಳಗಿದ್ದು ಎಂದರೆ ಅದೊಂದು ಪವಾಡ. ಮುಳಿಯ, ಪಂಜೆ, ಗೋವಿಂದ ಪೈ ಅಂಥವರ ಸಾಹಿತ್ಯವೇ ಬಹು ಕಷ್ಟದ ಕಾಲದಲ್ಲಿ ಮೂಡಿಬಂದ ಆ ದಿನಗಳಲ್ಲಿ ಕಾರ್ಯಹಳ್ಳರಂಥವರಿಗೆ ಒದಗಿದ ಸಂಕಷ್ಟಸ್ಥಿತಿ ಇಂಥ ಬವಣೆಯನ್ನೊಡ್ಡಿದೆಯೆನ್ನಬಹುದು. ಆಶುಕವಿಯಾಗಿ ಇವರು ಹಲವಾರು ಕವನಗಳನ್ನು ರಚಿಸಿದ್ದರು ಅದು ಅವರ ನಿಧನದ ದುಃಖದೊಂದಿಗೆ ಅಗ್ನಿಗೆ ಆಹುತಿಯಾಗಿವೆಯೆಂದು ಕವಿ ಅಮ್ಮೆಂಬಳರು ಹೇಳುತ್ತಾರೆ. ಇಂಥ ಯುವ ಕವಿಗಳ ಪ್ರತಿಭೆ ಅಕಾಲದಲ್ಲಿ ಸೊರಗಿ ಹೋದುದು ಕನ್ನಡಿಗರ ದುರ್ದೈವವೆನ್ನಬಹುದು.

ಕನ್ನಡದ ಓಜ ಪೆರಡಾಲ ಕೃಷ್ಣಯ್ಯನವರು

ಪಂಡಿತ ಪೆರಡಾಲ ಕೃಷ್ಣಯ್ಯನವರು ನಮಗೆಲ್ಲಾ ಕನ್ನಡ ಪಂಡಿತರೆಂದೇ ಖ್ಯಾತರಾದವರು. ಕನ್ನಡ ಮಾಷ್ಟ್ರು ಎಂದು ಅವರನ್ನು ಕೆಲವರು ಕರೆಯುತ್ತಿದ್ದುದುಂಟು. ಅವರು ಪಾಂಡಿತ್ಯದ ನಿಧಿಯಾಗಿದ್ದರು ಎಂಬುದನ್ನು ನಾಡಿನ ವಿದ್ವಾಂಸರೆಲ್ಲರೂ ಬಲ್ಲವರಾಗಿದ್ದರು ಮುಳಿಯ ತಿಮ್ಮಪ್ಪಯ್ಯನವರೇ ಅವರ ಪಾಂಡಿತ್ಯದ ಬಗ್ಗೆ ಪ್ರಶಂಸೆಯ ಮಾತುಗಳನ್ನಾಡಿದ್ದರು ಎಂದ ಮೇಲೆ ಹೆಚ್ಚೇನು ಬೇಕು ? ಹಳೆಗನ್ನಡದ ಯಾವುದೇ ಶಬ್ದಕ್ಕೆ ಸರಿಯಾದ ನಿಷ್ಪತ್ತಿ ವಿವರಣೆ ಬೇಕಿದ್ದರೆ ಪಂಡಿತ ಕೃಷ್ಣಯ್ಯನವರ ಬಳಿಗೆ ಎಷ್ಟೋ ವಿದ್ವಾಂಸರು ಓಡಿ ಬರುತ್ತಿರುವುದನ್ನು ನನ್ನ ವಿದ್ಯಾರ್ಥಿ ಜೀವನದಲ್ಲಿ ಕಂಡಿದ್ದೇನೆ. ಅವರು ಗದಾಯುದ್ಧ, ಪಂಪನ ವಿಕ್ರಮಾರ್ಜುನ ವಿಜಯ, ಶಬ್ದಮಣಿದರ್ಪಣ ಯಾವುದೇ ಗ್ರಂಥವನ್ನು ಪಾಠ ಹೇಳುವಾಗ ಎಷ್ಟೊಂದು ರಸವತ್ತಾಗಿರುತ್ತಿತ್ತು ಗ್ರಾಹ್ಯವಾಗುತ್ತಿತ್ತು ಎಂಬುದನ್ನು ಅವರ ವಿದ್ಯಾರ್ಥಿಗಳಿಂದಲೇ ತಿಳಿಯಬೇಕು ಕನ್ನಡ ಭಾಷೆಯೆಂದರೆ

ಕೃಷ್ಣಯ್ಯನವರನ್ನು ಒಲಿದು ಬಂದುದು. ಅವರು ಸಹಜ - ಸುಂದರ ಕವನಗಳನ್ನು ರಚಿಸುವ ಆಶುಕವಿಗಳಾಗಿದ್ದರು.

ಎಡನೀರು ಮಠದಲ್ಲಿ ಶ್ರೀರಾಮ ಚಂದ್ರಾಪುರ ಮಠದ ಏಕದಂತ ವಿರಚಿತ ವಿಶಿಷ್ಟ ಸಿಂಹಾಸನವನ್ನು ನೋಡಿ, ತತ್‌ಕ್ಷಣ ರಚಿಸಿ ಹಾಡಿದ ಈ ಪದ್ಯವೊಂದೇ ಅವರ ಕವಿತಾ ಶಕ್ತಿಯನ್ನು ಸಾರಬಲ್ಲುದು.

"ಆಸನವೇಂ ಸೊಗಸು, ಗುರುಸಿಂಹಾಸನವೇಂ ಸೊಗಸು
ಆಸನವೀಪರಿ ಭಾಸಿಪುದಾ ಮಹಾಶೇಷನವೊಲು ಸಂಕಾಶವ ಬೀರುತ
ಆಸನವೇಂ ಸೊಗಸು
ಭಾರತ ಕಥೆಯೆಲ್ಲ ; ಚಿತ್ರದಿ ಸೇರಿ ಮೆರೆವುದಲ್ಲ
ವಾರಣದಂತದ ಚಾರು ಕಲಾಪರಿಪೂರಿತ ಕೌಶಲವಾರಿಗೂ ಕೌತುಕ
ಎಡನೀರಿಗೆ ಬಂದ ಬಹುಜನ ಪಡೆಯೆ ಮಹಾನಂದ
ಎಡೆಗೊಟ್ಟವರಿಗೆ ಬಿಡದುದನೇಶ್ವರ ಕೊಡಲಿಷ್ಟಾರ್ಥವ
ನಡಿನಡಿಗೊಲಿದು"

ಶ್ರೀಯುತರು ರಚಿಸಿದ ಇಂಥ ಎಷ್ಟೋ ಕವಿತೆಗಳು ಇಂದಿಗೂ ಊರಜನರ ನಾಲಿಗೆಗಳಲ್ಲಿ ನಲಿದಾಡುತ್ತಿವೆ. 'ಯಾದವಾಭ್ಯುದಯಂ' ಎಂಬ ಅವರ ಕೃತಿಯೊಂದು ಅಚ್ಚಾಗಿದೆ. ಇವರ ಬಿಡಿ ಕವನಗಳ ಸಂಕಲನವನ್ನು ಸಿರಿಗನ್ನಡ ಮುದ್ರಣಾಲಯದವರು ಪ್ರಕಟಿಸಿದ್ದರು. ಶ್ರೀ ದೇವೀ ಮಹಾತ್ಮ್ಯ ಎಂಬ ಅಪೂರ್ವ ಗ್ರಂಥವೊಂದನ್ನು ಇವರು ರಚಿಸಿದ್ದಾರೆ. ಇವರ ಎಷ್ಟೋ ಕವಿತೆಗಳು ಅಪ್ರಕಟಿತವಾಗಿ ಮೂಲೆ ಸೇರಿವೆ.

ಮದ್ರಾಸಿನಲ್ಲಿ ಕನ್ನಡದ ಬಾವುಟ ಮೆರೆಸಿದ ಸಾಧಕ, ಪ್ರೊ. ಎಂ. ಮರಿಯಪ್ಪ ಭಟ್ಟರು

ತಮಿಳ್ನಾಡಿನಲ್ಲಿ ಕನ್ನಡದ ಬಾವುಟವನ್ನು ಹಾರಾಡಿಸಿ, ಭಾರತದಲ್ಲಿಯೇ ಅಗ್ರಗಣ್ಯ ವಿದ್ವಾಂಸರೆಂದು ಖ್ಯಾತಿವೆತ್ತ ಮರಿಯಪ್ಪ ಭಟ್ಟರ ಸಾಧನೆ ಅನನ್ಯವಾದುದು. ಏಕೀಕರಣ ಪೂರ್ವದಲ್ಲಿ ದಕ್ಷಿಣಕನ್ನಡವನ್ನೊಳಗೊಂಡ ಮದ್ರಾಸ್, ರಾಜ್ಯದ ರಾಜಧಾನಿ ! ಮದ್ರಾಸಿನಲ್ಲಿದ್ದುಕೊಂಡು ಕನ್ನಡದ ಹಿತಚಿಂತನೆ ಮಾಡಿದ ಮಹಾಜೀವಿಯವರು. ಪ್ರಾಧ್ಯಾಪಕರಾಗಿ, ಲೇಖಕರಾಗಿ, ಸಂಶೋಧಕರಾಗಿ, ಭಾಷಾ ಶಾಸ್ತ್ರಜ್ಞರಾಗಿ ಸೇವೆ ಸಲ್ಲಿಸುವುದರೊಂದಿಗೆ ತನ್ನ ನಾಡಿನ ವಿದ್ವಾಂಸರಿಗೂ ಉತ್ತೇಜನ ನೀಡಿದವರು ಶ್ರೀ ಭಟ್ಟರು. ಅವರು ವಿನಯಸಂಪನ್ನರಾದ ಪಂಡಿತರು, ಸ್ನೇಹಶೀಲರು, ಸರಳ ಹಾಗೂ ಪ್ರಾಮಾಣಿಕ ವ್ಯಕ್ತಿತ್ವ ಅವರದು. ಸಾಹಿತ್ಯ - ಸಂಶೋಧನೆ ಪೌರಸ್ತ್ಯ ವಿದ್ಯಾಭ್ಯಾಸಗಳಿಗೆ ಪ್ರಾಚೀನ ಕನ್ನಡ ಸಾಹಿತ್ಯಕ್ಕೆ ಅವರ ಕೊಡುಗೆ ಅಸಾಧಾರಣವಾದುದು.

ಸ್ವಂತ ಪರಿಶ್ರಮದಿಂದ ಅವರು ಬಹಳ ಉತ್ತಮ ಸ್ಥಾನವನ್ನು ಪಡೆದ ಸಾಧಕರಾಗಿದ್ದಾರೆ. 1940ರಿಂದ ಮದ್ರಾಸ್ ವಿ. ವಿ.ಯಲ್ಲಿ ಕನ್ನಡ ಉಪನ್ಯಾಸಕರಾಗಿ ಸೇರಿ ರೀಡರ್ ಆಗಿ ಮುಂದೆ ಬೆಳೆಯುತ್ತಲೇ ಹೋದರು. ಇಂಗ್ಲೆಂಡಿನಲ್ಲಿ ಲಂಡನಿನ ಸ್ಕೂಲ್ ಆಫ್ ಆಫ್ರಿಕನ್ ಸ್ಟಡೀಸ್‌ನಲ್ಲಿ ಭಾಷಾವಿಜ್ಞಾನದ ಮೇಲೆ ಉಪನ್ಯಾಸ ನೀಡಿದ್ದಲ್ಲದೆ ವಿಶೇಷ ಅಧ್ಯಯನ ನಡೆಸಿದರು. ಶ್ರೇಷ್ಠ ಭಾಷಾ ಶಾಸ್ತ್ರಜ್ಞರಾದ ಭಟ್ಟರು ಕನ್ನಡ ಸಾಹಿತ್ಯ ಪರಿಷತ್ತಿನ ನಿಘಂಟು ಸಮಿತಿಯ ಗೌರವಾಧ್ಯಕ್ಷರಾಗಿ ಸಂಪಾದಕರಾಗಿದ್ದು ಸಾಧನೆ ಮಾಡಿದರು. ರೆ. ಫಾ. ಕಿಟ್ಟೆಲ್ ಅವರ ನಿಘಂಟನ್ನು ಅವರು ಪರಿಷ್ಕರಿಸಿ 'ಅಭಿನವ ಕಿಟ್ಟೆಲ್' ಎಂಬ ಬಿರುದಿಗೆ ಪಾತ್ರರಾದರು. ಹಲವಾರು ಪದಗಳನ್ನು ಪ್ರಾಚೀನ ಕಾವ್ಯಗಳಿಂದ ಸಂಗ್ರಹಿಸಿ ನಿಘಂಟನ್ನು ಮತ್ತಷ್ಟು ಸತ್ವಪೂರ್ಣವನ್ನಾಗಿ ಮಾಡಿ ನಾಲ್ಕು ಭಾಗಗಳನ್ನಾಗಿ ಮದ್ರಾಸ್ ವಿ. ವಿ. ಯ ಮೂಲಕ ಪ್ರಕಟಿಸಿದರು. ತುಳು ಇಂಗ್ಲಿಷ್ ನಿಘಂಟು, ಹವ್ಯಕ - ಇಂಗ್ಲಿಷ್ ನಿಘಂಟು, ದ್ರಾವಿಡ ಜಾತಿ ಪದ ಕೋಶ ಇವರ ವಿಶಿಷ್ಟವಾದ ಸಾಧನೆಗಳಾಗಿವೆ. ಅವರು ನಾಡಿನ ವಿದ್ವಾಂಸರೊಂದಿಗೆ ಹಲವಾರು ಹಳಗನ್ನಡ ಕಾವ್ಯಗಳನ್ನು ಸಂಪಾದಿಸಿ ವಿಮರ್ಶೆ - ಸಂಶೋಧನೆಗಳಿಂದ, ಅವುಗಳನ್ನು ಪ್ರಕಟಿಸಿರುತ್ತಾರೆ. ಸಂಗೀತ ರತ್ನಾಕರ, ವರ್ಧಮಾನ ಪುರಾಣ, ಸದ್ಗುರು ರಹಸ್ಯ, ಮಂಗರಾಜ ನಿಘಂಟು, ವಿಷ್ಣು ಪುರಾಣ ಮೊದಲಾದ ಹಳಗನ್ನಡ ಕಾವ್ಯಗಳು ಅವರಿಂದ ಪ್ರಕಟಿತವಾದ ಗ್ರಂಥಗಳು. ಸರ್ವಜ್ಞನ ವಚನ ಸಂಗ್ರಹ, ನಾಲ್‌ನುಡಿ ನಾಣ್ನುಡಿ ಹಳಗನ್ನಡ-ಹೊಸಗನ್ನಡ ಕಾವ್ಯ ಸಂಗ್ರಹ ಕೃತಿಗಳನ್ನು ಅವರು ಸಂಪಾದಿಸಿದ್ದಾರೆ. ಕನ್ನಡ ಸಂಸ್ಕೃತಿ, ಸಂಕ್ಷಿಪ್ತ ಕನ್ನಡ ಸಾಹಿತ್ಯ ಚರಿತ್ರೆ, ಸಂತರ ಚರಿತೆ ಅವರ ಸ್ವರಚಿತ ಗ್ರಂಥಗಳು. ಕನ್ನಡ ಸಂಸ್ಕೃತಿ ಗ್ರಂಥದಲ್ಲಿ ಅವರು ವಿಶ್ಲೇಷಣಾತ್ಮಕ ಬರೆಹಗಳನ್ನು ಬರೆದಿದ್ದಾರೆ. ಕೇಶಿರಾಜ ಎಂಬ ಕೃತಿ ಶಬ್ದಮಣಿದರ್ಪಣದ ಕುರಿತಾದುದು. ಸಾಹಿತ್ಯ ಚರಿತ್ರೆಯು ಲಕ್ಷಣಶಾಸ್ತ್ರ, ಸಾಹಿತ್ಯ - ಜಾನಪದ ವಾಙ್ಮಯಗಳಿಗೆ ಸಂಬಂಧಿಸಿದ ವಿಚಾರಗಳಿಂದ ತುಂಬಿದ ಉತ್ತಮ ಸಂಗ್ರಾಹ್ಯ ಗ್ರಂಥ.

ಶ್ರೀಯುತರು ಕನ್ನಡ, ತಮಿಳು, ತೆಲುಗು, ಮಲೆಯಾಳ, ತುಳು ಮೊದಲಾದ ದ್ರಾವಿ ಭಾಷೆಗಳಲ್ಲದೆ ಸಂಸ್ಕೃತ - ಇಂಗ್ಲಿಷ್ ಭಾಷೆಗಳಲ್ಲಿಯೂ ಪರಿಣತಿ ಪಡೆದವರಾಗಿದ್ದರು ಹೊರನಾಡಿನಲ್ಲಿರುವ ಕನ್ನಡಿಗರಿಗೆ ಕನ್ನಡದ ಅಭಿಮಾನ ಉಳಿಯಬೇಕು. ನಾಡಿನ ಜನರಿಗೆ ಸರಿಯಾ ಮಾರ್ಗದರ್ಶನ - ಅನುಕೂಲತೆಗಳು ಸಿಗಬೇಕು ಎಂಬುದು ಅವರ ಇಚ್ಛೆಯಾಗಿತ್ತು ಮದ್ರಾಸಿನಲ್ಲಿ ಈ ಶತಮಾನದಲ್ಲಿ ಕನ್ನಡದ ಡಿಂಡಿಮವನ್ನು ಭಾರಿಸಿದ ಹಿರಿಯ ಚೇತನ ಮರಿಯ ಭಟ್ಟರು. ಹಲವಾರು ಸಂಘ ಸಂಸ್ಥೆಗಳಲ್ಲಿ ಸಕ್ರಿಯರಾಗಿ ನಿಷ್ಠಾವಂತರಾಗಿ ಹೊರನಾಡಿನ ಕನ್ನಡಿಗರಿ ದೀಪಸ್ತಂಭವಾಗಿ ಪರೋಪಕಾರಿ ಅಜಾತ ಶತ್ರು ಎಂದು ಸಾಹಿತ್ಯ ಸಾಧಕರು ಎಂಬ ಪುಸ್ತಕದಲ್ಲಿ ಬಣ್ಣಿಸಲಾಗಿದೆ. ಡಾ । ಶ್ರೀ ಕೃಷ್ಣ ಭಟ್ ಅರ್ತಿಕಜೆಯವರಿಂದು ಮದ್ರಾಸಿನಲ್ಲಿ ಅವರಂತೆಯ ಕಾರ್ಯ ನಿರ್ವಹಿಸುವ ಒಬ್ಬ ಕನ್ನಡದ ಅಭಿಮಾನಿ. ಶ್ರೀ ಮರಿಯಪ್ಪ ಭಟ್ಟರಿಗೆ ಇವರ ಕೆಲಸದಿಂ ನಿಜವಾದ ತೃಪ್ತಿ ಬಂದಿರಬೇಕು.

ತ್ರಿಭಾಷಾ ಕೋವಿದ ಆಶುಕವಿ
ಪ್ರೊ. ಎಂ. ರಾಮಕೃಷ್ಣ ಭಟ್ಟರು

ಕನ್ನಡ, ಸಂಸ್ಕೃತ, ಇಂಗ್ಲಿಷ್ ಭಾಷೆಗಳಲ್ಲಿ ಅನನ್ಯ ಪಂಡಿತರಾಗಿ ಅಂತಾರಾಷ್ಟ್ರೀಯ ಖ್ಯಾತಿಯನ್ನು ಗಳಿಸಿದ ಎಂ. ಆರ್. ಭಟ್ ಎಂದು ಖ್ಯಾತರಾದ ಶ್ರೀಯುತರು ಬಹುಮಾನ್ಯ ಸಾಹಿತ್ಯಜ್ಞರು. ಕನ್ನಡದಲ್ಲಿ ಆಶ್ಚರ್ಯ ಚೂಡಾಮಣಿಯನ್ನು ಭಾಷಾಂತರ ಮಾಡಿದ ಇವರ ವೈದುಷ್ಯ ಸಾಧನೆ ವಿಶಿಷ್ಟವಾದುದು. ಕನ್ನಡದಲ್ಲಿ ಹಲವಾರು ಪ್ರಬಂಧ ವಿಚಾರ ವಿಮರ್ಶೆಗಳನ್ನು ಅವರು ಬರೆದಿದ್ದಾರೆ. ಅವರು ಆಫ್ರಿಕಾದಲ್ಲಿದ್ದಾಗ ನನಗೆ ಬರೆದ ಪತ್ರಗಳು ಅಮೂಲ್ಯ ವಿಚಾರಗಳನ್ನೊಳಗೊಂಡಿವೆ. "ರಾಷ್ಟ್ರಮತ' ಪತ್ರಿಕೆಯಲ್ಲಿ ಆ ಪತ್ರಗಳು ಪ್ರಕಟವಾಗಿದ್ದವು. ಅದರಲ್ಲಿ ಆಫ್ರಿಕದ ವಿಚಾರ - ಸಂಸ್ಕೃತಿ, ಭಾರತೀಯರ ಸ್ಥಿತಿಗತಿಗಳೆಲ್ಲಾ ನಿರೂಪಿಸಲ್ಪಟ್ಟಿದ್ದವು. 'ಆಫ್ರಿಕದ ಪತ್ರಗಳು' ಒಂದು ಅಮೂಲ್ಯ ಸಂಗ್ರಹವಾಗಿದೆ.

ಸಂಸ್ಕೃತದಲ್ಲಿ ಅವರೊಬ್ಬ ಉದ್ದಾಮ ವಿದ್ವಾಂಸರು. ಮಹಾಕವಿಗಳು. 'ಶಿವಾನಂದ ವಿಲಾಸಂ' ಎಂಬ ಮಹಾಕಾವ್ಯ ಅವರ ಬಹುದೊಡ್ಡ ಸಾಧನೆ. 'ಅರ್ಜುನಃ ವಿಶ್ವಜನೀನಾಗೀತಾ, ಸೋಮನಾಥ ಸಮಂಜ್ಯಾಸ್ತವಃ, ಕಾವ್ಯೋದ್ಯಾನಂ, ರಾಮಕೃಷ್ಣ ಸಹಸ್ರ ನಾಮಸ್ತೋತ್ರಂ ಸ್ವತಂತ್ರ ಜ್ಯೋತಿಃ ಎಂಬ ಕಾವ್ಯಗಳಿಂದ ಅವರ ಕವಿತಾ ಶಕ್ತಿ ಪ್ರಕಟವಾಗಿದೆ. ಮತ್ತು ಅವರೊಬ್ಬ ರಾಷ್ಟ್ರೀಯ ಲೇಖಕ - ಕವಿಯಾಗಿ ಹೆಸರಾಗಿದ್ದಾರೆ. ಅಮೃತವಾಣಿ ಎಂಬ ಸಂಸ್ಕೃತ ಪತ್ರಿಕೆ ಅವರ ಅನನ್ಯ ಸಾಧನೆ. ಹಲವಾರು ಸಂಸ್ಕೃತ ಕವಿಗಳಿಗೆ - ಲೇಖಕರಿಗೆ ಅವರು ಆಶ್ರಯ ನೀಡಿ ಪ್ರೋತ್ಸಾಹಿಸಿದ್ದಾರೆ. ಈ

ಲೇಖಕನ 'ಕಾಶ್ಮೀರ ಸಂಧಾನ ಸಮುದ್ಯಮಃ, ಹೈದರಾಬಾದ್ ವಿಜಯಂ' ಎಂಬ ಎರಡು ನಾಟಕಗಳೂ ಅಮೃತವಾಣೀ ದ್ವಾರಾ ಪ್ರಕಾಶಿತವಾಗಿವೆ.

ಅವರು ಬೆಂಗಳೂರು ಸೈಂಟ್ ಜೋಸೆಫ್ ಕಾಲೇಜಿನಲ್ಲಿ ಆಚಾರ್ಯರಾಗಿದ್ದು, ಮತ್ತೆ ಆಫ್ರಿಕದಲ್ಲಿ ಭಾರತೀಯ ಭಾಷೆಗಳ ಅಧ್ಯಾಪನಕ್ಕೆ ಆಮಂತ್ರಿತರಾಗಿ, ಮರಳಿ ಬಂದು ದೆಹಲಿ ವಿಶ್ವ ವಿದ್ಯಾನಿಲಯದಲ್ಲಿ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದ್ದಾರೆ.

ಜ್ಯೌತಿಶ್ಯಾಸ್ತ್ರದ ಬಗ್ಗೆ ಅವರು ಅಸಂಖ್ಯ ಗ್ರಂಥಗಳನ್ನು ರಚಿಸಿದ್ದಾರೆ. ಹಲವಾರು ಜ್ಯೋತಿಷಿಕ ಉದ್ಗ್ರಂಥಗಳು ಅವರಿಂದ ರಚಿತವಾಗಿ ವಿಶ್ವದ ಆದ್ಯಂತ ಪ್ರಸಾರ ಹೊಂದಿದೆ. ಬೆಂಗಳೂರಿನ ಬಿ. ವಿ. ರಾಮನ್ ಅವರ ಆಸ್ಟ್ರೋಲಜಿಕಲ್ ಮೆಗಸಿನಿನಲ್ಲಿ ಅವರು ಬರೆದ ಜ್ಯೋತಿಷ್ಯಕ್ಕೆ ಸಂಬಂಧಿಸಿದ ಬರೆಹಗಳು ವಿದ್ವಾಂಸರ, ವಿಜ್ಞಾನಿಗಳ ಗಮನ ಸೆಳೆದಿದೆ. ಡಾ। ರಾಮನರಂತೆ ವಿಶ್ವದ ಆದ್ಯಂತ ವಿದ್ವಾಂಸರಾದ ಸ್ನೇಹಿತರನ್ನು ಅವರು ಸಂಪಾದಿಸಿದ್ದರು. ಕುಂಬಳೆ ಸಮೀಪದ ಮೇಣ ಎಂಬಲ್ಲಿ ಜನಿಸಿದ ಶ್ರೀಯುತರು ಜೀವನದ ಉದ್ದಕ್ಕೂ ಸಾಹಿತ್ಯ - ಜ್ಯೋತಿಶ್ಯಾಸ್ತ್ರ, ಕನ್ನಡದ ಪ್ರಾಚೀನ ಗ್ರಂಥಗಳ ಅಧ್ಯಯನ, ಅಧ್ಯಾಪನ, ಸಂಸ್ಕೃತ ಕವಿಗಳ ಕೃತಿಗಳ ಸಾರಸಂಗ್ರಹ - ಪ್ರಸಾರಗಳಲ್ಲಿ ಅನಿತರ ಸಾಧಾರಣ ಕೆಲಸ ನಡೆಸಿ ವಿಟ್ಲದಲ್ಲಿ ತಮ್ಮ ಜೀವಿತದ ಕೊನೆಯ ದಿನಗಳನ್ನು ಕಳೆದಿದ್ದಾರೆ. ವಿಶ್ವಖ್ಯಾತಿ ಪಡೆದ ವಿದ್ವಾಂಸರೂ ಕನ್ನಡಿಗರೂ ಆದ ಶ್ರೀಯುತರು ಪಾಂಡಿತ್ಯದ ತವನಿಧಿಯಾಗಿದ್ದರು.

ಉದ್ದಾಮ ಪಂಡಿತ
ಮೊಳೆಯಾರು ಶಂಕರನಾರಾಯಣ ಭಟ್ಟರು

ಕೀರ್ತಿಶೇಷ ಮೊಳೆಯಾರು ಶಂಕರನಾರಾಯಣ ಭಟ್ಟರು ಉದ್ದಾಮ ಪಂಡಿತರಾಗಿ, ಉತ್ತಮ ಅನುವಾದಕರಾಗಿ ಕವಿಗಳಾಗಿ ಹೆಸರಾದವರು. ಬಾಲ್ಯದಿಂದಲೇ ಕನ್ನಡ - ಸಂಸ್ಕೃತಗಳ ಅಧ್ಯಯನವನ್ನು ವಿಧಿವತ್ತಾಗಿ ನೆರವೇರಿಸಿದವರು. ಶ್ರೀಯುತರು ನೀರ್ಚಾಲಿನ ಮಹಾಜನ ಸಂಸ್ಕೃತ ಕಾಲೇಜಿನಿಂದ ಹೊರಬಂದ ಅನರ್ಘ್ಯರತ್ನವೆಂದು ಮಾನ್ಯರಾಗಿದ್ದಾರೆ.

ಸಂಸ್ಕೃತ ಸಾಹಿತ್ಯದಲ್ಲಿ ಹೆಸರಾಂತ ಕವಿಗಳಾದ ಭಾಸ, ಭಾರವಿ, ಭವಭೂತಿ, ದಿಙ್ನಾಗ, ಕ್ಷೇಮೇಂದ್ರ, ಬಿಲ್ಹಣ, ನೀಲಕಂಠ, ದೀಕ್ಷಿತ ಮೊದಲಾದ ಕೃತಿ ರತ್ನಗಳನ್ನು ಕನ್ನಡಕ್ಕೆ ತಂದವರು ಶ್ರೀ ಭಟ್ಟರು. ದಿಙ್ನಾಗನ ಕುಂದಮಾಲೆ, ಭವಭೂತಿಯ ಉತ್ತರ ರಾಮ ಚರಿತಂ, ದರ್ಪಕ ವಿಜಯಂ ಎಂಬ ನಾಟಕಗಳನ್ನಿವರು ಕನ್ನಡಿಸಿದ್ದಾರೆ. 'ಪಾಶುಪತ' ಭಾರವಿಯ ಕಿರಾತಾರ್ಜುನೀಯದ ಅನುವಾದವಾದರೆ ಸಮುದ್ರ ಮಥನ ನೀಲಕಂಠದೀಕ್ಷಿತನ ಚಂಪೂ ಕಾವ್ಯದ ಅನುವಾದವಾಗಿದೆ.

ಭೀಷ್ಮ, ವಿಕ್ರಮ ಸಾರ್ವಭೌಮ ಎಂಬ ಎರಡು ಪ್ರೌಢ ಗದ್ಯ ರಚನೆಗಳೂ ಕರ್ಣಾಮೃತ ಉದ
ಎಂಬ ಕವನ ಸಂಕಲನಗಳು ಇವರಿಂದ ರಚಿತವಾಗಿವೆ.

"ಭಾರವೇರರ್ಥಗೌರವಂ' ಎಂಬುದು ಪ್ರಸಿದ್ಧವಾದ ಮಾತು. ಭಾರವಿಯ ಅರ್ಥ ಗೌರ ಔಚಿತ್ಯಕ್ಕೆ ಭಂಗ ಬಾರದಂತೆ ಅದಕ್ಕೆ ಮತ್ತಷ್ಟು ಕಳೆಗೂಡುವಂತೆ ಶ್ರೀಯುತರು ರಚಿ ಗದ್ಯಾನುವಾದ ರಮಣೀಯವಾಗಿದೆ. ಇದು ಮದ್ರಾಸು ಸರಕಾರದಲ್ಲಿ ಪಾಠ್ಯವಾಗಿತ್ತು.

"ಭಾರವಿಯ ಈ ಉದ್ಗ್ರಂಥವನ್ನು ಕನ್ನಡಿಸುವಲ್ಲಿ ಶ್ರೀ ಶಂಕರನಾರಾಯಣ ಭಟ್ಟರು ತಮ ಹೊಣೆಗಾರಿಕೆಯನ್ನು ಚಕ್ರಬಡ್ಡಿಯಿಂದ ಸಲ್ಲಿಸುತ್ತಾರೆ. ಅಕ್ಷರಶಃ ಚಕ್ರಬಡ್ಡಿಯಿಂದ ಏಕೆಂದರೆ ಅನುವಾದದಲ್ಲಿ ಕೂಡಿಸಿದ ಇವರ ಖಾಸಾ ಕೈಗಾರಿಕೆಯಾದರೆ ಭಾರವಿಯ ಮೂಲ ಧನ ಮನಸೋತು ಇವರು ಕೂಡಿಸಿಕೊಟ್ಟ ಬಡ್ಡಿಯೊ ಬಡ್ಡಿಯ ಬಡ್ಡಿಯೋ ಅಲ್ಲದೆ ಮತ್ತೇನು ? ಆದ ಮಹಾ ಕವಿಗಳ ಮಹಾಕೃತಿಗಳೊಂದಿಗೆ ಈ ಬಗೆಯ ಸಲುಗೆಯನ್ನು ಕೊಳಕೂಡದು. ಕೊಳಸಲ್ಲ ಎಂಬ ನಿಯಮ ಅನುಲ್ಲಂಘ್ಯವಾದರೂ ಸರ್ವಥಾ ಹಳಸದ ಸರ್ವಥಾ ಸವೆಯ ಕಿರಾತಾರ್ಜುನೀಯದಂಥ ಲೋಹಕವಚದಲ್ಲಿ ಅವರು ಅಲ್ಲಲ್ಲಿ ತೇಪೆ ಹಚ್ಚಿರುವ ಈ ಬೆಸುಗೆಗಳ ದೈವ ಯೋಗದಿಂದಲೋ ಇವರ ಸೂಕ್ಷ್ಮ ದೃಷ್ಟಿಯಿಂದಲೊ ಅಥವಾ ಅವೆರಡ ಜೋಡಣೆಯಿಂದಲೋ ಹಾಕಲಾಪಲ್ಲೇ ಹಾಕಲ್ಪಟ್ಟು ಈ ಅನುವಾದದಲ್ಲಿ ಹಳತು, ಹೊಸತ ಅದಾವುದು ? ಇದಾವುದು ? ಎಂದು ಬೇರ್ಪಡಿಸಲಾರದಷ್ಟು ಅಭಿನ್ನವಾಗಿ ಒಡಗೂಡಿದೆ. ಇದ ನೇರಾದ ಮಾತು. ಪ್ರಾಚೀನ ಸಾಹಿತ್ಯದ ಅಭ್ಯಾಸದಲ್ಲಿ ಪಳಗಿ ಬೆಳೆದ ಕೆಯ್ವಾಡಕ್ಕೆ ಸಲ್ಲತ ಮನ್ನಣೆಯ ಮಾತು."

ರಾಷ್ಟ್ರಕವಿ ಗೋವಿಂದ ಪೈಗಳು ಕಿರಾತಾರ್ಜುನೀಯಕ್ಕೆ ಬರೆದ ಮುನ್ನುಡಿಯ ಭಾಗವಿದು ಶ್ರೀಯುತರ ಬಗ್ಗೆ ಚೆನ್ನಾಗಿ ಬೆಳಕು ಬೀರಬಲ್ಲುದು.

ಉತ್ತರ ರಾಮಚರಿತಂ ಮಹಾಕವಿ ಭವಭೂತಿಯ ಲೋಕೋತ್ತರ ಕೃತಿ. ಅದನ್ನು ಕನ್ನಡಕ ಇಳಿಸಿದ ಸಾಹಸ ಅನುಪಮ. 'ಏಕೋರಸಃ ಕರುಣ ಏವ' ಎಂಬ ಮಾತಿನಂತೆ ಮೃದುವಾ ಕೋಮಲವಾದ ಕರುಣ ರಸವನ್ನು ಕನ್ನಡದಲ್ಲಿ ಹರಿಯಿಸುವಾಗ ವಹಿಸುವ ಎಚ್ಚರ ಬಹಳಷ್ಟು ಮಹತ್ವದ್ದು. ಇದನ್ನು ಸತ್ವ ಪೂರ್ಣವಾಗಿ ಕನ್ನಡಿಸಿದ ಕೀರ್ತಿ ಮೊಳೆಯಾರರದು.

ಉತ್ತರ ರಾಮಾಯಣವನ್ನು ಆಧರಿಸಿದ 'ಕುಂದಮಾಲೆ'ಯನ್ನು ಕನ್ನಡಕ್ಕಿಳಿಸುವಾಗ ಉತ್ತ ರಾಮ ಚರಿತೆಯನ್ನು ಕನ್ನಡಿಸುವ ಮನಸ್ಸಾಗಿದೆಯೆಂದು ಶ್ರೀಯುತರು ತಿಳಿಸಿದ್ದಾರೆ. ದಿಙ್ನಾಗನ 'ಕುಂ ಮಾಲೆ' ಒಂದು ವಿಶಿಷ್ಟ ಕೃತಿಯಾದುದರಿಂದಲೇ ಉತ್ತರ ರಾಮ ಚರಿತದೊಡನೆ ಹೋಲಿಸು ಸಾಹಸಕ್ಕೆ ಅವರು ಮುಂದಾಗಿರಬೇಕು. ದಿಙ್ನಾಗನು ಕಾಲಿದಾಸನಿಗೆ ಪ್ರತಿಸ್ಪರ್ಧಿಯಾಗಿದ್ದನೆಂ ಹೇಳಿಕೆಯೂ ಪ್ರಚಲಿತವಾಗಿದ್ದುದರಿಂದ ಶ್ರೀಯುತರಿಗೆ ಆ ಬಗ್ಗೆ ಹೆಚ್ಚಿನ ಆಸಕ್ತಿ ಉಂಟಾಗಿರಬೇಕು ಅಂತೂ ಕುಂದ ಮಾಲೆಯ ಮೂಲಕ ಶ್ರೀರಾಮನಿಗೆ ಸೀತೆಯ ನೆನಪು ಬರುವುದು, ಕಾಲಿದಾಸ ಶಾಕುಂತಲದ ಅಭಿಜ್ಞಾನವನ್ನು ನೆನಪಿಗೆ ತರುತ್ತದೆ. ಇದನ್ನೇ ಪ್ರತಿಸ್ಪರ್ಧಿಯೆಂದು ಕೆಲವರು ಊಹಿಸಿದ್ದಾರೆ. ದಿಙ್ನಾಗಾನಾಂ ಪಥಿ ಪರಿಹರನ್ ಎಂಬ ಮೇಘದೂತದ ಶ್ಲೋಕವನ್ನೇ ಇದಕ

ಆಧಾರವಾಗಿ ನಂಬಿದ್ದಾರೆ. ದಿಙ್ನಾಗನೊಬ್ಬ ಸಮರ್ಥ ಕವಿಯೆಂಬುದರಲ್ಲಿ ಎರಡು ಮಾತಿಲ್ಲ. ಅದರ ಅನುವಾದ ಕನ್ನಡಕ್ಕೆ ಸಮರ್ಥವಾಗಿ ಮೂಡಿ ಬರಲು ಶ್ರೀ ಭಟ್ಟರು ಶ್ರಮಿಸಿದ್ದಾರೆ. ಹೀಗೆ ಒಂದೆ ಕಥಾವಸ್ತುವಿಗೆ ಸಂಬಂಧಿಸಿ ಇಬ್ಬರು ಮಹಾಕವಿಗಳು ರಚಿಸಿದ ಕೃತಿಗಳು ಕನ್ನಡಕ್ಕೆ ಬರಲು ಕಾರಣವಾದ ಸನ್ನಿವೇಶ ಅದನ್ನು ಒದಗಿಸಿದ ಶ್ರೀಯುತರು ಅಭಿನಂದನೀಯರಾಗಿದ್ದಾರೆ.

ಭಾಷನ ಮೂರು ಏಕಾಂಕಗಳನ್ನು ಕನ್ನಡಿಸಿರುವುದು ಅವರ ಇನ್ನೊಂದು ಸಾಧನೆ. 'ಭೀಮೋಪಸಾಂತ್ವನಂ' ಒಂದು ಖಂಡ ಕಾವ್ಯ. ಇತ್ತೀಚೆಗೆ ಕಲಾರ್ಶನದಲ್ಲಿ ಧಾರವಾಗಿಯಾಗಿ ಪ್ರಕಟವಾದ ಭಾರದ್ವಾಜ ಪ್ರಕಶನದಿಂದ ಪುಸ್ತಕ ರೂಪದಲ್ಲಿ ಹೊರಬಂದ ಈ ಕೃತಿ ಮಹಾ ಭಾರತದ ಕತೆಯೊಂದಿಗೆ ಹೆಣೆಯಲಾದ ಕಾಲ್ಪನಿಕ ಕಥೆಯಂತಿದೆ. "ಗದಾದಂಡಧರನಾಗಿ ಭೀಮಸೇನನು ತನ್ನ ಪ್ರೀತಿಯ ಪತ್ನಿ ದ್ರೌಪತಿಯ ಇಷ್ಟಾರ್ಥಕ್ಕಾಗಿ ಕುಬೇರ ನಗರದ ಉದ್ಯಾನದಿಂದ ಸೌಗಂಧಿಕಾ ಪುಷ್ಪವನ್ನು ಬಹಳ ಸಾಹಸದಿಂದ ತಂದು ಮುಡಿಸಿದನೆಂಬ ಪ್ರಹಸನ. ದಾರಿಯಲ್ಲಿ ವಾಯುಪುತ್ರ ಹನುಮಂತನ ಭೇಟಿ - ಸಂಭಾಷಣೆಯಿಂದ ಸುಧೀರ್ಘ ಪರಿಚಯ ಮತ್ತು ಕುಬೇರನ ಪುರಕ್ಕೆ ಭೀಮಸೇನನನ್ನು ಒಡಗೊಂಡು ಹೋಗುವುದು. ಅಲ್ಲಿಗೆ ಯುದಿಷ್ಟಿರ ನಕುಲ ಸಹದೇವರು ದ್ರೈಪದಿ ಕೂಡಾ ಬಂದು ಸಮಾಗಮ - ಕಾವ್ಯವಂಗಳ. ಇಷ್ಟನ್ನು ವಿಸ್ತರಿಸಿದ ಈ ವಸ್ತು ಯಾವ ಮೂಲದಿಂದ ಎಂದು ಕವಿ ಹೇಳಿಕೊಳ್ಳದಿರುವುದರಿಂದ ಇದೊಂದು ರಸವತ್ತಾದ ಕಾಲ್ಪನಿಕ ಕಾವ್ಯವಾಗಿ ಕಾಣಬಹುದು" ಎಂದು ಹೇಳಲಾಗಿದೆ.

ಇವರು ಮದ್ರಾಸ್ ಸರಕಾರದ ಪಠ್ಯ ಪುಸ್ತಕ ವಿಭಾಗದಲ್ಲಿಯೂ ವಿಶ್ವ ವಿದ್ಯಾನಿಲಯದ ಪರೀಕ್ಷಾ ಮಂಡಳಿಗಳಲ್ಲಿಯೂ ಇದ್ದರು. ಮದ್ರಾಸ - ಮಂಗಳೂರು ಸರಕಾರಿ ಕಾಲೇಜುಗಳಲ್ಲಿ ಆಚಾರ್ಯರಾಗಿದ್ದರು. ಮದರಾಸಿನ ಏರಿಯಂಟ್ ಮ್ಯಾನ್‌ಸ್ಕ್ರಿಪ್ಟ್ ಲೈಬ್ರೇರಿಯಲ್ಲಿ ದುಡಿದಿದ್ದರು. ಇವರ 'ಕುಂದಮಾಲೆ'ಗೆ ಮದ್ರಾಸ್ ಸರಕಾರವು ಬಹುಮಾನವನ್ನಿತ್ತು ಗೌರವಿಸಿದೆ.

ನಿರಾಡಂಬರ ಸರಳ ವ್ಯಕ್ತಿತ್ವದ ಶ್ರೀಯುತರ ಪರಿವಾರವೇ ಸಾಹಿತ್ಯದ ಆಗರ. ಇವರ ಪುತ್ರ ಪ್ರೊ. ಮೊಳೆಯಾರರು (ವಿ. ಬಿ.) ತೀರ್ಥರೂಪರ ಸಾಹಿತ್ಯ - ಪಾಂಡಿತ್ಯಗಳ ವಾರಸುದಾರರಾಗಿ ಮುಂದುವರಿಯುತ್ತಿರುವುದು ಸಂತಸವನ್ನಿತ್ತಿದೆ.

ಮಕ್ಕಳ ಅಕ್ಕರೆಯ ಗುರು
ಬೋಳಂತಕೋಡಿ ಶಂಕರ ಭಟ್ಟರು

ಶ್ರೀ ಬೋಳಂತಕೋಡಿ ಶಂಕರ ಭಟ್ಟರ ಹೆಸರು ಕನ್ನಡ ಬಾಲ ಸಾಹಿತ್ಯ ಪ್ರಪಂಚದಲ್ಲಿ ಸ್ಥಿರವಾಗಿ ಉಳಿಯುವಂಥದು. ಮಕ್ಕಳ ಮನಸ್ಸನ್ನು ಅರಿತು ಕೃತಿಗಳನ್ನು ರಚಿಸಿದವರಲ್ಲಿ ಶಂಕರ ಭಟ್ಟರು ಗಣ್ಯರಾಗಿದ್ದಾರೆ. ಈ ಶತಕದ ಐದು, ಆರನೆಯ ದಶಕದಲ್ಲಿ ಕನ್ನಡ ಪ್ರಪಂಚ ಪ್ರಕಾಶನದ ಮೂಲಕ ಅವರು ಹಲವಾರು ಮಕ್ಕಳ ಪುಸ್ತಕಗಳನ್ನು ರಚಿಸಿ ಪ್ರಕಟಿಸಿದ್ದರು. ಮಕ್ಕಳ ಮನಸ್ಸಿಗೆ ನಾಟುವಂತೆ ಸುಲಭವಾದ ಶೈಲಿಯಲ್ಲಿ ಅಂದವಾದ ಶಬ್ದಗಳಲ್ಲಿ ರಚಿಸಿದ ಕತೆಗಳು ಜನಪ್ರಿಯವಾಗಿದ್ದವು. ಸರಳ - ಸುಲಭ - ಸುಂದರ ಶೈಲಿ ಎಲ್ಲರಿಗೂ ಬರುವುದಿಲ್ಲ. ಮಕ್ಕಳ ಮನವನ್ನು ಗೆಲ್ಲಲು ಅಧ್ಯಾಪಕನಷ್ಟೇ ಬರೆಹಗಾರನಿಗೂ ಸಿದ್ಧಿ ಇರಬೇಕಾಗುತ್ತದೆ. ಶಂಕರ ಭಟ್ಟರಿಗೆ ಬಾಲ ಸಾಹಿತ್ಯದಲ್ಲಿ ದುಡಿಯಲು ಪ್ರೇರಣೆ - ಆದರ್ಶ ಪಂಜೆಯವರೆಂದು ಅವರ ತಮ್ಮ ಬೋಳಂತಕೋಡಿ ಈಶ್ವರ ಭಟ್ಟರು ಹೇಳುತ್ತಾರೆ. ಗೋವಿಂದ ಪೈ, ಪಂಜೆ, ಧರ್ಮಸ್ಥಳ ಮಂಜಯ್ಯ ಹೆಗಡೆಯವರು ಅವರಿಗೆ ಪರಮಾಪ್ತರಾಗಿದ್ದಾರೆಂದೂ ಹೇಳುತ್ತಾರೆ.

ಮಂಗಳೂರಿನಲ್ಲಿ ಸಾಹಿತ್ಯ ಚಟುವಟಿಕೆ ಎಂದರೆ ಶಂಕರ ಭಟ್ಟರ ಪಾತ್ರ ಇದ್ದೇ ಇತ್ತು. ನಿರಂಜನರು ಅವರಿಗೆ ಆಪ್ತ ವರ್ಗಕ್ಕೆ ಸೇರಿದ್ದು ಪ್ರಗತಿಶೀಲ ಚಳವಳಿಯಲ್ಲಿ ಅವರೂ ಭಾಗಿಗಳಾಗಿದ್ದರು. ನಿರಂಜನರು ಮಂಗಳೂರಿಗೆ ಬಂದು ಪ್ರಗತಿಶೀಲ ಚಳುವಳಿಯ ಬಗ್ಗೆ ನಡೆದ ಸಭೆಯಲ್ಲಿ ಶಂಕರ ಭಟ್ಟರು ಪಾತ್ರವಹಿಸಿದುದನ್ನೂ ನಿರಂಜನರು ಅವರ ಬಗ್ಗೆ ಆಡಿದ ಮಾತುಗಳನ್ನೂ ನಾನು ಇಂದಿಗೂ ನೆನಪಿಸಬಲ್ಲೆ. ಕರ್ನಾಟಕ ಏಕೀಕರಣದಲ್ಲಿಯೂ ಅವರು ಪಾತ್ರ ವಹಿಸಿರುವುದನ್ನೂ ಮರೆಯಲಾಗದು. ಶಂಕರ ಭಟ್ಟರದು ಸಾದಾ ಸರಳ ಜೀವನ, ಅಂತೆಯೇ ಅವರ ವೇಷ ಭೂಷಣ ನಡೆ ನುಡಿ ಕೂಡಾ ಸರಳವೇ. ಅವರು ಸಂಪ್ರದಾಯಸ್ಥ ಪುರೋಹಿತ ಪರಂಪರೆಯ ಮನೆತನದವರಾದರೂ ಪ್ರಗತಿಶೀಲ ಮನೋವೃತ್ತಿ ಬೆಳೆಸಿಕೊಂಡ ಸುಧಾರಣಾವಾದಿಗಳು. ಅವರು ಗಾಂಧೀವಾದಿಯಾಗಿದ್ದರು. ಮಾರ್ಕ್ಸ್‌ವಾದದ ಕಡೆಗೆ ಅವರು ಒಲಿಯಲು ಗೆಳೆಯ (ನಿರಂಜನ) ಕುಳಕುಂದ ಶಿವರಾಯರ ಪ್ರಭಾವವೇ ಕಾರಣವೆಂದು ಅವರ ಸೋದರ ಈಶ್ವರ ಭಟ್ಟರು ಹೇಳುತ್ತಾರೆ.

ಶಂಕರ ಭಟ್ಟರು ಮಕ್ಕಳಿಗಾಗಿ ಪಠ್ಯಪುಸ್ತಕ ರಚಿಸಿದ್ದಾರೆ. ಕನ್ನಡಕ್ಕಾಗಿ ದುಡಿದವರು ಎಂಬ ಪುಸ್ತಕ ಸಂಗ್ರಾಹ್ಯವಾಗಿದೆ. ನಾಡುನುಡಿಗಾಗಿ ದುಡಿದ ಹಿರಿಯರನ್ನು ನಾಡಿಗೆ ಪರಿಚಯಿಸಿದ್ದಾರೆ. ಕನ್ನಡ ಸಾಹಿತ್ಯ, ದಕ್ಷಿಣ ಕನ್ನಡ ಜಿಲ್ಲೆಯ ಪತ್ರಿಕೆಗಳು ಎಂಬ ಪುಸ್ತಕ ಬರೆದಿದ್ದಾರೆ. ಮಕ್ಕಳಿಗಾಗಿ ಸಾಹಿತ್ಯ ರಚಿಸಿರುವ ಅವರನ್ನು ನಾಡು ಗೌರವಿಸುತ್ತಿರುವುದು 'ಮಕ್ಕಳ ಸಾಹಿತಿ' ಎಂದೇ ಆಗಿದೆ. ಮಕ್ಕಳಿಗಾಗಿ ಬರೆದ ಪಂಜೆ, ಎಂ. ಎನ್. ಕಾಮತ್, ಉಗ್ರಾಣರಂತೆ ಬೋಳಂತಕೋಡಿಯವರು, ಮಕ್ಕಳ ಮನಸ್ಸನ್ನು ಅರಳಿಸುವ, ಕುತೂಹಲ ಕೆರಳಿಸುವ, ಜ್ಞಾನದಾಹವನ್ನು ತಣಿಸುವ ಪುಸ್ತಕ ಬರೆದ

ಜನಪ್ರಿಯ ಸಾಹಿತಿ. 2-3ನೆಯ ತರಗತಿಗಳಿಂದ ಹಿಡಿದು 10-11ನೇ ತರಗತಿಗಳವರೆಗೆ ಮಕ್ಕಳಿಗಾಗಿ ಅವರು ಸ್ವಂತವಾಗಿಯೂ ಕಿರಿಯ ಸೋದರ ಬಿ. ಎಂ. ಶರ್ಮರೊಡನೆ ಒಟ್ಟಾಗಿಯೂ ರಚಿಸಿದ ಮಕ್ಕಳ ಪುಸ್ತಕಗಳ ಒಟ್ಟು ಸಂಖ್ಯೆ 85.

ಅವುಗಳ ಭಾಷೆ ಸರಳ, ಶೈಲಿ ಸುಂದರ, ಕುತೂಹಲ ಕೆರಳಿಸುವ ರಚನೆ, ಕಥೆಗಳಿಗೆ ಪೂರಕವಾಗಿ ಆಕರ್ಷಕ ಚಿತ್ರಗಳು, ಸುಂದರವಾದ ಮುದ್ರಣ ಕೈಗೆತ್ತಿಕೊಂಡರೇ ಸಂತೋಷ. ಅಂದು ಆ ಕೃತಿಗಳನ್ನು ಓದಿದ ಮಕ್ಕಳು ಇಂದಿಗೂ ಅವುಗಳನ್ನು ಜ್ಞಾಪಿಸಿಕೊಳ್ಳುತ್ತಾರೆ. ಈ ಪುಸ್ತಕಗಳು 6-7 ಮುದ್ರಣಗಳನ್ನು ಕಂಡಿವೆ ಎಂದರೆ ಅವು ಮಕ್ಕಳಿಗೆ ಎಷ್ಟು ಪ್ರಿಯವಾಗಿದ್ದವು ಎಂದು ಅರ್ಥಮಾಡಿಕೊಳ್ಳಬಹುದು ಎಂಬುದಾಗಿ ಬೋಳಂತಕೋಡಿ ಈಶ್ವರ ಭಟ್ಟರು ಬರೆಯುತ್ತಾರೆ. ಇದು ಸತ್ಯವೆಂಬುದರಲ್ಲಿ ಸಂದೇಹವಿಲ್ಲ. ಮಕ್ಕಳ ಮಂಟಪ ಪುಸ್ತಕಮಾಲೆ ಅವರದು. ಗಾಂಧೀಜಿ ಮಗುವೊಂದನ್ನು ಮುದ್ರಿಸುವ ಚಿತ್ರವೇ ಅದರ ಲಾಂಛನ. ಶ್ರೀ ಈಶ್ವರ ಭಟ್ಟರೊಡಗೂಡಿ ಕನ್ನಡ ಪ್ರಪಂಚ ಪ್ರಕಾಶನ ಎಂಬ ಸಂಸ್ಥೆಯನ್ನು ಅವರು ಕಟ್ಟಿದ್ದಾರೆ. ಅದನ್ನು ಈಶ್ವರ ಭಟ್ಟರು ಇಂದಿಗೂ ನುಡಿಯುತ್ತಾರೆ. ಈ ಸಂಸ್ಥೆ ಗುಲ್ವಾಡಿಯವರ ಇಂದಿರಾ ಬಾಯಿ, ಬೋಳಾರ ಬಾಬು ರಾಯರ ವಾಗ್ದೇವಿಯ ಪುನರ್ಮುದ್ರಣ ಹೊರತಂದ ಖ್ಯಾತಿ ಪಡೆದಿದೆ.

ಸಾಧಕ - ಸಾಹಿತಿ ನಿರಂಜನ

ಕೇವಲ ಬಡತನದಲ್ಲಿ ಜನಿಸಿ, ಕಷ್ಟದಿಂದ ಓದಿ ಹಳ್ಳಿಯ ಮೂಲೆಯಿಂದ - ಮುಂದೆ ಸಾಗಿದ ಸಾಧಕ ಕುಳಕುಂದ ಶಿವರಾಯರು 'ನಿರಂಜನ'ರಾಗಿ ಕನ್ನಡ ಸಾಹಿತ್ಯದಲ್ಲಿ ಧ್ರುವ ನಕ್ಷತ್ರದಂತೆ ಬೆಳಗಿದ್ದಾರೆ. ಪ್ರಗತಿಶೀಲ ಸಾಹಿತ್ಯ ಚಳುವಳಿಯ ಮುಂಚೂಣಿಯ ನಾಯಕರಾಗಿ ಹೋರಾಟ ನಡೆಸಿ ಅಪಾರ ಸಾಧನೆ ಮಾಡಿದ ನಿರಂಜನರ ಹೆಸರು ನಾಡಿನ ಆದ್ಯಂತ ಪಸರಿಸಿದೆ. ಅವರೊಬ್ಬ ಕತೆಗಾರ, ಉತ್ತಮ ಕಾದಂಬರಿಕಾರ, ಪತ್ರಕರ್ತ, ವಿಮರ್ಶಕ, ಅಂಕಣಕಾರ, ಚಿಂತಕ, ಕನ್ನಡ ವಿಶ್ವಕೋಶಗಳ ಅಧ್ವರ್ಯು ಸಮಾಜ ಸೇವಕ ಕೂಡಾ ಆಗಿದ್ದರು.

ಮಂಗಳೂರಿನಲ್ಲಿ 1953ರಲ್ಲಿ ನನಗೆ ಅವರನ್ನು ಮೊದಲಾಗಿ ನೋಡುವ ಅವಕಾಶ ಲಭಿಸಿತ್ತು. ಮದ್ರಾಸು ವಿಶ್ವವಿದ್ಯಾಲಯದ ಶಿರೋಮಣಿ ಪರೀಕ್ಷೆಗಾಗಿ ಸರಕಾರಿ ಕಾಲೇಜಿಗೆ ಹೋಗುವ ಸಂದರ್ಭದಲ್ಲಿ ಮಂಗಳೂರಿನಲ್ಲಿರಬೇಕಾಗಿತ್ತು. ಆಗ ನಿರಂಜನರು ವಿಶ್ವಭವನದಲ್ಲಿ ತಂಗಿದ್ದರು. ಅವರು ಪ್ರಥಮ ಪರಿಚಯದಲ್ಲಿಯೇ ನನ್ನನ್ನು ಕನ್ಯಾನದವನೆಂದೊಡನೆಯೇ 'ಕಾರಂತರ ಮಕ್ಕಳ ಕೂಟ'ದ ದಿನವನ್ನು ನೆನಪಿಸಿದರು. 1934ರಲ್ಲಿ ಕನ್ಯಾನದಲ್ಲಿ ಮಕ್ಕಳಕೂಟವನ್ನು ಕಾರಂತರು

ಏರ್ಪಡಿಸಿದ್ದಾಗ ಮಕ್ಕಳ ಕೂಟದಲ್ಲಿ ಭಾಗವಹಿಸಿದುದು ಅವರಿಗೆ ಅಚ್ಚಳಿಯದೆ ನೆನಪಾಗಿತ್ತು. ಅಂದಿನಿಂದ ನನಗೂ ಸುಲಭದಲ್ಲಿ ಅವರ ಪರಿಚಯದ ಲಾಭ, ಮುಂದೆ ಧಾರವಾಡದಲ್ಲಿ ಬೆಂಗಳೂರುಗಳಲ್ಲಿ ಹಲವಾರು ವಿಚಾರಗಳಲ್ಲಿ ಲಭ್ಯವಾಯಿತು.

ಅವರು ಮಂಗಳೂರಿಗೆ ಬಂದಿದ್ದ ಆ ದಿನಗಳಲ್ಲಿ ಹಲವಾರು ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದರು. ಕೊಡಿಯಾಲ್‌ಬೈಲಿನಲ್ಲಿ 'ಪ್ರಗತಿಶೀಲ ಸಾಹಿತ್ಯ'ದ ಬಗ್ಗೆ ಅವರ ಭಾಷಣಕ್ಕೆ ನಾನು ಹೋಗಿದ್ದೆ. ಎಸ್. ಮುಕುಂದರಾಯರು ಅಂದಿನ ಅಧ್ಯಕ್ಷರಾಗಿದ್ದರು. ಅವರು ಅಧ್ಯಕ್ಷ ಭಾಷಣದಲ್ಲಿ ಹೇಳಿದ ಮಾತೊಂದು ಇಂದಿಗೂ ನೆನಪಿದೆ. "ಗಟ್ಟದ ಮೇಲಿನಿಂದ ಜಾನುವಾರುಗಳು ಕುಳಕುಂದಕ್ಕೆ ಬರುತ್ತವೆ. ನಾವು ಅವನ್ನು ಬರಮಾಡಿಕೊಂಡು ನಮ್ಮ ಕೃಷಿ - ಹೈನುಗಾರಿಕೆ ಮಾಡುತ್ತೇವೆ. ಆದರೆ ನಾವು ಪ್ರತಿಯಾಗಿ ಕುಳಕುಂದದಿಂದ ಶಿವರಾಯರನ್ನು ಗಟ್ಟದ ಮೇಲೆ ಕಳಿಸಿರುವುದರಿಂದ 'ಸಾಹಿತ್ಯದ ಕೃಷಿಗೆ ತುಂಬಾ ಲಾಭವಾಗಿದೆ. ಈ ಸಭೆಯಲ್ಲಿ ಮಂಗಳೂರಿನ ಹಿರಿಯ ಸಾಹಿತಿಗಳು ಬೋಳಂತಕೋಡಿ ಶಂಕರ ಭಟ್ಟರು, ಪಿ. ಕೆ. ನಾರಾಯಣ ಮೊದಲಾದವರಿದ್ದರು.

ಸಂಜೆ ಕೇಂದ್ರ ನೆಹರೂ ಮೈದಾನದಲ್ಲಿ ಕುಳುಕುಂದ ಶಿವರಾಯರು 'ಕಾಮ್ರೇಡ್' ಆಗಿ ಕಮ್ಯುನಿಸ್ಟ್ ಸಭೆಯಲ್ಲಿ ಮಾಡಿದ ಭಾಷಣವನ್ನು ಕೇಳಿದೆ. ಕಕ್ಕಿಲ್ಲಾಯಗು ಡಾ । ಎಂ. ಎಸ್. ಶಾಸ್ತ್ರಿ ಆ ಸಭೆಯ ನೇತೃತ್ವ ವಹಿಸಿದ್ದರು. ಪ್ರಗತಿಶೀಲ ಸಾಹಿತ್ಯ, ಕಮ್ಯುನಿಸ್ಟ್ ವಿಚಾರಧಾರೆಗಳ ಬಗ್ಗೆ ಆಗ ನನಗೆ ಮಾನಸಿಕ ತಳಮಳ ಸಾಕಷ್ಟಾಯಿತು. ನಿರಂಜನರ ಸಂಪರ್ಕ ಮಾತ್ರ ನನಗೆ ಎಂದೆಂದಿಗೂ ಆಪ್ಯಾಯಮಾನವೇ ಆಯಿತು. ಅವರು ಕಮ್ಯುನಿಸಂನಿಂದ ಸರಿದ ಮೇಲೂ ಅವರ ವಿಚಾರಧಾರೆಗಳೊಂದಿಗೆ ನಾನು ಸಂಪರ್ಕವಿರಿಸಿಕೊಂಡದ್ದುಂಟು. ಧಾರವಾಡದಲ್ಲಿ ಅವರ ಪತ್ನಿ ಡಾ। ಅನುಪಮಾ ನಿರಂಜನರು ದವಾಖಾನೆ ತೆರೆದಿದ್ದಾಗ, ಅಲ್ಲಿ ನನ್ನ ಪತ್ನಿಗೂ ಅವರೇ ವೈದ್ಯರಾಗಿ ಸಹಕರಿಸಿದುದನ್ನು ಮರೆಯುವಂತಿಲ್ಲ. ಇದು ನಿರಂಜನರ ಸ್ನೇಹದ ಲಾಭವೇ ಸರಿ.

ನಿರಂಜನರು ಬರೆದ ಕಾದಂಬರಿಗಳು ಅಸಂಖ್ಯ. ವಿಮೋಚನೆ, ಬನಶಂಕರಿ, ಅಭಯ, ದೂರದ ನಕ್ಷತ್ರ, ರಂಗಮ್ಮನ ವಠಾರ, ಸೌಭಾಗ್ಯ, ಪಾಲಿಗೆ ಬಂದ ಪಂಚಾಮೃತ, ಚಿರಸ್ಮರಣೆ, ಏಕಾಂಗಿನಿ, ಕೊನೆ ನಮಸ್ಕಾರ, ಮಿಣುಕು ಹುಳ, ವಿಲಾಸಿನಿ, ಕಲ್ಯಾಣ ಸ್ವಾಮಿ, ದೀಕ್ಷೆ, ನವೋದಯ, ಅಂಜನ, ಟೀಪು (ಐದು ಭಾಗಗಳಲ್ಲಿ) ಪ್ರಕಟವಾದ ಅವರ ಕಾದಂಬರಿಗಳು. ಸಂಧಿಕಾಲ, ರಕ್ತ ಸರೋವರ, ಅನ್ನಪೂರ್ಣ, ಕೊನೆಯ ಗಿರಾಕಿ, ಕಾತ್ಯಾಯಿನಿ, ನಾರಾನ್ನ ಹುಡುಗ ಅವರ ಕಥಾ ಸಂಕಲನಗಳು. 'ಸಾಧನಾ' ಜನಪ್ರಗತಿಯಲ್ಲಿ ಅವರು ಪ್ರೇಯಸಿಯಾಗಿದ್ದ ಅನುಪಮರಿಗೆ ಬರೆಯುತ್ತಿದ್ದ ಪತ್ರ ಸಂಕಲನ. ಪುಷ್ಪ ಹಾರವೂ ಅಂತೆಯೇ ಪತ್ರ ಸಂಕಲನ. ತಾಯಿ, ನೀತಿ ಕಥೆಗಳು, ನನ್ನ ಬಾಲ್ಯ, ಮದುವಣಗಿತ್ತಿ ಅವರ ಭಾಷಾಂತರಗಳು. ಮ್ಯಾಕ್ಸಿಂ ಗಾರ್ಕಿ ಜೀವನ ಚರಿತ್ರೆ, ಕಾಲಕ್ಷೇಪ, ಐದು ನಿಮಿಷ ಲೇಖನ ಸಂಕಲನಗಳು, ಕನ್ನಡ ವಿಶ್ವಕೋಶ ಅವರ ಬಹುದೊಡ್ಡ ಸಾಧನೆ.

ಕಡೆಂಗೋಡ್ಲು ಅವರ 'ರಾಷ್ಟ್ರಬಂಧು'ವಿನಲ್ಲಿ ಪತ್ರಿಕಾ ಜೀವನ ನಡೆಸಿ ಮುಂದೆ ನಡೆದು, ಬೆಂಗಳೂರಿನಲ್ಲಿ ವಿಸ್ತಾರವಾದ ಕಾರ್ಯಕ್ಷೇತ್ರವನ್ನು ಹೊಂದಿ ಸಾಹಿತ್ಯದ ವಿವಿಧ ಮಜಲುಗಳನ್ನು

ಹಾದು ಹೋಗಿ ಸಭ್ಯ ಸಾಹಿತಿಯೆಂದು ನಾಡಿನ ಜನರ ಆದರಕ್ಕೆ ಪಾತ್ರರಾದ 'ನಿರಂಜನ'ರು ಈ ಜಿಲ್ಲೆಗೊಂದು ಹೆಮ್ಮೆಯ ಚೇತನ.

ದಿಟ್ಟ ನಿಲುವಿನ ಕೆ. ಕೆ. ಶೆಟ್ಟರು

ವಿಶ್ವಕವಿ ರವೀಂದ್ರನಾಥ ಠಾಕೂರರ ಶಾಂತಿನಿಕೇತನದಲ್ಲಿ ವಿದ್ಯಾರ್ಥಿಯಾಗಿದ್ದ ಕೆ. ಕೆ. ಶೆಟ್ಟರು ಸಾಹಿತ್ಯ - ಸಾಮಾಜಿಕ, ರಾಜಕೀಯ ರಂಗಗಳಲ್ಲಿ ಹೆಸರಾಗಿದ್ದಾರೆ. ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರಾಗಿ ಪಾರ್ಲಿಮೆಂಟ್ ಸದಸ್ಯರಾಗಿ ವಿಧಾನ ಪರಿಷತ್ ಉಪ ಸಭಾಪತಿಯಾಗಿ ಗಣ್ಯರೆನಿಸಿದವರು. ಇವರ ರಾಷ್ಟ್ರೀಯತೆ - ಗಾಂಧೀವಾದಗಳಿಗೆ ರವೀಂದ್ರರ ಪ್ರಭಾವ ಬಹಳಷ್ಟಿತ್ತು. ಇವರ ಸಾಹಿತ್ಯಿಕ ಹಿನ್ನೆಲೆ - ರಾಜಕೀಯ, ಸಾಮಾಜಿಕ ಧುರೀಣತ್ವಕ್ಕೆ ಒಪ್ಪಕೊಟ್ಟಿದೆ.

ಸಂಶಯ ಪಿಶಾಚಿ, ದೇಶಭಕ್ತ, ಕುಶಲವ, ಮುಂದಿನ ದೇವರು, ಹೆಂಡ್ತಿ ಗಂಡನಾದರೆ, ವ್ಯಭಿಚಾರಿಣಿ ಯಾರು ?, ಸಂನ್ಯಾಸಿಯ ಸೋಗಿನಲ್ಲಿ, ಪುರುಷ ವಧು, ಪ್ರೇಮ ವಿಜಯ ಮುಂತಾದ ನಾಟಕಗಳನ್ನು ಇವರು ರಚಿಸಿದ್ದಾರೆ. ಈ ನಾಟಕಗಳಲ್ಲಿ ಸಾಮಾಜಿಕ ಕ್ರಾಂತಿ, ದೇಶಭಕ್ತಿ ಪ್ರಮುಖ ಅಂಶವಾಗಿತ್ತು. ವ್ಯಭಿಚಾರಿಣಿ ಯಾರು ಮತ್ತು ಪುರುಷ ವಧು ಎಂಬ ನಾಟಕಗಳಲ್ಲಿ ಪಾತ್ರ ವಹಿಸುವ ಅವಕಾಶದಿಂದ ನಾನೂ ನಾಟಕದ ಸ್ವಾರಸ್ಯವನ್ನುಂಡವನಾಗಿದ್ದೇನೆ.

ಇವರು ಸ್ವತಃ ಬರೆಹಗಾರರಾಗಿದ್ದುದ್ದಲ್ಲದೆ ಹಲವಾರು ಉದಯೋನ್ಮುಖರನ್ನು ಬೆಳಕಿಗೆ ತಂದಿದ್ದಾರೆ. ಕಯ್ಯಾರರು, ಬಿ. ಆರ್. ನಾಗೇಶ, ರಾಜವಾಡೆ, ಕೆ. ವಿ. ಆಚಾರ್ಯ, ಕುಶಿ, ಕುಮಾರ ಸ್ವಾಮಿ, ವೆಂಕಟರಾಜ, ದೇವಕಿ ಮೊದಲಾದವರು ಕೆ. ಕೆ. ಶೆಟ್ಟರ ಹಾಗೂ ಹೊನ್ನಯ್ಯ ಶೆಟ್ಟರ ವಿಶ್ವಾಸ - ಸಹಕಾರ ಗಳಿಸಿದವರು.

ಶ್ರೀ ಶೆಟ್ಟರ ಸಾಮಾಜಿಕ ಕಳಕಳಿ, ಸ್ಥೈರ್ಯ, ಎದೆಗಾರಿಕೆ - ರಾಷ್ಟ್ರೀಯತೆ ಇವುಗಳಿಗೆಲ್ಲಾ ಸಾಹಿತ್ಯ ಪ್ರೇಮವು ಬುನಾದಿಯಾಗಿತ್ತು. ಬರೆಹಗಾರನಾಗಿ ಸಹೃದಯತೆಯನ್ನು ಮೈಗೂಡಿಸಿ ಕೊಂಡವನು ರಾಜಕಾರಣಿಯಾದರೂ ನಾಡಿನ ಚಿಂತನೆಯನ್ನು ಮಾಡುವ ವಿಧಾನ ಅನನ್ಯ ಎಂಬುದಕ್ಕೆ ನಮ್ಮ ಎಷ್ಟೋ ರಾಷ್ಟ್ರ ಪ್ರಮುಖರ ಸಾಲಿನಲ್ಲಿ ಕೆ. ಕೆ. ಶೆಟ್ಟರೂ ಬರುತ್ತಾರೆ. ಉತ್ತಮ ರಾಜಕಾರಣಿಗೂ ಸಾಹಿತ್ಯದ ಹಿನ್ನೆಲೆ ಎಷ್ಟು ಪೋಷಕವಾಗುತ್ತದೆ ಎಂಬುದಕ್ಕೆ ಶೆಟ್ಟರೇ ಸಾಕ್ಷಿ. ಅವರು ತಮ್ಮ ಜೀವನದ ನೆನಹುಗಳನ್ನು 'ಮುಂಗಾರು' ಪತ್ರಿಕೆಗಳಲ್ಲಿ ಬರೆದು ಪ್ರಕಟಿಸಿದ್ದಾರೆ. ಅವರ ಮನೋಗತವನ್ನು ಇದರಲ್ಲಿ ಸ್ಪಷ್ಟ ಪಡಿಸಿದ್ದಾರೆ. ಹೀಗೆ ರಾಜಕಾರಣಿಯಾಗುವ ಮೊದಲು ಸಾಹಿತಿಯಾಗಿ ಅವರು ಸಲ್ಲಿಸಿದ ಸೇವೆ ಗಮನಾರ್ಹವಾಗಿದೆ.

ಗಿರಿಬಾಲೆ

ಸರಸ್ವತೀ ಬಾಯಿ ರಾಜವಾಡೆ ದಕ್ಷಿಣ ಕನ್ನಡದ ಮಹಿಳಾ ಬರೆಹಗಾರ್ತಿಯರ ಪೈಕಿ ಗಣ್ಯವಾದ ಹಳೆಯ ಹೆಸರು. 'ಗಿರಿಬಾಲೆ' ಎಂಬ ಕಾವ್ಯ ನಾಮದಿಂದ ಇವರು ಬರೆಯುತ್ತಿದ್ದುದು ಹೆಚ್ಚಾಗಿ ಕಂಡುಬರುತ್ತದೆ. 1913ರಲ್ಲಿ ಜನಿಸಿದ ಸರಸ್ವತೀ ಬಾಯಿಯವರು ಜೀವನದಲ್ಲಿ ಉತ್ತಮ ಅವಕಾಶಗಳಿಗಾಗಿ ಹಂಬಲಿಸಿ ಪಡೆದುಕೊಂಡು ಧನ್ಯತೆಯನ್ನು ಅನುಭವಿಸಿದವರೆಂದು ತಿಳಿಯಲ್ಪಟ್ಟಿದ್ದಾರೆ.

'ಗಿರಿಬಾಲೆ' ಸಣ್ಣಕತೆ ಬರೆಯುವುದರಲ್ಲಿ ಎತ್ತಿದ ಕೈ. ಅಪೂರ್ವ ವಿಚಾರಗಳು, ದಿಟ್ಟ ನಿಲುವು ಇವರ ಕತೆಗಳ ಮುಖ್ಯ ಅಂಶಗಳು. 'ಹಿಂದೂ' ಪತ್ರಿಕೆಯಲ್ಲಿ ಇವರ ಕತೆಗಳನ್ನು ವಿಮರ್ಶಿಸಿದ ಮಹನೀಯರು ಗಿರಿಬಾಲೆ ಸಣ್ಣ ಕತೆಗಳ 'ಅನಭಿಷಿಕ್ತ ಸಾಮ್ರಾಜ್ಞಿ' ಎಂಬುದಾಗಿ ಪ್ರಶಂಸಿಸಿದ್ದಾರಂತೆ.

ಗಿರಿಬಾಲೆ ಕತೆ ಮಾತ್ರವಲ್ಲ ಕವನ - ಪ್ರಬಂಧ, ನಾಟಕ ಮೊದಲಾದ ವಿಭಾಗಗಳಲ್ಲಿಯೂ ಆಸಕ್ತಿ ವಹಿಸಿದ್ದರು. ಪತ್ರಿಕೆಗಳಲ್ಲಿ ಅವರು ಈ ಎಲ್ಲಾ ವಿಚಾರಗಳಲ್ಲಿಯೂ ತಮ್ಮ ಅನಿಸಿಕೆಗಳನ್ನು ವ್ಯಕ್ತಪಡಿಸಿದ್ದಾರೆ. ಉಡುಪಿ ಹಾಗೂ ಈ ಜಿಲ್ಲೆಯಲ್ಲಿ 'ಗಿರಿಬಾಲೆ' ಎಂದರೆ ಬಹಳಷ್ಟು ಉತ್ತಮ ಬರೆಹಗಾರ್ತಿ ಎಂದು ಹೆಸರಾದವರು. ವಿಪುಲವಾದ ಅವರ ಸಾಹಿತ್ಯ ಕೃಷಿ ಮಹಿಳಾಲೋಕಕ್ಕೊಂದು ಹೆಮ್ಮೆಯೆನಿಸಿತ್ತು. ಅವರು ಬರೆದ ಕತೆಗಳು ಅರುವತ್ತಾರು ಲೆಕ್ಕಕ್ಕೆ ಸಿಕ್ಕಿವೆಯಂತೆ. ನಾಲ್ಕು ಧಾರ್ಮಿಕ ಕೃತಿ, ಇಪ್ಪತ್ತಮೂರು ಕವನಗಳನ್ನು ರಚಿಸಿದ್ದರೆಂದು ತಿಳಿದುಬಂದಿದೆ. ಇನ್ನೆಷ್ಟೋ ಬರೆಹಗಳನ್ನು ಅವರು ಬರೆದಿದ್ದಾರಂತೆ.

ಜೀವನದ ಕೊನೆಗಾಲದಲ್ಲಿ ವಿರಕ್ತಿ ತಳೆದು ದೇವಾಲಯ ನಿರ್ಮಾಣ ಮಾಡಿಸಿದರೆಂದು ಅವರ ಬಗ್ಗೆ ಕುರಾಡಿ ಸೀತಾರಾಮ ಅಡಿಗರು ತಿಳಿಸಿದ್ದಾರೆ.

ನವ್ಯ ಕವಿ ಗೋಪಾಲಕೃಷ್ಣ ಅಡಿಗರು

ಕನ್ನಡ ಕಾವ್ಯಮಾರ್ಗದಲ್ಲಿ ಹೊಸತೊಂದು ಮೈಲಿಗಲ್ಲಾಗಿ ಬೆಳಗಿದವರು ಎನ್ನುವುದಕ್ಕಿಂತಲೂ ಹೊಸತೊಂದು ಮಾರ್ಗದ ಪ್ರಸ್ಥಾರರೆಂದೇ ಗುರುತಿಸಲಾಗುವ ಅಡಿಗರ ಬಗ್ಗೆ ಬರೆಯಲು ಹೊರಟರೆ ಕೈ ಸೋಲುವುದಂತೂ ನಿಶ್ಚಿತ. ಕನ್ನಡದ ನೆಲದಲ್ಲಿ ಹೊಸ ಕಾವ್ಯದ ಗಾಳಿ ಬೀಸಿ ಸುತ್ತಣ ನೆಲವನ್ನು ಕಂಪಿನಿಂದ ಗಮಗಮಿಸುವಂತೆ ಮಾಡಿದ ಅಡಿಗರು ನವ್ಯ ಮಾರ್ಗದ ನೇತಾರರು. ಯುವ ಕವಿಗಳಿಗೆ ಮಾರ್ಗದರ್ಶಿ, ಹಿರಿಯ ಕವಿಗಳ ಪ್ರೀತಿಗೂ ಪಾತ್ರರಾದವರು.

ಹೊಸತಿನಲ್ಲಿ ಏನಿದೆ ಎಂಬುದಕ್ಕೆ ಅಡಿಗರ ಕಾವ್ಯಗಳು ಸಮರ್ಪಕ ಉತ್ತರ ನೀಡಿವೆ. ಭಾವತರಂಗ, ಕಟ್ಟುವೆವು ನಾವು, ನಡೆದು ಬಂದ ದಾರಿ ಅಡಿಗರ ಉತ್ತಮ ಕೊಡುಗೆಗಳೆಂದು ಹೆಸರಾಗಿವೆ. 'ಚೆಂಡೆ ಮದ್ದಳೆ' ಕರಾವಳಿಯ ಕವಿಯ ವರದಾನವಾಗಿದೆ. ಭೂಮಿಗೀತ, ವರ್ಧಮಾನ ಮೊದಲಾದವುಗಳಿಂದ ಕಾವ್ಯ ಪಂಥ ಅರಳಿದ ಬಗೆ ಗೋಚರಿಸುತ್ತದೆ.

"ಏನಾದರೂ ಮಾಡುತಿರು ತಮ್ಮ, ನೀ ಸುಮ್ಮನಿರಬೇಡ" ಇದು ನವ್ಯವಾಗಿ ಎಷ್ಟೊಂದು ರಮಣೀಯವಾಗಿ ಮೂಡಿಬಂದಿದೆಯೆಂಬುದನ್ನು ಓದಿಯೇ ಅನುಭವಿಸಬೇಕು.

ಬಾಳು ಬಹುಮುಖವನ್ನು ಒಳಗೊಂಡಿದ್ದರೂ ಗತ, ವರ್ತಮಾನ, ಭವಿಷ್ಯಗಳನ್ನು ಹೊಂದಿಸಿಕೊಳ್ಳುವ, ಸಾವು - ಬದುಕುಗಳ ಮಾನವ ಜೀವನ - ನಿಸರ್ಗಗಳ ಸಕಲ ಪ್ರವೃತ್ತಿಗಳನ್ನು ಅರಗಿಸಿಕೊಳ್ಳುವ ಪರಿಪಕ್ವತೆಯಿಂದ ಸಂಸ್ಕರಿಸಬೇಕು ಎನ್ನುವ ತತ್ವಕ್ಕೆ ಒತ್ತು ಕೊಡುವ ಅಂಶವನ್ನು ಅಡಿಗರ ಕಾವ್ಯಗಳಲ್ಲಿ ಧಾರಾಳ ಗಮನಿಸಬಹುದಾಗಿದೆ. ಈ ರಮ್ಯ ಪಂಥದಲ್ಲಿ ಬರೆದ ಅವರ 'ಮೋಹನ ಮುರಳಿ'ಯಲ್ಲಿಯೂ ಜೀವನ ಸಂಗೀತದ ನಾದವನ್ನು ನಿನದಿಸಿದ್ದಾರೆ. 'ನಡೆದು ಬಂದ ದಾರಿಯ ಕಡೆ ತಿರುಗಬೇಡ, ಕಣ್ಣು ಹೊರಳಿಸಬೇಡ' ಎಂಬುದು ಅವರ ತೀರ್ಮಾನ ಮತ್ತು ಸಂದೇಶ. ನವ್ಯ ಮಾರ್ಗದಲ್ಲಿ ಸಾಗುವಾಗ ಅವರಿಗಿದ್ದ ಕಾಳಜಿ, ಕಾವ್ಯವು ಜನಮನವನ್ನು ಹೊಕ್ಕು ಭಾವನೆಯನ್ನುಕ್ಕಿಸಬೇಕು. ಹೊಸ ಹೊಸ ವಸ್ತುಗಳು, ಭಾವನಾ ವಿಲಾಸಗಳು, ಭಾಷೆಯ ಲಾಲಿತ್ಯ, ಪ್ರತಿಮೆಗಳ ನಿರ್ಮಾಣ, ಉದಾತ್ತ ಧ್ಯೇಯಗಳಿಂದ ಅವರು ತಮ್ಮ ಅಡಿಗತನವನ್ನು ಮೆರೆದಿದ್ದಾರೆ. ನವ್ಯ ಕವಿಗಳೆಲ್ಲರಿಗೂ ಮುಂದಿನವರಾಗಿ ನಿಂತು ಕಾವ್ಯದ ಉತ್ತುಂಗತೆಯನ್ನು ಮನಗಾಣಿಸಿದ್ದಾರೆ. 'ಕಟ್ಟುವೆವು ನಾವು' ಎಂಬುದು ಅವರ ಧೀರ ನಿರ್ಧಾರದ ಹೊಸ ಭಾವನಾತರಂಗಗಳ, ನವ್ಯ ಪರಂಪರೆಯ ರಮ್ಯ ನಿರೂಪಣೆ.

ಅಡಿಗರ ಕಾವ್ಯಧೋರಣೆ ಬದುಕಿನ ಹತ್ತಿರದಿಂದ ಅಲ್ಲ, ಬದುಕಿನ ಆಳದಿಂದ ರೂಪಿತವಾದುದು. ವರ್ಣನಾಮಯ ಲೋಕದ, ಕಲ್ಪನಾಭರಿತ ನಿರೂಪಣೆಗಳ ಜಾಡು ಅವರಿಗೆ ಹಿಡಿಸದು. ಬದುಕಿನ ಸೊಗಸನ್ನು ಆಂತರ್ಯದ ಕಸುವನ್ನು ಎರಕ ಹೊಯ್ಯುವ ಕೆಲಸದಲ್ಲಿ ಅವರಿಗೆ ಆಸಕ್ತಿ. ನೋವು - ನಲಿವುಗಳಿಗೆ ಸ್ಪಂದಿಸುವ, ಜೀವನ ಶೈಲಿಗೆ ನೂತನ ಆಯಾಮವನ್ನು ನೀಡಿ, ಸಮಾಜದ ಒಳಹೊರಗುಗಳಲ್ಲಿ ಕ್ಷಕಿರಣ ಬೀರಿ ಅಗತ್ಯವುಳ್ಳ ಚಿಕಿತ್ಸೆಯನ್ನು ಅವರ ಕವನಗಳು ಅವಷ್ಯಕ್ಕೆ ಮಾಡುವ ಕಾಯಕವೆಂದು ನಂಬಿದ ಕವಿ ಅಡಿಗರು.

ಆಕ್ರೋಶ - ವಿಡಂಬನೆಗಳಿಂದ, ವಾಸ್ತವ ಲೋಕವನ್ನು ಸೃಜಿಸುವ ಗಂಭೀರ ಅನ್ವೇಷಣೆ ಅನುವಾಗುವ ಮಾರ್ಗ ಅಡಿಗರದು. ಆದುದರಿಂದಲೇ ನವ್ಯಕವಿಗಳ ಸಾರ್ವಭೌಮರಾಗಿ ಅವರು ಮಿಂಚಿದ್ದಾರೆ. ತನ್ನ ಕಾಲದ ಎಲ್ಲಾ ಕವಿಗಳಿಂದಲೂ ಆದರವನ್ನು ಗಳಿಸಿದ್ದಾರೆ. ವರ್ಧಮಾನ ದೆಹಲಿಯಲ್ಲಿ ಕೃತಿಗಳು ಅವರ ಕಾವ್ಯ ಸತ್ವಾತಿಶಯವನ್ನು ಸಾರಬಲ್ಲವುಗಳಾಗಿವೆ.

ಅವರು 'ಅನಾಥೆ' ಎಂಬ ಕಾದಂಬರಿಯನ್ನು ರಚಿಸಿದ್ದಾರೆ. ಮಣ್ಣಿನ ವಾಸನೆ, ಕನ್ನಡದ ಅಭಿಮಾನ, ವಿಚಾರ ಪಥ ಮೊದಲಾದ ಲೇಖನಗಳಿಂದ ತಮ್ಮ ಸಾಹಿತ್ಯಿಕ, ರಾಜಕೀಯ ಸಾಮಾಜಿಕ, ಸಾಂಸ್ಕೃತಿಕ ಜೀವನ ಮೌಲ್ಯಗಳನ್ನು ಪ್ರತಿಪಾದಿಸಿದ್ದಾರೆ. ಸುವರ್ಣ ಕೀಟ, ರೈತನ ಹುಡುಗಿ, ಭೂಗರ್ಭಯಾತ್ರೆ, ಮುಕ್ತಾಫಲ, ಹುಲ್ಲಿನ ದಳಗಳು, ಬನದ ಮಕ್ಕಳು ಅವರ ಅನುವಾದ ಸಾಮರ್ಥ್ಯದ ಪ್ರತೀಕಗಳಾಗಿವೆ. ಉತ್ತಮ ದಕ್ಷ ಉಪನ್ಯಾಸಕರೂ ಆಡಳಿತಗಾರರೂ ಆಗಿ ಪರಿಪಕ್ವ ಜೀವನ ನಡೆಸಿದ ಅಡಿಗರು ತಮ್ಮದೇ ಆದ ಛಾಪನ್ನು ಮೂಡಿಸುವಲ್ಲಿ ಸಫಲರಾದ ಕನ್ನಡದ ಹೆಮ್ಮೆಯ ಕವಿ. ಧರ್ಮಸ್ಥಳದಲ್ಲಿ ಜರಗಿದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಪೀಠವನ್ನು ಅಲಂಕರಿಸಿ ನಾಡು-ನುಡಿಗೆ ಅವರು ನೀಡಿದ ಸಂದೇಶ ಕಾವ್ಯಮಯ-ಸಂಸ್ಕಾರಮಯವಾಗಿದೆ.

ಬಹುಶ್ರುತ ಪ್ರತಿಭೆಯ
ಪ್ರೊ. ಬಿ. ಎಚ್. ಶ್ರೀಧರ್

ಬಹುಶ್ರುತ ಪ್ರತಿಭೆಯ ಪ್ರೊ. ಬಿ. ಎಚ್. ಶ್ರೀಧರ್ ಅವರು ಪಾಂಡಿತ್ಯ - ಪ್ರತಿಭೆಗಳಿಗೆ ಮತ್ತೊಂದು ಹೆಸರು. ಅವರ ವಿಚಾರಧಾರೆ ನಿರರ್ಗಳವಾಗಿ ಹರಿಯುವ ಮಹಸ್ರೋತ. ಭೋರ್ಗರೆಯುವ ಜಲಪಾತವನ್ನು ನೆನಪಿಗೆ ತರುವ ವಾಗ್ಧಾರೆ. ಕಾವ್ಯ, ಬರೆಹ ಪ್ರತಿಯೊಂದರಲ್ಲಿಯೂ ತನ್ನದೇ ಆದ ಛಾಪು ಅವರದು.

ಮೇಘನಾದ, ಅಮೃತ ಬಿಂದು, ರಸಯಜ್ಞ ಇವರ ಕವನ ಸಂಕಲನಗಳು. ಅವರ ಭಾವನೆಯೂ ಬುದ್ಧಿವಿಲಾಸವೂ ಕೈಕೈ ಹಿಡಿದುಕೊಂಡು ಸಾಗುತ್ತಿವೆಯೆಂದು ಕವಿ ಅಮ್ಮೆಂಬಳರು ಶ್ರೀಧರರ ಬಗ್ಗೆ ಬರೆದಿದ್ದಾರೆ.

ಮೊನಚಾದ ವಿಡಂಬನೆಯಲ್ಲಿ ಶ್ರೀಧರರು ಎತ್ತಿದ ಕೈ. ಕವನಗಳಲ್ಲಿಯೂ ಅದು ಎದ್ದು ಕಾಣುತ್ತದೆ. ಪಾಂಡಿತ್ಯದ ಖನಿಯಾಗಿ, ವಿಚಾರ ಸರಣಿಗಳನ್ನು ಪುಂಖಾನುಪುಂಖವಾಗಿ ಹೊರಹೊಮ್ಮಿಸುವುದು ಅವರ ಪ್ರಕೃತಿ. ಆಳವಾದ ವ್ಯುತ್ಪತ್ತಿ ತರ್ಕಬದ್ಧ ವಿಚಾರಗಳಿಂದ ಅವರ ಮಾತು ಮಿಂಚುತ್ತದೆ. ಕೃತಿ ಕಳೆಯೇರುತ್ತದೆ.

"ಯಸ್ಟಿ ಬಸ್, ಯಸ್ಟಿ ಬಸ್, ಧೂಳಿರಾಜ ಯಷ್ಟಿ ಬಸ್," ಅವರದೊಂದು ಕವನ. ಮುಂಬಯಿ ಸರಕಾರವು ಬಸ್ಸನ್ನು ರಾಷ್ಟ್ರೀಕರಣ ಮಾಡಿ ಕೆಂಪು ಬಸ್ಸುಗಳು ಉತ್ತರ ಕನ್ನಡದಲ್ಲಿ ಓಡಾಡುವ ಪ್ರಾರಂಭದ ದಿನಗಳಲ್ಲಿ ಧೂಳೆಬ್ಬಿಸಿಕೊಂಡು ಭಟ್ಕಳದ ತನಕ ಬರುತ್ತಿದ್ದ ಆ ದೃಶ್ಯ ನನ್ನ ಕಣ್ಣಿಗೆ ಬಿದ್ದುದೂ ಈ ಕವಿತೆ ಕಣ್ಣಿಗೆ ಬಿದ್ದುದೂ ಸರಿ ಸುಮಾರು ಒಂದೇ ಸಮಯದಲ್ಲಿ. ಹದಿನೈದನೆಯ ದಶಕದ ಕೊನೆಯ ದಿನಗಳಲ್ಲಿ ಅವರು ಕುಮಟಾ ಕಾಲೇಜಿನಲ್ಲಿ ಪ್ರಾಂಶುಪಾಲರಾಗಿದ್ದ ದಿನಗಳಲ್ಲಿ ಅವರನ್ನು ನೋಡುವುದಕ್ಕಾಗಿಯೇ ನಾನು ಹೋಗಿದ್ದಾಗ ಕೆಂಪು ಬಸ್ಸು ನನ್ನನ್ನು ಧೂಳಿಯಲ್ಲಿ ಮುಳುಗಿಸಿದ್ದರೂ ಶ್ರೀಧರರನ್ನು ನೋಡಿ ಮೈ ಕೊಡವಿಕೊಂಡೆ. ಮನಸ್ಸಂತೂ ನಿರ್ಮಲವಾಗಿ ಬಿಟ್ಟಿತು.

ಶ್ರೀಧರರು ಪ್ರಬುದ್ಧ - ಬರೆಹಗಾರರು ತೀಕ್ಷ್ಣ ವಿಮರ್ಶಕರು, ಕಟುವಾದ ಟಿಪ್ಪಣಿಗಾರರು ವ್ಯಂಗ್ಯದ ನುಡಿಯಲ್ಲಿ ನಿಸ್ಸೀಮರು. ಅಂತೆಯೇ ಕಾವ್ಯ ಲೋಕದಲ್ಲಿ ಸಹೃದಯ - ಸರಸ ಕವಿಗಳು ಕೂಡಾ. ವಿವೇಚನೆ ಅಲ್ಲಿಯೂ ಎದ್ದು ಬಂದಿದೆ.

"ಆಪ್ತ ಜೀವದ ನೆಚ್ಚಿಗಿಂತಮೃತ ಬೇರಿಲ್ಲ
ಅದನುಂಡುತಣಿ ಜೀವಿ, ಹಾರಿಲ್ಲದೊಡೆ ಬಾವಿ,
ಅದೆ ಭುಕ್ತಿ ಅದೆ ಶಕ್ತಿ ಅದೆ ಜೀವನಾಧಾರ
ಮುದವೀವ ಮಂದಾರ, ಕಮಲಿನೀಕಾಸಾರ
ಅದು ಲಬಿಸೆ ಬಾಳು ಹೊಂಬಾಳು, ಕಳೆದೊಡೆ ಹಾಳು"
"ಕವಿಯಿರಲಿ ರವಿಯಿರಲಿ, ಭವಿಯಿರಲಿ, ಭುವಿಯೊಳನು
ಭವದ ಮಾತೇ ಮಾತು ಅರಿಯ,
ಸವಿಯಿರಲಿ, ಕಹಿಯಿರಲಿ, ಅದನೊಪ್ಪದಿರಲಹುದು
ಸವಿದ ಹಣ್ಣಿನ ತಿರುಳ ರುಚಿಯ"

ಹೀಗೆ ಅನುಭವ - ಆಪ್ತವಾಕ್ಯ ಹಣ್ಣಿನ ತಿರುಳ ರುಚಿಯನ್ನು ಆಸ್ವಾದಿಸುವ ಕವಿಯಾಗಿ ಶ್ರೀಧರರು ಖ್ಯಾತರಾಗಿದ್ದಾರೆ.

ಅಚ್ಚಕನ್ನಡದ ಕೊಳಂಬೆ ಪುಟ್ಟಣ್ಣ ಗೌಡರು

ಯಕ್ಷಗಾನ ತಾಳಮದ್ದಳೆ ಕೂಟದಲ್ಲಿ ಹೆಸರಾಗಿದ್ದ ಕೊಳಂಬೆ ಪುಟ್ಟಣ್ಣ ಗೌಡರ ಅರ್ಥಗಾರಿಕೆ ಕೇಳಬೇಕೆಂಬ ಆಸೆಯಿಂದ ತಾಳಮದ್ದಳೆಗೆ ಹೋಗಿದ್ದೆ. ಅಂದು ಅವರು ಕೃಷ್ಣ ಸಂಧಾನದ ಕೌರವನಾಗಿ ಮಾತನಾಡಿದ ವೈಖರಿ, ಅವರ ಕನ್ನಡದ ಭಾಷೆಯ ಅಚ್ಚುಕಟ್ಟುತನ, ಸರಳವಾದ ಮಾತುಗಳಲ್ಲಿದ್ದರೂ ಪಾತ್ರ ಗಾಂಭೀರ್ಯವನ್ನು ಮೆರೆಸಿದ ವಿಧಾನ ಅನನ್ಯವಾಗಿತ್ತು ಎಂಬುದು ನನ್ನಂತೆಯೇ ಸಾವಿರಾರು ಜನರಿಗೆ ಸಮಾಧಾನ ತಂದಿದೆ. ಆ ಮಾತುಗಳನ್ನು ಕೇಳಿದಾಗ ಅವರ ಪರಿಚಯ - ಸಾಹಿತ್ಯ ಜ್ಞಾನದ ಅಂಶ ಬೆಳಕಿಗೆ ಬಂತು.

ಯಕ್ಷಗಾನ ಅವರ ಮನೆತನಕ್ಕೊಂದು ಹವ್ಯಾಸವಂತೆ. ಆದರೆ ಕೊಳಂಬೆಯವರು ಪಾತ್ರ ನಿರ್ವಹಣೆಯಲ್ಲಿ ವಹಿಸುತ್ತಿದ್ದುದು ಹೊಸ ವಿಧಾನವನ್ನು. ಅದರಲ್ಲಿ ಅವರ ಸಾಹಿತ್ಯ ಚೆನ್ನಾಗಿ ಕೆಲಸ ಮಾಡಿದೆ. ಅವರು ಓದಿದ್ದು ಶಾಲೆಯಲ್ಲಿ ಕಡಿಮೆಯಿದ್ದರೂ ಸ್ವಪ್ರಯತ್ನದಿಂದ ಮೇಲೆದ್ದು ಬಂದು ಹೈಸ್ಕೂಲಿನಲ್ಲಿ ಅಧ್ಯಾಪಕರಾಗಿದ್ದರು. ಮೊಳಹಳ್ಳಿ ಶಿವರಾವ್, ಎಂ. ಎಸ್. ಕಾಮತ್, ಉಗ್ರಾಣ ಮಂಗೇಶ ರಾಯರಂಥವರ ಒಡನಾಟದಿಂದ ಇವರ ಸಾಹಿತ್ಯ ಶಕ್ತಿ ವರ್ಧಿಸಿತೆನ್ನಬಹುದು. ಚೊಕ್ಕಾಡಿಯೆಂಬ ಹಳ್ಳಿಯಲ್ಲಿ ಜನಿಸಿದ ಶ್ರೀಯುತರು ಮುಂದೆ ನಾಡಿನ ಒಬ್ಬ ವಿದ್ವಾಂಸರ ಮಟ್ಟಕ್ಕೇರಿ ಕಿಲ್ಲೆ, ಕವಿಭೂಷಣ, ಶೇಣಿ, ಸಾಮಗರಂತೆ ಮಿಂಚಿದರು. ದೇರಾಜೆ ಸೀತಾರಾಮಯ್ಯ, ಅಜ್ಜನಗದ್ದೆಯವರೊಂದಿಗೆ ನಾಟಕರಂಗವನ್ನು ಬೆಳೆಸಿದರು. ಶಾರದಾಂಬಾ ಕೃಪಾ ಪೋಷಿತ ಯಕ್ಷಗಾನ ಮಂಡಳಿ ಇವರು ಸ್ಥಾಪಿಸಿದ, ಬೆಳೆಸಿದ ಸಂಸ್ಥೆ.

ಕವನ, ಸಣ್ಣ ಕಥೆ, ನಾಟಕ ಪುಸ್ತಕಗಳು, ಲೇಖನಗಳ ಮೂಲಕ ಇವರು ಸಾಹಿತ್ಯ ಸೇವೆ ನಡೆಸಿದ್ದಾರೆ. ಹೂವೀಡು, ಮಾತಿಲ್ಲಾ ಮಾತಿಲ್ಲಾ ಎಂಬ ಎರಡು ಶಿಶು ಸಾಹಿತ್ಯ ಕೃತಿಗಳು ಇವರವು. ಹಲವಾರು ಮಕ್ಕಳ ನಾಟಕಗಳು ತಾಳಿ, ತಲೆಯಂತೆ ಬಾಲ, ಕಾನೂನು, ಬಡವ ಸರಳ ಶೈಲಿಯಲ್ಲಿ ಬರೆದ ಅಪ್ರಕಟಿತ ಕೃತಿಗಳಾಗಿವೆ. 'ಹೊನ್ನಿನ ನಾಯಿಗಳು' ಎಂಬ ಕಥೆ ಬರೆದಿದ್ದಾರೆಂದು ತಿಳಿದು ಬಂದಿದೆ.

ಅವರ ಹೆಸರನ್ನು ಚಿರಸ್ಥಾಯಿಯನ್ನಾಗಿ ಮಾಡುವ ಕೃತಿಗಳು ಎರಡು. 'ಕಾಲೂರ ಚೆಲುವೆ' ನುಡಿವಣಿಗಳು. ಆಂಡಯ್ಯನ ಕಬ್ಬಿಗರ ಕಾವ, ತಿಮ್ಮಪ್ಪಯ್ಯನವರ ಸೊಬಗಿನ ಬಳ್ಳಿಯ ದಾರಿಯಲ್ಲಿ ಸಾಗಿದ ಕೃತಿಯಿದು. ಅಚ್ಚಗನ್ನಡದ ಸೊಗಸು ಇದರಲ್ಲಿ ತುಂಬಿ ಬಂದಿದೆ. 440 ವೀರ ಚೌಪದಿಗಳಲ್ಲಿರುವ ಈ ಕಾವ್ಯ ಮನೋಹರವಾಗಿದೆ. ನುಡಿವಣಿಗಳು, ಮುಕ್ತಕಗಳ ಸಂಕಲನ. ಜೀವನದ ವಿವಿಧ ಮುಖಗಳ ಕುರಿತಾದ ವಿಚಾರಗಳು ದೈವೀ ಶಕ್ತಿಯ ಅಲೌಕಿಕತೆಯನ್ನು ಸಾರುವ ಅನುಭವ ವಿಶೇಷಗಳನ್ನು ಮುಕ್ತಕಗಳಲ್ಲಿ ಕಾಣಬಹುದು. 'ಅಂತೆ' ಎಂಬ ಅಂಕಿತವನ್ನೊಳಗೊಂಡ ಈ ಪುಸ್ತಕಗಳು ಮುತ್ತುಗಳಾಗಿವೆ.

ಅಚ್ಚಗನ್ನಡದ ಪದಪ್ರಯೋಗಗಳಿಂದ ಭಾಷೆಯ ಸೊಬಗನ್ನು ಹೆಚ್ಚಿಸುವ ಪಂಡಿತ ಶ್ರೇಷ್ಠ ಕೊಳಂಬೆಯವರ ಕಾವ್ಯ ಪ್ರಪಂಚ ವಿಸ್ತಾರವಾದ ಹಿನ್ನೆಲೆ ಹೊಂದಿದೆ. ಪ್ರತಿಭೆ - ಪಾಂಡಿತ್ಯಗಳ ಎರಕವಾಗಿರುವ ಇವರು ನಾಡಿಗೊಬ್ಬ ಹೆಮ್ಮೆಯ ಕವಿ, ಸಾಹಿತಿ !

ಧೀರ ಪತ್ರಕರ್ತ ಎಂ. ಹರಿದಾಸ ರಾವ್

ದಕ್ಷಿಣ ಕನ್ನಡದ ಹಳ್ಳಿಯ ಮೂಲೆಯೊಂದರಲ್ಲಿ ಜನಿಸಿ, ಹಳ್ಳಿಯಿಂದ ಹುಬ್ಬಳ್ಳಿಗೆ ಹೋದ ಎಂ. ಹರಿದಾಸ್ ರಾವ್ ಒಬ್ಬ ಶ್ರೇಷ್ಠ ಬರೆಹಗಾರ, ಪತ್ರಕರ್ತ, ಭಾಷಣಕಾರ, ಹೋರಾಟಗಾರ, ಕಾದಂಬರಿಕಾರ, ರಾಜಕೀಯ, ಸಾಮಾಜಿಕ ದೃಷ್ಟಿಕೋನಗಳ ಪರಿಶುದ್ಧ ವ್ಯಕ್ತಿತ್ವ ಅವರದು.

ಅವರದು ಹೋರಾಟದ ಬದುಕು, ಕಳೆದ ಯುದ್ಧಾರಂಭದಲ್ಲಿ 'ದ್ವಿತೀಯ ಮಹಾಯುದ್ಧ, ಎಂಬ ಕೃತಿಯನ್ನು ಅವರು ರಚಿಸಿದರು. ಕನ್ನಡಕ್ಕೆ ಅಂಥ ಬರವಣಿಗೆ ಆಗ ಹೊಸತು ಎಂದು ನಿರಂಜನರು ಬಣ್ಣಿಸಿದ್ದಾರೆ. 'ಆ ಪುಟ್ಟ ಕೃತಿಯೇ ಅವರ ಮೇಧಾಶಕ್ತಿಗೂ ಲೇಖನಿಯ ಸಾಮರ್ಥ್ಯಕ್ಕೂ ಕನ್ನಡಿಯಾಯಿತು.' ಇದು ನಿರಂಜನರ ನುಡಿ.

ವಿಶ್ರಾಂತಿಯಿಲ್ಲದ ಹೋರಾಟಗಾರ ಹರಿದಾಸರಾಯರು, ಹುಬ್ಬಳ್ಳಿಯಲ್ಲಿಯೂ ತಮ್ಮ ರಾಷ್ಟ್ರೀಯ ಹೋರಾಟದ ದಾರಿಯನ್ನು ಮುಂದುವರೆಸಿ ಸೆರೆಮನೆವಾಸ ಅನುಭವಿಸಿದರು, ಮತ್ತೆ ಸಂಯುಕ್ತ ಕರ್ನಾಟಕ ಸೇರಿ ಪತ್ರಿಕಾ ಜೀವನ ನಡೆಸಿದರು. ಜೊತೆಯಲ್ಲಿ ಅನವರತ ಓದುವ ಅಭ್ಯಾಸವನ್ನು ಬೆಳೆಸಿಕೊಂಡರು. ಸಾಹಿತ್ಯದ ಹಸಿವೆಯಿಂದ ಜೀವನ ಹಸಿವನ್ನು ಮರೆತದ್ದೂ ಉಂಟಂತೆ. ಕಠಿಣ ಶ್ರಮ ಜೀವಿಯಾದುದರಿಂದ ಅವರಿಗೆ ಅನಾರೋಗ್ಯ ಅಂಟಿಕೊಂಡು ಬಹಳ ಸಂಕಟ ಪಡಬೇಕಾಯಿತು.

ಪತ್ರಿಕೋದ್ಯಮವನ್ನು ಬಿಟ್ಟು ಹೊರಬಂದ ರಾಯರು ಸ್ವತಃ ಕೃತಿ ರಚನೆ ಮಾಡಿದರು. ತಮ್ಮ ಕೃತಿಗಳಲ್ಲದೆ ಇತರ ಕೃತಿಗಳ ಪ್ರಕಾಶಕರಾಗಿ ಅವರು ಸಾಧನೆ ತೋರಿದರು. ಅದರಲ್ಲಿ ಸಾಫಲ್ಯ ಸಿಗದಾಗ ಮತ್ತೆ ಪತ್ರಿಕಾ ವೃತ್ತಿಗೆ ಶರಣಾದರು. ಜೊತೆಯಾಗಿ ಕಾದಂಬರಿಗಳು, ಕಥಾಸಂಕಲನ, ರಾಮಾಯಣ ಸಂಗ್ರಹ, ಕಾಮಶಾಸ್ತ್ರ, ಎಚ್ಚೆತ್ತ ಆಗ್ನೇಯ ಏಶಿಯಾ, ಮರುಭೂಮಿಯ ಅರಬರು, ಮೊದಲಾದ ವಿವಿಧ ವಿಚಾರಗಳ, ಅನುಭವ ವೈವಿಧ್ಯದ ಕೃತಿಗಳನ್ನು ರಚಿಸಿದರು.

ಅವರೊಬ್ಬ ಸಂಘ ಜೀವಿಯಾಗಿದ್ದರು. ಸಾಯುವ ತನಕ ಅವರು ಕಾಂಗ್ರೇಸಿನವರಾಗಿಯೇ ಇದ್ದರು. ಸರಕಾರಕ್ಕೆ ಅವರ ಮೇಲೆ ಸಂಶಯ. ಅವರ ಪತ್ರಗಳನ್ನು ಒಡೆಯುವುದು ಹಾಗೂ ಇನ್ನಿತರ ಕಿರುಕುಳ ಅವರಿಗೆ ಸರಕಾರದಿಂದ ಸದಾ ಇತ್ತು. ಇದಕ್ಕೆ ಕಾರಣ ಅವರು ಭಾರತ - ರಶ್ಯ ಸ್ನೇಹ ಸಂಘಕ್ಕೆ ಕಾರ್ಯದರ್ಶಿಯಾಗಿದ್ದುದೇ ಆಗಿರಬಹುದು. ಆದರೆ ಅವರು ಮಾತ್ರ ಕಟ್ಟಾ ರಾಷ್ಟ್ರೀಯವಾದಿಯೇ ಆಗಿದ್ದರು.

ಅವರು ಉತ್ತಮ ಭಾಷಣಕಾರರಾಗಿದ್ದರು. ಹೀಗೆ ನಿತ್ಯವೂ ದಣಿವರಿಯದ ಜೀವ ಹರಿದಾಸರದು. ಎಷ್ಟು ದುಡಿದರೂ ತಮ್ಮ ಸಾಂಸಾರಿಕ ಜೀವನವನ್ನು ಅವರು ಸ್ವತಂತ್ರ ವೃತ್ತಿಯಿಂದ ಅಂದಿನ ದಿನಗಳಲ್ಲಿ ನಡೆಸಲಾಗದೆ ಮತ್ತೆ ಸಂಯುಕ್ತ ಕರ್ನಾಟಕಕ್ಕೆ ಶರಣಾದರು.

"ಸಂಯುಕ್ತ ಕರ್ನಾಟಕ" ಪತ್ರಿಕೆಯ ಉಪ ಸಂಪಾದಕ ಎಂ. ಹರಿದಾಸ ಎಂಬವರು ಮೋಟಾರು ಮೈಮೇಲೆ ಹರಿದು ದುರ್ಮರಣಕ್ಕೆ ಒಳಗಾದರು. ಅಸ್ವಸ್ಥರಾಗಿದ್ದ ತಮ್ಮ ಪತ್ನಿಗೆ

ಸೈಕಲಿನ ಮೇಲೆ ಔಷಧಿ ಒಯ್ಯುತ್ತಿದ್ದಾಗ ಈ ಅಪಘಾತ ಸಂಭವಿಸಿತು. ಇದು ಹರಿದಾಸ ರಾಯರ ಜೀವನದ ದುರಂತದ ಕತೆ. ಬರೆಹಗಾರನೊಬ್ಬನ ಬಾಳಿನ ಗೋಳಿನ ಕತೆ. ಪ್ರತಿಭಾವಂತ ಬರೆಹಗಾರ, ಉದಾತ್ತ ವಿಚಾರಗಳ, ಎಳೆಯು ಹರೆಯದ ಸಾಹಿತಿಗೆ ಇಂಥ ದುರಂತ ಎಂಥವರನ್ನೂ ಕಂಗೆಡಿಸುವಂಥದು.

ಕ್ಷಾತ್ರ ದರ್ಶನದ ಕವಿ
ಅ. ಗೌ. ಕಿನ್ನಿಗೋಳಿ

ಅ. ಗೌ. ಕಿನ್ನಿಗೋಳಿ ಕನ್ನಡ ಕಾವ್ಯ ಕ್ಷೇತ್ರದಲ್ಲಿ ಸುಶ್ರಾವ್ಯವಾದ ಸ್ಮರಣಾರ್ಹವಾದ ಹೆಸರು. ಆಳವಾದ ಅಧ್ಯಯನ, ವಿವೇಚನಾಪೂರ್ಣ ನಿಲುವು, ಹೊಸತನದ ದೃಷ್ಟಿಕೋನಗಳಿಂದ ಅವರ ಕಾವ್ಯ ವಿನೂತನ ಮಾರ್ಗದಲ್ಲಿ ಕ್ರಮಿಸಿದೆ. ಕಥಾವಸ್ತು ಎಷ್ಟೇ ಪ್ರಾಚೀನವಿರಲಿ ಇತರ ಕವಿಗಳು ಅದೇ ವಸ್ತುವನ್ನು ಆರಿಸಿ ಕೃತಿ ರಚಿಸಿರಲಿ. ಅದೇ ವಸ್ತುವನ್ನೆತ್ತಿಕೊಂಡು ಶ್ರೀಯುತರು ಕಾವ್ಯದಲ್ಲಿ ಪರಿಪಕ್ವವಾದ ಸತ್ತ್ವ, ಹೊಸತನದ ನೋಟವನ್ನು ಕಂಡು ಆನಂದಿಸಬಹುದಾಗಿದೆ.

ಕ್ಷಾತ್ರ ದರ್ಶನವು ಶ್ರೀಯುತರ ಪ್ರಥಮ ಕಾವ್ಯ. ಮಿಶ್ರ ಛಂದೋಬಂಧದ ರಚನೆಯಲ್ಲಿ ಎಲ್ಲರೂ ಬಲ್ಲ ಬಭ್ರುವಾಹನನ ಕತೆಗೆ ಹೊಸಜೀವಕಳೆಯನ್ನಿತ್ತು ತಮ್ಮ ಅಪೂರ್ವ ಪ್ರತಿಭೆಯನ್ನು ಮಿಂಚಿಸಿದ್ದಾರೆ. ರಾಷ್ಟ್ರಕವಿ ಮಂಜೇಶ್ವರ ಗೋವಿಂದ ಪೈಗಳು ಈ ಕೃತಿಯ ಮುನ್ನುಡಿಯಲ್ಲಿ ಹೇಳುವ ಮಾತುಗಳು ಮನನೀಯವಾಗಿವೆ.

"ಬರಿಗಣ್ಣು ಕಟ್ಟಿದ ಕುದುರೆಯಂತೆ ತುದಿಯಿಂದ ತುದಿಯವರೆಗೆ ಪೌರಾಣಿಕ ಕಥನದ ತುಳಿತುಳಿದ ದಾರಿಯನ್ನೇ ಹಿಡಿಯದೆ, ರಚಕರು ಅಲ್ಲಲ್ಲಿ ಸೀಳುಹಾದಿಗಳಲ್ಲಿ ಸಾಗಿರುವ ಹೊಸತನವಿದೆ. ಈ ಬಗ್ಗೆ ಒಂದು ಉದಾಹರಣೆಯನ್ನು ಕೊಡುವುದಾದರೆ ಬಭ್ರುವಾಹನನ ಬಾಣ ಹತಿಯಿಂದ ಅರ್ಜುನನು ಉರುಳಿ ಬೀಳಲು ಚಿತ್ರಾಂಗದೆ ತನ್ನ ಜೀವ ರಕ್ತವನ್ನು ಆತನ ನಾಡಿಗಳಲ್ಲಿ ಬಸಿಯಕೊಟ್ಟು ತನ್ನ ಪ್ರಾಣ ತೆತ್ತು ಆತನಿಗೆ ಪ್ರಾಣವಿತ್ತಳು ಎಂದು ಇಲ್ಲಿದೆ. ಜೈಮಿನಿ ಭಾರತದಲ್ಲಾದರೆ ಶ್ರೀಕೃಷ್ಣನು ಮಣಿಪುರಕ್ಕೆಯ್ದಿ ಅರ್ಜುನನನ್ನು ಮರುಜೀವಿಸಿದನೆಂದಿದೆ. ಈ ಮಾರ್ಪಾಟದಿಂದ ಶ್ರೀಕೃಷ್ಣನ ಪೂರ್ಣಾವತಾರತ್ವಕ್ಕೆ ಆತನ ದೇವತ್ವಕ್ಕೆ ಏತರ ಕೊರತೆಯೂ ಇಲ್ಲ. ಏಕೆಂದರೆ ಚಿತ್ರಾಂಗದೆಯ ರಕ್ತದಾನದಿಂದಲೇ ಅರ್ಜುನನು ಸಪ್ರಾಣಿಸಿದನೆಂದಾದರೆ ತನ್ನ ನೆತ್ತರನ್ನು ನೀಡಲಿಕ್ಕೆ ಆಕೆಗೆ ಬುದ್ಧಿ ಕೊಟ್ಟಾತನು ಶ್ರೀಕೃಷ್ಣನೆ. ಅಂದಿನ ಆಕಾಶಪತನದಿಂದ ದಿಗ್ಭ್ರಾಂತನಾದ ಬಭ್ರುವಾಹನನಿಗೆ ಆ ರಕ್ತ ಪೂರಣವನ್ನು ಮಾಡಬಲ್ಲ ವೈದ್ಯನನ್ನು ನೆನವರಿಸಿಕೊಟ್ಟಾತನು ಕೃಷ್ಣನೆ ಎಂಬ ಸತ್ಯವನ್ನು ಆಸ್ತಿಕರು ಹೇಳದೆ ಬಲ್ಲರು. ಹೇಗೂ ಇದೊಂದು ತೀರಾ ಹೊಸ ಸನ್ನಿವೇಶ.

ಜೈಮಿನಿ ಮನಗಾಣದ ಲಕ್ಷ್ಮೀಶನು ಕನಗಾಣದ ಸನ್ನಿವೇಶ. "ಶ್ರೀ ಗೋವಿಂದ ಪೈಗಳು ಆಶಿಸಿದಂತೆ ಕಾವ್ಯದ ಔಚಿತ್ಯಪೂರ್ಣ ನಿರೂಪಣೆಯಲ್ಲಿ ಕವಿ ಜಾಣ್ಮೆ ಮೆರೆದಿದ್ದಾರೆ.

ಅಮೃತ ಕುಂಭದ ನಡುವೆ ನಂಜಿನ ಬಿಂದುವೇ ಚೇಂದೊಟ್ಟಿಯಲಿ ಅಳಿಚೇಡನೇ ? ತಂಗದಿರ ಚೆಲ್ಲಿಕೆ ಬೇಗೆಯೇ ? ಬೆನ್ನೀರೆ ಬಾಂದೊರೆ ? ಕಾಮದೇನು ಕರೆವ ಹಾಲೇಂ ಮದಿರೆಯೆ? ನವನಿಧಿಯ ಭಂಡಾರದಿ ವರಾಹದ ದಾಡೆಯೇ ? ಹಾ ತಪಸಿನಿಯ ಪುಣ್ಯೋದಯದ ಹೊಂಬೆಳಕು ತಾಮಸವಾದುದೇ ? ಹಾಲ್ಗಡಲ ಮಥನಕ್ಕೆ ಹಾವಸೆ ಮುದ್ದೆ ಬೆಣ್ಣೆಯೆ ? ಕುದಿದು ಕೋವೆಯಲ್ಲಿದ್ದ ಚಿನ್ನಕ್ಕೆ ಕಬ್ಬಿಣದ ಎಳೆ ಅದುರೇ ? ನಿರ್ಜನ ನಂದನದ ನಡು ತುರುಸು ಬಳ್ಳಿಯೇ? ಸಾಮವೇದಕ್ಕೆ ಶೃತಿಯು ಕರಟದ ಕರ್ಕರವೇ ? ನರು ನಿಂಬೆ ಹಣ್ಣಿನ ನಡುವೆ ಉಪ್ಪಿನ ಹರಳೇ? ಯೋಗಿನಿ ಪ್ರೇಮ ಯಜ್ಞದಿ ಹಗೆಯ ಹೊಗೆಯ ಕಂಡಳೇ ?

ಅರ್ಜುನನ ಪತನ ಕಾಲದಲ್ಲಿ ಚಿತ್ರಾಂಗದೆಯ ಚಿತ್ರಣವನ್ನು ಕವಿ ವರ್ಣಿಸಿದ ಭಂಗಿ ಇದು. ಗಂಡ - ಮಗ ಇವರಲ್ಲಿ ಯಾರು ಹೆಚ್ಚು ? ಯಾರು ಕಡಿಮೆ ? 'ಕಂಗಳಾವುವೆರಡರಲಿ, ಮುಖ್ಯವು?' ಚಿತ್ರಾಂಗದೆಯ ಮುಂದೆ ನಿಂತ ಪ್ರಶ್ನೆಯಿದು.

ಯೋಗಲಹರಿಯಲ್ಲಿ ಮೂರು ಖಂಡ ಕಾವ್ಯಗಳಿವೆ. 'ಮೊದಲ ಭಿಕ್ಷುಣಿ' ಸಿದ್ಧಾರ್ಥನು ಬುದ್ಧದೇವನಾಗಿ ಕಪಿಲ ವಸ್ತುವಿಗೆ ಆಗಮಿಸುವ ಕಥೆ ಯಶೋಧರೆಯ ರಮ್ಯ ಚಿತ್ರಣದಲ್ಲಿ ಮೂಡಿ ಬಂದ ಬಗೆ. ಆಕೆಯ ಮನೋವ್ಯಥೆ, ಹಿಂದಿನ ನೆನಹುಗಳು, ಬುದ್ಧನ ಉಪದೇಶ, ಯಶೋಧರೆಯ ಪ್ರಶ್ನೆಗೆ ಆತನ ಉತ್ತರಗಳೆಲ್ಲಾ ಚೆನ್ನಾಗಿದ್ದು, ಆಕೆಯ ಮೊದಲ ಭಿಕ್ಷುಣಿಯಾದುದು ರಸವತ್ತಾದ ಕಾವ್ಯವಾಗಿದೆ. ಪುನರ್ಮಿಲನ ಮತ್ತೊಂದು ಚಿಕ್ಕ ಕಾವ್ಯ. ಶ್ರೀರಾಮನು ಸೀತಾಲಕ್ಷ್ಮಣರೊಡನೆ ಸಾಕೇತ ಸೇರುವ ಕಥೆ. ಎಲ್ಲೆಲ್ಲೂ ಸಂತಸ ನಲಿದಾಡುತ್ತಿದೆ. ಊರ್ಮಿಳೆಯನ್ನು ಬಿಟ್ಟು ಕಾಡಿಗೆ ಹೋದ ಲಕ್ಷ್ಮಣನು ಅವಳಲ್ಲಿಗೆ ಧಾವಿಸುತ್ತಾನೆ. ಪ್ರೇಮ ಯೋಗಿನಿ ಊರ್ಮಿಳೆ "ಸರ್ವ ಸಂಗ ತೊರೆಯುತ್ತಾ ಯೋಗದಲಿ ಸಿದ್ಧಿಕಂಡ ಋಷಿಗೆ ನಿಷ್ಠೆಯಾದ ನಿಶ್ಚಲ ಸಮಾಧಿಯಲಿ ಕಡಿಮೆಯೇನು ಈಕೆ." ಎಂಥ ಶಕ್ತಿ, ಅವಳಾತ್ಮ ಶಕ್ತಿ ಎಂಬಂಥ ನಿರೂಪಣೆ ಈ ಕಾವ್ಯದ ಜೀವಾಳವಾಗಿದೆ.

'ಚಿತಾಗ್ನಿ' ಉತ್ತಮ ಖಂಡ ಕಾವ್ಯ. 'ಎಲೆ ಮರೆಯ ಕಾಯಿಯಂತೆ ಇನ್ನು ಹೆಚ್ಚು ಜನರ ಗಮನಕ್ಕೆ ಬಾರದೆ, ಅದನ್ನು ಬಯಸದೆ, ಕಳೆದ ಕೆಲವು ವರ್ಷಗಳಿಂದಲೂ ಕವಿತೆಗಳನ್ನು ಬರೆಯುತ್ತಿರುವ ಅ. ಗೌ. ಕಿನ್ನಿಗೋಳಿ ಅವರು ಸಾಹಿತ್ಯ ಸಂಪತ್ತನ್ನು ಗಳಿಸಿಕೊಂಡಿರುವ ವಿದ್ವಾಂಸರಾದ ಉಪಾಧ್ಯಾಯರು'.... ಚಿತಾಗ್ನಿ ಓದುಗರ ಎದೆಯಲ್ಲಿ ಅಳಲ ಬೆಂಕಿಯನ್ನೇ ಹುಟ್ಟಿಸುತ್ತದೆ. ಒಂದು ಉತ್ತಮ ಕಾವ್ಯವನ್ನು ಓದಿದಾಗ ಉಂಟಾಗುವ ಹೃದಯಾನುಭೂತಿ ಒಡಮೂಡುತ್ತದೆ.'

ಶ್ರೀ ಕವಿ ಕಯ್ಯಾರರು ಹೇಳಿದ ಮೇಲಿನ ಮಾತುಗಳು ಕವಿಯ ಘನತೆಯನ್ನು ಎತ್ತಿ ಹಿಡಿದಿದೆ. ಶ್ರೀ ಕಡೆಂಗೋಡ್ಲು ಶಂಕರ ಭಟ್ಟರ ಮಾದ್ರಿಯಚಿತೆ ಅ. ಗೌ. ಕಿ. ಅವರ 'ಚಿತಾಗ್ನಿ'ಗಳ ವಸ್ತು ಒಂದೇ ! ಪಾಂಡುವಿನ ಸ್ವಗತೋಕ್ತಿಯಲ್ಲಿ ಮಾದ್ರಿಯ ಚಿತೆಯ ಭಾವದ ನೆರಳು

ಹಾಯ್ದಿದೆಯೆಂದು ಅ. ಗೌ. ಕಿ. ಒಪ್ಪಿಕೊಂಡಿದ್ದಾರೆ. ಆದರೂ ಚಿತಾಗ್ನಿಯಲ್ಲಿ ಒಂದು ಬಗೆಯ ನವ್ಯತೆಯ ಮೋಡಿಯಿದೆ. ರಸಾಕರ್ಷಣೆಯಿದೆ.

ಮತ್ತೊಂದು ಕಾವ್ಯ ಶಿವಲೇಶ್ಕೆ. ಶಿವಾಜಿಯ ಕಥೆ, ರಾಷ್ಟ್ರ ಭಕ್ತಿ ಪ್ರಚೋದಕವಾದುದು. ಹೃದಯಾವರ್ಜಕ ಶೈಲಿ ರಮ್ಯ ನಿರೂಪಣೆಗಳಿಂದ ಆಕರ್ಷಕವಾಗಿದೆ. ಈ ಜಿಲ್ಲೆಯ ಕಡೆಂಗೋಡ್ಲು, ಸೇಡಿಯಾಪುರವರಂತೆ ಕಥನ ಕವನಗಳ ರಚನೆಯಲ್ಲಿ ಅ. ಗೌ. ಕಿ. ಸಿದ್ಧಹಸ್ತರಾಗಿ ಹೆಸರಾಗಿದ್ದಾರೆ.

ಕಾವ್ಯ ಮನೋರಮಾ ರಸಿಕ
ಶ್ರೀ ಎಸ್. ವೆಂಕಟರಾಜರು

ಅಳಿಯಾಗಿ ನಲಿದಾಡಿ ಗಿಳಿಯಾಗಿ ಮಾತಾಡಿ
ಹೂವಾಗಿ ಹೃದಯ ಹಗುರಾಗಬೇಕು
ಮುಗಿಲಾಗಿ ಮೇಲೇರಿ ಗುಡುಗಾಗಿ ಜಗಜಗದಿ
ತಿಳಿತನದ ಸೋರು ಮಳೆಸುರಿಯಬೇಕು.

ಜೀವನ ಹೇಗಿರಬೇಕು ಎಂಬುದನ್ನು ಕವಿ ಹೀಗೆ ತಿಳಿಸುತ್ತಾರೆ. ಎಷ್ಟೊಂದು ಉದಾತ್ತ - ರಮ್ಯ ಭಾವನೆಯಿದು. ಹೂವಿನಂತ ಹೃದಯ, ತಿಳಿತನದ ಸೋರು ಮಳೆ ಹರಿಯಬೇಕೆಂಬ ಕಾಂಕ್ಷೆ ಕವಿಯ ಜೀವನದ ರಹಸ್ಯವೂ ಹೌದು. ಅವರ ಕವಿತಾ ಕಾಮಿನಿ, ಮಾನಸ ಪುಷ್ಪ, ಪದ್ಮ ಸರೋವರ ಮಾನಸ ಗಂಗೆ ಎಂಬ ಕವನ ಸಂಕಲನದಲ್ಲಿ ಪ್ರವಹಿಸಿದ ಕಾವ್ಯ ಧಾರೆ ಅಂತಹ ಸಂದೇಶಗಳನ್ನು ಒಳಗೊಂಡಿರುತ್ತದೆ.

ಅವರ ಕವಿತಾ ಕಾಮಿನಿ ಎರಡು ಭಾಗಗಳಲ್ಲಿ ಪ್ರಕಟವಾಗಿದೆ. ಕವಿಯ ಸೌಂದರ್ಯ ಪ್ರಜ್ಞೆ, ಕಲ್ಪನೆಯ ಸ್ವಾರಸ್ಯ, ಪ್ರಣಯದ ಪರಿಪಾಕವನ್ನು ಈ ಕವನಗಳಲ್ಲಿ ಎರಕ ಹೊಯ್ದಿದ್ದಾರೆ. ಮಿಂಚೊಂದು ಮಿನುಗುತ್ತಿತ್ತು, ದೆಸೆವೆಣ್ಣ ಕುಂಚವನೆ ಕುಣಿಯುತ್ತಿತ್ತು ; ಕಲ್ಪನೆಯ ಕುಂಚದ ಚೆಲುವನ್ನು ಸಾರಿದೆ. 'ಬೆಳಕಿನ ಬಿಜ್ಜೆಯನು ಅರಿಯಲು ತೂಗಿದ ಕತ್ತಲೆ ಹಿನ್ನೆಲೆಯಂತೆ ಸತ್ಯದ ಸೊಡರಿನ ಹಿಂಬದಿ ಸರಿದು ಕೂಡಿದೆ ಕನಸಿನ ಸಂತೆ' ಕವಿತಾ ಕಾಮಿನಿಯೂ ಕವಿತೆಯನ್ನು ಕರೆಯುವ ಪರಿಯಿದು. "ಮಾನಸ ಗಂಗೆ ಕನ್ನಡದ ಕುಲ ರಸಿಕರ ರಸಾ ಸ್ವಾದನೆಗಾಗಿ ಹರಿದು ಬಂದಿದ್ದಾಳೆ. ಇದು ನನ್ನ ಮಾನಸ ಗಂಗೆ ಮಾತ್ರವಲ್ಲ ಜನತೆಯ ಮಾನಸ ಗಂಗೆ" ಎಂದು ಕವಿ ಹೇಳಿಕೊಂಡಿದ್ದಾರೆ.

ಯಾರೊ ಬಂದರು ಮೆಲ್ಲಮೆಲ್ಲನೆ
ಏನು ಮೋಹದ ಚೆಲುವಿಕೆ

ಮೊಗದ ಹೂ ಹರಿವಾಣದಲಿ ನಗೆ

ತುಟಿಯ ಮೌನದ ಕಾಣಿಕೆ.

ಇದು ಕವಿ ಕಂಡ ಹೊಸ ನೋಟ. ರಸವತ್ತಾದ ನಿರೂಪಣೆ. 'ಕಾವ್ಯ ಮನೋರಮಾ' ವೆಂಕಟರಾಜರ ಸಂಸ್ಕೃತ ಕೃತಿಯೂ ಹೌದು. ಕನ್ನಡ ಕಾವ್ಯವೂ ಹೌದು. ವಿವಿಧ ವೃತ್ತಗಳಲ್ಲಿ ಸಂಸ್ಕೃತದಲ್ಲಿ ರಚಿಸಿದ ತಮ್ಮ ಕವನಗಳನ್ನೆ ಮಗ್ಗುಲಲ್ಲಿ ಕನ್ನಡ ಪದ್ಯವಾಗಿ ಪ್ರಕಟಿಸಿದ ಭಂಗಿ ಅನನ್ಯ. ಸಂಸ್ಕೃತ ಕನ್ನಡಗಳೆರಡರಲ್ಲಿಯೂ ಇವರು ಸಮರ್ಥ ಕವಿ ಎಂಬುದಕ್ಕೆ ಈ ಸಂಕಲನವೇ ಸಾಕ್ಷಿ.

ಸಂಸ್ಕೃತದಲ್ಲಿ

ಆವರ್ತಂ ವಿಭವಾಸ್ಪದಂ ಗುರುಕುಚದ್ವಂದಂ ಚಕೋರದ್ವಯಂ ಕೂಲೇ ಸುಂದರ ಶೀತ ಲೋರುಯುಗಲೇ ದಿವ್ಯಾಂಬರಂಬಿಭ್ರತೀ ಮಜ್ಜನ್ಮಾಂತರ ಪುಣ್ಯ ಪೂರಣಕೃತೇ ಸೈವಾಗತಾ ಜಾಹ್ನವೀ ತತ್ಪ್ರಾಂತಂ ಭವದಾಹದೀನ ವಿಪದಾಮಂತಂ ನಿತಾಂತಂ ಭಜೇ

ಕನ್ನಡದಲ್ಲಿ

ಸುಳಿನಾಭಿ ಮಿಗೆ ಶೋಭಿ ಗುರುಕುಚಚಕೋರಂ

ಮಳಲುಡೆಯುಲತ್ತಡಿಯ ನುಣ್ಬೊಡೆಯ ಭಾರಂ

ಜನ್ಮ ಜನ್ಮದ ಪುಣ್ಯಕೊಲಿದ ರಸಗಂಗೆ

ಬಂದಿಹಳು ಭವದೆಡೆಗೆ ಪಾವನ ತರಂಗೆ

ಪದ್ಮ ಸರೋವರ ಅವರ ಐದನೆಯ ಕವನ ಸಂಕಲನ. ಬುದ್ಧನಿಂದ ಏಸು ಗಾಂಧಿಯವರೆಗೆ ಹರಿದು ಬಂದ ಪುಣ್ಯ ಪರಂಪರೆಯನ್ನು ಕವಿ ಹೀಗೆ ಕಂಡಿದ್ದಾರೆ. ಬುದ್ಧ ಬಂದ, ಕೊಳಕುಕತ್ತಲ ಮುಸುಕುನೊದ್ದು ಬಂದ

ಸಾವು ನೋವಿನ ಮುಖಕೆ, ಮಾಂಗಲ್ಯ ಕುಂಕುಮವನಿಟ್ಟು

ಕಾದಿದ್ದನಾ ಧರ್ಮ ಮೂರ್ತಿ

ಏಸು ಬಂದ ಕತ್ತಲೆಯ ಕರಿಯಂಚನೀಸಿ ಬಂದ

ಗಾಂಧಿ ಬಂದ ಹಗೆ ಕೀಳು ಹಗರಣದ ಮೊನೆ ಮೊನೆಯ

ಮುಳ್ಳಿನಲಿ ನಡೆದು ಬಂದ

ಹೀಗೆ ಅವರ ಕವನಗಳ ವೈಶಿಷ್ಟ್ಯ ವೈದಗ್ಧ್ಯ ಸಹೃದಯರ ಮನವನ್ನು ಸೂರೆಗೊಳ್ಳುತ್ತದೆ. 'ನಗಬೇಡ, ನಗಬೇಡ ನಗಬೇಡ ಚೆನ್ನೆ, ನಕ್ಕಾಗ ಬೆಳದಿಂಗಳಾದೀತು ಕೆನ್ನೆ' ಎಂಥ ಸುಂದರ ಕಲ್ಪನೆ I

ಐದಾರು ದಶಕಗಳ ಬಾಳ ಬಿತ್ತನೆಯಲ್ಲಿ
ನಮ್ಮಂತೆ ಕಾಗದ ಕಪ್ಪು ಮಾಡಲಿಕ್ಕೆಂದು
ಹೊರಟವರು ನೀವಲ್ಲ, ನಿಮ್ಮ ಬರಹ
ಕಪ್ಪಿನಲಿ ಬಿಳಿದಾಗಿ ಕತ್ತಲಲಿ ಬೆಳಕಾಗಿ
ಮೋಡದಲಿ ಮಿಂಚಾಗಿ ತೋರುವ ಸಮೂಹ
ನೀವು ಮೆಟ್ಟಿದ ಹಾದಿ ನಿಮ್ಮ ಕಾವ್ಯ ಸಮಾಧಿ
ಕನ್ನಡಕ್ಕೆ ಕೊಟ್ಟ ರಾಷ್ಟ್ರೀಯ ಹೆದ್ದಾರಿ

ಮಂಜೇಶ್ವರ ಗೋವಿಂದ ಪೈಗಳನ್ನುದ್ದೇಶಿಸಿ ಬರೆದ ಈ ಕವನ ಎಷ್ಟೊಂದು ಯಥಾರ್ಥ ಸುಂದರ ಎಂಬುದನ್ನು ಮನಗಾಣಬಹುದು. ಆಕಾಶಗಂಗೆ, ಸಪ್ತಸ್ವರ ಎರಡು ಸಂಕಲನಗಳು, ಅಂಬುಜಾಕ್ಷಿ, ಧರ್ಮಶಾಲೆ, ತುಂಗಮ್ಮನ ತವರ್ಮನೆ ಎಂಬ ಮೂರು ಕಾದಂಬರಿಗಳು, ರಂಗಭೂಮಿ, ಕೈಲಾಸದಲ್ಲಿ ಕಮ್ಯುನಿಷ್ಟರು ಎಂಬ ಎರಡು ನಾಟಕ, ಅಮೃತ ಲಹರಿ ಎಂಬ ಗೀತ ರೂಪಕ ಇವರ ಇತರ ಕೃತಿಗಳು. ಸುಂದರ ಪದಬಂಧ, ಲಲಿತ ಕಲ್ಪನಾ ವೈಭವ, ರಸಭಾವ ಪೂರ್ಣ ನಿರೂಪಣೆಗಳಿಂದ ಇವರೊಬ್ಬ ಉತ್ತಮ ಕವಿಯೆಂದು ಹೆಸರಾಗಿದ್ದಾರೆ.

"ಚಿರ ವಿರಹಿ"ಯ ಬೆಳ್ಳೆ ರಾಮಚಂದ್ರ ರಾಯರು

ಪುತ್ತೂರಿನಲ್ಲಿ ಬೆಳ್ಳೆ ರಾಮಚಂದ್ರ ರಾಯರು ಒಬ್ಬ ಸಮರ್ಥ ವಕೀಲರೆಂದು ಹೆಸರು ವಾಸಿಯಾಗಿದ್ದರು. ನನ್ನ ತೀರ್ಥರೂಪರಿಗೆ ಅವರು ಬಹಳ ಆತ್ಮೀಯರಾಗಿದ್ದರು. ನಮ್ಮದೊಂದು ಸಿವಿಲ್ ಮೊಕದ್ದಮೆಯನ್ನು ರಾಯರು ನಡೆಸುತ್ತಿದ್ದಾಗ, ನಾನು ಅವರನ್ನು ಸನಿಹದಿಂದ ಕಂಡು ಮಾತನಾಡಿದ್ದುಂಟು. ಆಗ ನಾನಿನ್ನೂ ಚಿಕ್ಕವನಾದುದರಿಂದ ಅವರನ್ನು ವಕೀಲರೆಂದಷ್ಟೆ ಅರಿತಿದ್ದೆ. ಅವರಾಗಿ ನನ್ನನ್ನು ಸಾಹಿತ್ಯ ಹಾಗೂ ಓದಿನ ಬಗ್ಗೆ ಪ್ರಶ್ನಿಸಿದಾಗ ಅವರ ಪಾಂಡಿತ್ಯದ ಅರಿವು ತಿಳಿಯಿತು. ಆಗಲೇ ಅವರ 'ಚಿರವಿರಹಿ' ಪ್ರಕಟವಾಗಿತ್ತಂತೆ. ಅದನ್ನು ಓದಲು ಅವರೇ ಕೊಟ್ಟರು. ಓದುತ್ತಿದ್ದಂತೆ ಅವರ ವಿಶಾಲವಾದ ಅನುಭವ ಮಧುರ ಭಾವಗಳ ಲಹರಿ ಧುಮ್ಮಿಕ್ಕಿ ಹರಿಯುವ ಸೊಗಸು ರೋಚಕವಾಗಿ ಕಂಡು ಬಂದಿತು. ಪ್ರಣಯ ಪ್ರಸಂಗ - ಪ್ರೇಮದ ವಿಶಾಲವಾದ ಭಾವನೆ ಹೊಳೆಯುವ ವಿಧಾನ ಆಕರ್ಷಕವಾಗಿದೆ. ಶೃಂಗಾರದ ರಸಗವಳವನ್ನು ಮಾತುಕತೆಗಳಲ್ಲಿ ನೀಡುವ ಈ ಕಾದಂಬರಿಯ ಓಟ ಚಿತ್ತಾಕರ್ಷಕ.

ಶ್ರೀಯುತರು ಬರೆದ ಕಾದಂಬರಿಗಳು ಎರಡೇ ಆದರೂ ಅವರಿಗೆ ಒಳ್ಳೆಯ ಹೆಸರನ್ನು ನೀಡಿವೆ. ಚಿರವಿರಹಿ ಅವರನ್ನು ಅಟ್ಟಕ್ಕೆ ಏರಿಸಿದರೆ, "ರಾಯರು ಕಂಡ ರಂಗು" ಜೀವನದ ರಂಗುಗಳನ್ನು ಹೊರಚೆಲ್ಲಿದೆ. "ರಾಯರು ಕಂಡ ರಂಗು"ಜೀವನದಲ್ಲಿ ರಾಯರು ಮಾತ್ರವಲ್ಲ ಯಾರೂ ಕಾಣಬಹುದು ಎಂಬಂತೆ ಚಿತ್ರಿತವಾಗಿದೆ.

ಇವರು On the First Floor ಎಂಬ ಇಂಗ್ಲಿಷ್ ಕವಿತೆಗಳ ಚಿಕ್ಕ ಸಂಕಲನವನ್ನು ಬರೆದು ಪ್ರಕಟಿಸಿದ್ದಾರೆ. ಇದು ಬೆಳ್ಳೆಯವರನ್ನು ಮೇಲ್ಮಟ್ಟದ ಕವಿಯೆಂದು ತೋರಿಸಿಕೊಟ್ಟಿದೆ. ಲಂಡನ್ನಿನ ಅರ್ಥರ್ ಎಚ್ ಸ್ಟಾಕ್‌ವೆಲ್ ಪ್ರಕಾಶನ ಸಂಸ್ಥೆ ಇದನ್ನು ಪ್ರಕಟಿಸಿದೆ. 14 ಸೋನೆಟ್‌ಗಳು ಇದರಲ್ಲಿವೆ. ಅವರ ಇನ್ನೊಂದು ಕೃತಿ ಯುನೆಸ್ಕೋದಿಂದ ಪ್ರಕಟವಾಗಿದೆ.

ಅವರು ಉತ್ತಮ ಬರೆಹಗಾರರು. ಅವರು ವಕಾಲತು ಎಂದರೆ ಅದೊಂದು ಸಭ್ಯ, ಗೌರವ ಪೂರ್ಣ ವ್ಯವಹಾರ, ಅನಗತ್ಯವಾದ ಪ್ರಶ್ನೆಗಳಿಲ್ಲ. ಒಳ್ಳೆಯ ಹಿಯರಿಂಗ್, ಸಾಧಾರವಾದ ಪ್ರತಿಪಾದನೆಗಳಿಂದ ಅವರು ಕೋರ್ಟನ್ನು ಒಂದು ಸಾಹಿತ್ಯಿಕ ವಲಯವನ್ನಾಗಿ ಪರಿವರ್ತಿಸುತ್ತಿದ್ದರು. ಅವರ ಪ್ರತಿಪಾದನೆಯ ವೈಖರಿಯನ್ನು ಕೇಳಲು ಜನರು ಕೋರ್ಟಿನಲ್ಲಿ ಸೇರುತ್ತಿದ್ದರು. ಪುತ್ತೂರಿನ ಹಿರಿಯ ವಕೀಲ ಶಾಸ್ತ್ರಿಗಳು, ಸದಾಶಿವರಾಯರು ಬೆಳ್ಳೆಯವರ ಆತ್ಮೀಯರಾಗಿದ್ದರು. ಶಿವರಾಮ ಕಾರಂತರ ಚಟುವಟಿಕೆಗಳನ್ನು ಬೆಂಬಲಿಸುತ್ತಿದ್ದ ನಾಡ ಹಬ್ಬದಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದವರಲ್ಲಿ ಬೆಳ್ಳೆಯವರು ಮುಖ್ಯರಾಗಿದ್ದರು.

ಬೆಳ್ಳೆಯವರು ಚುನಾವಣಾ ಸಭೆಯೊಂದರ ಅಧ್ಯಕ್ಷತೆ ವಹಿಸಿ ಮಾತನಾಡಿದುದನ್ನು ಕೇಳಿದಾಗ ಇದು ಸಾಹಿತ್ಯ ಸಭೆಯೆಂದೇ ನಮಗೆ ಕಲ್ಪನೆಯುಂಟಾದುದು ಸತ್ಯ. ಅವರು ಆ ದಿನ ತಮ್ಮ ಅಭ್ಯರ್ಥಿಯನ್ನು ಸಮರ್ಥಿಸಿದ ರೀತಿ ರಾಜಕೀಯ ಕಲುಷಿತ ಪರಿಸ್ಥಿತಿಗಳ ನಿರ್ಮಲೀಕರಣಕ್ಕೆ ಅನುಸರಿಸ ತಕ್ಕ ರಾಜಕೀಯ ಕರ್ತವ್ಯಗಳನ್ನು ಸಾರಿದ ಭಂಗಿ ಎಂಥವರನ್ನು ಆಕರ್ಷಿಸದೆ ಬಿಟ್ಟಿರಲಾರದು.

ಬಹುದೊಡ್ಡ ಮನೆತನದಲ್ಲಿ ಆಗರ್ಭ ಶ್ರೀಮಂತರಾಗಿ ಜನಿಸಿ ತನಗೆ ಬಹಳಷ್ಟು ಕಷ್ಟದ ಜೀವನ ನಡೆಸಬೇಕಾಗಿ ಬಂದ ಸಂದರ್ಭದಲ್ಲಿಯೂ ಅವರು ತಮ್ಮ ಸಾಹಿತ್ಯ ಸಹೃದಯತೆಯನ್ನುಳಿಸಿಕೊಂಡ ಘನ ವ್ಯಕ್ತಿ.

1900ರಲ್ಲಿ ಜನಿಸಿದ ರಾಯರು 72 ವರ್ಷಗಳ ಸಾರ್ಥಕ ಬದುಕನ್ನು ಸಾಗಿಸಿದ್ದಾರೆ. ಅವರು ಬಿಟ್ಟು ಹೋದ ಕೃತಿಗಳು ಸಂಖ್ಯೆಯಲ್ಲಿ ಕಡಿಮೆ ಇದ್ದರೂ ಅವರ ಹೆಸರನ್ನು ಶಾಶ್ವತವಾಗಿ ಉಳಿಸತಕ್ಕವು ಎಂಬುದರಲ್ಲಿ ಸಂದೇಹವಿಲ್ಲ.

ಜ್ಯೋತಿರ್ವಿದ್ಯಾ ಮಾರ್ತಾಂಡ
ಯರ್ಮುಂಜ ಶಂಕರ ಜೋಯಿಸರು

ಯರ್ಮುಂಜ ಶಂಕರ ಜೋಯಿಸರೆಂದರೆ ವಿದ್ವತ್ತಿನ ಗಣಿ ! ಅವರೊಬ್ಬ ಜ್ಯೋತಿರ್ವಿದ ಮಾತ್ರವಲ್ಲ ಸಮಾಜದ ಸಂಸ್ಕಾರಗಳ ಬಹುಮುಖವನ್ನು ಅಧ್ಯಯನ ಮಾಡಿದ ಬಹುಶ್ರುತ ಮೇಧಾವಿ ಪಂಡಿತರಾಗಿದ್ದರು. ಅವರ ತರ್ಕಬದ್ಧವೂ ವಿಚಾರಪೂರ್ಣವೂ ಓಜೋಭರಿತವೂ ಆದ ಶೈಲಿ ಲೇಖನ - ಭಾಷಣಗಳೆರಡರಲ್ಲಿಯೂ ಪ್ರಖರವಾಗಿತ್ತು. ಸಮಕಾಲೀನ ಸಮಾಜದ ಚಿಂತಕ - ತತ್ವವೇತ್ತರಾಗಿ ಗಣ್ಯರಾಗಿದ್ದಾರೆ.

ಅವರೊಡನೆ ಮಾತನಾಡಿದರೆ ಬೆಳಗಾಗುವುದೇ ತಿಳಿಯುವುದಿಲ್ಲ. ಅಂತಹ ಅನುಭವಪೂರ್ಣ ಮಾತುಗಾರಿಕೆ ಅವರದು. ಶಾಸ್ತ್ರ, ಸಾಹಿತ್ಯ - ಅಲಂಕಾರ - ಕಾವ್ಯ - ನಾಟಕ - ನೀತಿಶತಕ ಪ್ರತಿಯೊಂದರಲ್ಲಿಯೂ ಅವರ ಅಪ್ರತಿಮ ವೈದುಷ್ಯ ! ತಿಲಕರ ಗೀತಾರಹಸ್ಯ - ಹಾಗೂ ತಿಲಕರ ಎಲ್ಲಾ ಗ್ರಂಥಗಳು ನಡವಳಿಕೆಗಳು ಅವರಿಗೆ ಆದರ್ಶ. ಮಂಗಳೂರಿನಲ್ಲಿ ಮುಳಿಯ ತಿಮ್ಮಪ್ಪಯ್ಯನವರ "ಕನ್ನಡ ಕೋಗಿಲೆ"ಯಲ್ಲಿ ಇವರು ಬರೆಯುತ್ತಿದ್ದ ವಿದ್ವದ್ಭರಿತ ಲೇಖನಗಳು ಇದಕ್ಕೆ ಸಾಕ್ಷಿ.

ಇವರ ವೆಂಕಟೇಶ ಕೇತಕರ ದೃಕ್‌ಸಿದ್ಧಾಂತದ ಸಮರ್ಥಕರಾಗಿ ವೈಜಯಂತಿ ಪಂಚಾಂಗವನ್ನು ತಂದು ದೃಕ್ ಸಿದ್ಧಾಂತದ ಕುರಿತು ಹೋರಾಟವನ್ನು ನಡೆಸಿದ ಧೀರರು. ಗುರುಪೀಠಗಳ ಅವನತಿಯೆಂಬ ಗ್ರಂಥವನ್ನು ರಚಿಸಿದ್ದಾರೆ. ಅರ್ಥ ಸಿದ್ಧಾಂತದ ರಹಸ್ಯ ವಿಚಾರ ಅವರ ಅಮೋಘ ಇನ್ನೊಂದು ಗ್ರಂಥ. ಕಾಫಿಯ ಹೇಳಿಕೆ, ಅಡಿಗೆಯೂ ಊಟವೂ, ಹೆಂಡತಿಯ ಕರ್ತವ್ಯ ಮೊದಲಾದ ಸಾಮಾಜಿಕ, ಬರೆಹಗಳನ್ನು ಅವರು ಬರೆದಿದ್ದಾರೆ. ಜ್ಯೋತಿಶ್ಶಾಸ್ತ್ರ ಒಂದು ವೈಜ್ಞಾನಿಕ ಪ್ರಯೋಗ ಎಂಬುದನ್ನು ಅವರು ಸಮರ್ಥವಾಗಿ ಪ್ರತಿಪಾದಿಸಿದ್ದಾರೆ.

ಪ್ರಾಧ್ಯಾಪಕ ತೆಕ್ಕುಂಜೆ ಗೋಪಾಲಕೃಷ್ಣ ಭಟ್ಟರು

'ತೆಕ್ಕುಂಜ' ಕನ್ನಡ ನಾಡಿಗೆ ಚಿರಪರಿಚಿತ ಹೆಸರು : ಪಾಂಡಿತ್ಯಕ್ಕೆ ಅಧ್ಯಾಪನಕ್ಕೆ ಪರ್ಯಾಯ ಪದವೆಂದರೂ ಸಲ್ಲುವುದು ; ಸಂಸ್ಕೃತ ಪಂಡಿತರಾಗಿ, ಸಂಸ್ಕೃತ ಶಾಲೆಯೊಂದರ ಸ್ಥಾಪಕರಾಗಿ, ಅಧ್ಯಾಪಕರಾಗಿ, ವಿದ್ವಾಂಸರಾಗಿ ಹೆಸರಾದ ಶ್ರೀ ತೆಕ್ಕುಂಜ ಶಂಕರ ಭಟ್ಟರೆಂದರೆ ಗೊತ್ತಿಲ್ಲದವರಿಲ್ಲ! ಅವರ ಮಕ್ಕಳೂ ಅಷ್ಟೇ ವಿದ್ವಾಂಸರಾಗಿ ಖ್ಯಾತಿ ಪಡೆದಿದ್ದಾರೆ. ಈ ಪೈಕಿ ಅವರ ಹಿರಿಯ ಮಗ ತೆಕ್ಕುಂಜ ಗೋಪಾಲಕೃಷ್ಣ ಭಟ್ಟರು ಕನ್ನಡ ನಾಡಿನಲ್ಲಿಯೇ ಅದ್ವಿತೀಯ ವಿದ್ವಾಂಸರೆಂದೂ ಆದರ್ಶ ಕನ್ನಡ ಅಧ್ಯಾಪಕರೆಂದೂ ಹೆಸರಾದರು.

ಮಂಗಳೂರು ಸೈಂಟ್ ಎಲೋಸಿಯಸ್ ಕಾಲೇಜಿನಲ್ಲಿ ಹಿಂದೆ ಮುಳಿಯ ತಿಮ್ಮಪ್ಪಯ್ಯನವರು ಕನ್ನಡ ಪ್ರಾಧ್ಯಾಪಕರಾಗಿದ್ದ ದಿನಗಳು ಸುವರ್ಣಾಕ್ಷರಗಳಲ್ಲಿ ಬರೆದಿಡತಕ್ಕವುಗಳೆಂದು ಬಲ್ಲವರು ಹೇಳುತ್ತಾರೆ. ಅದೇ ಸ್ಥಾನವನ್ನು ತುಂಬಲು ನಿರಂತರ ಶ್ರಮಿಸಿದ ಹೆಗ್ಗಳಿಕೆ ತೆಕ್ಕುಂಜದವರಿಗಿದೆ. ಶ್ರೀ ತೆಕ್ಕುಂಜ ಗೋಪಾಲಕೃಷ್ಣ ಭಟ್ಟರು ತಿಮ್ಮಪ್ಪಯ್ಯನವರ ದಾರಿಯನ್ನು ತುಳಿದಿದ್ದಾರೆ. ಅದೇ ರೀತಿ ವಿದ್ವತ್ತೆಯನ್ನು ಮೆರೆದಿದ್ದಾರೆ. ದಿ. ತಿಮ್ಮಪ್ಪಯ್ಯನವರ ಬಗ್ಗೆ ಅವರ ಜೀವನ ಕಾರ್ಯಗಳ ಬಗ್ಗೆ ಗ್ರಂಥವನ್ನು ಬರೆದಿದ್ದು, ಕನ್ನಡ ಸಾಹಿತ್ಯ ಪರಿಷತ್ತು ಅದನ್ನು ಪ್ರಕಟಿಸಿದೆ. ತಿಮ್ಮಪ್ಪಯ್ಯನವರ ಶಿಷ್ಯರಾಗಿ ಅವರನ್ನು ಹತ್ತಿರದಿಂದ ಬಲ್ಲ ಬಂಧುವಾಗಿ ತೆಕ್ಕುಂಜೆಯವರು ರಚಿಸಿದ ಕೃತಿ ಮಹತ್ತ್ವದ ಅಂಶಗಳನ್ನು ಒಳಗೊಂಡಿದೆ.

'ವೀರ ವಿಲಸಿತ' ಇವರು ಬರೆದ ಒಂದು ಖಂಡ ಕಾವ್ಯ. ಪಿರಿಯಕ್ಕರದಲ್ಲಿ ಪ್ರಕಟಗೊಂಡ ಈ ಕಾವ್ಯ ಶ್ರೀಯುತರ ಚೊಚ್ಚಲ ಕೃತಿಯೆನ್ನಲಾಗಿದೆ. ಶ್ರೀ ಸೇಡಿಯಾಪು ಕೃಷ್ಣ ಭಟ್ಟರು ಪಿರಿಯಕ್ಕರದಲ್ಲಿ ಕೃತಿ ರಚಿಸಿ ಹೆಸರಾದ ಮೊತ್ತ ಮೊದಲಿಗರಾದರೆ, ಶ್ರೀ ತೆಕ್ಕುಂಜೆಯವರೂ ಸಫಲರಾದ ಕವಿಗಳು ; ಉತ್ತರ ರಾಮ ಚರಿತೆ, ಮತ್ತು ಜೈಮಿನಿ ಭಾರತಗಳಿಂದ ಸ್ಫೂರ್ತಿ ಪಡೆದು ಅವರು ಈ ಕೃತಿ ರಚಿಸಿದರೆಂದು ತಿಳಿದು ಬರುತ್ತದೆ. ಶ್ರೀರಾಮನ ಅಶ್ವಮೇಧದ ಕುದುರೆಯನ್ನು ಕಟ್ಟಿ ಹಾಕಿದ ಲವಕುಶರಿಗೂ, ಕುದುರೆಯ ಕಾಪಿನ ಭಟನಾಗಿ ಹೋದ ಭರತನ ಮಗ ಚಂದ್ರಕೇತುವಿಗೂ ನಡೆದ ಮಾತಿನ ಕಾಳಗವೇ 'ವೀರ ವಿಲಸಿತ' ಕಾವ್ಯದ ವಸ್ತು ; ಎಳೆಯ ಕ್ಷಾತ್ರ ವೀರರ ವೀರವಿಲಸಿತವನ್ನು ಪರಿಣಾಮ ರಮಣೀಯವಾಗುವ ನಿಟ್ಟಿನಿಂದ ವರ್ಣಿಸಿರುವುದು ಇಲ್ಲಿ ಕಂಡು ಬರುವ ವಿಶಿಷ್ಟಾಂಶ. ಮೂಲ ಕಥೆಗೆ ತಿರುವನ್ನಿತ್ತ ಭಂಗಿ ಅನ್ಯಾದೃಶ.

ಕನ್ನಡದ ವ್ಯಾಕರಣದಲ್ಲಿ ಹಸಿವುಳ್ಳವರಿಗೆ ಭಾಷಾಪ್ರಿಯರಿಗೆ ಅಂತೆಯೇ ಸಾಹಿತ್ಯ ಪ್ರಕ್ರಿಯೆಗೆ ಸಂಬಂಧಿಸಿ 'ಕನ್ನಡ ಸಮಾಸಗಳು' ಎಂಬ ಪುಸ್ತಕವನ್ನು ಶ್ರೀಯುತರು ಬರೆದಿದ್ದಾರೆ. ಪರಿಭಾಷೆಗಳು, ಸಮಾಸಗಳು, ಸಮಾಸ ಕಾರ್ಯಗಳು ಎಂಬ ಮೂರು ಅಧ್ಯಾಯಗಳು ಇದರಲ್ಲಿವೆ. ನಾಗವರ್ಮ, ಭಟ್ಟಾಕಳಂಕ, ಕೇಶಿರಾಜ ಮೊದಲಾದ ಪ್ರಾಕ್ತನ ಪಂಡಿತ ಕವಿಗಳನ್ನು ಉದ್ಧರಿಸುವ ಉದಾಹರಿಸುವ ಮೂಲಕ ಕೃತಿ ಶ್ರೇಷ್ಠತೆ ಪಡೆದಿದೆ.

'ಮಧು ರಂಜಿನಿ' ತೆಕ್ಕುಂಜೆಯವರ ಶೃಂಗಾರಮಯ ಕಾವ್ಯ ಸಾಂಗತ್ಯ ಧಾಟಿಯಲ್ಲಿ ರಚಿತವಾದ ಪುಸ್ತಕಗಳ ಮಾಲೆ, ಮುತ್ತಿನ ಮಾಲೆಯಂತಿದೆ. ಕೆಲವರು ಇದು ಅತಿಯಾದ ಶೃಂಗಾರ ನಿರೂಪಣೆಯೆಂದು ಹೇಳಿದರೂ, ಶೃಂಗಾರದ ಅಭಿರುಚಿಯನ್ನು ಹೋಂದಿಸಿ ನೋಡಿದರೆ ಇದರಲ್ಲಿರುವ ನಿರೂಪಣೆ ಹಳಸಲು ಎನಿಸಿಲ್ಲ. ಪ್ರಗತಿಪರ ಭಾವನೆಯು, ಆಡುಮಾತಿನ, ದೈನಂದಿನ ಜೀವನಾನುಭವದ ರಸಗವಳವೆಂದೇ ತಿಳಿಯಬಹುದಾಗಿದೆ.

ಈ ಸಂಕಲನದಲ್ಲಿ ಒಟ್ಟು ಮುನ್ನೂರ ಒಂದು ರಚನೆಗಳು ಸಾಂಗತ್ಯ ರೂಪದಲ್ಲಿವೆ. ಈ ಕೃತಿಯ ಬಗ್ಗೆ ವಿಮರ್ಶೆ ಮಾಡಿದ ಕವಿ ವಿಮರ್ಶಕ ವಿ. ಗ. ನಾಯಕರು ಇದರಲ್ಲಿರುವ ಕಾಮದ ರೂಪಾಂತರಗಳನ್ನು ಅವಾಂತರಗಳನ್ನು ಕವಿ ಅನಾವರಣಗೊಳಿಸುತ್ತಿರುವುದನ್ನು ನಿರೂಪಿಸಿದ್ದಾರೆ.

"ವಿಷಯಾಸಕ್ತಿ ಅತ್ಯಂತ ಸಹಜವಾದ ಪ್ರಕ್ರಿಯೆ, ಅದು ಪ್ರಾಣಿಗಳ ವ್ಯಕ್ತಿಗಳ ಜೀವನೋತ್ಸಾಹಕ್ಕೆ ಅತ್ಯಂತ ಪೂರಕವಾದದ್ದು, ಯಾರಾದರೂ ಕಂಗೆಡುವುದು, ಕೆಡುವುದು, ರೋಮಾಂಚನಗೊಳ್ಳುವುದು, ಶೋಧಿಸುವುದು, ಸಾಧಿಸುವುದು, ಜೀವಂತವಾಗಿರುವುದು, ಮನುಷ್ಯರಾಗಿರುವುದು ಆಪ್ತರಾದವರ ಸಾಹಚರ್ಯದಿಂದ ; ಒಲವಿನಿಂದ ; ಗಂಡಿಗೆ ಹೆಣ್ಣು, ಹೆಣ್ಣಿಗೆ ಗಂಡು ಒಂದು ಸೆಳೆತ. ಬಲವಾದ ಆಕರ್ಷಣೆ. ತೀವ್ರವಾದ ಕುತೂಹಲ. ಇಲ್ಲಿ ವಿವಾಹಿತರಿಗೂ ಅವಿವಾಹಿತರಿಗೂ ಒಂದೊಂದು ಮಟ್ಟದಲ್ಲಿ ಆಸಕ್ತಿ, ಮೋಹ, ಕೆಲವರು ಮುಲಾಜಿಲ್ಲದೆ ಮುಚ್ಚುಮರೆಯಿಲ್ಲದೆ ರತಿ - ಮನ್ಮಥರನ್ನು ಕ್ರೀಡೆಗಳನ್ನು ಬಿಡಿಸಿ ಬಿಡಿಸಿ ಬಡಿಸಿ ಬಡಿಸಿ, ತೃಪ್ತರಾಗುವುದಾದರೆ, ಮತ್ತೆ ಕೆಲವರು ಪ್ರತಿಷ್ಠೆಯ ಬಿಗುಮಾನದಿಂದ ಪರಮಾಪ್ತ ವಲಯದಲ್ಲಿ ಮಾತ್ರ, ಅದನ್ನೇ ಮಾಡುತ್ತಾರೆ. ದಿಟದಲ್ಲಿ ಹೀಗೆಲ್ಲಾ ತೆರೆದುಕೊಳ್ಳುವುದೇ 'ನಿಜವಾಗುವಿಕೆ ' ಭಾರ ಕಳಕೊಳ್ಳುವಿಕೆ. ಈ ರೀತಿ ಚೇತೋಹಾರಿಯಾದ ಬದುಕಿಗೆ ಅವಶ್ಯವಾದ ಟಾನಿಕ್. ಇಷ್ಟಾಗಿಯೂ ಬಹಿರಂಗದಲ್ಲಿ ಅಂಥ ಮಾತುಕತೆಗೆ ಅಶ್ಲೀಲತೆಯ ಆರೋಪ ಹೊರಿಸಲ್ಪಡುವುದು ವೈಪರೀತ್ಯ. ಇದು ಆತ್ಮವಂಚನೆ. ಅರ್ಜುನ ಸನ್ಯಾಸಿತನ. ಪ್ರಕೃತ ಮಧು ರಂಜಿನಿ ಅಂಥ ಮುಖವಾಡಗಳನ್ನು ಕಿತ್ತೆಸೆದು ರಂಜಿಸುವ ಹಂಗಿಸುವ ಭಂಗಿಸುವ ಧೀರ ಪ್ರಯೋಗವಾಗಿದೆ. ಅರ್ಥಾತ್ ಮನುಷ್ಯನ ಆಟಗಳನ್ನು ಕಾಟಗಳನ್ನು ರಟ್ಟು ಮಾಡುವುದೇ ಇಲ್ಲಿನ ವಿಶೇಷ ವೈಶಿಷ್ಟ್ಯ, ಸಾಹಸ, ಇದೇ ಕಾರಣಕ್ಕಾಗಿಯೇ ಇದಕ್ಕೆ ಅಸ್ಪೃಶ್ಯತೆಯ ಶಾಪ ! ತಾಪ!"

ಪ್ರಸಿದ್ಧ ಕಾದಂಬರಿಕಾರ ಅನಕೃ ಕೂಡ ಇಂಥ ವಿಚಾರಗಳ ನಿರೂಪಣೆಯಲ್ಲಿ ವಹಿಸಿದ ಸ್ವಾತಂತ್ರ್ಯ ಧೈರ್ಯ ಅಂದಿನ ದಿನಗಳಲ್ಲಿ ಕ್ರಾಂತಿಕಾರಕವಾಗಿದ್ದರೂ ಟೀಕೆಗೆ ಒಳಗಾದುದು ಇದೇ ಪರಿಸ್ಥಿತಿಯನ್ನು ನೆನಪಿಗೆ ತರುತ್ತದೆ. ಮುದ್ದಣನ ರಾಮಾಶ್ವಮೇಧಕ್ಕೆ ಟಿಪ್ಪಣಿ ಸಾರ ಸಮೇತ ಬರೆದು ಹೊಸ ಕನ್ನಡದಲ್ಲಿ ಕಾವ್ಯಾಭಿರುಚಿಯನ್ನು ಹುಟ್ಟಿಸಿದ ಸಾಧನೆ ತೆಕ್ಕುಂಜೆಯವರದು. ಮುದ್ದಣನ ನುಡಿಗಟ್ಟು, ಪ್ರಾದೇಶಿಕ ಪರಿಭಾಷೆಯನ್ನು ಅರ್ಥ ಮಾಡಿಕೊಂಡು ಉತ್ತಮ ವ್ಯಾಖ್ಯಾನವನ್ನೊದಗಿಸಿದ ಕೀರ್ತಿ ತೆಕ್ಕುಂಜೆಯವರಿಗೆ ಸಲ್ಲಲೇ ಬೇಕು. ಕನ್ನಡಿಗರು ಮುದ್ದಣನನ್ನು ಅರ್ಥ ಮಾಡಿಕೊಳ್ಳಲು ಇದೊಂದು ಉಪಾಧ್ಯಾಯ ಕೃತಿ. ಉಪಾದೇಯ ಕೃತಿ.

ಮುಳಿಯ ತಿಮ್ಮಪ್ಪಯ್ಯನವರ ಸಂಭಾವನಾ ಗ್ರಂಥ ಹಾಗೂ ಹಲವಾರು ಬಗೆಯ ಪ್ರಬಂಧ,

ಮಂಡನೆ ಅವರ ವಿಶಾಲ ಕಾರ್ಯಕ್ಷೇತ್ರವನ್ನು ಬಿಂಬಿಸುತ್ತದೆ. ಮಂಗಳೂರು ಹವೀಕರ ಆಡು ನುಡಿ, ತುಳುವಿನ ವರ್ಣಮಾಲೆ, ಕೆಲವು ಶಬ್ದಗಳ ಅರ್ಥ, ಕನ್ನಡ ಕಾವ್ಯಗಳಲ್ಲಿ ಗಣೇಶ, ಕನ್ನಡದ ನವರತ್ನಗಳು "ಪಂಪ, ರನ್ನ, ಬಸವೇಶ್ವರ, ಹರಿಶ್ಚಂದ್ರ ಕವಿ, ಕುಮಾರವ್ಯಾಸ, ರತ್ನಾಕರವರ್ಣಿ, ಸರ್ವಜ್ಞ ಈ ಒಂಭತ್ತು ಮಂದಿಯ ಕುರಿತು ಬರೆದ ಬರೆಹಗಳು, ಶ್ರೀರಾಮ ಪಟ್ಟಾಭಿಷೇಕದ ಒಳ ಹೊರಗು ಮುಂತಾದ ನೂರಾರು ಬರೆಹಗಳನ್ನು ಬರೆದು ಅವರು ವಿದ್ವತ್ತೆಯನ್ನು ಪಿಪಾಸುಗಳಿಗಾಗಿ ಧಾರೆಯೆರೆದಿದ್ದಾರೆ.

ಶ್ರೀಯುತರು ಉತ್ತಮ ಅಧ್ಯಾಪಕ, ವಿಮರ್ಶಕ, ಲೇಖಕ, ಸಹೃದಯ ವಿದ್ವಾಂಸರಾಗಿರುವಂತೆ ಉತ್ತಮ ಯಕ್ಷಗಾನ ಪಟುವೂ ಹೌದು. ಶ್ರೀ ಪೊಳಲಿ ಶಾಸ್ತ್ರಿಗಳು, ಮುಳಿಯ ಮಹಾಬಲ ಭಟ್ಟರು, ತೆಕ್ಕುಂಜೆಯವರು, ಜಿ. ಪರಮೇಶ್ವರ ಭಟ್ಟರು ಒಟ್ಟಾಗಿ ನಡೆಸುತ್ತಿದ್ದ ಯಕ್ಷಗಾನ ಕೂಟಗಳು (ತಾಳಮದ್ದಳೆ) ಜನರಿಗೊಂದು ರಸದೌತಣವಾಗಿತ್ತು. ಅವರು ಉತ್ತಮ ಅರ್ಥಧಾರಿಗಳಾಗಿ ಮಾನ್ಯರಾಗಿದ್ದರು.

ಮಂಗಳೂರಿನಲ್ಲಿ 'ಕನ್ನಡ ಸಂಘ'ವೊಂದನ್ನು ಅವರೂ ಅವರ ಸಾಹಿತ್ಯ ಮಿತ್ರರೂ ಸೇರಿ ರಚಿಸಿದ್ದರು. ಅವರು ಕೆಲಕಾಲ ಅಧ್ಯಕ್ಷರಾಗಿಯೂ ಇದ್ದರು. ಕನ್ನಡದ ಚಟುವಟಿಕೆ ಎಂದರೆ ತೆಕ್ಕುಂಜೆಯವರ ಪಂಚಪ್ರಾಣಗಳು.

ನವಯುಗದ ಹೊನ್ನಯ್ಯ ಶೆಟ್ಟರು

ಶುಭ್ರ ಖಾದಿ ಬಟ್ಟೆ ಧರಿಸಿದ ಈ ಉಪಾಧ್ಯಾಯರು ಆಮೇಲೆ ಉಡುಪಿಯ ಹಿರಿಯ ಪ್ರಕಾಶಕರೆನಿಸಿ ಕಟಪಾಡಿ ಹೊನ್ನಯ್ಯ ಶೆಟ್ಟರು ಎಂದು ಖ್ಯಾತರಾದವರು. ದಿ. ಶ್ರೀನಿವಾಸ ಉಪಾಧ್ಯ ಪಣಿಯಾಡಿಯವರ ತುಳುನಾಡ ಪ್ರೆಸ್‌ನಲ್ಲು ಪ್ರೂಫ್ ತಿದ್ದುವ ಕೆಲಸದಲ್ಲಿ ನಿಯುಕ್ತರಾದ ಶೆಟ್ಟರು ಕಾಲಕ್ರಮೇಣ ನವಯುಗದ ಸಂಪಾದಕರಾದರು. ಪ್ರಾಥಮಿಕ ಹಂತದ ಉಪಾಧ್ಯಾಯರಿಗೆ ಉಪಯುಕ್ತವಾದ 'ಬಾಲಚಂದ್ರ' ಎಂಬ ಪತ್ರಿಕೆಗೆ ಹುಟ್ಟು ಹಾಕಿದರು. ಪಣಿಯಾಡಿ ಅವರ ಅಖಿಲ ಕರ್ನಾಟಕ ಖ್ಯಾತಿಯ ಅಂತರಂಗ ಪತ್ರಿಕೆಯನ್ನು ಮರುಹುಟ್ಟು ಕೊಟ್ಟು ಪುಸ್ತಕ ಪತ್ರಿಕೆಯಾಗಿ ರೂಪಿಸಿ ಸುಮಾರು ಎರಡು ದಶಕಗಳಷ್ಟು ಕಾಲ ನಿರ್ವಹಿಸಿದರು. ಇಷ್ಟು ನಡೆಸಲು ವಿತರಿಸಲು ತಾವೇ ಕೆಲ ಕೂಡು ಬಂಡವಾಳದ ಹಾಗೂ ಖಾಸಗಿ ಪ್ರವರ್ತನೆಯ ಸಂಸ್ಥೆಗಳನ್ನು ಕಟ್ಟಿದರು. ನವಯುಗ ಎಂಟರ್‌ಪ್ರೈಸಸ್ ಎಂಬುದೊಂದು ನವಭಾರತ ಪುಸ್ತಕ ಭಂಡಾರ ಇನ್ನೊಂದು. ಕಿರಿಯರ ಪ್ರಪಂಚ ಎಂಬ ಪ್ರಕಾಶನ ಮಾಲಿಕೆಯನ್ನು ಆರಂಭಿಸಿದ್ದು, ಬೇರೆಯವರಾದರೂ ಅದನ್ನು ಕೆಲಕಾಲ

ಸಮರ್ಪಕವಾಗಿ ನಡೆಸಿದವರು ಹೊನ್ನಯ ಶೆಟ್ಟರೇ. ಹೀಗೆ ಕೆಲವೊಮ್ಮೆ ತಾಯಿಯಾಗಿ ಹೆಚ್ಚು ಸಲ ಸಾಕು ತಾಯಿಯಾಗಿ ಹೊನ್ನಯ್ಯ ಶೆಟ್ಟರು ಒಂದು ತಲೆಮಾರಿನವರು ಸುದೀರ್ಘ ಕಾಲ (1930-1960) ಕರ್ನಾಟಕದ ಒಬ್ಬ ಸರ್ವ ಮಾನ್ಯ ಪ್ರಕಾಶಕರಾಗಿ ಸೇವೆ ಸಲ್ಲಿಸಿದರು. ಮಾನ್ಯ ಕು. ಶಿ. ಹರಿದಾಸ ಭಟ್ಟರು ಹೊನ್ನಯ್ಯ ಶೆಟ್ಟರ ಬಗ್ಗೆ ಬರೆದ ವಿಚಾರಗಳಿವು. ಉಡುಪಿಯಲ್ಲಿ ಕಿರಿಯರ ಸಾಹಿತ್ಯ ಸಮ್ಮೇಳನ ನಡೆದಾಗ ಶೆಟ್ಟರು ಸಕ್ರಿಯ ಪಾತ್ರ ವಹಿಸಿದ್ದರೆಂದು ಕು. ಶಿ.ಯವರು ತಿಳಿಸಿದ್ದಾರೆ. ಶ್ರೀ ಬನ್ನಂಜೆ ರಾಮಾಚಾರ್ಯರು, ಸಾಂತ್ಯಾರು ವೆಂಕಟರಾಜರು, ಕೊರಡ್ಕಲ್ ಶ್ರೀನಿವಾಸ ರಾಯರು, ಎಂ. ವಿ. ಹೆಗ್ಡೆ ಅವರು, ಎನ್. ಎಂ. ನಾರಾಯಣ ಭಟ್ಟರು, ಕುಮಾರ ಸ್ವಾಮಿ ಇವರುಗಳಲ್ಲದೆ ನಾನು ಕೂಡಾ ಹೊನ್ನಯ್ಯ ಶೆಟ್ಟರ ಗರಡಿಗೆ ಮಣ್ಣು ಹೊತ್ತವನಾಗಿದ್ದೇನೆ" ಎನ್ನುತ್ತಾರೆ ಕು. ಶಿ.ಯವರು. 30 ವರ್ಷ ಕಾಲ ಉಡುಪಿಯಲ್ಲಿ ಪುಸ್ತಕ ಪ್ರಕಾಶನೋದ್ಯಮವನ್ನು ನಡೆಸಿದ ಕೀರ್ತಿ ಶೆಟ್ಟರದು ಎಂದು ಅವರು ಉಲ್ಲೇಖಿಸಿದ್ದಾರೆ.

ಸ್ವಾತಂತ್ರ್ಯ ಹೋರಾಟಗಾರರಾದ ಕೆ. ಕೆ. ಶೆಟ್ಟರು ಹೊನ್ನಯ್ಯ ಶೆಟ್ಟರ ಸ್ನೇಹಿತರಾಗಿದ್ದರು. ಎಂ. ವಿ. ಹೆಗ್ಡೆಯವರು ಅವರೊಂದಿಗೆ ದುಡಿದು ಉತ್ತಮ ಪತ್ರಕರ್ತರಾಗಿ 'ನವಭಾರತ'ದಲ್ಲಿ ಕೆಲಸ ಮಾಡಿದರು. 'ನವಯುಗ'ವನ್ನು ಉತ್ತಮ ರೀತಿಯಲ್ಲಿ ನಡೆಸಿದ ಕೀರ್ತಿ ಶೆಟ್ಟರಿಗೆ ಸಲ್ಲಬೇಕು. ಶಿಕ್ಷಣದ ಸಲುವಾಗಿ ಹೊರಟ 'ಬಾಲಚಂದ್ರ' ಪತ್ರಿಕೆ ಮಾಸಿಕವಾಗಿದ್ದು ಗಮನಾರ್ಹವೆನಿಸಿತ್ತು. ಈ ಪತ್ರಿಕೆಗಳ ಮೂಲಕ ಉಡುಪಿಯಲ್ಲಿ ಸಾಹಿತ್ಯದ ಬಳಗವೊಂದು ನಿರ್ಮಾಣವಾಗಿ ಮುಂದೆ ಉತ್ತಮ ಸಾಹಿತಿಗಳು ಬರಲು ಕಾರಣವೆನಿಸಿತು. ಶ್ರೀ ಕು. ಶಿ. ಯವರು ಈ ಪತ್ರಿಕೆಗಳಲ್ಲಿ ಲೇಖಕರಾಗಿ ತುಂಬ ಲಾಭ ಹೊಂದಿರುವುದಾಗಿ ಹೇಳುತ್ತಾರೆ. ಶ್ರೀ ಕೆ. ಕೆ. ಶೆಟ್ಟರು ಕಯ್ಯಾರ ಕಿಞ್ಞಣ್ಣ ರೈಗಳು ಕೂಡಾ ಇವರಲ್ಲಿ ಬರೆಯುತ್ತಿದ್ದರು.

ಶ್ರೀ ಹೊನ್ನಯ್ಯ ಶೆಟ್ಟರು 'ಮುಗುಳು' ಸಂಕಲನದಲ್ಲಿ ಬರೆದ ಪದ್ಯಗಳು ಚೆನ್ನಾಗಿವೆ. 'ರವಿಯೆ ಬಾರೊ' ಎಂಬ ಅವರ ಮಕ್ಕಳ ಕವನ ಸುಂದರವಾದುದು.

"ರವಿಯೆ ಬಾರೊ ; ಬುವಿಗೆ ಬಾ ;
ನಿನ್ನ ಮೊಗದ ಸಿರಿಯ ತಾ
ಮೂಡಿ ಬಾರೊ, ಓಡಿ ಬಾರೊ
ಮೂಡಬೆಟ್ಟ ಹತ್ತಿ ಬಾರೊ"

ಕವಿಯಾಗಿ, ಲೇಖಕರಾಗಿ, ಪ್ರಕಾಶಕರಾಗಿ, ಕಾವ್ಯ - ಸಾಹಿತ್ಯ ಪೋಷಕರಾಗಿ ಬಾಳಿದ ಹೊನ್ನಯ್ಯ ಶೆಟ್ಟರು ಹೊನ್ನಿನಂತೆ ಮಿಂಚಿದ್ದಾರೆ. ಉಡುಪಿಯಲ್ಲಿ ಸಾಹಿತ್ಯದ ನವಯುಗವನ್ನು ಪ್ರಾರಂಭಿಸಿದ್ದಾರೆ.

ಹಾಸ್ಯ ಸಾಹಿತಿ

ಪಡುಕೋಣೆ ರಮಾನಂದರಾಯರು

ಪಡುಕೋಣೆ ರಮಾನಂದ ರಾಯರು ಮಂಗಳೂರು ಸರಕಾರಿ ತರಬೇತಿ ಕಾಲೇಜಿನಲ್ಲಿ ಪ್ರಾಚಾರ್ಯರಾಗಿದ್ದ ದಿನಗಳಲ್ಲಿ ಅವರನ್ನು ಸಂದರ್ಶಿಸುವ ಅವಕಾಶ ನನಗೆ ಒದಗಿತ್ತು. ಪೆರಡಾಲ ಮಹಾಜನ ಸಂಸ್ಕೃತ ಕಾಲೇಜಿನಲ್ಲಿ ವಿದ್ಯಾರ್ಥಿಯಾಗಿದ್ದ ನಾನು ಅಲ್ಲಿ ವಿದ್ಯೋದಯ ಸಭೆಯ ಕಾರ್ಯದರ್ಶಿಯಾಗಿದ್ದೆ. ಪ್ರತಿವರ್ಷ ಶ್ರೀ ಕೃಷ್ಣ ಜಯಂತಿಯನ್ನು ಉತ್ಸವ ಸಭೆ ಸಮಾರಂಭ ನಾಟಕಾದಿ ಮನೋರಂಜನೆಗಳ ಮೂಲಕ ಆಚರಿಸುವುದು ವಿದ್ಯೋದಯ ಸಭೆಯ ಕಾರ್ಯಕ್ರಮವಾಗಿತ್ತು. ಈ ಸಮಾರಂಭಕ್ಕೆ ಶ್ರೀ ರಮಾನಂದ ರಾಯರನ್ನು ಅಧ್ಯಕ್ಷತೆಗೆ ಆಹ್ವಾನಿಸಿದ್ದೆವು. ಅವರು ಸಮಾರಂಭಕ್ಕೆ ಆಗಮಿಸಿ ಬಹಳ ಚೆನ್ನಾಗಿ ನಡೆಸಿಕೊಟ್ಟರು. ಹೀಗೆ ನಾಲ್ಕೈದು ಬಾರಿ ಅವರೊಡನೆ ಮಾತನಾಡುವ ಅವಕಾಶ ಲಭಿಸಿ ಅವರ ಸಾಹಿತ್ಯ ಪ್ರೀತಿ ರಚನೆಗಳ ಬಗ್ಗೆ ಆಸಕ್ತಿ ತಳೆದೆ.

"ಹುಚ್ಚು ಬೆಳದಿಂಗಳಿನ ಹೂಬಾಣಗಳು" ಶ್ರೀ ಪಡುಕೋಣೆ ರಮಾನಂದ ರಾಯರ ಪ್ರಸಿದ್ಧ ಕೃತಿ. ಇದು ವಿಡಂಬನೆ, ನವಿರಾದ ಹಾಸ್ಯಗಳಿಂದ ರೋಚಕವಾಗಿದ್ದು, ನಾಡಿನಾದ್ಯಂತ ಖ್ಯಾತವಾಗಿದೆ. ಅವರ ಸಾಹಿತ್ಯ ಸಂಪತ್ತು ಎಷ್ಟು ಸಮೃದ್ಧವಾಗಿತ್ತು ಎಂಬುದು ಈ ಕೃತಿಯಿಂದ ಸ್ಪಷ್ಟವಾಗಿರುತ್ತದೆ. ಇತ್ತೀಚೆಗೆ ಅವರ ಶತಮಾನೋತ್ಸವವು ಆಚರಿಸಲ್ಪಟ್ಟ ಸಂದರ್ಭದಲ್ಲಿ ಈ ಕೃತಿ ಮರು ಮುದ್ರಣ ಕಂಡಿದೆ.

ಅವರು ಕನ್ನಡ ಸಾಹಿತ್ಯದಲ್ಲಿ ಪರಿಣತರಾದಂತೆಯೇ ಆಂಗ್ಲ ಸಾಹಿತ್ಯವನ್ನು ಬಲ್ಲವರು. ಆ ಭಾಷೆಯ ಉತ್ತಮ ಅಂಶಗಳನ್ನು ಕನ್ನಡಕ್ಕೆ ತರುವ ಕೆಲಸವನ್ನು ಯಶಸ್ವಿಯಾಗಿ ನಿರ್ವಹಿಸಿದ್ದಾರೆ. ಕೆಲ ಇಂಗ್ಲೀಷ್ ಕೃತಿಗಳನ್ನು ನಾಟಕಗಳನ್ನು ಕನ್ನಡಕ್ಕೆ ತಂದಿದ್ದಾರೆ. ಲೆಬನಾನಿನ ಒಂದು ವಸ್ತುವನ್ನು ನಾಟಕ ರೂಪದಲ್ಲಿ ರಚಿಸಿದ್ದಾರೆ. ಅವರು ಸ್ವತಃ ರಂಗ ತಜ್ಞರೂ, ಉತ್ತಮ ನಟರೂ ಆಗಿದ್ದರು. ಅವರು ಪತ್ನಿ ಸೀತಾದೇವಿಯೊಂದಿಗೆ ರಂಗಪರಿಕರಗಳಲ್ಲಿ ಸುತ್ತಾಡಿದ್ದಾರೆ. ಶಿವರಾಮ ಕಾರಂತರ ನಾಟಕ ಪ್ರಯೋಗಗಳಲ್ಲಿ ಈ ದಂಪತಿಗಳು ಪಾತ್ರಧಾರಿಗಳಾಗಿದ್ದರು. ಚಲನಚಿತ್ರ ಪ್ರಯೋಗಗಳಲ್ಲಿಯೂ ಇವರು ತುಂಬ ಆಸಕ್ತಿ ವಹಿಸಿದ್ದರು. ಚಲನಚಿತ್ರ ಮಾಧ್ಯಮವನ್ನು ಯಶಸ್ವಿಯಾಗಿ ಬಳಸುವ ಬಗೆಯನ್ನು ಬಲ್ಲವರಾಗಿ ಪ್ರಯೋಗಗಳ ಮೂಲಕ ತೋರಿಸಿಕೊಟ್ಟಿದ್ದರು. ಶ್ರೀ ಶಿವರಾಮ ಕಾರಂತರ ಅಚ್ಚುಮೆಚ್ಚಿನವರಾಗಿ, ಅವರ ಜೊತೆಯಲ್ಲಿ ಹತ್ತಾರು ಮುಖಗಳಲ್ಲಿ ಕೆಲಸ ಮಾಡಿದವರು.

ದಕ್ಷಿಣ ಕನ್ನಡದ ಸಹಕಾರ ಚಳವಳಿಯ ಭೀಷ್ಮ ಶ್ರೀ ಮೊಳಹಳ್ಳಿ ಶಿವರಾಯರ ಮಗಳು ಸೀತಾದೇವಿ ಇವರ ಧರ್ಮಪತ್ನಿ. ಸೀತಾದೇವಿಯವರು ಸಾಹಿತ್ಯಾಸಕ್ತೆಯೂ ಅಭ್ಯಾಸಶೀಲೆಯೂ ಆಗಿದ್ದರು. ಈ ದಾಂಪತ್ಯವು ಉತ್ತಮ ಸಾಹಿತ್ಯ ನಿರ್ಮಾಣಕ್ಕೆ ಅನುಕೂಲ ಸನ್ನಿವೇಶವನ್ನೊದಗಿಸಿತ್ತು. ಪಡುಕೋಣೆ ರಮಾನಂದ ರಾಯರು 'ಪರಮಾನಂದ' ಎಂದೇ ಪ್ರಸಿದ್ಧರಾಗಿದ್ದರು. ಇದು ಅವರ ಜೀವನ ವಿಧಾನಕ್ಕೆ ಒಪ್ಪುವ ಹೆಸರಾಗಿತ್ತು.

ಪರಮಾನಂದರು ಶಿಕ್ಷಣವೇತ್ತರು. ಮಕ್ಕಳ ಹೃದಯದ ಮಿಡಿತವನ್ನು ಬಲ್ಲವರಾಗಿ, ಶಿಕ್ಷಣ ರಂಗದಲ್ಲಿ ಅಪಾರ ಸುಧಾರಣೆಗಳನ್ನು ತಂದಿದ್ದರು. ಸಹಶಿಕ್ಷಕರಿಗೆ ಅಚ್ಚುಮೆಚ್ಚಿನವರಾಗಿ ಕಾರ್ಯ ದಕ್ಷತೆಯಲ್ಲಿ ಕಟ್ಟುನಿಟ್ಟಿನವರಾಗಿ ಒಳ್ಳೆಯ ಹೆಸರನ್ನು ಗಳಿಸಿದ್ದರು. ಭಾಷಣ ಮಾಡುವುದರಲ್ಲಿ, ಒಳ್ಳೆಯ ಅಂಶಗಳನ್ನು ಮನಮುಟ್ಟುವಂತೆ ವಿವರಿಸುವುದರಲ್ಲಿ ಸಮರ್ಥರಾಗಿದ್ದರು.

ಶಿಕ್ಷಣ ಕಲೆ, ರಂಗಭೂಮಿ, ಸಾಹಿತ್ಯ ಅವರ ಜೀವನದ ಅವಿಭಾಜ್ಯ ಅಂಶಗಳಾಗಿದ್ದವು. ಪತ್ನಿಯೂ ಅಂಥದೇ ಆಸಕ್ತಿ ಬೆಳೆಸಿಕೊಂಡವರಾದುದರಿಂದ ಪರಸ್ಪರ ಪೋಷಕರೂಪದಿಂದ ಅವು ರೂಪುಗೊಳ್ಳಲು ಸಾಧ್ಯವಾಯಿತು.

ಮರವಂತೆ ಸಮೀಪದ ನಾಡ ಎಂಬ ದ್ವೀಪದ ಒಂದು ಭಾಗದ ಪ್ರದೇಶಕ್ಕೆ ಪಡುಕೋಣೆ ಎಂದು ಹೆಸರಂತೆ. ಈ ಚಿಕ್ಕ ಊರಿನ ಹೆಸರು ಇಂದು ನಾಡಿನ ಎಲ್ಲೆಡೆ ಪ್ರಸಾರವಾಗಲು ಶ್ರೀ ರಮಾನಂದ ರಾಯರು, ಬರೆಹಗಾರ್ತಿ ವಾಸಂತಿ ಪಡುಕೋಣೆ, ಪ್ರಕಾಶ್ ಪಡುಕೋಣೆ ಕಾರಣರಾಗಿದ್ದಾರೆ. ಇವರ ಪೈಕಿ ಮೊದಲಿಗರು 'ಪರಮಾನಂದ' ಎಂದೇ ಖ್ಯಾತರಾಗಿರುವ ರಮಾನಂದ ರಾಯರು.

ಕನ್ನೆಪ್ಪಾಡಿ ಶಾಸ್ತ್ರಿಗಳು

1952ನೇ ಇಸವಿಯಲ್ಲಿ ಪೆರಡಾಲ ಮಹಾಜನ ಸಂಸ್ಕೃತ ಕಾಲೇಜಿನ ವರ್ಧಂತ್ಯುತ್ಸವಕ್ಕೆ ಅಧ್ಯಕ್ಷರಾಗಿ ಶಾಸ್ತ್ರಿಗಳು ಬಂದಿದ್ದರೂ, ಸಭಾ ಕಾರ್ಯಕ್ರಮ ಮುಗಿದು ವಿದ್ಯಾರ್ಥಿಗಳ ಸಾಂಸ್ಕೃತಿಕ ಚಟುವಟಿಕೆ ನಾಟಕ ಪ್ರದರ್ಶನಗಳಿದ್ದವು. ಈ ಲೇಖಕನು ರಚಿಸಿದ ಕಾಶ್ಮೀರ ಸಂಧಾನ ಸಮುದ್ಯಮವೆಂಬ ಸಂಸ್ಕೃತ ನಾಟಕವನ್ನು ಆ ದಿನ ಮೊದಲಾಗಿ ರಂಗಕ್ಕೆ ತರಲಾಗಿತ್ತು. ನಾಟಕ ಮುಗಿಯುತ್ತಲೇ ಅಧ್ಯಕ್ಷರಾದ ಶಾಸ್ತ್ರಿಗಳು ರಂಗವನ್ನೇರಿ ನಾಟಕಕಾರನಾದ ನನ್ನನ್ನು ಕರೆದು, ಸಂಭಾವನೆಯನ್ನಿತ್ತು ಮಾಡಿದ ಭಾಷಣ ನನ್ನ ಜೀವಮಾನದ ಅಮೂಲ್ಯ ಕ್ಷಣ. ಸಿರಿಗನ್ನಡ ಪ್ರೆಸ್ಸಿನ ಕೃಷ್ಣ ಭಟ್ಟರೂ ಅದೇ ರಂಗವನ್ನೇರಿ ಶಾಸ್ತ್ರಿಗಳ ಮಾತನ್ನು ಪುಷ್ಟೀಕರಿಸಿದುದು ಹೆಮ್ಮೆಯ ಕ್ಷಣವಾಗಿತ್ತು. ಊರ ಹಿರಿಯರಾದ ಈಳಂತೋಡಿ ಕೃಷ್ಣ ಭಟ್ಟರಂತೂ ಬಹಳಷ್ಟು ಖುಷಿಪಟ್ಟಿದ್ದರು.

ಈ ಎಲ್ಲಾ ಘಟನೆಗಳಿಗೆ ಕಾರಣ ಶ್ರೀ ಕನ್ನೆಪ್ಪಾಡಿ ಶಾಸ್ತ್ರಿಗಳ ಹೃದಯ ವೈಶಾಲ್ಯ. ಆ ಮೊದಲೇ ಅವರನ್ನು ಎಷ್ಟೋ ಬಾರಿ ನಾನು ಕಾಲೇಜಿನ ಪರಿಸರದಲ್ಲಿ ಅವರ ಮಗಳ ಮನೆಗೆ (ಯು. ಮಹಾಲಿಂಗಭಟ್ಟರಲ್ಲಿ) ಬಂದಾಗ ಕಂಡದ್ದುಂಟು. ಅವರ ಶ್ರೀಮದ್ಗಾಂಭೀರ್ಯವನ್ನು ನೋಡಿ ಬಳಿ ಸುಳಿಯಲು ಧೈರ್ಯ ಬಾರದಿದ್ದರೂ ಅವರು ವಿದ್ಯಾರ್ಥಿಗಳನ್ನು ಮಾತನಾಡಿಸುತ್ತಿದ್ದ ವಿಧಾನದಿಂದ,

ಸಂಸ್ಕೃತದಲ್ಲಿ ಕೇಳುತ್ತಿದ್ದ ಪ್ರಶ್ನೆಗಳಿಂದ ನಮಗೆ ಅವರ ಬಗ್ಗೆ ಗೌರವ ಹೆಚ್ಚುತ್ತಿತ್ತು. ಹೀಗೆ ಅವರೊಬ್ಬ ವಿದ್ವಾಂಸರಾಗಿ, ಸಹೃದಯರಾಗಿ, ಪ್ರಕಾಂಡ ಪಂಡಿತರಾಗಿ ನಮಗೆ ಪರಿಚಿತರು. ಅವರ ಮಕ್ಕಳು ಡಾ। ಸತ್ಯಶಂಕರ, ಶ್ರೀಕಂಠ ಪುತ್ತೂರು, 'ಶಿಂಗಣ್ಣಾ' ಖ್ಯಾತಿಯ ರಘು ಪುತ್ತೂರು, ಮನೋರಮ ಎಂ. ಭಟ್ ಮೊದಲಾದವರು ನಮಗೆಲ್ಲಾ ಪರಿಚಿತರು. ಇಂಥ ಒಂದು ಸೊಗಸಾದ ಸಂಸಾರ ಹೊಂದಿದ ಶಾಸ್ತ್ರಿಗಳು ಅನನ್ಯ ಪಂಡಿತರಾಗಿ ನಾಡು ನುಡಿಗಳಿಗೆ ಸಲ್ಲಿಸಿದ ಸೇವೆ ಅಪಾರ.

ಅವರು ಆಶುಕವಿಗಳು. ನೂರಾರು ಕವನಗಳನ್ನು ಬಿಡಿಬಿಡಿಯಾಗಿ ಅವರು ರಚಿಸಿದ್ದುಂಟು. 'ಸ್ಥಾನಾಜಿ ಭೂಪಾಲ ಚರಿತಂ' ಎಂಬ ಮಹಾಕಾವ್ಯ ಅವರ ಬಲು ದೊಡ್ಡ ಸಾಧನೆ. 'ಕವಿ ವಿಜಯಂ' ಎಂಬ ಖಂಡ ಕಾವ್ಯವನ್ನು ಅವರು ರಚಿಸಿದ್ದಾರೆ. ಶೃಂಗೇರಿ ಜಗದ್ಗುರುಗಳು ಅವರ ಪಾಂಡಿತ್ಯಕ್ಕಾಗಿ ಸನ್ಮಾನಿಸಿದ್ದರು. ಬದಿಯಡ್ಕದಲ್ಲಿ ಕವಿ ಕಿಞ್ಞಣ್ಣ ರೈಗಳ ನೇತೃತ್ವದಲ್ಲಿ ಅವರಿಗೆ ಪೌರ ಸನ್ಮಾನವೂ ಲಭಿಸಿದೆ. ಅಪಾರ ಶಿಷ್ಯ ಪರಂಪರೆಯನ್ನು ಹೊಂದಿದ ಶಾಸ್ತ್ರಿಗಳ ಸಾಹಿತ್ಯೋಪಾಸನೆ ವಿಶಿಷ್ಟವಾದುದು. ಮಹಾಮಹೋಪಾಧ್ಯಾಯ ಎಂಬ ಬಿರುದನ್ನು ಅವರು ಗಳಿಸಿದುದು ಯಥಾರ್ಥವಾಗಿ ಸಾರ್ಥಕವಾಗಿದೆ.

"ಕಸ್ತೂರಿ" ಖ್ಯಾತಿಯ ಕವಿ ಪಾ. ವೆಂ.

ಪಾಡಿಗಾರು ವೆಂಕಟರಮಣ ಆಚಾರ್ಯ ಎಂಬ ಹೆಸರು ಪೂರ್ತಿಯಾಗಿ ಹೇಳದೆ ಇದ್ದರೂ, 'ಪಾ.ವೆಂ.' ಎಂದಷ್ಟೇ ಕರೆದರೆ ಎಲ್ಲರಿಗೂ ಗೊತ್ತಾಗುವ ಸಾಹಿತಿ ಇವರು. ಉಡುಪಿಯವರಾದರೂ ಹುಬ್ಬಳ್ಳಿಯಲ್ಲಿ ನೆಲೆಸಿ ಪತ್ರಿಕೋದ್ಯಮ, ಕಾಯಲೋಕದಲ್ಲಿ ನಿರಂತರ ಕೃಷಿ ನಡೆಸಿದ ಮೇಧಾವಿ. 'ಕರ್ಮವೀರ'ದಲ್ಲಿ ಬಹಳ ಹಿಂದಿನಿಂದಲೇ 'ಓದುಗರೊಡನೆ ಹರಟೆ' ಮಾಡುತ್ತಿದ್ದ ಪಾ.ವೆಂ. ಲಾಂಗೂಲಾಚಾರ್ಯ ಎಂಬ ಹೆಸರಿನಿಂದ ಖ್ಯಾತರಾಗಿದ್ದಾರೆ.

ಓದುಗರೊಡನೆ ಹರಟೆ ಕೇವಲ ಹರಟೆಯಲ್ಲ. ತರಲೆಯಂತೂ ಅಲ್ಲವೇ ಅಲ್ಲ. ಹರಟೆಯ ಹಿಂದೆ ಸೂಕ್ಷ್ಮವಾದ ವಿಡಂಬನೆಯಿದೆ. ನವಿರಾದ ಹಾಸ್ಯವಿದೆ. ಚುರುಕಾದ ಟೀಕಾಸ್ತ್ರವಿದೆ. ಉತ್ತಮ ಆಶಯವಿದೆ. ಇದು ಅವರ ಹರಟೆಯ ವೈಶಿಷ್ಟ್ಯ. 'ಓದುಗರೊಡನೆ ಹರಟೆ'ಗಾಗಿಯೆ ಕರ್ಮವೀರವನ್ನು ಓದುವ ಮಂದಿ ಇದ್ದರಂತೆ. ಅವರು ಪ್ರತಿಯೊಂದು ತೀಕ್ಷ್ಣ ವಿಚಾರವನ್ನು ಹರಟೆಯಲ್ಲಿ ಎರಕ ಹೊಯ್ದು ಜನಮನಕ್ಕೆ ದ್ರಾಕ್ಷಾಸವ ರೂಪದಲ್ಲಿ ಕುಡಿಸುತ್ತಿದ್ದರು. ಆಳವಾದ ಅಭ್ಯಾಸ, ಮೂಲಗ್ರಾಹಿಯಾದ ಪಾಂಡಿತ್ಯ ಹರಿತವಾದ ಶೈಲಿ ಅವರ ಬರಹಗಳಲ್ಲಿ ಎದ್ದು ಕಾಣುತ್ತಿತ್ತು. 'ಕಸ್ತೂರಿ'ಯನ್ನು ರೀಡರ್ಸ್ ಡೈಜೆಸ್ಟ್ ತರದಲ್ಲಿ ಕನ್ನಡಕ್ಕೊಂದು ಡೈಜೆಸ್ಟ್ನ್ನಾಗಿ ನೀಡಿದ ಕೀರ್ತಿ

ಅವರದು. ಅವರ ಮಾರ್ಗದರ್ಶನದಲ್ಲಿ ಕೆಲಸ ಮಾಡುವ ಅವಕಾಶ ಲಭಿಸಿದುದರಿಂದ ನನಗೆ ತುಂಬ ಪ್ರಯೋಜನವಾಗಿದೆ ಎಂಬುದನ್ನು ನೆನೆಯಲೇ ಬೇಕಾಗಿದೆ.

'ನವನೀರದ' ಅವರ ಉತ್ತಮ ಕವಿತಾ ಸಂಕಲನ ; ಉತ್ತಮ ರಚನಾಚಾತುರ್ಯ. ಅಪ್ರತಿಮ ಭಾವ ಮಾಧುರ್ಯದಿಂದ ಅವರ ಕವಿತೆಗಳಲ್ಲಿ ರಮ್ಯತೆ ತುಂಬಿದೆ. ಗಮ್ಯತೆ ಹೆಚ್ಚಿದೆ. ಭವ್ಯತೆ ಎದ್ದು ನಿಂತಿದೆ. ವಿಮರ್ಶಕ, ಬೆಳಕೆಲ್ಲಿ, ಉದ್ದೇಶ, ಮಗು ಮೊದಲಾದ ಕವನಗಳಿಂದ ತಮ್ಮ ಉತ್ತಮ ಕಾವ್ಯ ಶಕ್ತಿಯನ್ನು ಅವರು ತೋರಿಸಿ ಕೊಟ್ಟಿದ್ದಾರೆ.

ಉತ್ತಮ ಪತ್ರಕರ್ತರಾಗಿ, ಭಾಷಾಂತರಕಾರರಾಗಿ, ಕವಿಯಾಗಿ, ವಿಡಂಬನಕಾರರಾಗಿ ಅವರು ಹೆಸರಾದವರು. ಮೂಲ್ಕಿಯಲ್ಲಿ ಜರಗಿದ ದಕ್ಷಿಣ ಕನ್ನಡ ಜಿಲ್ಲಾ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಪದವಿ ಅವರಿಗೆ ಜಿಲ್ಲೆ ನೀಡಿದ ಗೌರವ ; ಅವರ ಅರ್ಹತೆಗೆ ಸಂದ ಪುರಸ್ಕಾರ.

ವಿದ್ವಾಂಸ ಗಮಕಿ ಕುಕ್ಕಿಲ ಕೃಷ್ಣ ಭಟ್ಟರು

ಪೆರಡಾಲ ಮಹಾಜನ ಸಂಸ್ಕೃತ ಕಾಲೇಜಿನಲ್ಲಿ ನಾನು ಓದುತ್ತಿದ್ದಾಗ, ಒಂದು ದಿನ ಪುರಾಣ ವಾಚನ ಕಾರ್ಯಕ್ರಮವೊಂದು ಏರ್ಪಾಡಾಗಿತ್ತು. ಪುರಾಣ ವಾಚನವನ್ನು ಕೇಳಿ ಸಭೆ ಮಂತ್ರಮುಗ್ಧವಾಗಿತ್ತು. ಅಂದಿನ ವಾಚನದ ಕುರಿತು ಅಭಿಪ್ರಾಯವನ್ನು ಪದ್ಯ ರೂಪದಲ್ಲಿ ಮಂಡಿಸಲು ನಮ್ಮ ವಿದ್ಯಾರ್ಥಿಗಳ ಬಳಗದಲ್ಲಿ ಭಾರೀ ಸಮಾಲೋಚನೆ ನಡೆಯಿತು. ಆಗ ನಾನು ರಚಿಸಿದ ಒಂದು ಪದ್ಯ ಹೀಗಿದೆ.

"ಕೊಕ್ಕಿಲ್ಲದ ಕೋಕಿಲ ಕುಕ್ಕಿಲ ಕೃಷ್ಣ ಭಟ್ಟರ ಪುರಾಣ ವಾಚನಮಂ, ಜರಗಿಸಿದರ್ ಪೆರಡಾಲ ಮಹಾಜನ ಸಂಸ್ಕೃತ ಮಹಾ ಮಂದಿರದೊಳ್" ಈ ಪದ್ಯವನ್ನು ಯಾವುದೇ ರೀತಿಯಿಂದ ಪ್ರಕಟಗೊಳಿಸದಿದ್ದರೂ ಅವರ ಹೆಸರು ನೆನಪಿಗೆ ಬಂದಾಗ ಈ ಪದ್ಯವೂ ನನ್ನ ನೆನಪಿನಂಗಳದಲ್ಲಿ ನರ್ತಿಸುತ್ತಿದೆ.

ಆಮೇಲೆ 'ಪಾರ್ತಿಸುಬ್ಬ'ನ ಬಗ್ಗೆ ತಲೆದೋರಿದ ವಿವಾದದಲ್ಲಿ ಕುಕ್ಕಿಲರು ವಾದ ಭೂಮಿಯಲ್ಲಿ ದೊಡ್ಡ ಪಾತ್ರ ನಿರ್ವಹಿಸಿದರು. ಯಕ್ಷಗಾನದ ಛಂದಸ್ಸು, ಕೃತಿಗಳು, ಕವಿಗಳ ಬಗ್ಗೆ ಬರೆದರು. 'ಏಕ್ಕಲಗಾಣ'ದ ಬಗ್ಗೆ ಅವರು ಬರೆದು ದಾಖಲೆ ನಿರ್ಮಿಸಿದರು. ಚೆದಂಡೆ, ಚತ್ತಾಣಗಳ ಅವರ ಆಳವಾದ ಅಧ್ಯಯನ ಗಮನಾರ್ಹವಾಗಿದೆ. ಪಾರ್ತಿಸುಬ್ಬನ ಕೃತಿಗಳನ್ನು ಕಲೆ ಹಾಕಿ ಶುದ್ಧಗೊಳಿಸಿ ಸಂಪಾದಿಸಿದ್ದಾರೆ. ಸಂಗೀತ ಶಾಸ್ತ್ರವನ್ನು ಅಭ್ಯಸಿಸಿದ ಅವರು ಒಂದು ಕೃತಿಯನ್ನು ರಚಿಸಿದ್ದಾರೆ. ವಿದ್ವಾಂಸರೂ, ಉತ್ತಮ ಕಾವ್ಯ ರಸಿಕರೂ ಹಾಡುಗಾರರೂ ಆಗಿ ಚಿರಕಾಲ ನೆನಪಿನಲ್ಲಿ ಉಳಿಯಬಲ್ಲವರಾಗಿದ್ದಾರೆ.

ಅದ್ವಿತೀಯ ಪಾಂಡಿತ್ಯದ ಪದ್ಮನಾಭ ಸೋಮಯಾಜಿ

ಪದ್ಮನಾಭ ಸೋಮಯಾಜಿಯವರು ಸಂಸ್ಕೃತ ಕನ್ನಡ ಭಾಷೆಗಳಲ್ಲಿ ಅಪ್ರತಿಮ ಪಾಂಡಿತ್ಯ ಗಳಿಸಿದ ಯಶಸ್ವೀ ಲೇಖಕರಾಗಿದ್ದರು. ಸಂಸ್ಕೃತ ಭಾಷೆಗಳಲ್ಲಿ ಅಪ್ರತಿಮ ಪಾಂಡಿತ್ಯ ಗಳಿಸಿದ ಯಶಸ್ವೀ ಲೇಖಕರಾಗಿದ್ದರು. ಸಂಸ್ಕೃತ ಕಾವ್ಯಗಳನ್ನು ಕನ್ನಡಕ್ಕೆ ಅನುವಾದಿಸುವದು. ಅವುಗಳ ಕುರಿತಾದ ವಿಚಾರ - ವಿಮರ್ಶೆ ಅವರಿಗೆ ಬಹಳ ಇಷ್ಟವಾಗಿತ್ತು. ಕನ್ನಡ ಕಾವ್ಯಗಳಲ್ಲಿಯೂ ಅವರು ಚೆನ್ನಾಗಿ ಕೃಷಿ ಮಾಡಿದ್ದರು. ಸ್ವತಃ ಕವಿಗಳಾಗಿ, ಅಧ್ಯಾಪಕರಾಗಿ ವಿಮರ್ಶಕರಾಗಿ, ಅನುವಾದಕರಾಗಿ ಅವರು ಕನ್ನಡಕ್ಕೆ ಗಣನೀಯ ಸೇವೆ ಸಲ್ಲಿಸಿದ್ದಾರೆ.

ಯಕ್ಷ ಕನ್ಯೆ, ಕಾಳಿದಾಸ ಎಂಬ ಕಾದಂಬರಿಗಳನ್ನು ಅವರು ರಚಿಸಿದರು. ಆದರ್ಶ ಮಹಿಳೆಯರು ಎಂಬ ಪುಸ್ತಕ ಬರೆದು ಮಹಿಳೆಯರ ಶ್ರೇಷ್ಠತೆ ಆದರ್ಶಗಳನ್ನು ತಿಳಿಸಿದರು. ಈ ಕೃತಿ ಎಸ್. ಎಸ್.ಎಲ್.ಸಿ.ಗೆ ಉಪಪಠ್ಯವಾಗಿದ್ದರೆ 'ಬಾಲಗಂಗಾಧರ ತಿಲಕ' 8ನೇ ತರಗತಿಗೆ ಉಪಪಠ್ಯವಾಗಿದ್ದಿತು. ಅರ್ಹತೆಯ ನೆಲೆಯಲ್ಲಿ ಈ ಕೃತಿಗಳು ವಿದ್ಯಾರ್ಥಿಗಳಿಗೆ ಆದರ್ಶ ಕೈಪಿಡಿಯಾಗಿ, ಮಾನಸಿಕವಾಗಿ ರಾಷ್ಟ್ರೀಯತೆ, ಸಂಸ್ಕಾರಗಳ ಪ್ರತಿಪಾದಕಗಳಾಗಿ ಆದರಣೀಯವೆನಿಸಿದ್ದವು. ಸಂಸ್ಕೃತ ಕವಿ ಮಾಘನ ಶಿಶುಪಾಲ ವಧಂ' ಮಹಾಕಾವ್ಯವನ್ನು ರಾಜಸೂಯಾಧ್ವರ ಎಂಬ ಹೆಸರಿನಿಂದ ಕನ್ನಡಕ್ಕೆ ಗದ್ಯದಲ್ಲಿ ತಂದಿದ್ದಾರೆ. ಕನ್ನಡದ ಹಿರಿಯ ಕವಿ ಕಯ್ಯಾರರೊಂದಿಗೆ ನವೋದಯ ಪುಸ್ತಕ ಮಾಲೆಯ ಸಂಪಾದಕರಾಗಿ ಸೋಮಯಾಜಿಯವರು ಕೆಲಸ ಮಾಡಿದ್ದರು. ಪಠ್ಯ ಪುಸ್ತಕ ರಚನೆಯಲ್ಲಿ ಇವರು ಎತ್ತಿದ ಕೈಯೆನಿಸಿದ್ದರು.

ವೀರ ಭೀಮಸೇನ, ಪಂಚತಂತ್ರದ ಕಥೆಗಳು, ಕೋಟಿ ಚೆನ್ನಯರ ಕತೆಗಳು, ವಿಜಯ ಚಂದ್ರಗುಪ್ತ, ಮೊದಲಾದ ಮಕ್ಕಳ ಕತೆಗಳನ್ನು ಬರೆದು ಮಕ್ಕಳ ಸಾಹಿತ್ಯಕ್ಕೂ ಕಾಣಿಕೆ ನೀಡಿದ್ದಾರೆ. ಮಕ್ಕಳ ರಾಮಾಯಣ, ಜೀವನ ಕಥೆಗಳು ಕೂಡಾ ಶಿಶು ಸಾಹಿತ್ಯಕ್ಕೆ ಇವರು ನೀಡಿದ ಕಾಣಿಕೆ.

ಮಹಾಕವಿ ಕಾಳಿದಾಸ, ಸಾರ್ವಭೌಮ ಪುಲಕೇಶಿ, ಕನ್ನಡ ಕೋಗಿಲೆ, ಮುದ್ದಣ, ಪಂಡಿತರಾಜ ಜಗನ್ನಾಥ ಇವು ಚಾರಿತ್ರಿಕ ಪುರುಷರ ಸುತ್ತ ಹೆಣೆದ ಕಾದಂಬರಿಗಳು. ಪಂಡಿತರಾಜ ಜಗನ್ನಾಥ ಸಾಹಿತ್ಯ ಅಕಾಡೆಮಿಯಿಂದ ಬಹುಮಾನಿತ ಕೃತಿ. ಇವರು ಆದರ್ಶ ಶಿಕ್ಷಕರಾಗಿ ಅಪಾರ ಶಿಷ್ಯವೃಂದವನ್ನು ಹೊಂದಿದವರಾಗಿದ್ದರು. ಶಿಶು ಸಾಹಿತ್ಯ ರಚನೆಯಲ್ಲಿ ಪಳಗಿದವರೂ ಆಗಿದ್ದರು.

ಸಾಹಿತ್ಯ ಚಟುವಟಿಕೆಗಳ

ಶ್ರೀ ಪಿ. ಕೆ. ನಾರಾಯಣ

ಈ ಶತಕದ ಎಂಟನೆಯ ದಶಕದ ತನಕ ಸಾಹಿತ್ಯ ಸಾರ್ವಜನಿಕ ರಂಗಗಳಲ್ಲಿ ಉತ್ಸಾಹದಿಂದ ಮಂಗಳೂರಿನಲ್ಲಿ ಕಾಣಿಸಿಕೊಳ್ಳುತ್ತಿದ್ದ ಪಿ. ಕೆ. ನಾರಾಯಣ ಅವರು ಉತ್ತಮ ಅಭಿರುಚಿಯ, ಸಹೃದಯ, ಬರಹಗಾರರೆಂದೂ ಸಕಲರ ಮೆಚ್ಚುಗೆ ಗಳಿಸಿದವರು. ಹಿರಿಯ ಸಾಹಿತಿಗಳ ಒಡನಾಟ ಅಧ್ಯಯನ, ಸಮಾನ ಅಂಶದ ಸಹೃದಯರ ಸಹವಾಸ ಅವರದಾಗಿತ್ತು. ಸಾಹಿತ್ಯದ ವಿವಿಧ ಪ್ರಕಾರಗಳ ಬಗ್ಗೆ ಅವರು ಮಾತನಾಡತೊಡಗಿದರೆ ಅನುಭವದ ಗಂಟನ್ನೇ ಬಿಚ್ಚುತ್ತಿದ್ದರು. ಆಧಾರಗಳನ್ನಿತ್ತು ವಿವರಿಸುತ್ತಿದ್ದರು. ಇದು ಅವರ ಕಲಾ ವಿಮರ್ಶೆಯ ವೈಖರಿ.

ಅವರು ನಾಟಕಗಳಲ್ಲಿ ಪಾತ್ರವಹಿಸುತ್ತಿದ್ದುದುಂಟು. ಶಿವರಾಮ ಕಾರಂತರ ನಾಟಕಗಳಲ್ಲಿ ಇವರು ಪಾತ್ರ ನಿರ್ವಹಿಸುತ್ತಿದ್ದರು. ಕಾರಂತರ ಒಡನಾಟ, ಮೆಚ್ಚುಗೆಗಳಿಸಿದವರು. ಪಿ. ಕೆ. ನಾರಾಯಣರು ಆಲಸ್ಯವಿಲ್ಲದೆ ದುಡಿಯುವ ಬುದ್ಧಿ, ವಿದ್ವತ್ತು ಬೆಳೆದ ಬಗ್ಗೆ ಪ್ರತಿಷ್ಠೆ ಹೊಂದಿದ ವಿಧಾನಗಳನ್ನು ಮನಗಂಡ ಕಾರಂತರು, ಅವರಿಗೆ 'ಅಹಂಕಾರ ಬರಲಿಲ್ಲ. ವಿನಯ ಸಂಪನ್ನರು" ಎಂಬುದಾಗಿ ಸರ್ಟಿಫಿಕೇಟು ಕೊಟ್ಟಿದ್ದಾರೆ.

ದಕ್ಷಿಣ ಕನ್ನಡದ ಸುಪ್ರಸಿದ್ಧ ಕನ್ನಡ ಪಂಡಿತರುಗಳಾದ ಶ್ರೀಯುತ ಮುಳಿಯ ತಿಮ್ಮಪ್ಪಯ್ಯ, ಸೇಡಿಯಾಪು ಕೃಷ್ಣ ಭಟ್ಟ ಇಂತಹ ಉನ್ನತ ಪರಂಪರೆಯ ಆಚಾರ್ಯಮಾಲೆಯಲ್ಲಿ ಶ್ರೀ ಪಿ. ಕೆ. ನಾರಾಯಣ ವಿರಾಜಮಾನರಾಗತಕ್ಕ ಕೊನೆಯ ಕೊಂಡಿಯಾಗಿ ಶೋಭಿಸುತ್ತಾರೆ ಎಂದು ಕಯ್ಯಾರ ಕಿಞ್ಞಣ್ಣ ರೈಗಳು ಹೇಳಿದ್ದಾರೆ.

ಇವರು ವೃತ್ತಿಯಲ್ಲಿ ಕನ್ನಡ ಪಂಡಿತರಾಗಿ ಪ್ರವೃತ್ತಿಯಲ್ಲಿ ಸಾಹಿತಿಯಾಗಿ ಕೊನೆಯುಸಿರು ಇರುವವರೆಗೂ ಏನಾದರೂ ಬರೆಯುತ್ತಲೇ ಇದ್ದರು. ತಮ್ಮ ದಾಕ್ಷಿಣ್ಯ ಸಂಕೋಚ ಸ್ವಭಾವಗಳಿಂದಾಗಿ, ಸದ್ದುಗದ್ದಲವಿಲ್ಲದೆ ಪ್ರಶಸ್ತಿಗಳ ಹಂಬಲವಿಲ್ಲದೆ, ಪ್ರಚಾರದ ಆಸೆಯಿಲ್ಲದೆ, 1928 ರಿಂದ 1983ರವರೆಗೆ ಕವಿಯಾಗಿ, ನಾಟಕಕಾರರಾಗಿ, ಅನುವಾದಕರಾಗಿ, ಲೇಖಕರಾಗಿ, ಸಂಪಾದಕರಾಗಿ, ಪತ್ರಿಕೋದ್ಯಮಿಯಾಗಿ, ಸಂಶೋಧಕರಾಗಿ, ಕನ್ನಡ ಸಾಹಿತ್ಯದ ಬೊಕ್ಕಸವನ್ನು ತುಂಬಿದ್ದಾರೆನ್ನುವುದು ದಕ್ಷಿಣ ಕನ್ನಡದ ಬರೆಹಗಾರರೆಲ್ಲರೂ ತಿಳಿದ ವಿಷಯ.

ಶ್ರೀ ಪಿ. ಕೆ.ಯವರ ಮಗಳು ವರದಾ ಶ್ರೀನಿವಾಸ್ ಬರೆದ ಮೇಲಿನ ಅಂಶ ಸರ್ವಾತ್ಮನಾ ಸತ್ಯವೆನ್ನಬಹುದು. 'ಸ್ಫಟಿಕ ಮಂಜೂಷ' ಎಂಬ ಸ್ಮರಣ ಗ್ರಂಥವೊಂದು ಅವರಿಗೆ ಅರ್ಪಿತವಾದುದು. ಅವರ ಅರ್ಹತೆ ಜನಪ್ರಿಯತೆಗೆ ಉದಾಹರಣೆಯಾಗಬಲ್ಲುದು.

ಪಿ. ಕೆ. ಯವರ ವ್ಯಕ್ತಿತ್ವವನ್ನು ನಿರಂಜನ, ಕಿಞ್ಞಣ್ಣ ರೈಗಳಂಥ ಹಿರಿಯರು, ಶಿವರಾಮ ಕಾರಂತರು ಗುರುತಿಸಿರುವುದರಿಂದ ಅವರ ಬಗ್ಗೆ ಹೆಚ್ಚೇನೂ ಹೇಳಬೇಕಾದ್ದಿಲ್ಲ. ಕಡೆಂಗೋಡ್ಲುರವರ 'ರಾಷ್ಟ್ರಬಂಧು'ವಿಗೆ, ಕುಡ್ವರ ನವಭಾರತಕ್ಕೆ ಅವರು ನಗರ ಪ್ರತಿನಿಧಿಯಾಗಿ,

ಸಂಯುಕ್ತ ಕರ್ನಾಟಕಕ್ಕೆ ಮಂಗಳೂರಿನ ಪ್ರತಿನಿಧಿಯಾಗಿ. ಪತ್ರಿಕೋದ್ಯಮದಲ್ಲಿ ಒಳ್ಳೆ ಹೆಸರು ಗಳಿಸಿದ್ದರು. ಅವರು ಮಾಡಿದ ದೊಡ್ಡ ಕೆಲಸ 'ರತ್ನಾಕರವರ್ಣಿ' ಭರತೇಶ ವೈಭವದ ಗದ್ಯಾನುವಾದ ; ಮೂರು ಸಂಪುಟಗಳಲ್ಲಿ ಪ್ರಕಟವಾಗಿ ದೊಡ್ಡ ಸಾಧನೆಯೆನಿಸಿದೆ. ಅವರ ಇನ್ನೆಷ್ಟೋ ಬರೆಹಗಳು ಅಲ್ಲಲ್ಲಿ ಪ್ರಕಟವಾಗಿ ಜನಮನವನ್ನಂತೂ ತಲುಪಿವೆ.

ಪಿ. ಕೆ. ನಾರಾಯಣರು ಎಲ್ಲರಿಗೂ ಬೇಕಾದ ವ್ಯಕ್ತಿಯಾಗಿದ್ದರು. ಹಲವಾರು ಸಂಘ ಸಂಸ್ಥೆಗಳಲ್ಲಿ ಅವರು ಪಾತ್ರವಿತ್ತು. ಕೆ. ಕೆ. ಶೆಟ್ಟರ ಅಭಿನಂದನ ಗ್ರಂಥ, ಧರ್ಮಸ್ಥಳ ಸಾಹಿತ್ಯ ಸಮ್ಮೇಳನದ 'ಮಂಜೂಷಾ', ಸ್ಮೃತಿ ಸಂಪುಟಕ್ಕೂ ಸಂಪಾದಕರಾಗಿದ್ದರು.

ವಿವೇಕಾಭ್ಯುದಯದ ಡಿ. ಪುಟ್ಟಸ್ವಾಮಿ

ಬಂಟ್ವಾಳ ತಾಲೂಕಿನ ಕೇಪು ಎಂಬಲ್ಲಿ ಜನಿಸಿದ ಪುಟ್ಟಸ್ವಾಮಿಯವರು ವಿಟ್ಲದಲ್ಲಿ ಪ್ರಾಥಮಿಕ ವಿದ್ಯಾಭ್ಯಾಸ ಮಾಡಿ ಉಚ್ಚ ಶಿಕ್ಷಣವನ್ನು ಪಡೆದು ಕಾನೂನು ಪದವೀಧರರಾದರು. ಶ್ರೀ ಕ್ಷೇತ್ರ ಧರ್ಮಸ್ಥಳದ ಧರ್ಮಾಧಿಕಾರಿಗಳಾಗಿದ್ದ ಮಂಜಯ್ಯ ಹೆಗಡೆಯವರ ಸೋದರನಾಗಿದ್ದು ಅವರ ಆದರ್ಶವನ್ನು ಮೈಗೂಡಿಸಿಕೊಂಡು ಪುಟ್ಟಸ್ವಾಮಿಯವರು ಉತ್ತಮ ಜೀವನ ನಡೆಸಿದ್ದಾರೆ.

ವಿವೇಕಾಭ್ಯುದಯ ಪತ್ರಿಕೆ ಅವರ ಬಹು ದೊಡ್ಡ ಸಾಧನೆ. ಹೆಚ್ಚಾಗಿ ಜೈನ ಸಾಹಿತ್ಯಕ್ಕೆ ಸಂಬಂಧಿಸಿದ ವಿಚಾರಗಳನ್ನೊಳಗೊಂಡ ಈ ಪತ್ರಿಕೆ ವಿವೇಕವನ್ನು ಅಭಿವೃದ್ಧಿಗೊಳಿಸುವ ಕೆಲಸ ಮಾಡಿ ಹೆಸರನ್ನು ಸಾರ್ಥಕಗೊಳಿಸಿದೆ.

ಅವರೊಬ್ಬ ಜೈನ ಶ್ರಾವಕರಾಗಿ ಸಾಮಾಜಿಕ ಕಳಕಳಿ ಹೊಂದಿದ್ದರು. ಸಾಹಿತ್ಯ, ಸಂಗೀತ, ಚಿತ್ರಕಲೆ, ವಾಸ್ತುಶಿಲ್ಪಗಳಲ್ಲಿ ಅವರು ಪರಿಣತಿ ಪಡೆದಿದ್ದರು. ಧರ್ಮಸ್ಥಳದಲ್ಲಿ ಮಂಜಯ್ಯ ಹೆಗಡೆಯವರು ಪ್ರಾರಂಭಿಸಿದ ಸಾಹಿತ್ಯ ಸಮ್ಮೇಳನ, ಧರ್ಮ ಸಮ್ಮೇಳನಗಳ ರೂವಾರಿಯಾಗಿ ಅವರಿದ್ದರು. ಜೈನ ತತ್ತ್ವ ಸಾರಸಂಗ್ರಹವೆಂಬ ಅಮೂಲ್ಯ ಗ್ರಂಥ ಅವರ ಸಾರಸ್ವತೋಪಾಸನೆಯ ಪ್ರತೀಕವಾಗಿದೆ.

'ಮಧುರ ಸ್ಮೃತಿ' ಎಂಬ ಹೊತ್ತಗೆಯ ಮೂಲಕ ಅವರನ್ನು ಅವರ ಷಷ್ಟ್ಯಬ್ದ ಕಾಲದಲ್ಲಿ "ಮಿರ್ಜಿ ಅಣ್ಣಾರಾಯರು, ಬ್ರಹ್ಮಪ್ಪ, ಪಿ. ಕೆ. ನಾರಾಯಣರು" ಗ್ರಂಥ ಪ್ರಕಟಿಸಿ ಗೌರವಿಸಿದ್ದಾರೆ. ಶ್ರೀ ಪುಟ್ಟಸ್ವಾಮಿಯವರ ಸಾಮಾಜಿಕ ಕಳಕಳಿ ಸಾಧನೆ ಕೂಡ ಅಷ್ಟೊಂದು ಮಹತ್ತ್ವಪೂರ್ಣವಾಗಿತ್ತು ಎಂಬುದನ್ನು ಸ್ಮರಿಸಬೇಕಾಗಿದೆ.

ವಿದ್ವದ್ಗವೇಶಕ ಪಂಡಿತ ಭುಜಬಲಿ ಶಾಸ್ತ್ರಿಗಳು

ಮೂಡಬಿದಿರೆಯವರಾಗಿರುವ ಶ್ರೀ ಶಾಸ್ತ್ರಿಗಳು ಜೈನ ಸಾಹಿತ್ಯದ ಆಳವಾದ ಅಧ್ಯಯನ ನಡೆಸಿ ಗ್ರಂಥ ರಚನೆ ಮಾಡಿದ ವಿದ್ವಾಂಸರು ; ಜೈನ ಕವಿಗಳು ಕನ್ನಡಕ್ಕೆ ಸಲ್ಲಿಸಿದ ಸೇವೆ ಮಹತ್ತ್ವದ್ದು. ಜೈನ ಸಾಹಿತ್ಯದ ಬಗ್ಗೆ ಪ್ರಾಚೀನ ಕವಿಗಳ ಅಧ್ಯಯನದಿಂದ ಹೆಚ್ಚು ಮಾಹಿತಿ ಲಭಿಸಬಹುದಾಗಿದೆ. ಸಂಸ್ಕೃತ ಸಾಹಿತ್ಯಕ್ಕೆ ಜೈನ ಕವಿಗಳ ಕೊಡುಗೆ 'ಆದರ್ಶ ಸಾಹಿತಿಗಳು, ಆದರ್ಶ ಜೈನ ವೀರರು ಮುಂತಾದ ಅಧ್ಯಯನ ಪೂರ್ಣ ಕೃತಿಗಳಿಂದ ಅವರು ಕನ್ನಡ ಸಾಹಿತ್ಯಕ್ಕೆ ಅಮೂಲ್ಯ ಕಾಣಿಕೆ ನೀಡಿದ್ದಾರೆ. ಶ್ರೀ ಗೋವಿಂದ ಪೈಗಳು "ಆದರ್ಶ ಸಾಹಿತಿಗಳು" ಪುಸ್ತಕದ ಮುನ್ನುಡಿಯಲ್ಲಿ ಹೀಗೆ ಬರೆದಿದ್ದಾರೆ.

"ಈ ಪುಸ್ತಕವನ್ನು ಬರೆದು ತಾವು ಜೈನರಿಗಿಂತ ಜೈನೇತರರಿಗೆ ಉಪಕಾರ ಮಾಡಿದ್ದೀರಿ. ಅವರು ಕೇಳಿಲ್ಲದ ಮಹಾಪುರುಷರನ್ನು ಅವರಿಗೆ ಕೇಳಿಸಿರುತ್ತೀರಿ. ನನ್ನ ಹಾಗೂ ಅಂಥವರ ಪರವಾಗಿ ಕೂಡಾ ತಮ್ಮನ್ನು ಬಹುಧಾ ಅಭಿನಂದಿಸುತ್ತೇನೆ. ಲೋಕದ ಅಭಿರುಚಿಗೆ ಒಪ್ಪಿಗೆಯಾಗುವಂಥ ಈ ಬಗೆಯ ಕೃತಿಗಳನ್ನು ತಾವು ಅದೊಂದು ಅಲ್ಪ ಕಾರ್ಯವೆಂದು ಭಾವಿಸದೆ ಬರೆಯುತ್ತಿರಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ."

ಶ್ರೀ ಶಾಸ್ತ್ರಿಗಳು ಸಿದ್ಧಾಂತಾಚಾರ್ಯ, ನ್ಯಾಯಭೂಷಣಂ, ವಿದ್ಯಾಭೂಷಣ ಮುಂತಾದ ಬಿರುದುಗಳಿಂದ ಅಂಕಿತರಾಗಿದ್ದಾರೆ. ಪ್ರಾಕೃತ ಸಂಸ್ಕೃತ, ಕನ್ನಡ, ತಮಿಳು, ಹಿಂದೀ ಸಾಹಿತ್ಯಗಳ ಜೈನ ವಾಙ್ಮಯದ ಪಾಂಡಿತ್ಯದ ವಿವೇಚನೆ ನಡೆಸಿದ್ದಾರೆ. ಶಾಸ್ತ್ರಿಗಳು ತಮ್ಮ ವಿದ್ವದ್ಗವೇಷಣದಿಂದ ಜೈನಾಗಮ ರಚಿಸಿದ ಆದರ್ಶ ಸಾಹಿತ್ಯ ಪರಂಪರೆಯ ಹದಿನೇಳು ಮಂದಿ ಮಹನೀಯರ ಚರಿತ್ರೆಯನ್ನು ನೀಡಿದ್ದಾರೆ. ಇವರ ಸಾಧನೆ ಅಪೂರ್ವ ಹಾಗೂ ಮಾನ್ಯವಾದುದು.

ಯುಗಪುರುಷದ ಕವಿ ಕಮಲನಾಭರು

ಯುಗಪುರುಷ ಮಾಸಪತ್ರಿಕೆಯ ಸಂಪಾದಕರಾಗಿದ್ದ ಕೊಡತ್ತೂರು ಅನಂತ ಪದ್ಮನಾಭ ಉಡುಪರು ಒಳ್ಳೆಯ ಅಭಿರುಚಿಯ ಸಾಹಿತ್ಯಕಾರರು ; ಉತ್ತಮ ಪತ್ರಕರ್ತರು, ಅನುವಾದಕರು, ಲೇಖಕರು, ಸಂಪಾದಕರು ಎಂಬ ಬಹುಮುಖ ಪ್ರಜ್ಞೆಯಿಂದ ಬೆಳಗಿದವರು.

ಕಾವ್ಯ ಪ್ರಪಂಚದಲ್ಲಿ ಅವರು ಚೆನ್ನಾಗಿ ಕೃಷಿ ಮಾಡಿದ್ದಾರೆ. 'ಕಮಲನಾಭ' ಎಂಬ ಹೆಸರಿನಿಂದ ಕವಿತೆಗಳನ್ನು ಪ್ರಕಟಿಸಿದ್ದಾರೆ. ಸಮರ್ಪಣೆ, ಜೋಡಿಮೋಡಿ, ತುಂಬಿದ ಬಿಂದಿಗೆ, ಸುಮಸಂಚಯ ಮೊದಲಾದ ಕವನ ಸಂಕಲನಗಳಿಂದ ಕಮಲನಾಭರು ಕನ್ನಡ ಕಾವ್ಯ ಕ್ಷೇತ್ರದಲ್ಲಿ ಗಣ್ಯರಾಗಿದ್ದಾರೆ. ಅವರ ಕವನಗಳಲ್ಲಿ ಪ್ರೇಮವಿದೆ, ಕರ್ತವ್ಯ ಪ್ರಜ್ಞೆಯಿದೆ, ರಾಷ್ಟ್ರೀಯ ವಿಚಾರಧಾರೆಯಿದೆ, ಸಾಮಾಜಿಕ ಅನುಕಂಪ, ಕಳಕಳಿ ಇದೆ. ಅವ್ಯವಸ್ಥೆಯ ಬಗ್ಗೆ ಆಕ್ರೋಶ, ಸುವ್ಯವಸ್ಥೆಯ ಬಗ್ಗೆ ಆಸಕ್ತಿ ತುಂಬಿದೆ. "ಅವರ ಕಾವ್ಯಗಳಲ್ಲಿ ನಾಡುನುಡಿಗಳ ಮಿಡಿತವಿದೆ. ಪ್ರೇಮದ ಸ್ಪಂದನವಿದೆ. ಮಾನವೀಯತೆಯ ಕಳಕಳಿಯಿದೆ. ಬದುಕಿನ ಬಗ್ಗೆ ಕಾಳಜಿಯಿದೆ. ಶೋಷಣೆಯ ಬಗ್ಗೆ ಆಕ್ರೋಶವಿದೆ. ಬಾಳಿಗೆ ನಿರ್ದೇಶನವೀಯಬಲ್ಲ ಅರಿವಿನ ಬೆಳಕು ಇದೆ. ಉಡುಪರು ಎಂದೂ ನಿರಾಶಾವಾದಿಯಲ್ಲ. ಉತ್ಸಾಹ ಅವರ ವ್ಯಕ್ತಿತ್ವದ ಮೂಲ ದ್ರವ್ಯ. ಅವರ ಕಾವ್ಯಗಳಲ್ಲೂ ಅದು ಸದಾ ಪುಟಿಯುತ್ತಲೇ ಇದೆ."

ಶ್ರೀ ಸುಮುಖಾನಂದ ಜಲವಳ್ಳಿಯವರು ಉಡುಪರ ಕುರಿತು ತಮ್ಮ ಕೃತಿಯಲ್ಲಿ ಹೀಗೆ ಹೇಳಿಕೊಂಡಿದ್ದಾರೆ.

ನಿನ್ನ ಬೆಡಗಿನೊಂದಿಗಿದರ
ಸೊಬಗು ಬೆರೆಯೆ ಸುಂದರ
ಕನಕ ಕಮಲದಲ್ಲಿ ಸುರಭಿ
ಸುರಿದ ತೆರ ಮನೋಹರ

ಕಾಂತೆಯ ಚೆಂದ, ಹೂವಿನ ಅಂದವನ್ನು ಬೆರೆಸಿದಾಗ, ಕವಿಗೆ ಆಗುವ ಆನಂದ ವರ್ಣನಾತೀತ.

ಕರುಳಿನ ಕುಡಿಯ ಬಗ್ಗೆ ಕವಿಯ ಅಂತರಂಗ ಮಿಡಿಯುವ ಬಗೆ ಅಸಾಧಾರಣ.

ಅಂಗಳಕ್ಕಿಳಿಯಲು ಅಪ್ಪಾ ಎನ್ನುತ
ಮೈಮೇಲೆರಗುವ ಮಮತೆಯ ಮಿಡಿಯೆ
ಹೊಸತಿಲ ದಾಟಲು 'ಹೋಗದಿರೆ'ನ್ನುತ
ಕಂಬನಿಗರೆಯುವ ಕರುಳಿನ ಕುಡಿಯೆ !

ಮಗುವಿನ ಮುಗ್ಧತೆಯನ್ನು ತನ್ನಲ್ಲಿ ಆವಾಹಿಸಿಕೊಂಡ ಕವಿಯ ಭಾವನೆಯ ಓಟವನ್ನು ಗುರುತಿಸಬಹುದಾದ ಪದ್ಯವಿದು.

ದೇಶ ಸೇವೆಯ ಹೆಸರಿನಲ್ಲಿ ಜೊಲ್ಲು ಸುರಿಸುವ ಸೋಗಲಾಡಿಗಳ ಬಗ್ಗೆ ಕವಿ ಕಿಡಿಕಾರಿದ ಬಗೆ ಹೀಗಿದೆ.

ಅಂತರಂಗದಲ್ಲಿ ಮೋಸ

ಸ್ವಾರ್ಥದೈತ್ಯನಟ್ಟಹಾಸ

ತೋರಿಕೆಯಲಿ ದುಡಿದು ಸ್ತೋತ್ರ

ನಿಟ್ಟುಸಿರಿನ ಹಗಲು ವೇಷ

ಕವಿ ಸ್ವಾರ್ಥಿಗಳ ಮುಖವಾಡವನ್ನು ಈ ರೀತಿ ಕಿತ್ತೆಸೆಯುವ ಮೂಲಕ ಸಮಾಜದ ಭವಿಷ್ಯದೆಡೆಗೆ ಬೊಟ್ಟು ಮಾಡುತ್ತಾರೆ.

ಹಳ್ಳಿಯ ರೈತನ ಬಗೆಗೆ ಕವಿ ಚಿಂತಿಸುವ ಮೋಡಿ ರಮಣೀಯವಾಗಿದೆ. ಹಳ್ಳಿಯ ಗ್ರಾಮೆಯ ತುಂಬುದಿಂಗಳಿನ ತಿಳಿ ಬೆಳಕಿಗೆ ಬುವಿ ಬೆಳಗಿಹುದು.

ಗೇಯುವ ನೇಗಿಲಯೋಗಿಯ ಬಗೆಬಾನ್

ದುಗುಡದ ಮುಗಿಲು ಕವಿದಿಹುದು

ನೇಗಿಲಯೋಗಿಯ ಬಗ್ಗೆ ಕವಿಯ ಕಾಳಜಿ ವಿಶೇಷವಾದುದು.

ಹುರುಪಿನ ತಂಗಾಳಿಯು ನೆರೆ ಬೀಸಲಿ

ಕವಿಯಲಿ ಮೌನದ ಮುಗಿಲುಗಳು

ಸುರಿಯಲಿ ಕೃತಿಗಳ ಸುರಿಮಳೆ ಹಳ್ಳಿಯ ಬಾಳಿನ ಬಯಲುಗಳು

ಕವಿಯ ಆಶೆ ಹೀಗೆ ತನ್ನ ಪರಿಸರದ ಸುತ್ತು ರಮ್ಯತಾಣದಲ್ಲಿ ವಿರಮಿಸಿದೆ.

ಶೋಷಣೆಯ ಬಗ್ಗೆ ಕವಿಗೆ ಬಹಳ ವ್ಯಾಕುಲ. ನಾರೀ ಶೋಷಣೆಯಿರಲಿ, ಬಡವರ ಶೋಷಣೆಯಿರಲಿ ಕವಿ ಅದನ್ನು ನಿರ್ದಾಕ್ಷಿಣ್ಯವಾಗಿ ಖಂಡಿಸಿದ್ದಾರೆ.

"ತಿಂದು ತೇಗಿದ ಧನಿಯ ಜೀರ್ಣಕ್ಕೆ ವೈದ್ಯನಿಹ

ಹಿಗ್ಗಿರಲಿ ಕುಗ್ಗಿರಲಿ ಕೂಲಿಕಾರ"

"ನಾವೋ ನೇಗಿಲಯೋಗಿಗಳೆಲ್ಲವ

ತೊರೆದಿಹ ಬೈರಾಗಿಗಳಲ್ಲ"

"ಆದರದೆ ಕಿಚ್ಚಿನೊಂದು

ಕಿಡಿಯು ಕಾಣುತಿಹುದು ಮಿನುಗಿ"

ಕ್ರಾಂತಿಯ ಕಿಡಿಯನ್ನು ಕಾರುವ, ನೇಗಿಲಯೋಗಿಯ, ಕೂಲಿಕಾರರ ಪ್ರತಿನಿಧಿಯಾಗಿ ಕವಿ ಮಿಂಚುವುದನ್ನು ಕಾಣಬಹುದು. ಸ್ವಾತಂತ್ರ್ಯೋತ್ತರ ದಿನಗಳಲ್ಲಿ ಕೃಷಿ ಕಾರ್ಮಿಕರಿಗೆ ರೈತರಿಗೆ ಶೋಷಿತರಿಗೆ ಸಲ್ಲತಕ್ಕ ಭಾಗಕ್ಕಾಗಿ ಕವಿ ಹೋರಾಟಕ್ಕೆಳಸಿದಂತೆ ಗೋಚರಿಸುತ್ತದೆ.

"ಈ ಜೋಡಿ - ಮೋಡಿ ಒಂದು ಗುಲಾಬಿಯ ತೋಟ, ಇದರಲ್ಲಿ ಬಗೆಬಗೆಯ ಗುಲಾಬಿಗಳು ಅರಳಿವೆ. ಬಣ್ಣ, ಕಂಪು, ಮಾಟ, ಮಾರ್ದವಗಳಲ್ಲಿ ಒಂದೊಂದರದೂ ಒಂದು ರೀತಿ. ಒಂದೊಂದೂ ಮುದ್ದು, ಒಂದೊಂದು ಚೆನ್ನ, ಮುಳ್ಳಿಗೆ ಹೆದರಿ ಗುಲಾಬಿಯನ್ನು ಕೀಳದ ರಸಿಕರಿದ್ದಾರೆಯೇ ? ನಾವು ಮುಳ್ಳನ್ನು ಗಿಡದಲ್ಲಿಯೇ ಬಿಡೋಣ. ಹೂವನ್ನು ಆಯ್ದುಕೊಂಡು ಅದರ ಸೊಗಸನ್ನು ಕೊಂಡಾಡೋಣ."

ಕವಿ ಎಸ್. ವಿ. ಪರಮೇಶ್ವರ ಭಟ್ಟರು ಮುನ್ನುಡಿಯಲ್ಲಿ ಆಡಿದ ಈ ಮಾತುಗಳು ಉಡುಪರ ಕಾವ್ಯದ ಸೊಗಸನ್ನು ಚಿತ್ರಿಸುತ್ತವೆ. ರಾಷ್ಟ್ರಕವಿ ಗೋವಿಂದ ಪೈಯವರು, ಕವಿ ಕಯ್ಯಾರ ಕಿಞ್ಞಣ್ಣ ರೈಗಳು ಕಮಲನಾಭರ ಕಾವ್ಯದ ಬಗೆಯನ್ನು ಕಂಡು ತಣಿದಿದ್ದಾರೆ. ಅ. ಗೌ. ಕಿನ್ನಿಗೋಳಿಯವರು ಸಂತಸ ತಾಳಿದ್ದಾರೆ. ನಾಡಿನ ಕವಿ ವೃಂದದಲ್ಲಿ ಕಮಲನಾಭರು ಗಣ್ಯ ಸ್ಥಾನ ಗಳಿಸಿದ್ದಾರೆ. ರಸಿಕರ ಮನವನ್ನು ಸೂರೆ ಗೈದಿದ್ದಾರೆ.

ಇಂದು ಸ್ವರ್ಣಜಯಂತಿಯ ವರ್ಷವನ್ನು ಆಚರಿಸುತ್ತಿರುವ 'ಯುಗಪುರುಷ' ಉಡುಪರ ಸಾಧನೆಯ ಕಿರೀಟ ! ಅವರ ಪ್ರಕಟಣಾಲಯದಿಂದ ನಾಡಿನ ಎಷ್ಟೋ ಉದಯೋನ್ಮುಖರ ಕೃತಿಗಳು ಪ್ರಕಟವಾಗಿರುತ್ತವೆ. ಕಿನ್ನಿಗೋಳಿಯ ಹಳ್ಳಿಯನ್ನು ರಾಜ್ಯದ ಭೂಪಟದಲ್ಲಿ ಗುರುತಿಸುವಂತೆ ಮಾಡಿದ ಸಾಧನೆ ಶ್ರೀ ಕೊಡತ್ತೂರು ಅನಂತಪದ್ಮನಾಭ ಉಡುಪ ಯಾನೆ 'ಕಮಲನಾಭ'ರದು.

ಪಂಡಿತ ಪ್ರಾಧ್ಯಾಪಕ ಶ್ರೀ ಪಾಲೆಪ್ಪಾಡಿ ಗೋಪಾಲಕೃಷ್ಣ

ಪ್ರಾಧ್ಯಾಪಕರಾಗಿ, ಲೇಖಕರಾಗಿ, ಸಾಹಿತ್ಯ ಕ್ಷೇತ್ರದಲ್ಲಿ ಚಿರಪರಿಚಿತರಾಗಿ ಪಾಲೆಪ್ಪಾಡಿಯವರು ಕನ್ನಡಿಗರಿಗೆ ಹತ್ತಿರದವರಾಗಿದ್ದಾರೆ. ಅವರು ಮಂಗಳೂರು ಎಲೋಸಿಯಸ್ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿರುವುದಕ್ಕೂ ಮೊದಲು ಪೆರಡಾಲ ಮಹಾಜನ ಸಂಸ್ಕೃತ ಕಾಲೇಜಿನಲ್ಲಿ ಅಧ್ಯಾಪಕರಾಗಿದ್ದರು. ಇದರಿಂದ ಅವರ ಸಾಹಿತ್ಯಕ್ಕೆ ರೆಕ್ಕೆ - ಪುಕ್ಕ ಬಲಿಯಿತೆಂದು ಕಾಣುತ್ತದೆ.

'ನೀತಿ ಮುಕ್ತಾಹಾರ' ಎಂಬ ನೀತಿಯ ನುಡಿಮುತ್ತುಗಳನ್ನು ಇವರು ರಚಿಸಿದ್ದಾರೆ. ನೀತಿ ಬೋಧೆಯನ್ನು ಗುರಿಯಾಗಿಟ್ಟು ಬರೆದ ಈ ಕೃತಿ ಒಳ್ಳೆಯ ಹೆಸರು ಪಡೆದಿದೆ. ಸೇತುಭಂಗ ಎಂಬ ಖಂಡಕಾವ್ಯ ಇವರ ಇನ್ನೊಂದು ಕೃತಿ. ಕಾಳಿದಾಸನ ಮೇಘ ಸಂದೇಶವನ್ನು ಕನ್ನಡಕ್ಕೆ ಇಳಿಸಿದ ಮಹನೀಯರಿವರು. ವಿದ್ಯಾರ್ಥಿಗಳಿಗೆ ಅಚ್ಚುಮೆಚ್ಚಿನ ಅಧ್ಯಾಪಕರಾಗಿದ್ದ ಇವರು ವಿದ್ಯಾರ್ಥಿಗಳನ್ನು ಸಾಹಿತ್ಯ ಕ್ಷೇತ್ರಕ್ಕೆ ಪ್ರೇರಿಸುತ್ತಿದ್ದರೆಂದು ಅವರ ಶಿಷ್ಯರು ಹೇಳುತ್ತಾರೆ.

'ಅಪರಾಧಗಳ ಶೋಧ ಮತ್ತು ತಡೆ' ಎಂಬ ಪುಸ್ತಕವನ್ನು ಅಡಕೆ ಬೆಳೆಯ ಸರ್ವೆ ಎಂಬ ಪುಸ್ತಕವನ್ನು ಇವರು ಇಂಗ್ಲೀಷಿನಿಂದ ಕನ್ನಡಕ್ಕೆ ತರ್ಜುಮೆ ಮಾಡಿದ್ದಾರೆ. ಅಪರಾಧಗಳ ಶೋಧ ಮತ್ತು ತಡೆ ಎಂಬ ಪುಸ್ತಕವನ್ನು ದಕ್ಷಿಣ ಭಾರತ ಪುಸ್ತಕ ಸಂಸ್ಥೆ ಪ್ರಕಟಿಸಿದೆ.

ಹಳೆಗನ್ನಡ, ಹೊಸಗನ್ನಡಗಳಲ್ಲಿ ಅಪಾರ ಪಾಂಡಿತ್ಯವನ್ನು ಹೊಂದಿದ ಪಾಲೆಪ್ಪಾಡಿಯವರು ಹಲವಾರು ಲೇಖನಗಳನ್ನು ಆಗಾಗ ಪ್ರಕಟಿಸುತ್ತಿದ್ದರು. ತರ್ಕಪೂರ್ಣವಾದ ಮಾತುಗಳಿಂದ ಅವರು ವಿಷಯ ಸಮರ್ಥನೆ ಮಾಡಿ ತಮ್ಮ ಅಭಿಪ್ರಾಯವನ್ನು ಮಂಡಿಸುತ್ತಿದ್ದ ವೈಖರಿ ಆಕರ್ಷಕವಾಗಿತ್ತು.

ಇವರು ಜಾನಪದ ಕತೆಗಳನ್ನು ಮಕ್ಕಳಿಗಾಗಿ ಬರೆದಿದ್ದಾರೆ. ಕಟ್ಟುಬಳ್ಳಿ, ಕುಟ್ಟಿದೊಣ್ಣೆ, ಹುಲಿ ಕೊಂದ ಚಿನ್ನಪ್ಪ, ಲಾಡಿನ ಮರ, ಹೆಡ್ಡ ದೂಮ, ಚೊಟ್ಟು ಕಾಲ ಚಟ್ಟಪ್ಪ ಸೆಟ್ಟಿ, ಡೊಳ್ಳುಂ ಭಟ್ಟ ಮೊದಲಾದ ಮಕ್ಕಳ ಮನರಂಜಿಸುವ ಕತೆಗಳು ಚೊಕ್ಕವಾಗಿವೆ.

ವಿದ್ವನ್ಮಣಿ ಚ. ಈಶ್ವರ ಶಾಸ್ತ್ರಿ

ಚಕ್ರಕೋಡಿ ಈಶ್ವರ ಶಾಸ್ತ್ರಿಗಳ ಹೆಸರು ಪ್ರಾಚೀನ ಸಾಹಿತ್ಯ - ವಿಚಾರಶೀಲ ರಚನೆಗಳ ನಿಟ್ಟಿನಲ್ಲಿ ಪ್ರಸಿದ್ಧವಾದುದು. ಅವರೊಬ್ಬ ನಿಷ್ಕಾಮ ಕರ್ಮಯೋಗಿ. ಸಾಹಿತ್ಯದಲ್ಲಿ ನಾನಾ ಬಗೆಯ ಆಸಕ್ತಿ, ಅಧ್ಯಯನ ನಡೆಸಿದವರು. ಮೈಸೂರು ವಿದ್ವತ್ಪರೀಕ್ಷೆ, ಮದ್ರಾಸ್ ವಿಶ್ವವಿದ್ಯಾನಿಲಯದ ಸಂಸ್ಕೃತ ಕನ್ನಡ ಉಪಾಧಿಗಳು ಅವರ ಸಾಧನೆಗಳು.

ಮನುಸ್ಮೃತಿಯನ್ನು ಕನ್ನಡಿಸಿದ ಖ್ಯಾತಿ ಅವರಿಗೆ ಸಿಕ್ಕಿದೆ. ಅದೊಂದು ಸಾಹಸದ ಕೆಲಸಮಾತ್ರವಲ್ಲದೆ ಮನುವಿನ ಬಗ್ಗೆ ಯಥಾರ್ಥ ಅಭಿಪ್ರಾಯ ಹೊಂದಲು ಸಹಾಯಕವಾದ ಕೆಲಸವಾಗಿದೆ. ಪರಾಶರ ಸ್ಮೃತಿ ಇನ್ನೊಂದು ದೊಡ್ಡ ಕೆಲಸ. ಇದೊಂದು ಪ್ರಮಾಣ ಗ್ರಂಥವಾಗಿ ಜನರಿಂದ ಅಪಾರ ಬೇಡಿಕೆ - ಮನ್ನಣೆ ಪಡೆದಿದೆ. ಸಂಧ್ಯಾವಂದನೆ - ಪಂಚಾಯತನ ಪೂಜಾವಿಧಿ, ಬಾಲವ್ಯಾಕರಣ, ನ್ಯಾಯದರ್ಶನ, ಸಂಸ್ಕೃತ ಸ್ವಯಂ ಬೋಧಿನಿ, ಭಾರತೀಯ ಮನಶ್ಶಾಸ್ತ್ರ ಗ್ರಂಥಗಳನ್ನು ರಚಿಸಿದ್ದಾರೆ. ಚರಕಸಂಹಿತೆಯನ್ನು ಕನ್ನಡಕ್ಕೆ ಅನುವಾದಿಸಿರುವುದು ವೈದ್ಯಕೀಯ ಲೋಕಕ್ಕೊಂದು ವಿಶಿಷ್ಟ ಕೊಡುಗೆ. ಆತ್ಮ ನಿವೇದನೆ ಜ್ಯೋತಿಸ - ಶಾಸ್ತ್ರಿ, ವಂಶ ಪರಿಚಯ, ಮುಂತಾದ ಪ್ರಮುಖ ವಿಚಾರಗಳ ಬಗ್ಗೆ ಬರೆದು ಪ್ರಕಟಿಸಿದ್ದಾರೆ.

ಅಡ್ಯನಡ್ಕದ ಸಮೀಪದ ಮೂಡಂಬೈಲಿನಲ್ಲಿ ಹುಟ್ಟಿ, ಪಂಬೆತ್ತಾಡಿಯಲ್ಲಿ ವಾಸವಾಗಿ ಹಳ್ಳಿಯ ಜೀವನದ ವಿವಿಧ ಮುಖಗಳಲ್ಲಿ ಸಕ್ರಿಯವಾಗಿ ದುಡಿದಿದ್ದಾರೆ. ಮೊಳಹಳ್ಳಿ ಕಾರಂತರಂಥವರ ಸ್ನೇಹ ಗಳಿಸಿ, ತಾವೂ ಅವರ ಕಾರ್ಯಕ್ರಮಗಳ ಜೊತೆ ಸೇರಿದ್ದಾರೆ.

ಕವಿ ಅಡಿಬಾಯಿ ರಾಮಣ್ಣ ಶೆಟ್ಟಿ

ಅಡಿಬಾಯಿ ರಾಮಣ್ಣ ಶೆಟ್ಟರ ಹೆಸರು ಎಲ್ಲರಿಗೂ ಗೊತ್ತು. ಅವರೊಬ್ಬ ಕವಿಯಾಗಿ, ಅಧ್ಯಾಪಕರಾಗಿ, ಗುಮಾಸ್ತರಾಗಿ ದುಡಿದವರು. ಸಾಹಿತ್ಯದ ಹಸಿವಿಗಾಗಿ ಹಂಬಲಿಸಿ, ಧರ್ಮಸ್ಥಳವನ್ನು ಸೇರಿದರಂತೆ. ಅಲ್ಲಿ ಅವರ ಚಟುವಟಿಕೆಗಳಿಗೆ ನಿರಂತರ ಚಾಲನೆ ಸಿಕ್ಕಿತು. ಪ್ರಾಚೀನ ಗ್ರಂಥಗಳ ಓದು, ಅವುಗಳಲ್ಲಿರುವ ವೈಶಿಷ್ಟ್ಯಗಳ ಅಭ್ಯಾಸ, ಟಿಪ್ಪಣಿ, ಆಧ್ಯಾತ್ಮಿಕ ವಿಚಾರ ಸಂಗ್ರಹ, ಮುಂತಾದುವುಗಳನ್ನು ಅವರು ತಮ್ಮ ನಿತ್ಯದ ಕೆಲಸವನ್ನಾಗಿ ಮಾಡಿಕೊಂಡಿದ್ದರು. ಅವರು ಅಧ್ಯಾಪನ ವೃತ್ತಿಯಲ್ಲಿದ್ದಾಗ, 'ಅನುಭವ ತರಂಗಿಣಿ' ಎಂಬ ಮೂರು ಸಂಪುಟಗಳ ಗ್ರಂಥವನ್ನು ರಚಿಸಿದರೆಂದು ತಿಳಿದು ಬರುತ್ತದೆ. 'ಹೃದಯ ವೀಣೆ' ಎಂಬ ಕವನ ಸಂಕಲನದಿಂದ ಅವರು ಒಳ್ಳೆಯ ಕವಿಗಳಾಗುವ ಹಂಬಲ ತೋರಿದ್ದಾರೆ. "ನಮ್ರನೂ ಭಾವುಕನೂ ಆಗಿರುವ ಈ ಕವಿಗೆ ಕನ್ನಡ ಕುಲಕೋಟಿಯ ಪ್ರೋತ್ಸಾಹವೆಂಬ ಶ್ರೀ ರಕ್ಷೆಯ ಅವಶ್ಯಕತೆಯಿದೆ." ಎಂದು ರಾಷ್ಟ್ರಕವಿ ಗೋವಿಂದ ಪೈಗಳು ಹರಸಿದ್ದಾರೆ. ಅವರು ಕನ್ನಡದ ಹಿರಿಯರಾದ ಪಂಜೆ - ಕಡೆಂಗೋಡ್ಲು, ಗೋವಿಂದ ಪೈ, ಮುಂತಾದವರನ್ನು ಪ್ರೀತಿಸುತ್ತಿದ್ದು, ಅವರ ಪ್ರಭಾವಕ್ಕೊಳಗಾಗಿರುವುದು ಸತ್ಯವಾಗಿರುತ್ತದೆ. ಮಂಜುನಾಥ ಸ್ವಾಮಿ ಭಜನಾವಳಿ ಬರೆದು ಪ್ರಕಟಿಸಿದರು. ಶ್ರೀ ಸ್ವಾಮಿ ಸೇವಾಸಕ್ತ, ಶ್ರೀ ಪಾದರೇಣು ಎಂಬ ಕವಿನಾಮದಿಂದ ಇವರ ಹಲವಾರು ಕವಿತೆಗಳು ನವಯುಗ, ನವಭಾರತ ಮುಂತಾದ ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ಗಾಂಧಿಯವರ ಭಕ್ತರಾಗಿ, ಕವಿತೆಗಳ ಮೂಲಕ ಅವರ ಗುಣಗಾನ ಮಾಡಿದ್ದಾರೆ.

ಪ್ರಗತಿಶೀಲ ಬಿ. ಯಂ. ಶರ್ಮಾ

ಶ್ರೀ ಬೋಳಂತಕೋಡಿ ಶಂಕರ ಭಟ್ಟರ ಸಹೋದರರಾದ ಶ್ರೀ ಬಿ. ಯಂ. ಶರ್ಮಾರು ಮಕ್ಕಳ ಸಾಹಿತ್ಯ ರಚನೆಯಲ್ಲಿ ಅಣ್ಣನೊಂದಿಗೆ ದುಡಿದವರು. ಅಧ್ಯಾಪಕರಾಗಿದ್ದುಕೊಂಡು ಸಾಹಿತ್ಯ ಚಟುವಟಿಕೆಗಳಲ್ಲಿ ನಿರಂತರ ಶ್ರಮಿಸಿದ್ದಾರೆ. 'ಕನ್ನಡ ಪ್ರಪಂಚ ಪ್ರಕಾಶನ' ಬೋಳಂತಕೋಡಿ ಸೋದರರ ಪ್ರಕಾಶನ ಸಂಸ್ಥೆ. ನೂರಾರು ಮಕ್ಕಳ ಪುಸ್ತಕಗಳನ್ನು ಈ ಸಂಸ್ಥೆ ಪ್ರಕಟಿಸಿದೆ. ಶರ್ಮಾರು ಹಲವಾರು ಕೃತಿಗಳನ್ನು ಅನುವಾದಿಸಿದ್ದಾರೆ. ಸ್ವತಂತ್ರ ರಚನೆಯಂತೆ ಅವು ಮೂಡಿ ಬಂದಿವೆ. ಮಕ್ಕಳ ಮನಸ್ಸನ್ನು ಬಲ್ಲವರಾದ ಶರ್ಮಾರ ಸಾಹಿತ್ಯ ರಚನೆಯ ಆಸಕ್ತಿ ಅದೇ ದಾರಿಯಲ್ಲಿ ಸಾಗಿತು.

ಅವರು ಹಿಂದಿ ಸಾಹಿತ್ಯವನ್ನು ಬಲ್ಲವರಾದುದರಿಂದ ಎಷ್ಟೋ ಕೃತಿಗಳನ್ನು ಅನುವಾದಿಸಿದ್ದಾರೆ. ರಾಹುಲಸಾಂಕೃತ್ಯಾಯನರ ಕೃತಿಗಳ ಅನುವಾದ ಅವರ ಮಹತ್ವದ ಕೆಲಸ. 'ವೋಲ್ಗಾಗಂಗಾ' ಕಾದಂಬರಿ ಶ್ರೇಷ್ಠವಾದುದು. ಇದು ಆರ್ಯರ - ನಾಗರಿಕತೆ ನಡೆದು ಬಂದ ಹೆಜ್ಜೆಯ ಗುರುತುಗಳನ್ನು ಪಡಿ ಮೂಡಿಸಿದೆ. 'ಸಿಂಹ ಸೇನಾಪತಿ' ಇನ್ನೊಂದು ಅನುವಾದ ಗ್ರಂಥ.

ಪ್ರಗತಿಶೀಲ ಸಾಹಿತ್ಯ ಚಳುವಳಿಯಲ್ಲಿ ನಿರಂಜನರೊಂದಿಗೆ ಇವರು ಹೆಗಲೊಡ್ಡಿದವರು. ದಾವಣರೆಗೆಯ ಪ್ರಗತಿ ಪಂಥ ಸಮ್ಮೇಳನದಲ್ಲಿ ಭಾಗವಹಿಸಿದರಲ್ಲದೆ, ಪುತ್ತೂರಿನಲ್ಲಿಯೂ ಎರಡನೇ ಸಮ್ಮೇಳನ ಸಂಘಟಿಸಿದ್ದಾರೆ.

ಗೋವಿಂದ ಪೈ, ಶಿವರಾಮ ಕಾರಂತ, ರಾಜರತ್ನಂ, ನಿರಂಜನರು ಮುಂತಾದ ಹಿರಿಯ ಸಾಹಿತಿಗಳ ಅಚ್ಚುಮೆಚ್ಚಿನವರಾಗಿ, ಆದರ್ಶ ಅಧ್ಯಾಪಕರಾಗಿ, ಬರೆಹಗಾರರಾಗಿ, ವಿದ್ವಾಂಸರಾಗಿ, ಸಹೃದಯ ಮಿತ್ರರಾಗಿ, ಉತ್ತಮ ಕುಟುಂಬಿಕರಾಗಿ, ಸಾಹಿತ್ಯದ ನಾನಾ ಮುಖದ ಸೇವೆ ಸಲ್ಲಿಸಿದ ಮಹನೀಯರಾಗಿದ್ದಾರೆ. ಗಾಂಧೀವಾದಿಯಾಗಿ, ಬುದ್ಧನ ತತ್ವಗಳನ್ನು ಮನನ ಮಾಡಿದ ಚಿಂತಕರಾಗಿಯೂ ಅವರು ಹೆಸರಾಗಿದ್ದಾರೆ.

ಜೀವನಾಡಿ ಮಿಡಿಯಬಲ್ಲ ಸೇವ ನಮಿರಾಜ ಮಲ್ಲ

'ಉಳಿಯುವುದೇ ಕೀರ್ತಿ' ಎಂಬ ಕಾದಂಬರಿ ಮಲ್ಲರ ಕೊನೆಯ ಕೃತಿಯಂತೆ. ಅವರಿಗೂ ಕೀರ್ತಿ ಉಳಿಯುವುದು ನಿಶ್ಚಿತವೆಂಬುದಕ್ಕೆ ಅವರ ಸಾಹಿತ್ಯ ಸಾಧನೆ - ಜೀವನ - ಕೃತಿಗಳೇ ಪ್ರಮಾಣವೆನ್ನಬಹುದು.

ಮಲ್ಲರು ವಕೀಲರಾಗಿ ಮಂಗಳೂರಿನಲ್ಲಿ ವ್ಯವಸಾಯ ನಡೆಸುತ್ತಿದ್ದಂತೆ ಸಾಹಿತ್ಯ ಕ್ಷೇತ್ರದಲ್ಲಿಯೂ ಕೆಲಸ ನಡೆಸುತ್ತಿದ್ದರು. ಜೊತೆಯಲ್ಲಿ ಕಾರಂತರ ವಿಚಾರವಾಣಿಯ ಸಂಪಾದನ ಕಾರ್ಯವನ್ನು ನಡೆಸುತ್ತಿದ್ದರು. ಆಗ ನಾನು ವಿಚಾರವಾಣಿಯ ಬರೆಹಗಾರರ ಬಳಗದಲ್ಲಿದ್ದುದರಿಂದ ಅವರ ನಿಕಟ ಸಂಪರ್ಕ ಸಹೃದಯತೆಯನ್ನು ಅರ್ಥಮಾಡಿಕೊಳ್ಳುವ ಅವಕಾಶ ಲಭ್ಯವಾಯಿತು. ಹೀಗೆ ಅವರೊಬ್ಬ ರಸಿಕ - ಸೃಜನಶೀಲ ಸಾಹಿತಿಯಾಗಿ ನ್ಯಾಯಾಂಗದಲ್ಲಿಯೂ ತಜ್ಞರಾಗಿ ಜೀವನವನ್ನು ಮಾದರಿಯಾಗಿ ನಡೆಸಿಕೊಂಡಿದ್ದಾರೆ.

'ನ್ಯಾಯಾಲಯದ ತೀರ್ಪುಗಳು' ಎಂಬ ಹಾಸ್ಯ ಸಂಕಲನದಲ್ಲಿ ಅವರು ತಾವು ನ್ಯಾಯಾಧೀಶರಾಗಿದ್ದ ಸಂದರ್ಭದ ಘಟನೆಗಳನ್ನು ನೆನಪಿಸಿ, ಹಾಸ್ಯದ ಹೊನಲನ್ನು ಹರಿಸಿದ್ದಾರೆ. 'ಸೋಲಿನ ಸಾಲು', 'ಲೋಹದ ಜೀವ', 'ತ್ರೇತಾಯುಗ', 'ಮರದ ಮರೆಯಲ್ಲಿ' ಎಂಬ ಕಥಾಸಂಕಲನಗಳನ್ನು ಪ್ರಕಟಿಸಿದ್ದಾರೆ. ಕಾರ್ನಾಡು ಸದಾಶಿವ ರಾಯರು, ಕೋಟ ರಾಮಕೃಷ್ಣಕಾರಂತರು, ಅ. ನ. ಕೃಷ್ಣ ರಾಯರು ಎಂಬ ಮೂರು ಜೀವನ ಚರಿತ್ರೆ ಬರೆದಿದ್ದಾರೆ. ಮೈಸೂರು ಅಬಕಾರಿ ಕಾಯಿದೆ, ನ್ಯಾಯತತ್ವ ಶಾಸ್ತ್ರ ಅವರ ಕಾನೂನು ಪುಸ್ತಕಗಳು. 'ರಕ್ತದ ರೂಪಾಯಿ', 'ದೇವರ ದಾರಿ', 'ಬಂಧನ ಬಾಂಧವ್ಯ', ' ಬದುಕಿನ ಸುಳಿಯಲ್ಲಿ', 'ತೀರಿದ ಆಸೆ',

'ಕುರುಡು ಚಕ್ರ', 'ಭ್ರಮಾಧೀನ', 'ನಿಜ ಸುತ', 'ಮುಟ್ಟದಿರು', 'ತಲ್ಲಣಿಸದಿರು', 'ವಿಲಾಸ', 'ಉಳಿವುದೇ ಕೀರ್ತಿ' ಮುಂತಾದ ಕಾದಂಬರಿಗಳನ್ನು ರಚಿಸಿದ್ದಾರೆ.

'ಚಿನ್ನದ ನಾಡು', 'ಸವಿ ನೆನಪು', 'ಶಾಂತಿಯ ಸಾಧನೆ', 'ಸಣ್ಣ ಕತೆಗಳು', 'ಅಮೇರಿಕಾದ ಶ್ರಮಜೀವಿ', 'ಸೇತುವೆಯಲ್ಲಿ ಮರಣ ಕಾದಿತ್ತು', 'ಅಮೇರಿಕಾ', 'ಸ್ವಾತಂತ್ರ್ಯದ ಕಿಡಿಗಳು', 'ಜನತಾ ಸರ್ಕಾರ' ಇವು ಅವರ ಭಾಷಾಂತರ ಗ್ರಂಥಗಳು.

ಮಲ್ಲರ ಕೃತಿಗಳು ಸತ್ವಪೂರ್ಣವಾದವುಗಳು. ಜಿಲ್ಲೆಯ ಚಿತ್ರಣದ ಹಿನ್ನೆಲೆಯಲ್ಲಿ ಅವರ ಕೃತಿಗಳು ರೂಪುಗೊಂಡಿವೆ. ಕಾದಂಬರಿಗಳಲ್ಲಿ ಬರುವ ಪಾತ್ರಗಳು, ಜನಜೀವನ, ಪ್ರಕೃತಿ ಪರಿಸರಗಳು, ನಿಸರ್ಗ ಚಿತ್ರಣದ ಸಾಕ್ಷಿಗಳಂತಿವೆ. ಸಹಜತೆಗೆ ಇವು ಹತ್ತಿರವಾಗಿವೆ. ಕಾರಂತರ ಪ್ರಭಾವ ಅವರಲ್ಲಿ ಸಾಕಷ್ಟು ಆಗಿದೆ. ಅವರ ಸ್ವಾತಂತ್ರ್ಯ ಮನೋವೃತ್ತಿ ಸೃಜನ ಶೀಲತೆ ಅನುಭವಗಳ ನಮೂನೆಯಲ್ಲಿ ಈ ಬಗೆಯ ಪ್ರಭಾವದಿಂದ ಕೃತಿಗಳು ಅನನ್ಯತೆ ಗಳಿಸಿವೆ.

ವಕೀಲರಾಗಿದ್ದ ಮಲ್ಲರು ಮುನ್ಸಿಫ್ ಮೆಜಿಸ್ಟ್ರೇಟ್ ಸಿವಿಲ್ ಜಡ್ಜ್, ಜಿಲ್ಲಾ ಸೆಶೆನ್ಸ್ ನ್ಯಾಯಾಧೀಶರಾಗಿ ನಿವೃತ್ತರಾದರು. ತಮ್ಮ ವೃತ್ತಿ ಜೀವನದಲ್ಲಿ ಅವರ ದಕ್ಷತೆ ಮೆರೆದಂತೆಯೇ ಕಾದಂಬರಿ ಕ್ಷೇತ್ರದಲ್ಲಿಯೂ ಅವರ ಕೈಚಳಕ ಕೆಲಸ ಮಾಡಿದೆ. ಅವರು ವಾರ್ತಾ ಪ್ರಚಾರ ಇಲಾಖೆಯಲ್ಲಿ ಕೆಲಸ ಮಾಡಿದ್ದಲ್ಲದೆ, 'ಲಿಟರೇಟರ್' ಎಂಬ ಇಂಗ್ಲಿಷ್ ದೈನಿಕದಲ್ಲಿ ಹಾಗೂ ಟೈಮ್ಸ್ ಆಫ್ ಇಂಡಿಯಾದ ಸಂಪಾದಕ ಮಂಡಳಿಯಲ್ಲಿದ್ದು ಕೆಲಸ ಮಾಡಿ ಪತ್ರಿಕೋದ್ಯಮದಲ್ಲಿ ಅನುಭವಿಯಾಗಿದ್ದರು. ಚಿತ್ರಗುಪ್ತ, ಡೆಕ್ಕನ್ ಹೆರಾಲ್ಡ್, ಆಕಾಶವಾಣಿಗಳಿಗೆ ವರದಿಗಾರರಾಗಿಯೂ ಮಂಗಳೂರಿನ ಸಂಗಾತಿ ವಾರಪತ್ರಿಕೆಯ ಅಂಕಣಕಾರರಾಗಿಯೂ ಇದ್ದರು. ವಿಚಾರವಾಣಿಯ ಹೊಣೆಯನ್ನಂತೂ ಕಾರಂತರು ಅವರಿಗೆ ಒಪ್ಪಿಸಿಬಿಟ್ಟಿದ್ದರು.

ಬಂಟ್ವಾಳ ತಾಲೂಕಿನ ಕಾವಳ ಪಡೂರು ಗ್ರಾಮದವರಾದ ಶ್ರೀ ಸೇವ ನಮಿರಾಜ ಮಲ್ಲರು ನಾಡಿನ ಪ್ರಖ್ಯಾತ ಸಾಹಿತಿಗಳಲ್ಲೊಬ್ಬರಾಗಿ ಗಣನೀಯರೆನಿಸಿದ್ದಾರೆ. ಕಾರಿಂಜದಲ್ಲಿ ಜರಗಿದ 5ನೆಯ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಇವರ ಕುರಿತು ರಮೇಶ ಕೈಂತಜೆ ಮಂಡಿಸಿದ ಪ್ರಬಂಧ ಅವರ ಬಗ್ಗೆ ತಲೂಕಿನವರು ಸಲ್ಲಿಸಿದ ಗೌರವದ ಪ್ರತೀಕ.

ಚೊಕ್ಕಾಡಿಯ ಶ್ರೀ ದೇರಾಜೆ ಸೀತಾರಾಮಯ್ಯ

ಯಕ್ಷಗಾನರಂಗದಲ್ಲಿ ಚೊಕ್ಕವಾಗಿ ಅಚ್ಚುಕಟ್ಟಾಗಿ ಮಾತನಾಡುವ ದೇರಾಜೆಯವರು 'ಚೊಕ್ಕಾಡಿ'ಯವರು. ಅವರ ಹುಟ್ಟೂರ ಹೆಸರೇ ಅವರ ಚೊಕ್ಕವಾದ ಆಡುವಿಕೆಯನ್ನು ಸಾರುತ್ತದೆ. ನಾವಿಲ್ಲಿ ಪ್ರಸ್ತಾಪಿಸಿರುವುದು ಅವರ ಸಾಹಿತ್ಯದ ಮುಖವನ್ನು ಮಾತ್ರ. ಯಕ್ಷಗಾನದಲ್ಲಿ ಅರ್ಥಧಾರಿಯಾಗಿ ಅವರು ಉತ್ತಮ ಸಿದ್ಧಿಯನ್ನು ಹೊಂದಿದ್ದಾರೆ. ಪಾತ್ರ ವಿವೇಚನೆ, ರಸ, ಅಭಿವ್ಯಕ್ತಿ, ಪುರಾಣಗಳ ಉದ್ದೇಶವನ್ನು ಮನವರಿಕೆ ಮಾಡಿಕೊಂಡು ರಸವತ್ತಾಗಿ ಮೊನಚಾದ ಮಾತುಗಳಿಂದ ವ್ಯಂಗ್ಯ ಸಾಮರ್ಥ್ಯದಿಂದ ಮಿಂಚುತ್ತಾರೆ. ಇದೇ ಗುಣ ಅವರ ಸಾಹಿತ್ಯಕ್ಕೂ ಹರಡಿದೆ. 'ಶೀರಾಮ ಚರಿತಾಮೃತಂ' ಶ್ರೀಮನ್ಮಹಾಭಾರತ ಕಥಾಮೃತಂ, ದೇರಾಜೆಯವರ ಉದ್ಗ್ರಂಥಗಳು, ಕುರುಕ್ಷೇತ್ರಕ್ಕೊಂದು ಆಯೋಗ. ಉತ್ತಮವಾದ ತರ್ಕ ಸರಣಿಯಿಂದ ಗ್ರಾಹ್ಯವಾಗಿದೆ. ಪ್ರಿಯ ದರ್ಶನಂ, ನಳ ದಮಯಂತಿ ಕಥಾನಕವನ್ನು ಹಳೆಗನ್ನಡದಲ್ಲಿ ವಿವರಿಸಿರುವ ಗದ್ಯ ಗ್ರಂಥ. ಭೀಷ್ಮಾರ್ಜುನ ಸುಭದ್ರಾರ್ಜುನ ಪ್ರಸಂಗಗಳಿಗೆ ಅವರು ಅರ್ಥ ಬರೆದು ಮಾರ್ಗದರ್ಶನ ಮಾಡಿದ್ದಾರೆ. 'ರಾಮ ರಾಜ್ಯದ ರೂವಾರಿ' ಅವರ ಉತ್ತಮ ಕೃತಿಗಳಲ್ಲಿ ಒಂದೆಂದು ಹೆಸರು ಮಾಡಿದೆ.

'ಯಕ್ಷಗಾನ ವಿವೇಚನೆ' ಅವರ ಜೀವನವನ್ನು ಬಹುಪಾಲು ಆವರಿಸಿದ ಕಲೆಯೊಂದರ ವಿಶ್ಲೇಷಣೆಯು, ರಸ ಚರ್ವಣೆಯೂ ಆಗಿದೆ. ಯಕ್ಷಗಾನ ಹೇಗಿರಬೇಕು, ಅದರ ಗುರಿ - ಗತಿಗಳೇನು ಎಂಬುದನ್ನು ಇಲ್ಲಿ ಕಂಡುಕೊಳ್ಳಬಹುದಾಗಿದೆ. ಯಕ್ಷಗಾನದ ಅಭ್ಯಾಸಿಗಳಿಗೆ ಇದೊಂದು ಆಚಾರ್ಯ ಕೃತಿ.

ರಚನಾತ್ಮಕವಾದ ಉತ್ತಮ ಕಾವ್ಯ ನಾಟಕಾದಿಗಳನ್ನು ಬರೆದು ಪರಿಚಿತರಾದ ಶ್ರೀಯುತರು ಜನಪ್ರೀತ ಅರ್ಥಧಾರಿಗಳಾಗಿ ಯಕ್ಷಗಾನ ನಾಟಕಗಳಲ್ಲಿ ಪಾತ್ರಧಾರಿಯಾಗಿ ಹಾಗೆಯೇ ನಿರ್ದೇಶಕರಾಗಿ ಅನೇಕ ಅಭ್ಯಾಸಿಗಳಿಗೆ ಶಿಕ್ಷಕರು ಕೂಡಾ ಆಗಿ ಯಕ್ಷಗಾನದ ವಿವಿಧ ರಂಗಗಳಲ್ಲಿ ಸೇವೆಯನ್ನು ಸಲ್ಲಿಸುತ್ತಾ ಅನೇಕ ವರ್ಷಗಳ ತನ್ನ ಅನುಭವವನ್ನು ಪಡೆದು ಈ ಕೃತಿಯನ್ನು ರಚಿಸಿರುವರೆಂಬುದು ಅತಿಶಯೋಕ್ತಿಯಲ್ಲ.

ವಿಠಲ ಶಾಸ್ತ್ರಿಗಳು ದೇರಾಜೆಯವರ ಯಕ್ಷಗಾನ ವಿವೇಚನೆಯ ಬಗ್ಗೆ ಬರೆದ ಈ ಮಾತುಗಳನ್ನು ಅವರ ಎಲ್ಲಾ ಕೃತಿಗಳಿಗೂ ಅನ್ವಯಿಸಬಹುದು ಎಂಬುದಾಗಿ ಅನಂತಕೃಷ್ಣ ಹೆಬ್ಬಾರರು ದೇರಾಜೆಯವರ ಕುರಿತಾದ ಪ್ರಬಂಧಗಳಲ್ಲಿ ವಿವರಿಸಿದ್ದಾರೆ. ಶ್ರೀ ಹೆಬ್ಬಾರರ ಆಶಯದಂತೆ ಪ್ರಿಯದರ್ಶನಂ, ಗದ್ಯ ಕಾವ್ಯ ರಚನೆಗೆ ಮುದ್ದಣನ ರಾಮಾಶ್ವಮೇಧ ಸ್ಫೂರ್ತಿಯಾಗಿರಬಹುದು ಎಂಬ ಮಾತು ಅರ್ಥವತ್ತಾಗಿದೆ. ಏಕೆಂದರೆ ಚುರುಕು ಮಾತಿನ ಅದ್ಭುತ ಹಾಸ್ಯ ಪ್ರಜ್ಞೆಯ ದೇರಾಜೆಯವರನ್ನು ರಾಮಾಶ್ವಮೇಧವು ಆಕರ್ಷಿಸಿದ್ದರೆ ಅಸಹಜವೇನೂ ಅಲ್ಲ ಎನ್ನುವ ಅನಂತ ಕೃಷ್ಣ ಹೆಬ್ಬಾರರ ಮಾತು ಯಥಾರ್ಥವಾಗಿದೆ.

ಬಂಟ್ವಾಳ ತಾಲೂಕಿನ ಐದನೆಯ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಇವರ ಬಗ್ಗೆ ಪ್ರಬಂಧ ಮಂಡನೆ ನಡೆದಿದೆ.

ಗಾದೆಗಳ ಕೋಶ

ಪೆರುವಾಯಿ ಸುಬ್ಬಯ್ಯ ಶೆಟ್ಟರು

ಪೆರುವಾಯಿ ಸುಬ್ಬಯ್ಯ ಶೆಟ್ಟರು ನಮ್ಮ ನೆರೆಯೂರಿನವರಾದರೂ ಅವರ ನಿಕಟ ಪರಿಚಯ ನನಗಿರಲಿಲ್ಲ. ನಮ್ಮ ಶಾಸಕರಾಗಿದ್ದ ಸುಬ್ಬಯ್ಯ ನಾಯ್ಕರು ಒಮ್ಮೆ ನನ್ನಲ್ಲಿ ಸುಬ್ಬಯ್ಯ ಶೆಟ್ಟರ ತುಳು ಗಾದೆಗಳ ಬಗ್ಗೆ ಹೇಳಿದ್ದರು.ಅಂಥ ಮಹತ್ವದ ಸಂಗ್ರಹವನ್ನು ಪ್ರಕಟಿಸಲು ವಿಶ್ವವಿದ್ಯಾನಿಲಯದಲ್ಲಿ ಎಡೆ ಮಾಡಲು ಶ್ರಮಿಸಿದ ವಿಚಾರವದು ! ಅದು ಪ್ರಕಟವಾದಾಗ ಶೆಟ್ಟರ ಅರ್ಹತೆ ಎಲ್ಲರಿಗೂ ಅರ್ಥವಾಯಿತು. 5500 ಗಾದೆಗಳ ಸಂಗ್ರಹ ಮಾತ್ರ ಆ ಸಂಕಲನದಲ್ಲಿ ಪ್ರಕಟವಾಗಿ ಅದು ತುಳು ಸಾಹಿತ್ಯದ ಅಧ್ಯಯನಕ್ಕೆ ಅಭ್ಯಾಸಿಗಳಿಗೆ ದಾರಿದೀಪವಾಯಿತು. ನಮ್ಮ ಪರಿಶೋಧನಾ ಪ್ರಬಂಧಗಳಿಗಿಂತಲೂ ಮಹತ್ವದ ಕೆಲಸ ಇಲ್ಲಿ ನಡೆದಿದೆ. ರಾಜ ಮತ್ತು ಒಣ ಮರ ಎಂಬ ನೀಳ್ಗವನ, ಜೀವನ ವೃತ್ತಾಂತ (ಕಾದಂಬರಿ) ಗಾಂಧೀ ಲಾವಣಿ, ಕಾರ್ಮಿಕ, ಕರ್ತವ್ಯ, ನಾರಾಯಣ ಶತಕ, ಅಧ್ಯಾಪಕ ಇವರ ಅಪ್ರಕಟಿತ ಕೃತಿಗಳೆಂದು ನರೇಂದ್ರ ರೈ ದೇರ್ಲ ಇವರು ಬರೆದಿದ್ದಾರೆ. ಯಕ್ಷಗಾನ, ತಾಳಮದ್ದಳೆ, ಪುರಾಣ ವಾಚನಗಳಲ್ಲಿ ಇವರು ಪ್ರವೀಣರಾಗಿದ್ದರೆಂದೂ ನಮ್ಮೂರವರೂ ಇಂದಿಗೂ ಸ್ಮರಿಸುತ್ತಿದ್ದಾರೆ. ಕಡೆಂಗೋಡ್ಲು ಪಂಜೆ, ಉಳ್ಳಾಲ, ಕಾರ್ನಾಡು, ಮೊಳಹಳ್ಳಿ ಮೊದಲಾದವರಿಂದ ಇವರು ಪ್ರಭಾವಿತರಾಗಿದ್ದರೆಂದು ಅವರೇ ಹೇಳುತ್ತಿದ್ದರು. ಇವರು ಶಿವರಾಯ ಶತಕ ಎಂಬುದಾಗಿ ಮೊಳಹಳ್ಳಿಯವರ ಬಗ್ಗೆ ಕೃತಿ ರಚಿಸಿರುತ್ತಾರೆ.

ನರೇಂದ್ರ ರೈ ಹೇಳುವ ಪ್ರಕಾರ ಶೆಟ್ಟರು ಕೂಡಿ ಹಾಕಿದ ಗಾದೆಗಳ ಸಂಖ್ಯೆ ಮೂವತ್ತಮೂರು ಸಾವಿರ. ಇವುಗಳಲ್ಲಿ ಅವರಿಗಿದ್ದ ಆನಂದ, ಸೊಗಸು, ಅಷ್ಟೊಂದು ಪ್ರಿಯವಾಗಿತ್ತೆಂದು ಶೆಟ್ಟರೇ ತಿಳಿಸಿದ್ದಾರೆ. ಪಾಡ್ದನ, ಸಂಧಿ, ನಾಟಿ ಹಾಡು, ಮಾರಿ ಪೂಜೆ, ಗೋಂದೋಳು ಪೂಜೆಯ ಸಂಧಿ ಹಾಗೂ ಹಳ್ಳಿ ಜೀವನದ ದೈನಂದಿನ, ಹಬ್ಬ ಹರಿದಿನಗಳ ಎಲ್ಲಾ ವಿಚಾರಗಳ ಸಂಗ್ರಹದ ಸಮುದ್ರವೇ ಆದವರು ಸುಬ್ಬಯ್ಯ ಶೆಟ್ಟರು.

ಶಾಸ್ತ್ರೀಯ ವಿಚಾರಧಾರೆಯ
ಕಾಕುಂಜೆ ಕೃಷ್ಣ ಭಟ್ಟರು

ಮೀಮಾಂಸ ಶಾಸ್ತ್ರದಲ್ಲಿ ಮದ್ರಾಸ್ ರಾಜ್ಯದಲ್ಲಿ ಪ್ರಥಮ ಸ್ಥಾನ ಚಿನ್ನದ ಪದಕವನ್ನು ಗಳಿಸಿದ ವಿದ್ವಾನ್ ಕೃಷ್ಣ ಭಟ್ಟರು ಪೆರಡಾಲ ಕಾಲೇಜಿನ ಆಚಾರ್ಯರಾಗಿದ್ದು ಅಪಾರ ಶಿಷ್ಯ ವರ್ಗ ಹೊಂದಿದ್ದವರು. ಮಿತ ಭಾಷಿಯಾದರೂ ಅಮಿತವಾದ ವಿಚಾರ ಧಾರೆ - ನಿರೂಪಣಾ ವಿಧಾನದಿಂದ ಅವರು ಜ್ಞಾನ ದಾಹವನ್ನು ನೀಗುತ್ತಿದ್ದ ಮಹಾನುಭಾವರು. ಸಂಸ್ಕೃತ ಕನ್ನಡಗಳಲ್ಲಿ ಅವರ ಅಪಾರ ಅಧ್ಯಯನ - ಅನುಭವ ಅನನ್ಯವೆನಿಸಿತ್ತು.

ಕೌಟಿಲ್ಯನ ಅರ್ಥಶಾಸ್ತ್ರವನ್ನು ಕನ್ನಡಕ್ಕೆ ನೀಡಿದ ಶ್ರೀ ಕೃಷ್ಣ ಭಟ್ಟರ ಪಾಂಡಿತ್ಯ - ಅನುಭವ, ಭಾಷಾ ಪ್ರೌಢಿಮೆ ಈ ಕೃತಿಯಲ್ಲಿ ಸಮಗ್ರವಾಗಿ ಒಡಮೂಡಿದೆ. ಇದು ನಾಡಿನ ಎಲ್ಲೆಡೆಯಲ್ಲಿಯೂ ಉತ್ತಮ ಪ್ರತಿಕ್ರಿಯೆ, ಪ್ರಶಂಸೆಗಳನ್ನು ಪಡೆದ ಗ್ರಂಥವಾಗಿದೆ. ಇವರು ರಚಿಸಿದ ಸಂಸ್ಕೃತ - ಕನ್ನಡ ನಿಘಂಟು ಅಮೋಘವಾದ ಮತ್ತೊಂದು ಸಾಧನೆ. ಉಭಯ ಭಾಷಾ ಪಾಂಡಿತ್ಯವಿಲ್ಲಿ ಮೆರೆದಿದೆ. ಮಿತಾಕ್ಷರೀ ಆಶೌಚ ನಿರ್ಣಯ ಎಂಬ ಎರಡು ಗದ್ಯ ಕೃತಿಗಳನ್ನು ರಚಿಸಿ ಅವರು ಶಾಸ್ತ್ರೀಯ ವಿಚಾರಧಾರೆ - ಅನುಭವಗಳನ್ನು ಧಾರೆಯೆರೆದಿದ್ದಾರೆ.

ವಿದ್ಯಾರ್ಥಿಗಳಿಗೆ ಶಾಸ್ತ್ರೀಯ ವಿಚಾರಗಳನ್ನು ತಿಳಿಸುವ ಅವರ ಬೋಧನ ಶೈಲಿಗಿಂತಲೂ, ಲೇಖನ ಮಾಧ್ಯಮ ಹೆಚ್ಚು ಗತಿ ವೇಗವನ್ನು ಹೊಂದಿದೆ. ಸ್ಪಷ್ಟವಾಗಿ ತಿಳಿ ಹೇಳುವ ವಿಧಾನ - ವಿವರಣ ಸಾಮರ್ಥ್ಯದಿಂದ ಅವರು ಉತ್ತಮ ಶಾಸ್ತ್ರ ಲೇಖಕರಾಗಿ ಮಾನ್ಯತೆ ಪಡೆದಿದ್ದಾರೆ.

ಇವರ ಸೋದರ ಶ್ರೀ ಕಾಕುಂಜೆ ಸುಬ್ರಾಯ ಭಟ್ಟರು ಕಾವ್ಯ ಜೀವಿತಂ ಎಂಬ ವಿಮರ್ಶಾತ್ಮಕ ಆಳ ಅಧ್ಯಯನದ ಗ್ರಂಥ ರಚಿಸಿದವರು. ಹೀಗೆ ಇವರ ಮನೆತನವೇ ವಿದ್ವಾಂಸರಿಂದ ತುಂಬಿದೆ. ಇತ್ತೀಚೆಗೆ ಅವರ ಅಳಿಯ ಕಿಳಿಂಗಾರು ಗೋಪಾಲಕೃಷ್ಣ ಭಟ್ಟರು ಶ್ರೀ ಕಾಕುಂಜೆ ಕೃಷ್ಣ ಭಟ್ಟರು ಅನುವಾದಿಸಿದ 'ಬ್ರಹ್ಮ ಸೂತ್ರ ಶಂಕರ ಭಾಷ್ಯ' ಎಂಬ ಮಹಾ ಗ್ರಂಥವನ್ನು ಪ್ರಕಟಿಸಿದ್ದಾರೆ. ಇದು ಭಾರತೀಯ ಉದ್ಗ್ರಂಥವಾಗಿ ನಾಡಿಗೆ ಸಂದ ಬಹು ದೊಡ್ಡ ಕಾಣಿಕೆ ಎನ್ನಬಹುದು. ಕಾಕುಂಜೆಯವರ ಶಿಷ್ಯನಾಗಿ ಅಭಿಮಾನ ಪಡುವವರಲ್ಲಿ ನಾನೂ ಒಬ್ಬ.

ಕನ್ನಡ ಸಾಹಿತ್ಯದ ಮಿನುಗುತಾರೆ
ಯರ್ಮುಂಜ ರಾಮಚಂದ್ರ

"ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಅಪಾರ ಭರವಸೆಯನ್ನು ಮೂಡಿಸಿ ಅದು ಸಾಕಾರಗೊಳ್ಳುವ ಮೊದಲೇ ತಮ್ಮ ಚಿಕ್ಕ ವಯಸ್ಸಿನಲ್ಲಿ ತೀರಿಕೊಂಡ ದಕ್ಷಿಣ ಕನ್ನಡ ಜಿಲ್ಲೆಯ ನಾಲ್ಕಾರು ಬರೆಹಗಾರರಲ್ಲಿ ಯರ್ಮುಂಜ ರಾಮಚಂದ್ರರೂ ಒಬ್ಬರು. ತಮ್ಮ 'ವಿದಾಯ' ಎಂಬ ಕವನ ಸಂಕಲನ ಮತ್ತು ಚಿಕಿತ್ಸೆಯ ಹುಚ್ಚು ಮತ್ತು ಇತರ ಕಥೆಗಳು ಎಂಬ ಕಥಾ ಸಂಕಲನ ಜಯಂತಿ, ಜನ ಪ್ರಗತಿ, ಜಯ ಕರ್ನಾಟಕ, ಉಷಾ, ನವಭಾರತ, ರಾಷ್ಟ್ರಮತ ಮುಂತಾದ ನಾಡಿನ ಹಲವಾರು ಪತ್ರಿಕೆಗಳಲ್ಲಿ ಅವರು ಪ್ರಕಟಿಸಿದ ಬಿಡಿ ಕವನಗಳು, ಕತೆಗಳು, ವಿಮರ್ಶೆ, ವಿಡಂಬನೆಗಳು, ಕನ್ನಡ ಸಾರಸ್ವತ ಪ್ರಪಂಚದಲ್ಲಿ ಅವರಿಗೊಂದು ವಿಶಿಷ್ಟ ಸ್ಥಾನವನ್ನು ಕಲ್ಪಿಸಿಕೊಟ್ಟಿವೆ. ತಾವು ಬದುಕಿದ್ದ 22 ವರ್ಷಗಳಲ್ಲಿ ಅವರು ಬರೆದದ್ದು ಕೊನೆಯ ಐದಾರು ವರ್ಷಗಳಲ್ಲಿ ಮಾತ್ರ. ಆದರೂ ಈ ಅಲ್ಪಾವಧಿಯಲ್ಲಿ ಅವರು ಬರೆದುದು ಕಡಿಮೆಯಲ್ಲ ; ಕಡಿಮೆ ದರ್ಜೆಯದೂ ಅಲ್ಲ. ತಮ್ಮ ಬರವಣಿಗೆಯ ಮೊದಲ ಹಂತದಲ್ಲಿ ನವೋದಯದ ಭಾವುಕ ಪ್ರಪಂಚದಲ್ಲಿದ್ದು, ಒಂದೆರಡು ವರ್ಷಗಳಲ್ಲಿಯೇ, ಪ್ರಗತಿಶೀಲತೆಯ ವಾಸ್ತವ ಲೋಕಕ್ಕಿಳಿದು, ಸಾಮಾಜಿಕ ಪ್ರಜ್ಞೆಯನ್ನು ಮೈಗೂಡಿಸಿಕೊಂಡು ಸಾಹಿತ್ಯ ಜೀವನದ ಕೊನೆಗಾಲದಲ್ಲಿ ನವ್ಯತೆಯ ಸಂಕೀರ್ಣ ಮಾರ್ಗವನ್ನು ತನ್ನದಾಗಿಸಿಕೊಂಡ ಯರ್ಮುಂಜ ರಾಮಚಂದ್ರ ಕನ್ನಡ ಸಾಹಿತ್ಯ ಲೋಕದ ಮಿನುಗು ತಾರೆ ಎಂದರೆ ಖಂಡಿತಾ ಅತಿಶಯೋಕ್ತಿ ಅಲ್ಲ."

ಯರ್ಮುಂಜರ ಬದುಕು ಮತ್ತು ಸಾಹಿತ್ಯ ಎಂಬ ಕೃತಿಯಲ್ಲಿ ಪ್ರೊ. ವೇಣುಗೋಪಾಲ ಕಾಸರಗೋಡು ಬರೆದ ಮೇಲಿನ ಸಾಲುಗಳು ಸಮಗ್ರವಾಗಿ ಅವರ ವ್ಯಕ್ತಿತ್ವವನ್ನು ಹೊರ ಚೆಲ್ಲುತ್ತವೆ.

ರಾಷ್ಟ್ರಮತದಲ್ಲಿದ್ದಾಗ ಅವರನ್ನು ಕೆಲಬಾರಿ ಸಂಪರ್ಕಿಸಿದ್ದೆ. ಆಗಲೇ ಅವರ ಕಾವ್ಯ ಶಕ್ತಿ ಉದ್ದೀಪನಗೊಂಡಿತ್ತು. ಅವರ ಸರಳ ಸಜ್ಜನಿಕೆ, ನನ್ನ ಮನಸ್ಸಿಗೆ ತುಂಬಾ ಹಿಡಿಸಿತ್ತು. ಅವರು ತೀರಿಕೊಂಡಾಗ ಸಾಹಿತಿ ನಿರಂಜನರವರು ಕಣ್ಣೀರ್ಗರೆದುದು ನನಗೆ ಇಂದಿಗೂ ಕಣ್ಣಿಗೆ ಕಟ್ಟುತ್ತಿದೆ. ಅವರು ಜನ ಪ್ರಗತಿಯಲ್ಲಿ ಬರೆದ ಪ್ರತಿಯೊಂದು ಅಕ್ಷರವೂ ಮತ್ತೊಂದು ಮಾರ್ಮಿಕವಾಗಿತ್ತು. ಎಳೆ ವಯಸ್ಸಿನಲ್ಲಿ ಅಂಥ ಪ್ರತಿಭಾವಂತ ವ್ಯಕ್ತಿ ತೀರಿಕೊಂಡಾಗ ಎಂಥ ಕಲ್ಲೆದೆಯೂ ಕರಗಬಹುದಾದ ಸನ್ನಿವೇಶದಲ್ಲಿ ಅವರನ್ನು ಬಲ್ಲವರು ಅಳಲನ್ನು ತಡೆಯುವುದೆಂತು ?

ಪ್ರಕಟವಾದುದಕ್ಕಿಂತಲೂ ಹೆಚ್ಚು ಅಪ್ರಕಟಿತವಾಗಿರುವ ಕವನಗಳು ಅವರ ಕೃತು ಶಕ್ತಿಯನ್ನು ಎತ್ತಿ ತೋರಿಸುತ್ತದೆ. ನವಭಾರತ, ರಾಷ್ಟ್ರಮತಗಳಲ್ಲಿ ಅವರು ದುಡಿದುದು ಹಾಗೂ ಅವರ ಸಾಧನೆಯ ತಪಶ್ಚರ್ಯೆಯ ಕಥೆ 'ದಂತ ಕಥೆ' ಎಂಬಂತೆ ಇಂದು ಕಂಡರೂ ಅಂದಿನ ದಿನಗಳಲ್ಲಿ ಅವರನ್ನು ಬಲ್ಲವರ ಎದೆಯನ್ನು ಝಲ್ಲೆನ್ನಿಸುವುದು ಸತ್ಯ.

ಅವರು ಶುದ್ಧ ರಾಷ್ಟ್ರೀಯವಾದಿ, ಗಾಂಧೀ ಭಕ್ತ, ರಾಷ್ಟ್ರಪ್ರೇಮಿಯಾಗಿದ್ದರು. ಸ್ವಾತಂತ್ರ್ಯದ ಅನಂತರ ಅವರಿಗಿದ್ದ ಆಸೆ ಈ ಕವನದಲ್ಲಿ ಮೂಡಿ ಬಂದಿದೆ.

ಕಟ್ಟೋಣ ಹೊಸ ನಾಡ ಕಟ್ಟೋಣ ಬಾ
ಕಟ್ಟುತ್ತ ನಲಿಯುತ್ತ ಕುಣಿಯೋಣ ಬಾ
ನಾನಾವ ಜಾತಿಯೋ ನೀನಾವ ಜಾತಿಯೋ
ಎಂದು ಬೇಸರಿಸದಿರು ಒಂದಾಗುವಾ
ಆ ಜಾತಿ ಈ ಜಾತಿ ಎಂದು ಕೂಗುವ ಜನರ
ಸುಮ್ಮನಾಗಿರಿಸೋಣ ಒಂದಾಗು ಬಾ
ಪೂಜ್ಯ ಬಾಪು ಕಂಡ ರಾಮ ರಾಜ್ಯದ ಕನಸ
ನನಸಾಗಿ ಮಾಡೋಣ ನಲಿದಾಡಿ ಬಾ

ಎಳವೆಯಲ್ಲೇ ತೀರಿಕೊಂಡ ಪ್ರತಿಭಾವಂತ ಯರ್ಮುಂಜರು ಉತ್ತಮ ಸಾಹಿತಿಯಾಗಿ ಬೆಳೆದಿದ್ದಾರೆ.

ರಸಿಕ ಕವಿ ಗಣಪತಿ ಮೊಳೆಯಾರ

ವಿದ್ಯಾರ್ಥಿಯಾಗಿದ್ದಾಗಲೇ ಕಾದಂಬರಿಯೊಂದನ್ನು ಬರೆದು ಜನರ ಮನಸ್ಸನ್ನು ಸೆಳೆದ ಗಣಪತಿ ಮೊಳೆಯಾರರು ತಮ್ಮ ಅನುಭವದ ಲೇಖನ ಶಕ್ತಿಯನ್ನು ಬೆಳೆಸಿಕೊಳ್ಳುತ್ತಲೇ ಮೇಲೇರಿದರು. ಅಧ್ಯಾಪಕ ವೃತ್ತಿಗೆ ಕಾಲಿಟ್ಟು ಉತ್ತಮ ಅಧ್ಯಾಪಕರಾಗಿ ಹೆಸರು ಪಡೆದು ಸಾಹಿತ್ಯದ ಅಭಿರುಚಿಯನ್ನು ಬೆಳೆಸಿಕೊಂಡರು. ಮತ್ತೆ ಅಧ್ಯಾಪಕ ವೃತ್ತಿಯನ್ನು ತ್ಯಜಿಸಿ ಜೀವ ವಿಮಾ ಇಲಾಖೆಯಲ್ಲಿ ಆಫೀಸರರಾಗಿ ಕೆಲಸ ಮಾಡಿದರು. ಇವರ ಸಾರ್ವಜನಿಕ ಬದುಕು ಜೀವ ವಿಮೆಯ ಕ್ರತು ಶಕ್ತಿಯನ್ನು ಬಲ್ಲವರಿಗೆ ಅವರ ಸಾಹಿತ್ಯದ ವಿಚಾರ ತಿಳಿದಿರಲಿಲ್ಲವೋ ಏನೋ. ಅಂತೂ ಅವರು ನಿರಂತರ ಸಾಹಿತ್ಯ ಚಿಂತನೆ ಮಾಡುತ್ತಿದ್ದರು. ವ್ಯವಸಾಯದಲ್ಲಿ ಹಿಂದುಳಿಯಲಿಲ್ಲ ಎಂಬುದು ಅವರನ್ನು ನಿಕಟದಿಂದ ಬಲ್ಲ ನನ್ನಂಥವರಿಗೆ ಗೊತ್ತು.

ವೈಜಯಂತಿ ಅವರ ಕವಿತಾ ಸಂಕಲನ, ಇದರಲ್ಲಿರುವ ಪ್ರೇಮ ಗೀತೆಗಳು ಬಹಳ ಸುಂದರವಾಗಿವೆ. ಸರಸ - ಸರಳ - ಸುಂದರ ನಿರೂಪಣೆ ಕವನಗಳ ವಿಶೇಷತೆ. ಕವಿ ಎಲ್ಲಿಯೂ ಜಗ್ಗುವುದಿಲ್ಲ. ಪ್ರಣಯದ ಬಿಂಕವನ್ನು ಬಿತ್ತರಿಸುವಲ್ಲಿ ಆ ಕವಿಯ ಮನೋಧರ್ಮ ವಿಶಾಲವಾಗಿದೆ. ರಸಿಕ ಚಿತ್ತವೃತ್ತಿ ಮಾಗಿ ನಳನಳಸಿದೆ. 'ಕೋಪಿನಿ'ಯನ್ನುದ್ದೇಶಿಸಿ ಕವಿಯಾಡುವುದನ್ನು ನೋಡಿ ;

"ಮೂಗಿಂದ ಹೊರಡಿಸುವ ನಿಟ್ಟುಸಿರ ಮಾಲೆ
ನಿನ್ನ ಕಣ್ಣಾಲಿಗಳು ಸಿಟ್ಟಿನುರಿ ಜ್ವಾಲೆ
ನೀನು ಸೇರಲು ಕೋಪ ಗೃಹವ ಮನದನ್ನೆ
ಎನ್ನ ಪ್ರತಾಪಕ್ಕೆ ಬರೆಸುತ್ತು ಸೊನ್ನೆ"

ಮಡದಿ ಕೋಪ ತಳೆದಾಗ ಕವಿ ಬಾಲ ಮಡಚುವ ಮೂಲಕ ಅವಳ ಸಿಟ್ಟನ್ನು ತಣಿಸುವ ಬಗೆಯನ್ನು ನೋಡಬಹುದು.

"ನಿನ್ನ ನೋಡಲು ಹೆಣ್ಣೆ
ಚೆನ್ನ ಕಿತ್ತಳೆ ಹಣ್ಣೆ
ಸ್ವರ್ಣ ಸುಂದರ ಕಣ್ಣನೋಟ
ಹೊರಗೂಡು ಅತಿಖಾರ
ಒಳನೋಡು ಮೃದು ಮಧುರ
ಸ್ವರ್ಗ ಬಂಧದ ಕಣ್ಣನೋಟ
ನೋಡಿದರೆ ಹುಳಿ ಹೆಮ್ಮೆ
ಕಾಡಿದರೆ ಕಹಿಯೊಮ್ಮೆ
ಬರೆ ಕಣ್ಣ ಮುಚ್ಚಾಲೆಯಾಟ
ನೀಡಿದರೆ ಸವಿತುತ್ತು
ಕೂಡಿದರೆ ಸಂಪತ್ತು
ಕರೆಗಣ್ಣು ಮುಚ್ಚಾಲೆಯಾಟ."

ಹೆಣ್ಣಿನ ಕುರಿತು ಕವಿ "ಕಾಮ ಕಣ್ಣಿಗೆ ಕೊರಡು, ಪ್ರೇಮ ಕಣ್ಣಿಗೆ ಹರಡು, ಹೃದಯದಾ ವಿಸ್ಮರಣ ಭೇಟಿ" ಎಂಬ ಅಭಿಪ್ರಾಯವನ್ನು ಚಿತ್ರಿಸುವ ಪರಿಯನ್ನು ಕಾಣಬಹುದು. 'ಪ್ರೇಮದ ಪ್ರಶ್ನೆಗುತ್ತರ'ವನ್ನು ಮಗುವಿನಲ್ಲಿ ಕಾಣುವ ಲಹರಿ ಹೀಗೆ ಸಾಗುತ್ತದೆ.

"ಇವನು ಮೊಳಗುವ ಪಾಂಚಜನ್ಯ
ಎಮ್ಮ ಬಾಳಿಗೆ ಸರ್ವ ಮಾನ್ಯ
ಕೇಳದಿದ್ದರೆ ಸರ್ವ ಶೂನ್ಯ
ಇವನ ಹೊಂದಿದ ನಾವು ಧನ್ಯ
ಹೊಳೆವ ಕಂಗಳು ಕಾಂತಿ ಬೀರೆ
ಬಾನು ತುಂಬಾ ಮಿನುಗು ತಾರೆ

ಕಾಕುನುಡಿ ಮೃದು ಮಂದಹಾಸ್ಯ
ಯಾರು ಬರೆವರು ಅದಕೆ ಭಾಷ್ಯ ?
ಎಮ್ಮ ಪ್ರೇಮದ ಬಾಳ ನೌಕೆ
ಗೆತ್ತಿ ಹಾರುವ ಬಿಳಿ ಪತಾಕೆ
ಎಮ್ಮ ಪ್ರೇಮದ ಪ್ರಶ್ನೆಗುತ್ತರ
ಸಿಗುವದೀ ಎಳೆ ಮರಿಯ ಹತ್ತಿರ"

'ನಮ್ಮೂರ ಸುಂದರಿಯರು' ಕವಿಯ ರಸಿಕ ಚಿತ್ತ ವೃತ್ತಿಯ ಪ್ರತಿಫಲನದಂತಿದೆ.

"ಶಾಲೆಯಧ್ಯಾಪಕಿಯು ಮಂಗಳೂರಿನ ಮೇರಿ
ನಮ್ಮೂರಿನಲ್ಲಿ ಈಗ ಅವಳ ಜಯಭೇರಿ
ಇಪ್ಪತ್ತಮೂರು ವರ್ಷದ ನೀಳ ಸುಂದರಿಯು
ಕುಡಿ ಮೀಸೆ ಯುವಕರಿಗೆ ಎದೆಯೊಲೊಂದುರಿಯು"

ನವ ಯುವಕರಲ್ಲಿ ಎದೆಯುರಿಯನ್ನು ಹೆಚ್ಚಿಸುವ ಬೆಡಗಿಯ ಬಣ್ಣನೆಯಿಂದ ಕವಿ ರಸಿಕರನ್ನು ರಚಿಸಿದ್ದಾರೆ.

ಕೃತಕ ಶೃಂಗಾರವನ್ನು ಕವಿ ಹೀಗೆ ವಿಡಂಬಿಸುತ್ತಾರೆ.

ಏಕೆ ನಿನಗೀ ಹುಚ್ಚು, ಈ ಬೂದಿ ಬಣ್ಣ ?
ನನಗಚ್ಚುಮೆಚ್ಚು ನೀ - ಮುಚ್ಚದಿರು ಕಣ್ಣ
ನಿನ್ನ ಕಣ್ಮಿಂಚು ಕೆಂದುಟಿಗಳ ಸಹವಾಸ
ಪ್ರೇಮಮಯಿ, ಬಿಡು ಕೃತಕ ಶೃಂಗಾರಕೋಶ

ದಾಂಪತ್ಯದ ಬಗೆಗೆ ಕವಿಯ ಆಶಯ ಹೀಗಿದೆ :

ಗಂಡ ಹೆಂಡತಿಯೆಂಬ ಈ ಎರಡು ಗಾಲಿ
ಹೂಡದಿರೆ ನಮ್ಮಿಡೀ ಜೀವನವೇ ಖಾಲಿ
ಬಂಡಿ ಹೂಡಿದ ಬಳಿಕ ಎಷ್ಟೆಷ್ಟೊ ಭಾರ
ಎಳೆಯಲೇ ಬೇಕದುವೆ ಸಂಸಾರ ಸಾರ

ಕವಿ ಪ್ರೇಮಿಗಳ ಬಗೆ - ಅವರ ರಾಗಗಳ ಬಗ್ಗೆ ಹೀಗೆ ಹಾಡಿದ್ದಾರೆ.

"ಕವಿಗಳೆಲ್ಲರಿಗಂಟಿದರೆ ಪ್ರೇಮರಾಗ
ಜಗ ತುಂಬಿ ತುಳುಕುವುದು ಸೌಂದರ್ಯ ರಾಗ
ಪ್ರೇಮಿಗಳಿಗಂಟಿದರೆ ಕಬ್ಬಿಗರ ಹುಚ್ಚು

ಮಸಿ, ಕಾಗದಗಳಿಗಾಗುವುದು ಬೆಲೆ ಹೆಚ್ಚು"
"ಜಯದೇವ ಕವಿಯೊರೆದ ಗೀತ ಗೋವಿಂದ
ಕಾಳಿದಾಸನ ಸ್ವರ್ಗ - ಧರೆಯೊಲುಮೆ ಬಂದ
ಈ ಮೂಕ ಮನದ ತಂತಿಯ ಮಿಡಿದುದಕ್ಕೆ
ಮಹಾಚೇತನರಿಗಿದು ಕಾಣ್ಕೆಯಕ್ಕೆ"

ಕವಿಯ ಮನಮಿಡಿದು ಕಾವ್ಯದ ಕೋಡಿ ಹರಿದು ಹಿರಿಯ ಚೇತನದಲ್ಲಿ ಲೀನವಾದುದು ಆದರಣೀಯವಾಗುತ್ತದೆ.

ಸಂಸ್ಕೃತ ಕವಿ ಮಾಘನನ್ನು ಅರ್ಥ ಮಾಡುವ ವಿದ್ವಾಂಸರು ವಿರಳ. ಮಾಘೇ, ಮೇಘೇ ಗತಂ ವಯಃ ಮಾಘನ ಕಾವ್ಯದ ಓದಿನಲ್ಲಿ ಕಾಳಿದಾಸನ ಮೇಘದೂತನ ಓದಿನಲ್ಲಿ ವಯಸ್ಸು ಕಳೆದುದೇ ಗೊತ್ತಾಗುವುದಿಲ್ಲವೆಂಬ ಮಾತು ಹಿಂದಿನವರದು. ಅಂಥ ಮಹಾ ಕವಿ ಮಾಘನ ಶಿಶುಪಾಲವಧದ ಅನುವಾದವನ್ನು ಮಾಡಲು ಶ್ರೀಯುತರು ತೊಡಗಿದ್ದರು. 'ರೈವತಕಗಿರಿ ವರ್ಣನೆ' ಎಂಬ ನಾಲ್ಕನೆಯ ಸರ್ಗವೊಂದನ್ನು ಪ್ರಥಮ ಪ್ರಯತ್ನವಾಗಿ ಮಾದರಿಗಾಗಿ ಪ್ರಕಟಿಸಿದ್ದರು. ಅದು ಎಲ್ಲಿವರೆಗೆ ಸಾಗಿದೆ ಎಂದು ತಿಳಿದಿಲ್ಲ. ಆ ಮೊದಲೇ ಕವಿ ಇಲ್ಲವಾದರು. ಅವರ ಕಾವ್ಯದ ಸೊಗಸು-ಹೊಳಪು ಬೆಳಗಿದೆ ಎಂಬುದು ಸತ್ಯ.

ಮಾತೃ ಸಂಹಿತೆಯ
ಗುಂಡ್ಮಿ ಚಂದ್ರಶೇಖರ ಐತಾಳ

ಮನೆಯ ಹೆಂಗಸರೆಲ್ಲ ನಡುಬಾಗಿ ನೀರಿಟ್ಟು
ಹೊಸ್ತಿಲಿಗೆ ಹೂವಿಟ್ಟು ಬೆಳಗಾಯಿತು.
ಮನೆಯಾಕೆ ದರಬರನೆ ಮೊಸರನ್ನು ಕಡೆವಾಗ
ಕಂಕಣದ ಕಿಂಕಿಣಿಗೆ ಬೆಳಗಾಯಿತು.

ಬೆಳಗಾಯಿತು ಎಂಬುದನ್ನು ತಿಳಿಸುವ ಕವಿ ಐತಾಳರು ಹಳೆಗಾಲದ ಹಳ್ಳಿ ಮನೆಗಳ ಸೊಗಸನ್ನು ಚೆನ್ನಾಗಿ ಪರಿಚಯಿಸಿದ್ದಾರೆ.

'ನನ್ನ ಮಾವನ ಮಗಳು ನನಗೆಂದು ಬೆಳೆದವಳು
ಅತ್ತೆ - ಮಾವರ ಮನೆಯಲ್ಲಿ

ಬಾಲ್ಯದಲಿ ಕಣ್ಣುಮುಚ್ಚಾಲೆಯಾಟದಲಂದು

ಈ ಮಗಳು ಇವಗೆಂದರು"

ಇಂಥ ಸರಳ ಭಾವನೆಯ ಕವಿಯು ಮುಗ್ಧರಾಗಿ ಹಾಡಿರುವ ಪರಿಗ್ರಾಹ್ಯವಾಗಿದೆ. ಶ್ರೀ ಗುಂಡ್ಮಿಯವರು ಕವಿಗಳು, ವಿಚಾರವಾದಿಗಳು, ಜಾನಪದ ಅಭ್ಯಾಸಿಗಳು, ಯಕ್ಷಗಾನದ ಪರಿಶ್ರಮ - ಅನುಭವ ಗಳಿಸಿಕೊಂಡವರು. ಹೀಗೆ ವಿವಿಧ ಮುಖಗಳಿಂದ ಸಾಹಿತ್ಯ ಸೇವೆ ನಡೆಸಿದವರು. ಅವರ ಕೃತಿಯ ತತ್ವ ಅಮೋಘ, ಅವರ ಬಗ್ಗೆ ಪ್ರೊ. ಎಸ್. ವಿ. ಪರಮೇಶ್ವರ ಭಟ್ಟರ ಈ ಮಾತುಗಳು ಸಾಕಷ್ಟು ಬೆಳಕು ಚೆಲ್ಲುತ್ತವೆ.

"ಶ್ರೀ ಗುಂಡ್ಮಿಯವರು ಬಗೆ ಬಗೆಯ ಕೃತಿಗಳನ್ನು ರಚಿಸಿದ್ದಾರೆ. ಅವರು ಜಾನಪದ ಸಾಹಿತ್ಯದಲ್ಲಿ ತಜ್ಞರಾದವರು. ಯಕ್ಷಗಾನದಲ್ಲಿ ಅವರಿಗೆ ಆ ಕಲೆಯ ಪಾಂಡಿತ್ಯಕ್ಕೆ ಸಂಬಂಧಿಸಿದ ಆಳವಾದ ಪರಿಶ್ರಮವಿತ್ತು. ಅವರು ಬರೆದ 'ಗುಂಡು ಸೂಜಿ' ಮತ್ತು 'ಮಾತ್ರ ಸಂಹಿತೆ' ಎಂಬ ಎರಡು ಕೃತಿಗಳು ನನ್ನನ್ನು ಸಂಪೂರ್ಣವಾಗಿ ಸೆರೆಹಿಡಿದಿವೆ. ನಾಡಿನ ಉದ್ದಗಲಗಳಲ್ಲಿ ಅವರು ಕನ್ನಡದ ಡಿಂಡಿಮವನ್ನು ಭಾರಿಸಿದ್ದಾರೆ. ನಿರ್ಭಯವಾಗಿ ತಮಗೆ ತೋಚಿದುದನ್ನು ಬರೆಯುವ ಹೇಳುವ ಸಾಹಸ ಧೈರ್ಯ ಅವರಲ್ಲಿದ್ದವು. "ಪರಮೇಶ್ವರ ಭಟ್ಟರು ಹೇಳುವಂತೆ ಗುಂಡ್ಮಿಯವರು ಉತ್ತಮ ವ್ಯಕ್ತಿತ್ವ ಹೊಂದಿದ ಸಾಹಿತಿ. 'ಬೆಳಗಾಯಿತು' ಎಂಬ ಸಂಕಲನದಲ್ಲಿ ಪ್ರಕೃತಿ, ಶೃಂಗಾರಗಳನ್ನು ಅವರು ಬಣ್ಣಿಸಿದ್ದಾರೆ. 'ಹೂವಿನ ಕೋಲು' ವಿಡಂಬನ ಕಾವ್ಯವಾಗಿದೆ. 'ಪಟಾಬಾರ'ದಲ್ಲಿ ಕವನಗಳನ್ನು ತುಂಬಿದ್ದಾರೆ. ಉತ್ತಮ ರಮ್ಯ ಮಧುರ ಕವನಗಳನ್ನು ರಚಿಸಿದ ಕವಿಯಾಗಿದ್ದಾರೆ.

ಗುಂಡ್ಮಿಯವರು ಸಾಂತ್ಯಾರು ವೆಂಕಟರಾಜ, ಬೆಳಕಿನ ಬೀಜ ಎಂಬ ಎರಡು ವ್ಯಕ್ತಿ ಚಿತ್ರದ ಪುಸ್ತಕಗಳನ್ನು ಬರೆದಿದ್ದಾರೆ. ಶ್ರೀ ಪಾಂಡೇಶ್ವರರ ಜೀವನ ವೃತ್ತವನ್ನು 'ಬೆಳಕಿನ ಬೀಜ' ಚಿತ್ರಿಸಿದೆ.

ಸಹೃದಯ ಲೇಖಕ
ಮುಳಿಯ ಕೃಷ್ಣ ಭಟ್ಟರು

ಕನ್ನಡದ ಪ್ರಸಿದ್ಧ ಕವಿ ಪಂಡಿತ ಮುಳಿಯ ತಿಮ್ಮಪ್ಪಯ್ಯನವರ ಕುಟುಂಬಕ್ಕೆ ಸೇರಿದ ಮುಳಿಯ ಕೃಷ್ಣ ಭಟ್ಟರು ಒಬ್ಬ ಸಹೃದಯ ಸಾಹಿತಿ. ನಾಡಿನ ಹಿರಿಯ ಸಾಹಿತಿಗಳಾಗಿದ್ದ ತರಾಸು, ಅಡಿಗ ಮೊದಲಾದವರ ಅಚ್ಚುಮೆಚ್ಚಿನ ಮಿತ್ರರಾಗಿ ಪುತ್ತೂರಿನಲ್ಲಿ ತಮ್ಮ ಮನೆತನದ ಕಸುಬಾದ ಚಿನ್ನಾಭರಣಗಳ ಮಳಿಗೆಯನ್ನು ನಡೆಸುವುದರೊಂದಿಗೆ ಹತ್ತು ಹಲವು ಸಂಘ ಸಂಸ್ಥೆಗಳಲ್ಲಿ ಸಕ್ರಿಯವಾಗಿ ದುಡಿಯುತ್ತಿದ್ದವರು ಕೃಷ್ಣ ಭಟ್ಟರು. ಜನಪ್ರಿಯ ಸಾಹಿತ್ಯ ಎಂಬ ಪ್ರಕಾಶನ ಸಂಸ್ಥೆಯನ್ನು ನಡೆಸಿಕೊಂಡು ಬಂದ ಉತ್ಸಾಹಿ, ಪ್ರಕಾಶಕರಾಗಿ ಲೇಖಕರಾಗಿ ಕನ್ನಡದ ಕಾಯಕವನ್ನು ನಡೆಸಿದ್ದಾರೆ.

ಅವರು ಬರೆದ ಹತ್ತಾರು ಲೇಖನಗಳು ವಿವಿಧ ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ಪ್ರವಾಹದಲ್ಲಿ ಪ್ರತಿಬಿಂಬ ಎಂಬ ಕಥಾ ಸಂಕಲನವು ಅವರ ಚೊಚ್ಚಲ ಕೃತಿಯಾಗಿ ಪ್ರಕಟವಾಗಿದೆ. 'ಹುಚ್ಚು ಹೊಳೆ' ಎಂಬ ಕಾದಂಬರಿಯನ್ನು ಅವರು ಬರೆದಿದ್ದರೂ ಅದು ಅವರ ಮರಣಾನಂತರ ಪ್ರಕಟವಾಯಿತು. 'ಮುಂಗಾರು ಮುಗಿಲು' ಇನ್ನೊಂದು ಮುಖ, ರೂಪರಾಶಿಗಳ ಸಂತೆ, ಅಡಿಗರ ಚೆಂಡೆ ಮದ್ದಳೆ ಎಂಬ ಕವನ ಸಂಕಲನವನ್ನು ಪ್ರಕಟಿಸಿದ ಕೀರ್ತಿ ಶ್ರೀ ಮುಳಿಯರ 'ಜನಪ್ರಿಯ ಸಾಹಿತ್ಯ ಪ್ರಕಾಶನ ಸಂಸ್ಥೆಗೆ ಸೇರಿದ್ದು.

ಪುತ್ತೂರಿನಲ್ಲಿ ಶಿವರಾಮ ಕಾರಂತರ ಚಟುವಟಿಕೆಗಳು ಜೋರಾಗಿದ್ದ ದಿನಗಳಲ್ಲಿ ಮುಳಿಯರು ಅವರ ಆತ್ಮೀಯರಾಗಿದ್ದು ಅನುಭವ ಹೊಂದಿದರು. ಹಲವಾರು ಸಂಘ ಸಂಸ್ಥೆಗಳಲ್ಲಿ ದುಡಿದರು. ಸಾಹಿತ್ಯದಲ್ಲಿ ಆಸಕ್ತರಾದ ಗೆಳೆಯರೊಂದಿಗೆ ಆತ್ಮೀಯವಾಗಿ ವ್ಯವಹರಿಸುತ್ತಿದ್ದರು. ಉತ್ತಮ ಸಾಂಸಾರಿಕ ಜೀವನವನ್ನು ನಡೆಯಿಸಿಕೊಂಡು ಸಾಹಿತ್ಯದ ಸವಿಯಿಂದ ಬಾಳಿನಲ್ಲಿ ಮಾಧುರ್ಯವನ್ನು ಸವಿದವರು. ಸಮಕಾಲೀನ ಸಾಹಿತಿಗಳ ಆದರಣೀಯ ಮಿತ್ರರಾಗಿ ಪುತ್ತೂರು ಕರ್ನಾಟಕ ಸಂಘದ ಸಕ್ರಿಯ ಕಾರ್ಯಕರ್ತರಾಗಿ ದುಡಿದು ಚಿರಸ್ಮರಣೀಯರಾಗಿದ್ದಾರೆ. ಹೆಸರಾಂತ ಕಾದಂಬರಿಗಾರ್ತಿ 'ಗಂಗಾ ಪಾದೇಕಲ್' ಇವರ ಸೋದರಿಯಾಗಿ ಅವರ ನೆನಹನ್ನು ಉಳಿಸಿದ್ದಾರೆ.

ಸಾಹಿತ್ಯ ಸೇವಕರಾಗಿ
ಕೈಂತಜೆ ಗೋವಿಂದ ಭಟ್ಟರು

ಶ್ರೀಮಂತ ಮನೆತನದಲ್ಲಿ ಜನಿಸಿದರೂ ಜನಪರ ಕಾಳಜಿ ಸಾಹಿತ್ಯದ ಒಲವುಗಳಿಂದಾಗಿ ಕೈ ಕೈಂತಜೆ ಗೋವಿಂದ ಭಟ್ಟರು ಎಲ್ಲರಿಗೂ ಬೇಕಾದ ವ್ಯಕ್ತಿಯಾಗಿದ್ದರು. ಮದ್ರಾಸಿನಲ್ಲಿ ಅವರು ಕಾನೂನು ಪದವಿಗಾಗಿ ಓದುತ್ತಿದ್ದ ವೇಳೆ ಪ್ರೊ. ಮರಿಯಪ್ಪ ಭಟ್ಟರ ನೆರಳಿನಲ್ಲಿ ಕಾರ್ಯವೆಸಗುತ್ತಿದ್ದು ಕನ್ನಡ ಸಂಘದ ಕಾರ್ಯದರ್ಶಿಯಾಗಿ ಸಾಹಿತ್ಯದ ಗೀಳನ್ನು ಹೆಚ್ಚಿಸಿಕೊಂಡು ವಕೀಲರಾಗಿದ್ದುಕೊಂಡೇ ಸಾಹಿತ್ಯದ ಕೃಷಿಯನ್ನು ನಡೆಸಿಕೊಂಡು ಬಂದವರು. ಆಗಾಗ ಕಥೆ, ಕವನ, ಲೇಖನಗಳನ್ನು ವಿವಿಧ ಪತ್ರಿಕೆಗಳಲ್ಲಿ ಬರೆಯುತ್ತಿದ್ದರು. ಚೆನ್ನಕೇಶವ, ಸುದರ್ಶನ, ಕೈಂತಜೆ, ಗೋ ಎಂಬ ನಾನಾ ಗುಪ್ತ ನಾಮಗಳಿಂದ ಅವರು ಬರೆಯುತ್ತಿದ್ದರು. ಹೀಗೆ ಅವರ ಬರವಣಿಗೆ ಒಳ್ಳೆಯ ದಾರಿಯಲ್ಲಿ ಸಾಗಿ ಅವರಿಗೆ ಸಂತೃಪ್ತಿಯೊದಗಿಸಿತ್ತು. ಸಾಹಿತ್ಯ ಚಟುವಟಿಕೆಗಳಲ್ಲಿ ಆಸಕ್ತರಾಗಿ ಅವರು ಕಾರ್ಯವೆಸಗುತ್ತಿದ್ದರು. ಅವರ 'ಕಾಳಿಗೆ ಕಾಣಿಕೆ' ಎಂಬ ಹೆಸರಿನ ಕಥಾಸಂಕಲನವೊಂದನ್ನು ರಾ. ಮೋ. ವಿಶ್ವಾಮಿತ್ರ ಅವರು ಪ್ರಕಟಿಸಿದರು. ಗೋವಿಂದ ಭಟ್ಟರ ಕಥೆಗಳು ಒಳ್ಳೆಯ ಹೆಸರು ಪಡೆದವು. 'ಚಿರಪರಿಚಿತ' ಎಂಬ ವಿಡಂಬನಾತ್ಮಕ ಕೃತಿಯಿಂದ ಅವರು ಉತ್ತಮ ವಿಡಂಬನಕಾರರ ಸಾಲಿಗೆ ಸೇರಿ ಖ್ಯಾತರಾದರು. ವಿಜಯನಗರದ ವೈಭವವೆಂಬ ಗ್ರಂಥ ರಚನೆಯನ್ನು ಅವರು ಪ್ರಾರಂಭಿಸಿದ್ದಾರೆಂದೂ ಕಾದಂಬರಿಯೊಂದನ್ನು ಬರೆಯಲು ಪ್ರಾರಂಭಿಸಿ ಮೂವತ್ತಾರು ಅಧ್ಯಯನಗಳ ತನಕ ರಚಿತವಾಗಿ ಅರ್ಧದಲ್ಲಿಯೇ ನಿಂತಿದೆಯೆಂದೂ ಅವರ ಚಿಕ್ಕಪ್ಪನ ಮಗ ಕೈಂತಜೆ ನರಸಿಂಹ ಭಟ್ಟರು ಹೇಳುತ್ತಾರೆ. ಅಂತೂ ಪ್ರತಿಭಾವಂತ ರಸಿಕ ಹೃದಯದ ಶ್ರೀಮಂತಿಕೆಯ ವ್ಯಕ್ತಿ ಗೋವಿಂದ ಭಟ್ಟರು ಇಂದು ನೆನಪಾಗಿ ಉಳಿದಿದ್ದಾರೆ.

ವಿಮರ್ಶಕ ಸಂಶೋಧಕ
ಕೆ. ವೆಂಕಟರಾಯಾಚಾರ್ಯ

ವೆಂಕಟರಾಯಾಚಾರ್ಯರ ಹೆಸರು ಸಾಹಿತ್ಯ ವಿಮರ್ಶೆ - ಸಾಹಿತ್ಯ ಸಂಶೋಧನೆಯ ಮಾರ್ಗದಲ್ಲಿ ದಾಖಲೆಯಾಗಿ ಉಳಿಯುವಂಥದ್ದು. ಅವರೊಬ್ಬ ಹಠವಾದಿ ಸಾಧಕ. ಕನ್ನಡದ ತಪಸ್ಸನ್ನು ಶ್ರದ್ಧಾ ಭಕ್ತಿಗಳಿಂದ ಆಚರಿಸಿದ ಕರ್ಮಯೋಗಿ.

ಸಾಹಿತ್ಯ ಸಮುಚ್ಚಯ ಅವರ ವಿಮರ್ಶಾತ್ಮಕ ಕೃತಿ. ಸಾಹಿತ್ಯದ ನಾನಾ ವಿಚಾರಗಳನ್ನು ಎತ್ತಿಕೊಂಡು ಹಲವಾರು ಬರೆಹಗಳನ್ನು ಒಗ್ಗೂಡಿಸಿ ರಚಿಸಿದ ಈ ಕೃತಿಯನ್ನು ಅವರೇ ಪ್ರಕಟಿಸಿರುತ್ತಾರೆ. ಸಂಶೋಧನೆಯಲ್ಲಿಯೂ ಅವರು ತಮ್ಮನ್ನು ತೊಡಗಿಸಿಕೊಂಡಿದ್ದರು. ಗೋವಿಂದ ಪೈಗಳ ದಾರಿಯಲ್ಲಿ ಸಾಗ ಬಯಸುವ ವ್ಯಕ್ತಿಯಾಗಿ ಅವರು ಜಿಲ್ಲೆಯಲ್ಲಿ ಎರಡನೆಯವರಾಗಿದ್ದಾರೆ. ತಿಥಿ, ವಾರ, ನಕ್ಷತ್ರಗಳು, ಪ್ರಾಚೀನ ಕಾವ್ಯದ ಅಧ್ಯಯನಗಳ ಮೂಲಕ ಗವೇಷಣೆಗೆ ತೊಡಗುವ ಆಚಾರ್ಯರ ಪಟ್ಟು ಸಡಿಲವಾಗುವಂಥದಲ್ಲ. ತರ್ಕ ಕರ್ಕಶರಾಗಿ ಅವರು ಗೋಚರಿಸುತ್ತಾರೆ. ವಾದ ಮಂಡನೆಯಲ್ಲಿ ನೂತನ ವಿಚಾರಧಾರೆಗಳನ್ನು ಪ್ರತಿಪಾದಿಸುತ್ತಾರೆ. 'ಶುಕಸಪ್ತತಿಯಲ್ಲಿ ರಾವಣನ ಕಥೆ'ಯಂಥ ಹಲವಾರು ಲೇಖನಗಳನ್ನು ಅವರು ಬರೆದಿದ್ದಾರೆ. ಹಸ್ತಪ್ರತಿ - ತಾಡವಾಲಗಳನ್ನು ಕಲೆ ಹಾಕಿದ್ದಾರೆ. ಶಾಸನಗಳನ್ನೋದಿದ್ದಾರೆ. ತಾಮ್ರ ಪತ್ರಗಳನ್ನು ವಾಚಿಸಿದ್ದಾರೆ. ತಿಥಿ, ಸಂವತ್ಸರಗಳ ಕೋಷ್ಟಕ ಸಿದ್ಧ ಪಡಿಸಿ ಲೆಕ್ಕ ಹಾಕಿದ್ದಾರೆ. ನೆಮ್ಮದಿಯ ಉಸಿರನ್ನು ಎಂದೂ ಬಿಟ್ಟವರಲ್ಲ. ನಾಡಿನ ಎಲ್ಲೆಡೆ ಪತ್ರ ವ್ಯವಹಾರ, ಗ್ರಂಥ ಸಂಗ್ರಹ, ಅನವರತ ಓದು ಅವರ ಜಾಯಮಾನವಾಗಿ ಹೋಗಿದೆ. ನಿತ್ಯವೂ ತಲೆಕೆರೆದುಕೊಳ್ಳುವ ಹತ್ತಾರು ವಿಚಾರಗಳ ಸುಳಿಗಳಲ್ಲಿ ಮುಳುಗಿಕೊಂಡಿರುತ್ತಿದ್ದ ವೆಂಕಟರಾಯಾಚಾರ್ಯರು ಒಬ್ಬ ಛಲಗಾರ, ಸಾಹಸಿ, ಬರಹಗಾರ - ಸಂಶೋಧಕರಾಗಿ ಕಾಣಿಸಿಕೊಂಡಿದ್ದಾರೆ.

ಶ್ರೀ ಪರಕ್ಕಜೆ ಶಂಭು ಭಟ್ಟರು

ಪ್ರಸಿದ್ಧ ವಿದ್ವಾಂಸರ ಕುಟುಂಬವಾದ ಪರಕ್ಕಜೆಯಲ್ಲಿ ಜನಿಸಿದ ಶ್ರೀಯುತರು ಕನ್ನಡ ಸಂಸ್ಕೃತ ಭಾಷೆಗಳೆರಡರಲ್ಲಿಯೂ ಅಪ್ರತಿಮ ಪಂಡಿತರಾಗಿದ್ದರು. ಜ್ಯೋತಿಶ್ಶಾಸ್ತ್ರ - ಧರ್ಮಶಾಸ್ತ್ರ - ವ್ಯಾಕರಣಗಳಲ್ಲಿ ಇವರು ಅದ್ವಿತೀಯ ಪ್ರಭುತ್ವ ಹೊಂದಿದ್ದರು. ಈ ವಿಚಾರಗಳಿಗೆ ಸಂಬಂಧಿಸಿದ ಯಾವುದೇ ಅಂಶವನ್ನು 'ಇದಮಿತ್ಥಂ' ಎಂಬುದಾಗಿ ಇವರು ಸಾಧಾರವಾಗಿ ಪ್ರತಿಪಾದಿಸ ಬಲ್ಲವರಾಗಿದ್ದರು. ಶ್ರೀ ವೈಜಯಂತಿ ಪಂಚಾಂಗದ ಸಹಸಂಪಾದಕರಾಗಿ ಇವರು ದೃಕ್ ಸಿದ್ಧಾಂತದ ನಿಲುವನ್ನು ಶಾಸ್ತ್ರಾಧಾರಗಳನ್ನು ಪ್ರತಿಪಾದಿಸಿದ್ದರು. ದೃಕ್ ಸಿದ್ಧಾಂತವನ್ನು ಪ್ರತಿಪಾದಿಸುವ ಮಹತ್ವದ ಕೃತಿಯನ್ನು ಅವರು ರಚಿಸಿದ್ದರು.

ಉಪನಯನ ಸಂಸ್ಕಾರ, ನವರಾತ್ರದ ಮಹತ್ವ ಮೊದಲಾದ ಬರೆಹಗಳು ಇವರ ನಿಚ್ಚಳವಾದ ಖಚಿತವಾದ ವಿಚಾರಗಳನ್ನು ತಿಳಿಸಿವೆ. ವಾಙ್ಮಯ ತಪಸ್ಸು ಇವರ ಉತ್ಕೃಷ್ಟ ಕೃತಿಯಾಗಿದೆ. ಮಾತು ಮತ್ತು ಆಚರಣೆಗಳ ಮಹತ್ವ ಈ ಗ್ರಂಥದ ಸಾರಾಂಶ ! ಇದೊಂದು ಮಹತ್ವ ಪೂರ್ಣ ಗ್ರಂಥ ! ಮದ್ರಾಸ್ ಸರಕಾರವು ಇದನ್ನು ಪಠ್ಯ ಪುಸ್ತಕವನ್ನಾಗಿ ಆಯ್ಕೆ ಮಾಡಿತ್ತು.

ಶ್ರೀ ಎದುರ್ಕಳ ಶಂಭು ಭಟ್ಟರು

ಶ್ರೀ ಎದುರ್ಕಳ ಶಂಭು ಭಟ್ಟರು ಒಬ್ಬ ಪ್ರಸಿದ್ಧ ವಿದ್ವಾಂಸರು ಒಳ್ಳೆಯ ಕನ್ನಡ ಪಂಡಿತರೆಂದು ಹೆಸರಾದವರು ಮಂಗಳೂರಿನಲ್ಲಿ ಒಳ್ಳೆಯ ಕನ್ನಡ ಪಂಡಿತರಾಗಿ ಮೂರು ದಶಕಗಳ ಕಾಲ ದುಡಿದರು. ಮಂಗಳೂರಿನಲ್ಲಿ 'ಪಂಡಿತ ಮಂಡಳಿ' ಸ್ಥಾಪಕರಲ್ಲೊಬ್ಬರಾಗಿದ್ದರು.

ಶ್ರೀ ಸೇಡಿಯಾಪು ಮತ್ತು ಬಡೆಕಿಲದವರ ಅಭಿನಂದನ ಗ್ರಂಥಗಳ ಸಂಪಾದಕರಾಗಿ ಇವರು ತಮ್ಮ ಸಾಹಿತ್ಯ ರಂಗದ ಚಟುವಟಿಕೆಗಳನ್ನು ವಿಸ್ತರಿಸಿದ್ದಾರೆ. ಕೀರ್ತಂಗ್ಯನಾವಿಲಾಪವೆಂಬ ಪದ್ಯ ಕೃತಿಯನ್ನು ಸತ್ಯ ವಿಜಯ, ಹರಿಶ್ಚಂದ್ರ ಕಾವ್ಯದ ಗದ್ಯಾನುವಾದವನ್ನು ರಚಿಸಿದ್ದಾರೆ. ಇದು ಎಸ್. ಎಸ್. ಎಲ್. ಸಿ. ಗೆ ಉಪಪಠ್ಯವಾಗಿತ್ತು. ಮುಕ್ಕಣ್ಣ ಎಂಬ ಕಾವ್ಯನಾಮದಿಂದ ಇವರು ಹಲವಾರು ಲೇಖನಗಳನ್ನು ಪದ್ಯಗಳನ್ನು ರಚಿಸಿದ್ದಾರೆಂದು ತಿಳಿದು ಬರುತ್ತದೆ. ಉತ್ತಮ ಅಭಿರುಚಿಯ ಲೇಖಕರಾಗಿ ಅವರು ದಕ್ಷಿಣ ಕನ್ನಡ ಸಾಹಿತ್ಯ ಶ್ರೀಗೆ ತಮ್ಮ ಕಾಣಿಕೆ ನೀಡಿದ್ದಾರೆ.

ಸೇವಾವ್ರತದ ಸಾಹಿತಿ

ಶ್ರೀ ಮಡಿಯಾಲ ನಾರಾಯಣ ಭಟ್ಟರು

ಶ್ರೀ ಮಡಿಯಾಲ ನಾರಾಯಣ ಭಟ್ಟರದ್ದು ಸಮಾಜದಲ್ಲಿ ತೆರೆದುಕೊಂಡ ಮುಕ್ತ ಜೀವನ! ಆದರ್ಶದ ಗುರಿಯನ್ನು ಸಾಧಿಸುವ ಪಣವನ್ನು ಅವರು ಹಿಂತೆಗೆದವರಲ್ಲ ! 'ಲೋಕ ಸೇವಾ ವೃಂದ'ದ ಮೂಲಕ ಸಮಾಜ ಸೇವೆಯ ವ್ರತವನ್ನು ಕೈಗೊಂಡ ಅವರ ಸಾಹಿತ್ಯ ಸೇವೆಯ ವ್ರತವೂ ಶ್ರೇಷ್ಠ ಮಾದರಿಯದು.

ಅವರ ಜೀವನ ವಿಧಾನ - ನಡೆ - ನುಡಿ, ಸಂಸ್ಕಾರ ಸಾಹಿತ್ಯ ಪ್ರೇಮ ಪ್ರತಿಯೊಂದೂ ವಿಶಿಷ್ಟವಾದುದು ! ಅದ್ವಿತೀಯವಾದುದು ! ಪ್ರಾಮಾಣಿಕತೆ ಶಿಸ್ತು ಅವರ ಜೀವನ ವ್ರತ! ಗಾಂಧೀಜಿ, ವಿವೇಕಾನಂದ, ಸತ್ಯಸಾಯಿಬಾಬಾ ಅವರ ಆದರ್ಶ ಪುರುಷರು ! ಇದೇ ಹಿನ್ನೆಲೆ ಅವರ ಸಾಹಿತ್ಯಕ್ಕೂ ಇದೆಯೆನ್ನುವುದು ಗಮನಾರ್ಹ !

'ಸೇವಾಮೃತ' ಪತ್ರಿಕೆ ಅವರ ಸೇವಾ ಮಾರ್ಗವನ್ನು ತಿಳಿಸಿದ ಪತ್ರಿಕೆಯಾಗಿ ಮೆರೆದಿದೆ. ತನ್ಮೂಲಕ ಅವರು ನಾಡಿಗೆ ಶುಭವನ್ನು - ಸತ್ - ಜಿತ್ - ಆನಂದಮಯ ಸಂದೇಶವನ್ನು ಸಾರಿದ್ದಾರೆ.

'ಸೇವಾಮೃತ'ದ ಮೂಲಕ ಅವರು ಹಲವಾರು ಚಿಕ್ಕ ಕತೆ - ನೀಳ್ಗತೆಗಳನ್ನು ನೀಡಿದ್ದಾರೆ. 'ಒಡಹುಟ್ಟಿದವರು' ಎಂಬ ಕಾದಂಬರಿಯಲ್ಲಿ ಸಾಂಸಾರಿಕ ಜೀವನದ ಸಿಹಿ - ಕಹಿಗಳನ್ನು ಅವರು ಸುಂದರವಾಗಿ ಎರಕಹೊಯ್ದಿದ್ದಾರೆ. 'ಹೊಸ ಬದುಕು' ಎಂಬ ಕಾದಂಬರಿಯಲ್ಲಿ ಅವರು ಕ್ರಾಂತಿಕಾರಿ ಹೆಜ್ಜೆಯನ್ನೂ ಇರಿಸಿದ್ದಾರೆ. 'ಅಧ್ಯಾಪಕ' ಎಂಬ ಕೃತಿ ಅವರ ಮಹತ್ವಪೂರ್ಣ ಗ್ರಂಥ. ಓರ್ವ ಅಧ್ಯಾಪಕ ಬದುಕು ಕರ್ತವ್ಯಗಳನ್ನು ಅವರು ಚೆನ್ನಾಗಿ ನಿರೂಪಿಸುವ ಮೂಲಕ 'ಸಂಗ್ರಾಹ್ಯ ಕೈಪಿಡಿ'ಯಂತೆ ಕೃತಿ ರಚನೆ ಮಾಡಿದ್ದಾರೆ. 'ಭಾರತದ ದರ್ಪಣ' ಎಂಬುದು ಪತ್ರರೂಪದ ಲೇಖನಗಳಿಂದ ಕೂಡಿದ ಕೃತಿ ! ಈ ದೇಶದ ಕಲೆ, ಸಂಸ್ಕೃತಿ ರೀತಿ ನೀತಿಗಳನ್ನು ಪರಿಚಯಿಸುವ ಗ್ರಂಥ ! ವಿಚಾರಶೀಲ ಚಿಂತಕ ಉದಾರವಾದಿಯಾಗಿ ಅವರು ಸಾಹಿತ್ಯ ವ್ಯವಸಾಯವನ್ನು ಮಾಡಿದ್ದಾರೆ.

ಶಾಲೆ - ಕಾಲೇಜುಗಳಲ್ಲಿ ವಿದ್ಯಾರ್ಥಿಗಳು ಅಭಿನಯಿಸುವುದಕ್ಕಾಗಿ ಮಾದರಿಯಾಗತಕ್ಕ ನಾಟಕಗಳನ್ನು ಅವರು ಬರೆದು ಮಕ್ಕಳಿಂದ ಆಡಿಸಿದ್ದಾರೆ. ಹೊಸ ಬದುಕು, ಬಲಿದಾನ, ಪರಿವರ್ತನೆ, ಸ್ನೇಹ ಸಮಾಗಮ, ಬದುಕೇ ಬಂಗಾರ ಮುಂತಾದ ನಾಟಕಗಳ ಮೂಲಕ ಅವರು ಸಾಹಿತ್ಯಸೇವೆಯನ್ನು ಮಾಡಿದ್ದಾರೆ. ಮಕ್ಕಳ ಮನೋರಂಜನೆ ನಡತೆಗಳನ್ನು ರೂಪಿಸಿದ್ದಾರೆ.

ಪಾರಿಜಾತದ ಕವಿ

ಸೊಡಂಕೂರು ತಿರುಮಲೇಶ್ವರ ಭಟ್ಟರು

ಕಾಸರಗೋಡಿಗೆ ಸೇರಿದ ಸೊಡಂಕೂರು ಕನ್ನಡದ ಗಡಿ ಪ್ರದೇಶ. ತಿರುಮಲೇಶ್ವರ ಭಟ್ಟರು ಕಾನೂನಿನಂತೆ ಕೇರಳಕ್ಕೆ ಸೇರಿ ಹೋದ ಕಾಸರಗೋಡಿನವರು. ಆದರೆ ಎಲ್ಲಾ ಕವಿಗಳಂತೆ ಸಾಹಿತಿಗಳಂತೆ ಅವರು ಕನ್ನಡದ ಕುವರರಾಗಿ ಬೆಳೆದಿದ್ದಾರೆ.

ತಿರುಮಲೇಶ್ವರ ಭಟ್ಟರು ಕನ್ನಡ - ಸಂಸ್ಕೃತದಲ್ಲಿ ಅಗಾಧ ಪಾಂಡಿತ್ಯಗಳಿಸಿದವರು. ಪಂಡಿತರಾಗಿ ವಿದ್ಯಾರ್ಥಿಗಳಿಗೆ ಗುರು, ಮಾರ್ಗದರ್ಶಕ ಸಾಹಿತ್ಯ ಜೀವಿಯಾಗಿದ್ದವರು. ಕವಿ - ವಿಮರ್ಶಕ, ಲೇಖಕ, ಅಧ್ಯಾಪಕ, ಕೃಷಿಕ ಎಲ್ಲವೂ ಹೌದು. ನಾಡಿನ ಪತ್ರಿಕೆಗಳಲ್ಲಿ ಅವರ ಕವನಗಳು ಬೆಳಕು ಕಂಡಿವೆ. ಹೆಚ್ಚಾಗಿ ವೃತ್ತಬದ್ಧವಾಗಿ ಪಾಂಡಿತ್ಯದ ಹಳೆಗನ್ನಡದ ಆಳವಾದ ಪಾಂಡಿತ್ಯವಿರುವ ಶ್ರೀಯುತರ ಕವನಗಳು ಓಜಸ್ಸನ್ನೂ ಕಾವ್ಯದ ಮಾಧುರ್ಯವನ್ನೂ ಬಿಂಬಿಸಬಲ್ಲವಾಗಿದ್ದವು. ವಿದ್ವತ್ತಾಪೂರ್ಣವಾದ ಶೈಲಿ ನಿರೂಪಣಾ ಭಂಗಿಗಳಿಂದ ಅವರು ವಸ್ತುವನ್ನು ಕಾವ್ಯಾತ್ಮಕವಾಗಿ ಚಿತ್ರಿಸುವಲ್ಲಿ ಯಶಸ್ಸು ಗಳಿಸಿದ್ದಾರೆ. ಅವರ ಭಾಷೆಯಲ್ಲಿ ಕಸುವು ತುಂಬಿರುವಂತೆ ಲಾಲಿತ್ಯ ಮಾಧುರ್ಯಗಳು ಮೇಳವಿಸಿವೆ. ನಿಶಿತವಾದ ತರ್ಕ ಸರಣಿಯಿದೆ. ಉದಾತ್ತ ಭಾವನೆಗಳಿವೆ. ಪರಿಪಕ್ವ ಅಂಶಗಳಿವೆ. ಕಾವ್ಯಾಲಂಕಾರ ಸಂಪತ್ತು ತುಂಬಿ ತುಳುಕುತ್ತಿದೆ. ಪಾರಿಜಾತ ಅವರ ಉತ್ತಮ ಕವನ ಸಂಕಲನ. ಕಾವ್ಯದಲ್ಲಿ ಶಾಸ್ತ್ರವನ್ನು ವೈಜ್ಞಾನಿಕತೆಯನ್ನು ತುಂಬಿದ ವೈವಿಧ್ಯ ಪಾರಿಜಾತದಲ್ಲಿದೆಯೆಂದು ವಿ. ಬಿ. ಹೊಸಮನೆ ಹೇಳುತ್ತಾರೆ. ಪೃಥ್ವೀ ಗಂಧವತೀ ಎಂಬ ಪದ್ಯದಲ್ಲಿ 'ಮೊದಲ ಮಳೆ ಬಂದು ನೆಲವೆಣ್ಣು ನಲಿದಳು ಮಿಂದು ಮೈಗೊಳೆದು ಮಡಿಯಾದಳು' ಎಂಬಂಥ ಸಾಲುಗಳು ಕವಿಯ ಎತ್ತರವನ್ನು ಸೂಚಿಸುತ್ತವೆ.

ನುಡಿಯಲ್ಲಿ ಗಿಳಿಯಲ್ಲಿ ಬಿರಿದ ಮೊಗ್ಗುಗಳಲ್ಲಿ
ಎಲ್ಲೆಲ್ಲಿ ನೋಡಿದರು ನಿನ್ನದೇ ರೂಪು
ಕೆಂಪು ಕೆಂಪಾದ ಟೊಮೆಟೋ ಹಣ್ಣಿನಲಿ ನಿನ್ನ
ಚೆಂಗುಲಾಬಿಯ ಕೆನ್ನೆಗಳದೆ ನೆನಪು

ಇಂಥಹ ಸುಂದರ ಶೃಂಗಾರ ಕವಿ ಕಟ್ಟುವೆವು ನವ ಭಾರತವ, ಸ್ವಾತಂತ್ರ್ಯ ಸ್ಮೃತಿಗಳನ್ನು ಬರೆದು ರಸಿಕ ಕವಿಯಾಗಿರುವಂತೆಯೇ ರಾಷ್ಟ್ರಭಕ್ತನೆಂದೂ ಅರಿವಾಗುವಂತೆ ಬರೆದಿದ್ದಾರೆ. ಉತ್ತಮ ಕಾವ್ಯ ರಚನೆ ಮಾಡಿ ಹೆಸರು ಗಳಿಸಿದ್ದಾರೆ.

ಎಳೆಯರ ಬಂಧು ಅ. ರ. ಅರಸಳಿಕೆ

ಅಬ್ದುಲ್ ರಹಿಮಾನ್ ಅರಸಳಿಕೆ ಕನ್ನಡ ಕವಿತಾ ಮೋಕದಲ್ಲಿ ಮಿಂಚಿ ಹೋದ ತರುಣ ಪ್ರತಿಭೆ. ಮನೆ ಮಾತು ಮಲಯಾಳವಾದರೂ ಅವರ ಕನ್ನಡ ಪ್ರೇಮ ಅಸಾಧಾರಣವಾದುದು. ಶುದ್ಧ ಕನ್ನಡದಲ್ಲಿ ಸಂಸ್ಕೃತಜ್ಞರು ನಾಚುವಂಥ ಭಾಷಾ ಪ್ರಯೋಗ ಅವರದು ! ಯಕ್ಷಗಾನದ ನಟ ಸಾರ್ವಭೌಮ ವಿಠಲ ಶಾಸ್ತ್ರಿಗಳನ್ನು ಇವರು ಮೆಚ್ಚಿದಷ್ಟೇ ಅವರೂ ಇವರನ್ನು ನೆಚ್ಚಿಕೊಂಡಿದ್ದರು. ನಮ್ಮಿಬ್ಬರೊಳಗೆ ಅಂಥ ಘನ ಸಂಬಂಧವಿತ್ತು. ಶ್ರೀ ಶಾಸ್ತ್ರಿಗಳೂ ಅವರೂ ನಾನೂ ಒಂದಾಗಿ ಎಷ್ಟೋ ಕಲಾತ್ಮಕ ಯಕ್ಷಗಾನ ಮೊದಲಾದ ವಿಚಾರಗಳನ್ನು ಚರ್ಚಿಸಿದ್ದುಂಟು. ನನ್ನ ಸಾಹಿತ್ಯ ರಚನೆಯ ಆರಂಭದ ದಿನಗಳಲ್ಲಿ ಓರಗೆಯವರಾದ ರಹಿಮಾನರು ನನ್ನ ಬೆಂಗಾವಲಾಗಿ ಬೆನ್ನು ತಟ್ಟುವವರಾಗಿಯೂ ಇದ್ದರು. ಅಂತೆಯೇ ಅವರ ಕವಿತಾಶಕ್ತಿ ನನ್ನನ್ನು ಮಂತ್ರಮುಗ್ಧಗೊಳಿಸಿತು. ಶಾಲಾಧ್ಯಾಪಕರಾಗಿ ಕುಕ್ಕುಜಡ್ಕದಲ್ಲಿದ್ದಾಗ ದೇರಾಜೆಯವರಿಗೂ ಅವರಿಗೂ ನಿಕಟ ಸಂಪರ್ಕವಿತ್ತು. ನನಗೂ ದೇರಾಜೆಯವರ ಪ್ರಥಮ ಸಂಪರ್ಕ ಇವರಿಂದಲೇ ಆಯಿತು.

'ಬಿಚ್ಚುಗತ್ತಿ' ಅವರ ಮೊದಲ ಕವನ ಸಂಗ್ರಹ. ರಾಷ್ಟ್ರಪ್ರೇಮ, ದೇಶಭಕ್ತಿ ಹೆಚ್ಚಿಸುವ, ದೇಶಕ್ಕಾಗಿ ತ್ಯಾಗ ಮಾಡಲು ಪ್ರೇರಿಸುವ ಕವನಗಳು ಅವರ ಅಂತರಂಗವನ್ನು ಬಹಿರಂಗಗೊಳಿಸಿವೆ. ಹಲವಾರು ಪತ್ರಿಕೆಗಳಲ್ಲಿ ಅವರ ಕವನಗಳು ಪ್ರಕಟಗೊಂಡಿದ್ದವು. 'ಚುಟುಕು - ಗುಟುಕು' ಮಕ್ಕಳಿಗೆ ಹಿಡಿಸುವ ಪದ್ಯಗಳು. "ಗದ್ದೆಯನ್ನು ಉತ್ತು, ಒಳ್ಳೆ ಬೀಜ ಬಿತ್ತು, ಮುಂದೆ ನಿನಗೆ ಸಿಗುವುದಣ್ಣ, ಹೊಟ್ಟೆ ತುಂಬ ತುತ್ತು" ಇಂಥ ಪದ್ಯಗಳಿಂದ ಅವರು ಮಕ್ಕಳ ಮನವನ್ನು ಸೂರೆಗೊಳ್ಳುತ್ತಾರೆ. ನಕಲಿ ವೈದ್ಯನ ಬಗ್ಗೆ ಹೀಗೆ ಬರೆದಿದ್ದಾರೆ.

"ಬನ್ನಿರಯ್ಯ ಬನ್ನಿರಯ್ಯ ಒಬ್ಬೊಬ್ಬರಯ್ಯ
ತನ್ನಿರಯ್ಯ ತನ್ನಿರಯ್ಯ ನೋಟಿನ ಕಟ್ಟಯ್ಯ
ಹೊಟ್ಟೆ ನೋವಿಗೂ ತಲೆ ನೋವಿಗೂ ಒಂದೇ ಮದ್ದಯ್ಯ
ಇತ್ಯಾದಿ ರಚನೆಗಳಿಂದ ಅವರು ಜನಪ್ರಿಯರಾಗಿದ್ದರು.

ಮಕ್ಕಳ ಕವಿ ಮುಂಡಾಜೆ ರಾಮಚಂದ್ರ ಭಟ್ಟರು

ಮಕ್ಕಳಿಗಾಗಿಯೇ ಬರೆದು ಅವರನ್ನು ಅರಸುತ್ತಾ ಹೋಗಿ ಪದ್ಯವನ್ನು ಅವರಿಗೆ ಮನಮುಟ್ಟುವಂತೆ ಓದಿ ಹೇಳಿ ತಾನೂ ಕುಣಿದು ಅವರನ್ನು ಕುಣಿಸಿ ಸಂತಸಪಡುತ್ತಿದ್ದ ಮುಂಡಾಜೆ ರಾಮಚಂದ್ರ ಭಟ್ಟರದ್ದು ಅಪೂರ್ವ ಸಾಹಿತ್ಯ ಕೈಂಕರ್ಯ. ತಾನು ಬರೆದ ಕವನಗಳನ್ನು ಅಚ್ಚು ಹಾಕಿಸಿ ಹೊತ್ತುಕೊಂಡು ಹೋಗಿ ಮಾರುತ್ತಿದ್ದುದರಲ್ಲಿ ಅವರಿಗೆ ತೃಪ್ತಿ. ಮುಂಡಾಜೆಯ ಹಳ್ಳಿಯ ಮೂಲೆಯಿಂದ ಕನ್ನಡದ ಕಹಳೆಯನ್ನೂದಿ ಪುಟಾಣಿಗಳ ಮನೋರಂಜನೆ ಮಾಡುವುದರಲ್ಲಿ ಅವರಿಗೆ ಎಲ್ಲಿಲ್ಲದ ಆನಂದ.

ಶ್ರೀ ಭಟ್ಟರು ರಚಿಸಿದ ಕೃತಿಗಳು ಏಳು. ಶಿಶುವಿಹಾರ, ಪುಟ್ಟನ ಪಿಟೀಲು, ತಮ್ಮನ ಕವಿತೆಗಳು, ಮಕ್ಕಳ ಗೀತ ರಾಮಾಯಣ, ಗಾನ ಗೌರಿ ಇವೇ ಅವರ ರಚನೆಗಳು. 'ರಾಮಣ್ಣನ ರಗಳೆಗಳು' ಎಂಬ ತ್ರಿಪದಿಯನ್ನು ಅವರು ಬರೆದಿದ್ದರು.

ಸೂಜಿಗಲ್ಲಿನ ಆಕರ್ಷಣೆ, ಸರಳವಾದ ಪದಬಂಧ, ಸುಲಲಿತವಾಗಿ ಹರಿಯುವ ಶೈಲಿ, ಮೋಡಿಗೊಳಿಸುವ ಲಯ ವಿನ್ಯಾಸ, ಪ್ರಾಸಗಳ ಲಾಸ್ಯ, ಶ್ರೀ ಭಟ್ಟರ ಕವನಗಳ ವೈಶಿಷ್ಟ್ಯ !

"ರವಿಯು ಮೂಡಲಿ, ಉದಯವಾಗಲಿ, ಕತ್ತಲೆಯು ಓಡೋಡಲಿ
ರಾಗದಿಂದಲಿ ಗಾನ ಮಾಡುವ
ಸಕಲ ಶುಕಪಿಕ ಹಾಡಲಿ"

ಇಂಥ ಮುನ್ನೂರಕ್ಕೂ ಮಿಕ್ಕಿದ ಸುಂದರ ಕವನಗಳಿಂದ ಅವರು ರಂಜಿಸಿದ್ದಾರೆ. ಮದ್ರಾಸ್ ಸರಕಾರವು ಇವರನ್ನು ಪ್ರಶಸ್ತಿ ನೀಡಿ ಗೌರವಿಸಿದುದು ಸಮರ್ಪಕವಾಗಿದೆ. 26ನೆಯ ಅಖಿಲ ಕರ್ನಾಟಕ ಮಕ್ಕಳ ಸಮ್ಮೇಳನದಲ್ಲಿಯೂ ಇವರು ಪ್ರಶಸ್ತಿಯಿಂದ ಪುರಸ್ಕೃತರಾದುದು ಸ್ತುತ್ಯ.

ಬೇಕಲ ರಾಮನಾಯಕರು

ಬೇಕಲದ ಕೋಟೆಯನ್ನು ಅರಿಯದವರಾರು ? ಆದರೆ ಇಂದು ಕಾಸರಗೋಡು ನಮ್ಮೊಂದಿಗಿಲ್ಲ. ಬೇಕಲದ ಬಗ್ಗೆ ಯಾವುದೇ ಉಲ್ಲೇಖ ನಮ್ಮ ವಿದ್ಯಾರ್ಥಿಗಳಿಗೆ ಪಠ್ಯಪುಸ್ತಕಗಳಲ್ಲಿ ಲಭ್ಯವಾಗುತ್ತಿಲ್ಲ. ಆದರೆ ಬೇಕಲವು ನಮ್ಮ ನಾಡಿನ ಇತಿಹಾಸದಲ್ಲಿ ಮರೆಯಾಗದ, ಮರೆಯಲಾಗದ ಕೋಟೆಯಾಗಿ ರಾಜರ ದುರ್ಗವಾಗಿ ಐತಿಹಾಸಿಕ ದಾಖಲೆಯಾಗಿ ಉಳಿದಿದೆ.

ರಾಮರಾಜ ಕ್ಷತ್ರಿಯರ ಆವಾಸ ಭೂಮಿಯಾದ ಈ ಪ್ರದೇಶದಲ್ಲಿ ಬೇಕಲ ರಾಮನಾಯಕರ ಜೀವನ. ಅವರೊಬ್ಬ ಅಧ್ಯಾಪಕರಾಗಿ ವಿದ್ಯಾರ್ಥಿಗಳನ್ನು ಪ್ರೀತಿಸಿ ತಾವೂ ಅವರ ಪ್ರೀತಿ ಭಕ್ತಿಗಳಿಗೆ ಪಾತ್ರರಾದವರು. ಕೋಟೆಯಲ್ಲಿ ನಡೆದ ಕಾಳಗಗಳ ಕಥೆಗಳನ್ನು ಕೇಳಿ ಅವರಿಗೆ ಈ ಬಗ್ಗೆ ಬರೆಯುವ ಸ್ಫೂರ್ತಿ ಬಾಲ್ಯದಲ್ಲಿಯೇ ಬಂದಿತಂತೆ ! 'ಕೋಟೆಯ ಕಥೆಗಳು', 'ಕಿಚ್ಚಿನ ಕಿಡಿಗಳು' ಮೊದಲಾದ ಕೃತಿಗಳನ್ನು ಇದೇ ಹಿನ್ನೆಲೆಯಿಂದ ಪ್ರೇರಿತರಾಗಿ ಬರೆದರಂತೆ. ಅವರ ಹಿರಿಯರು ಖಡ್ಗ ಹಿಡಿದು ಹೋರಾಡಿದರೆ ಇವರು ಲೇಖನಿಯಿಂದ ಕನ್ನಡಕ್ಕಾಗಿ ಹೋರಾಡಿದ್ದಾರೆ.

ಐರೋಡಿ ಶಿವರಾಮಯ್ಯನವರು ಇವರಿಗೆ ಸಾಹಿತ್ಯದ ಬಗ್ಗೆ ಹೆಚ್ಚು ಪ್ರೇರಣೆ ನೀಡಿದರಂತೆ. ಇವರು ಬರೆದ ಲೇಖನಗಳು ರಾಷ್ಟ್ರ ಬಂಧು, ಅಂತರಂಗ, ಕಾನಡಾ ಧುರೀಣ ಮೊದಲಾದ ಪತ್ರಿಕೆಗಳಲ್ಲಿ ಪ್ರಕಟವಾದವು.

"ತೌಳವ ಸ್ವಾತಂತ್ರ್ಯ, ಸೌಭಾಗ್ಯ ರತ್ನ, ಉತ್ಕಲ ಕುಮಾರಿ, ವೀರ ವಸುಂಧರಾ, ಮೊದಲಾದ ನಾಟಕಗಳನ್ನು 'ಬಾಳಿದ ಹೆಸರು', 'ತೆಂಕನಾಡ ಐತಿಹ್ಯಗಳು', 'ಕಿಚ್ಚಿನ ಕಿಡಿ', 'ಪುಳ್ಕೂರು ಬಾಚ', 'ನಾಡಕಥೆಗಳು', 'ಸತ್ವ ಪರೀಕ್ಷೆ' ಮೊದಲಾದ ಚಾರಿತ್ರಿಕ ಹಿನ್ನೆಲೆಯುಳ್ಳ ಕಥಾ ಸಂಗ್ರಹಗಳನ್ನು ಇವರು ಬರೆದಿದ್ದಾರೆ. ಮಾಸ್ತಿ ಗಲ್ಲುಗಳನ್ನು ವೀರ ಕಂಭಗಳನ್ನು ಮಾತನಾಡಿಸಿದ್ದಾರೆ. ಅಜ್ಜ, ಅಜ್ಜಿಯರಿಂದ ಜಾನಪದ ಕಥೆಗಳನ್ನು ಸಂಗ್ರಹಿಸಿ ಗಾದೆ ನುಡಿಕಟ್ಟುಗಳಿಗೆ ಜೀವಕೊಟ್ಟು ಸತತ ಗವೇಷಣ ಅನ್ವೇಷಣೇ ನಡೆಸಿ ಕಾಸರಗೋಡಿನ ಇತಿಹಾಸದ ಗಣಿಯಿಂದ ವಜ್ರ ವೈಢೂರ್ಯಗಳನ್ನು ತೆಗೆದು ಕುಂದಣವಿಟ್ಟು ಸಾಹಿತ್ಯಾಭರಣಗಳನ್ನು ಪೋಣಿಸಿದ್ದಾರೆ. ಡಾ। ಲಲಿತಾ ಭಟ್ಟರು ರಾಮನಾಯಕರ ಸಾಧನೆಗಳನ್ನು ಹೀಗೆ ಬಣ್ಣಿಸಿದ್ದಾರೆ. ವಾಸಿಷ್ಠ ರಾಮಾಯಣವೆಂಬ ಮಹಾಕೃತಿಯನ್ನು ಸಾಂಗತ್ಯದಲ್ಲಿ ಅವರು ರಚಿಸಿ ಸರಳ ಕಾವ್ಯ ಸೌಂದರ್ಯವನ್ನು ಬೆಳಗಿಸಿದ್ದಾರೆ. ನಾಯಕರು ನಾಳಿನ ಕಿಡಿಗಳನ್ನು ರೂಪಿಸಲಿರುವ ಸಿಡಿ ಮದ್ದು ಎಂದು ತಿ. ತಾ. ಶರ್ಮರು ಹೇಳಿದ್ದಾರೆ.

'ಬಾಳಿದ ಹೆಸರು' ಎಂಬ-ಇವರ ಕೃತಿ 8ನೆಯ ತರಗತಿಯ ಮಕ್ಕಳಿಗೆ ಉಪ ಪಠ್ಯವಾಗಿತ್ತು. ಗಿಂಡಿ ಪೂಜೆ, ದಿಟ್ಟೆ ಅತ್ತಿಗೆ, ಸತ್ವ ಪರೀಕ್ಷೆ ಮೊದಲಾದ ಕಥಾ ಕವನಗಳಿಂದ ಇವರು ಉತ್ತಮ ಸ್ಥಾನ ಪಡೆದಿದ್ದಾರೆ. ತೌಳವರಾಣಿ, ತೌಳವ ಸ್ವಾತಂತ್ರ್ಯ ಮೊದಲಾದ ನಾಟಕಗಳನ್ನು ರಚಿಸಿ [illegible] ಮಕ್ಕಳಿಗೆ ಆಡಲು ಅನುಕೂಲ ಮಾಡಿಕೊಟ್ಟಿದ್ದಾರೆ.

ಚಾರಿತ್ರಿಕ ದಾಖಲೆಗಳನ್ನು ವಿಮರ್ಶಿಸಿ ಪರ್ಯಾಲೋಚಿಸಿ ನಿರ್ಣಯಕ್ಕೆ ಬರುತ್ತಿದ್ದ ಬೇಕಲ ರಾಮ ನಾಯಕರು ಕನ್ನಡದ ಚರಿತ್ರೆಯಲ್ಲಿ ಶಾಶ್ವತವಾಗಿ ಸ್ಥಾನವನ್ನು ಗಳಿಸಿರುತ್ತಾರೆ.

ಗಿರಿಗಿಟಿಯ ಕವಿ ದೊಡ್ಡಣ್ಣ
ಕೆಮ್ಮಿಂಜೆ ಸುಬ್ರಾಯ ಪಾಧ್ಯಾಯರು

"ಚಳಿ ಕಾಯಿಸುದಜ್ಜಿಯ ಕೆಲಸ
ಮುಸುರೆಯ ತಿಕ್ಕುವದಮ್ಮನ ಕೆಲಸ
ದುಡ್ಡನು ಗಳಿಸುವುದಪ್ಪನ ಕೆಲಸ
ಆಟವು ರಂಗನ ಮುಗಿಯದ ಕೆಲಸ"
ಮೋಟುಕಾಲ ಕಾಟು ನಾಯಿ ಪೇಟೆ ಬೀದಿ ದಾಟುವಾಗ
ಸಾಟೆ ತುಂಟನೊಂದ ಕಂಡು ನಿಂತು ಬಿಟ್ಟಿತು.

ಇಂಥ ಕವನಗಳಿಂದ ಕೆಮ್ಮಿಂಜೆಯವರು ಮಕ್ಕಳ ಮನವನ್ನು ಸೂರೆಗೊಳ್ಳುತ್ತಾರೆ. 'ಗಿರಿಗಿಟಿ' ಕವನ ಸಂಗ್ರಹದಲ್ಲಿ ಅವರು ದೊಡ್ಡಣ್ಣ ಎಂಬ ಹೆಸರಿನಿಂದ ಕಾಣಿಸುತ್ತಾರೆ. ಇವರ 'ನಡಾವಳಿ' ಪದ್ಯವನ್ನು ಮೆಚ್ಚಿ ಧರ್ಮಸ್ಥಳ ಮಂಜಯ್ಯ ಹೆಗಡೆಯವರು ಇವರನ್ನು ಸನ್ಮಾನಿಸಿದ್ದರು. ಸಸ್ಯ ವಿಜಯ, ಯಕ್ಷಗಾನ ಪ್ರಸಂಗ, ಅಡ್ಡಗೋಡೆ (ಕಾದಂಬರಿ), ನಡಾವಳಿ, ಕಾವ್ಯ, ಕಾಣಿಕೆ ಎಂಬ ಹಾಡುಗಳ ಸಂಗ್ರಹವನ್ನು ಇವರು ರಚಿಸಿದ್ದಾರೆ.

ಮಕ್ಕಳಿಗೆ 'ದೊಡ್ಡಣ್ಣ'ನಾಗಿ ಇವರು ಇವರು ಗಿರಿಗಿಟಿ ತೆಗೆದು ಕೊಟ್ಟು, ಅವರ ಪ್ರೀತಿ ಗಳಿಸಿದ್ದಾರೆ. ಅವರು ಮಕ್ಕಳಿಗಾಗಿ 'ಗಿರಿಗಿಟಿ' ಮಾಡಲು ಹೆಚ್ಚು ಕಷ್ಟಪಡಲಿಲ್ಲವೆಂದು ಕಾಣುತ್ತದೆ.

ತೆಂಗಿನ ಮರದಿಂದೋಲೆಯ ತೆಗೆದು ಗಿರಿಗಿಟಿ ಆಟವ ಆಡಲು ನಡೆದರು
ರಂಗನು ಕಿಟ್ಟಾ ಪುಟ್ಟಣ್ಣಾ !

ಮಕ್ಕಳ ಸಾಹಿತ್ಯ ರಚನೆಯಿಂದ ಇವರು ತುಂಬ ಮಾನಸಿಕ ತೃಪ್ತಿಯನ್ನು ಹೊಂದಿದ್ದರು. ಇದರಿಂದಲೇ ಅವರು ಸಫಲ ಶಿಶು ಸಾಹಿತಿಯಾಗಿದ್ದಾರೆ.

ಬೈಂದೂರು ಆನಂದ ರಾವ್

ಬೈಂದೂರು ಆನಂದ ರಾವ್ ಎಂದರೆ ಸಾಮಾಜಿಕ ಚಟುವಟಿಕೆಗಳು, ಗಾಂಧೀಜಿಯ ರಚನಾತ್ಮಕ ಕೆಲಸಗಳು, ಪಾನ ನಿರೋಧ, ಹರಿಜನೋದ್ಧಾರ, ಗ್ರಾಮ-ಪುನರುಜ್ಜೀವನ, ಮೊದಲಾದ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಸಹಕಾರ, ಸಾಹಿತ್ಯ ರಂಗದಲ್ಲಿ ಮಿಂಚಿದ ವ್ಯಕ್ತಿಯ ನೆನಪು ಸಹಜವಾಗಿ ಉಂಟಾಗುತ್ತದೆ. ಹಲವಾರು ಸಹಕಾರಿ ಸಂಘಗಳಲ್ಲಿ ಸಕ್ರಿಯವಾಗಿ ದುಡಿದು ಜೊತೆಯಲ್ಲಿ ಸಾಹಿತ್ಯ ಸೇವೆಯನ್ನು ನಡೆಸಿದ ಸಹೃದಯರು ಶ್ರೀ ರಾಯರು ! "ಸಹಕಾರ" ಅವರ ಚೊಚ್ಚಲ ಕೃತಿ ಎನ್ನಲಾಗಿದೆ. ಇದೊಂದು ಸಾಮಾಜಿಕ ನಾಟಕ. ಶಿವಾಜಿಗೆ ಸಂಬಂಧಿಸಿದ 'ಚಿತ್ರ ಶಿಖಂಡಿ' ಮತ್ತು ಆತನ ಬದುಕಿನ ಉದಾತ್ತ ಚಿತ್ರಣವಾದ ರಾಜರ್ಷಿ ಶಿವಾಜಿ ಎಂಬ ಕಾದಂಬರಿ. ಶಿವಾಜಿ ಮಹಾರಾಜ ಮೊದಲಾದ ಲೇಖನಗಳನ್ನು ಅವರು ಬರೆದಿದ್ದಾರೆ. ನೂರ್‌ಜಹಾನ್ ಎಂಬ ಐತಿಹಾಸಿಕ, ಗೃಹಶೀಲೆ ಎಂಬ ಸಾಮಾಜಿಕ ಕಾದಂಬರಿ, ದೃಶ್ಯ ಕಾವ್ಯ ವಿಚಾರ ಎಂಬ ನಾಟಕದ ವಿವಿಧತೆಗಳ ವಿಮರ್ಶಾತ್ಮಕ ಗ್ರಂಥ ಅವರ ಶ್ರೇಷ್ಠ ಕೃತಿಗಳಾಗಿವೆ. ಖಾದೀ ಪ್ರಚಾರ, ಯಮನ ಮೇಲೆ ಸರಕಾರದ ಬ್ರಹ್ಮಾಸ್ತ್ರಗಳೆಂಬ ಕಿರು ನಾಟಕಗಳನ್ನು ಅವರು ರಚಿಸಿ ತಮ್ಮ ಖಾದೀ ಪ್ರೇಮ, ಸಹಕಾರ ನಿಷ್ಠೆಗಳನ್ನು ವ್ಯಕ್ತಪಡಿಸಿದ್ದಾರೆ. "ಪ್ರಾಚೀನ ಸಹಕಾರ ಪದ್ಧತಿಯಲ್ಲಿ ವೇದ ಕಾಲದಿಂದಲೇ ಸಹಕಾರ ನೀತಿ ನಡೆದು ಬಂದ ದಾರಿ ಅವರ ಪಾವಿತ್ರ್ಯದ ವಿವರಣೆ ನೀಡಿದ್ದಾರೆ. 'ಪುತ್ತೂರು' ಅವರ ಸುಂದರ ಕವನ ಸಂಕಲನ. 'ಶ್ರೀ ಚಿತ್ರಾಪುರ ಚರಿತ್ರೆ' ತಮ್ಮ ಸಮಾಜದ ಗುರುಪೀಠದ ಚರಿತ್ರೆ. ಹೀಗೆ ಖಾದೀ ಗ್ರಾಮೋದ್ಯೋಗ - ಸಹಕಾರ - ಸಾಹಿತ್ಯದ ವಿವಿಧ ಗಂಗಗಳಲ್ಲಿ ದುಡಿಮೆ ಮಾಡಿದ ಉತ್ತಮ ಸಾಮಾಜಿಕ ಸಾಹಿತ್ಯಿಕ ಪುರುಷರಾಗಿ ರಾಯರು ಸ್ಮರಣೀಯರಾಗಿದ್ದಾರೆ.

ಮಕ್ಕಳ ಅಚ್ಚುಮೆಚ್ಚಿನ
ಮಚ್ಚಿಮಲೆ ಶಂಕರನಾರಾಯಣ ರಾವ್

"ಸೌದೆ ತಾರೋ ಮಲ್ಲ, ಕತ್ತಿ ತಾಗಿತಲ್ಲ
ಬೆಂಕಿ ಹಚ್ಚೊ ಮಲ್ಲ, ಕೈ ಮೈ ಸುಟ್ಟಿತಲ್ಲ
ಊಟಕೆ ಬಾರೋ ಮಲ್ಲ ತಯಾರಿದ್ದೇನಲ್ಲ
ದೊಡ್ಡ ಬಟ್ಟಲಮ್ಮ ದೊಡ್ಡ ಬಟ್ಟಲಮ್ಮ"

ಶ್ರೀ ಮಚ್ಚಿಮಲೆಯವರು ಮಕ್ಕಳನ್ನು ರಂಜಿಸುವ ಅವರ ಮನೋಭೂಮಿಕೆಯನ್ನು ಗುರುತಿಸುವ ಮೂಲಕ ಮಕ್ಕಳಲ್ಲಿ ಬೆಳೆಯುತ್ತಿರುವ ಆಲಸ್ಯ ಮೈಗಳ್ಳತನಗಳನ್ನು ವಿಡಂಬಿಸಿ ಅವರಿಗೊಂದು 'ನೀತಿ ಸೂತ್ರ'ವನ್ನು ವ್ಯಂಗ್ಯವಾಗಿ ಕಲ್ಪಿಸಿದ್ದಾರೆ.

"ಬಾಳೆಯ ತೋಟದ ಪಕ್ಕದ ಕಾಡೊಳು
ವಾಸಿಸುತಿದ್ದವು ಮಂಗಗಳು
ಮಂಗಗಳೆಲ್ಲವು ಒಟ್ಟಿಗೆ ಸೇರುತ
ಒಂದುಪವಾಸವ ಮಾಡಿದವು
ನಾಳೆಯ ತಿಂಡಿಯ ಈಗಲೆ ಹುಡುಕುವ
ಎಂದಿತು ಆಶೆಯ ಮರಿಕಪಿಯೊಂದು

ಮಂಗನ ಉಪವಾಸದ ಈ ಕತೆ ಮಾನವನನ್ನು ಅಣಕಿಸುವಂತಿದೆ. ಅವರ ಕವನಗಳು ಇಂಥ ಶೈಲಿಯಲ್ಲಿ ಸಾಗುತ್ತವೆ.

ಚುಂಚುಂ, ಮಿಣುಕು ತುಣುಕು, ಬಾಲ ಪದ್ಯಾವಳಿ, ಹರಿಗೋಲು, ಕಂದನ ಕವನ ಮಾಲೆ. ಹೊಸಗನ್ನಡ ಜೋಗುಳ ಮೊದಲಾದ ಪುಸ್ತಕಗಳನ್ನು ಅವರು ರಚಿಸಿ ಮಕ್ಕಳ ಸಾಹಿತ್ಯವನ್ನು ಸಮೃದ್ಧಗೊಳಿಸಿದ್ದಾರೆ.

ಕಳೆದು ಹೋಯಿತು ನಿಮಿಷ, ಹಾರಿದರೆ ನಿಮಿಷ
ಗಳಿಗೆ ದಿನಗಳು ಕೂಡಿ ಹೋಗುವದು ವರುಷ
ವೇಳೆಯೆಂಬುದು ಬಹಳ ಬೆಲೆಯುಳ್ಳ ರತ್ನ
ಬಾಳುವೆಗೆ ಮೂಲವಿದು ಸುಗುಣ ಸಂಪನ್ನ

ಸಮಯದ ಬೆಲೆಯನ್ನು ತಿಳಿಸುವ ಇಂಥ ಕವನಗಳು ಅವರ ಅಮೂಲ್ಯ ರಚನೆಗಳು. ಬಾಪೂಜಿ, ನೆಹರೂ, ರಾಜೇಂದ್ರ ಪ್ರಸಾದ್ ಎಂಬ ಪುಸ್ತಕಗಳು ಉಪ ಪಠ್ಯಗಳಾಗಿ ಮಕ್ಕಳಿಗೆ

ರಾಷ್ಟ್ರೀಯತೆಯನ್ನು ತಿಳಿಸುವಂತಿದ್ದವು. ಗೊಂಚಲು, ಚೆನ್ನಮ್ಮ, ಮುರುಕು ಮುತ್ತು, ಶ್ರೀಮುಡಿ, ಧರ್ಮ ಜೀವನ, ಜಹಗೀರದಾರನ ಕೊಲೆ, ತಾಯಿ, ಸ್ವರಾಜ್ಯ ಚಕ್ರ, ನಿಸ್ಸಹಕಾರ ಧ್ವಜ, ದೇವಳಾ ದೇವಿ ಮೊದಲಾದ ಗದ್ಯ ಕೃತಿಗಳನ್ನು ಅವರು ಬರೆದಿದ್ದಾರೆ.

ಅವರೊಬ್ಬ ರಾಷ್ಟ್ರೀಯ ವಾದಿ ! ಪ್ರಾಮಾಣಿಕ ಜೀವನದ, ಸಾಹಿತ್ಯದಲ್ಲಿ ಉತ್ತಮ ಆದರ್ಶಗಳನ್ನು ಮೂಡಿಸಿದ ಮಹನೀಯರು, ಮಕ್ಕಳ ಅಂತರಂಗವನ್ನು ಗುರುತಿಸಿದ ಶ್ರೇಷ್ಠ ಸಾಹಿತಿ!

ಜಿ. ಎಸ್. ಲಕ್ಷ್ಮಣ ಪೈ

ಬಿಸಿಲೂ ಮಳೆಯೂ ಕೂಡಿದವು
ಸೆಕೆಯನು ತಂಪನು ಮೂಡಿದವು
ಕೋತಿಯು ಮಾಡಿತು ತುಂಟತನ
ಕೋಳಿಯು ಮಾಡಿತು ಮೂರ್ಖತನ
ಕೋತಿಗೂ ಕೋಳಿಗೂ ನಂಟುತನ
. . . .
ಲಾಗ ಹಾಕೋ ಮಂಗಣ್ಣಾ
ಥೈ ಥೈ ಕುಣಿಯೋ ತಿಮ್ಮಣ್ಣಾ
ಕೋಳಿಯ ಗಂಡನೆ ಕಪಿಯಣ್ಣಾ
ಮದುವಣಿಗನು ನೀ ಹೌದಣ್ಣಾ

ಚಿಕ್ಕಂದಿನಲ್ಲಿ ಈ ಪದ್ಯವನ್ನು ಬಾಯಿಪಾಠ ಮಾಡದ ಮಕ್ಕಳಿಲ್ಲ. ಈಗಿನವರೆಗೆ ಇದು ಅಲಭ್ಯವಾದರೂ ಹಿಂದಿನವರಿಗೆ ಈ ಶತಕದ ಮಧ್ಯದಲ್ಲೆಲ್ಲಾ ಇಂಥ ಕವನಗಳು ಆಸ್ವಾದನೀಯವಾಗಿದ್ದವು. ಇಂಥ ಹಲವಾರು ಕವಿತೆಗಳ ಮೂಲಕ ಲಕ್ಷ್ಮಣ ಪೈಗಳು ಮಕ್ಕಳ ಮನೋರಂಗದಲ್ಲಿ ವಿಹರಿಸಿದ್ದಾರೆ.

ಪೈಗಳು ಮಕ್ಕಳಿಗಾಗಿ ಅಭಿನಯ ಗೀತಾವಳಿ, ಪದ್ಯ ರತ್ನಾವಳಿ, ಅಭಿನಯ ಗೀತ ಮಂಜರಿ, ಶಿಶುಗೀತ ಮಾಲೆ, ದಸರೆಯ ಕಾಣಿಕೆ ಮೊದಲಾದ ಕವನ ಸಂಕಲನಗಳನ್ನೊದಗಿಸಿದ್ದಾರೆ. ಮಕ್ಕಳಿಗೆ ಅಭಿನಯ ಚಾತುರ್ಯ ಮೂಲಕ ಕಲಿಸುವಲ್ಲಿ ಇವರ ಕವಿತೆಗಳು ಯಶಸ್ವಿಯಾಗಿವೆ.

ಲಕ್ಷ್ಮಣ ಪೈಗಳಿಗೆ ಪಂಜೆಯವರು ಗುರುವಾಗಿದ್ದರಂತೆ. ಗುರುಗಳ ಆಶೀರ್ವಾದದ ಫ
ಪೈಗಳನ್ನು ಮೇಲೆತ್ತಿದೆ. ಪೈಗಳಲ್ಲಿ ಸಾಹಿತ್ಯದ ಆಸಕ್ತಿ ಮೂಡಿಸಿ ಬೆಳೆಸಿದವರು ಗುರುಗಳಾ
ಪಂಜೆಯವರು. ಪಂಜೆಯವರನ್ನು ಅನುಕರಿಸುವುದು ಅನುಸರಿಸುವುದು ಪೈಗಳಿಗೆ ಹೆಮ್ಮೆಯಾಗಿತ್ತು
ಮಕ್ಕಳ ಮನಸ್ಸನ್ನು ಸೆರೆ ಹಿಡಿಯಲು ಅಭಿನಯ ಗೀತೆಗಳಿಗೆ ಹೆಚ್ಚು ಶಕ್ತಿ ಇದೆ. ಅಭಿನಯ
ಮೂಲಕ ಅದನ್ನು ಸಾಧಿಸುವ ಬಗ್ಗೆ ಪೈಗಳು ಉತ್ಸುಕರಾಗಿದ್ದರು.

ಅವರ ಸಾಹಿತ್ಯ ಪ್ರೇಮ - ಶ್ರಮ ಅಪಾರವಾದುದು. ಆರ್ಥಿಕವಾಗಿ ಅವರೇನ
ಅಷ್ಟೊಂದು ಶಕ್ತರಾಗದಿದ್ದರೂ ಸಾಹಿತ್ಯಕ್ಕಾಗಿ ಖರ್ಚು ಮಾಡಲು ಅವರಲ್ಲಿ ಹಣವಿಲ್ಲದಿದ್ದರ
ಸಮ್ಮೇಳನಗಳಿಗೆ ಹೋಗುವುದು ಭಾಗವಹಿಸುವುದು ಅವರಿಗೆ ಖುಷಿ ತರುವ ಸಂಗತಿಯಾಗಿತ್ತು
ಕನ್ನಡದ ಕಟ್ಟಾ ಅಭಿಮಾನಿಯಾಗಿ ಪೈಗಳು ಸ್ಮರಣೀಯರಾಗಿದ್ದಾರೆ.

ತೋನ್ಸೆ ಮಂಗೇಶ ರಾಯರು

ತೋನ್ಸೆ ಮಂಗೇಶ ರಾಯರು ಈ ಶತಮಾನದ ಆದಿಯಲ್ಲಿದ್ದ ಪ್ರಸಿದ್ಧ ವಿದ್ವಾಂಸ, ರಸಿಕ
ಮಕ್ಕಳ ಮನದಾಳ ಹರಹುಗಳನ್ನು ಬಲ್ಲ ಕವಿ, ವಿಜ್ಞಾನಿ, ಬರಹಗಾರರೆಂದು ಖ್ಯಾತರಾಗಿದ್ದಾರ
ಮಕ್ಕಳ ಮನೋಭಾವವನ್ನು ಅರಿತು ಅದಕ್ಕೆ ತಕ್ಕಂತೆ ವ್ಯವಹರಿಸಬಲ್ಲವರಾಗಿ ಅವ
ಮನೋವಿಜ್ಞಾನವನ್ನು ಅರ್ಥಮಾಡಿಕೊಂಡವರಾಗಿ ಗಣ್ಯರೆನಿಸಿದ್ದಾರೆ.

ಪ್ರಕೃತಿ ಶಾಸ್ತ್ರದ ಪ್ರಾರಂಭದ ಲೇಖಕರೆಂದು ಗುರುತಿಸಲ್ಪಟ್ಟಿದ್ದಾರೆ. ಪ್ರಕೃತಿ ಶಾಸ್ತ್ರ ಅವ
ಮನೋಧರ್ಮದ ಬಹು ಮುಖ್ಯ ಆಕರ್ಷಣೆ. ಸುತ್ತು ಮುತ್ತಣ ಪ್ರಕೃತಿ, ಪ್ರತಿದಿನ ಕಣ್ಣಿಗೆ ಬೀಳು
ಮರ - ಗಿಡ - ಪಶುಪಕ್ಷಿ, ಹೂ ಹಣ್ಣುಗಳು ಅವರ ಉತ್ತಮ ಆಯ್ಕೆಗಳಾಗಿ ಗೋಚರಿಸಿ
ಪದಾರ್ಥ ವಿಜ್ಞಾನದಲ್ಲಿ ಅಧ್ಯಾಪಕರಿಗೆ ಇದು ಮಾರ್ಗದರ್ಶಿಯಾದ ಉಪಯುಕ್ತ ಗ್ರಂಥವೆನಿಸಿ

ಪ್ರಕೃತಿ ಶಾಸ್ತ್ರವಲ್ಲದೆ ಪದಾರ್ಥ ವಿಜ್ಞಾನ ಶಾಸ್ತ್ರ ರಸಾಯನ ಶಾಸ್ತ್ರವೆಂಬ ಪುಸ್ತಕಗಳನ
ಅವರು ಬರೆದಿದ್ದಾರೆ. ಕಿಂಡರ್ ಗಾರ್ಟನ್ ಕೈಪಿಡಿಯಲ್ಲಿ ಮಕ್ಕಳ ಕುತೂಹಲ ಕೆರಳಿಸುವ ಕಥೆ
ನಿರೂಪಣೆಯ ಮೂಲಕ ಪ್ರಪಂಚ ಜ್ಞಾನವನ್ನೊದಗಿಸುವ ಸಾಹಸವನ್ನು ಕಾಣಬಹುದಾಗಿದೆ.

'ಟೊಪ್ಪಿ ಇಟ್ಟುಕೊಂಡ ಮಂಗಗಳು' ಮುಂತಾದ ಇವರ ಮಕ್ಕಳ ಕತೆಗಳ
ಜನಪ್ರಿಯವೆನಿಸಿವೆ.

ಎಂ. ಎನ್. ಕಾಮತರೂ ತೋನ್ಸೆಯವರೂ 'ಬೋಧಿನಿ' ಎಂಬ ಪತ್ರಿಕೆಯನ್ನು ಜೊತೆಯಾ
ನಡೆಸುವ ಮೂಲಕ ಸಾಕಷ್ಟು ಸಾಹಿತ್ಯ ಸೇವೆ ಮಾಡಿದ್ದಾರೆ.

ಶ್ರೀ ಕಲ್ಲಜೆ ಗೋಪಾಲಕೃಷ್ಣ ಶಾಸ್ತ್ರಿಗಳು

ಶ್ರೀ ಶಾಸ್ತ್ರಿಗಳು ಪ್ರಗಲ್ಭ ಪಂಡಿತರಾಗಿ ಕನ್ನಡ, ಸಂಸ್ಕೃತಗಳೆರಡರಲ್ಲಿಯೂ ನಿಷ್ಣಾತರಾಗಿದ್ದರು. ಮಹಾಕವಿ ಕಾಳಿದಾಸನ 'ರಘುವಂಶ'ವನ್ನು ಕನ್ನಡಕ್ಕೆ ತರ್ಜುಮೆ ಮಾಡಿದ ಹಿರಿಮೆ ಶ್ರೀ ಶಾಸ್ತ್ರಿಗಳದು. ಇದನ್ನು ಮದ್ರಾಸ್ ಸರಕಾರವು ಪಠ್ಯ ಪುಸ್ತಕವನ್ನಾಗಿ ಅಂಗೀಕರಿಸಿತು. ಕಾಳಿದಾಸನ ಸೊಗಸನ್ನು ಮಹತ್ವವನ್ನು ಈ ಕೃತಿ ಮೈಗೂಡಿಸಿಕೊಂಡಿರುವುದು ಇವರ ಹಿರಿಮೆಯನ್ನು ಸಾರಿದೆ.

ಬಂಗಾಳಿ ಕೃತಿ, ದ್ವಿಜೇಂದ್ರ ಲಾಲ್ ಬಾಬು ಅವರ ಕಾಳಿದಾಸ ಮತ್ತು ಭವಭೂತಿ ಎಂಬ ವಿಮರ್ಶಾತ್ಮಕ ಉದ್ಗ್ರಂಥವನ್ನು ಇವರು ಕನ್ನಡಕ್ಕೆ ತಂದು ಉತ್ತಮ ಸಾಧನೆ ತೋರಿದ್ದಾರೆ. ಇವರ ಪಾಂಡಿತ್ಯ ರಚನಾ ಸಾಮರ್ಥ್ಯಗಳಿಗೂ ಈ ಕೃತಿ ಕೈಗನ್ನಡಿಯೆನಿಸಿದೆ.

ಟಿ. ಚಂದ್ರರಾಜ ಶೆಟ್ಟರು

ಸಿದ್ಧಕಟ್ಟೆಯ ಚಂದ್ರರಾಜ ಶೆಟ್ಟರು ಕನ್ನಡದ ಕೈಂಕರ್ಯವನ್ನು ಶ್ರದ್ಧೆಯಿಂದ ನಡೆಸಿಕೊಂಡು ಬಂದಿದ್ದಾರೆ. ಕನ್ನಡದ ಕವಿ ಸಾಹಿತಿ ಸಾಹಿತ್ಯ ಕೃತಿ ಪ್ರತಿಯೊಂದರ ವಿವರವೂ ಅವರಲ್ಲಿತ್ತು ! ಯಾವ ಪತ್ರಿಕೆಯನ್ನು ತೆಗೆದರೂ ಅವರು ಕನ್ನಡದ ಸಾಹಿತ್ಯ - ಕೃತಿಗಳ ಬಗ್ಗೆ ಆಳವಾದ ಸಂಗ್ರಹ ರಚಿಸಿದುದನ್ನು ಕಾಣಬಹುದಾಗಿತ್ತು.

ಶ್ರೀ ಮಿತ್ತೂರು ಶಂಕರನಾರಾಯಣ ಭಟ್ಟರು

ಸಂಸ್ಕೃತ ಕನ್ನಡಗಳಲ್ಲಿ ಅಪ್ರತಿಮ ವಿದ್ವಾಂಸರೆನಿಸಿದ ಶ್ರೀ ಭಟ್ಟರು ವೈದಿಕ ಧಾರ್ಮಿಕ ಕ್ಷೇತ್ರಗಳಲ್ಲಿಯೂ ಪರಿಣತರು. ಸಂಸ್ಕೃತ, ಕನ್ನಡ ಸಾಹಿತ್ಯವನ್ನು ಆಳವಾಗಿ ಅಭ್ಯಸಿಸಿದವರು. 'ಸಂಧ್ಯಾಭಾಷ್ಯ' ಎಂಬ ಅವರ ಗ್ರಂಥ ಕನ್ನಡಕ್ಕೆ ಸಂದ ಕೊಡುಗೆ. ವಿವೇಕವನ್ನು ಜಾಗೃತಗೊಳಿಸುವ ಮನಸ್ಸನ್ನು ಹಸನಾಗಿಸುವ ದೃಷ್ಟಿಯಲ್ಲಿ ಇವರ ಈ ಉದ್ಗ್ರಂಥ ಯಶಸ್ವಿಯಾಗಿದೆ. ಇದೇ ರೀತಿ ಹಲವಾರು ಪ್ರಬುದ್ಧ ವಿಚಾರಗಳನ್ನು ತಿಳಿಸುವ ಲೇಖನಗಳಿಂದ ಅವರು ಸಾಮಾಜಿಕ ಸಂಸ್ಕಾರ, ಮಾನವನ ಕರ್ತವ್ಯ ಪ್ರಜ್ಞೆಯನ್ನು ಧಾರ್ಮಿಕ ಚಿಂತನೆಯನ್ನು ಜಾಗೃತಿಗೊಳಿಸುವ ಕೆಲಸ ಮಾಡಿದ್ದಾರೆ.

ಪತ್ರಕರ್ತ ಸಾಹಿತಿ ಎಂ. ವಿ. ಹೆಗ್ಡೆ

ಶ್ರೀ ಮಣ್ಣಾರು ವಿಠಲ ಹೆಗಡೆಯವರು ವಿಡಂಬನ ಕ್ಷೇತ್ರದಲ್ಲಿ ಪ್ರಖ್ಯಾತರಾಗಿದ್ದರು. ಉಡುಪಿ ಪರಿಸರದ ಸಾಹಿತ್ಯಜ್ಞ ಪಲಿಮಾರಿಂದ ಮೇಲೆದ್ದು ಬಂದು ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿ ಪತ್ರಕರ್ತರಾಗಿ ದುಡಿದವರು. ದಶಾವತಾರಗಳು ಅರ್ಥಾತ್ ದಶಾಪರಾಧಗಳು ಇವರು ಬರೆದ ವಿಡಂಬನಾತ್ಮಕ ಉತ್ಕೃಷ್ಟ ಕೃತಿ.

ವವ ಭಾರತ ದಿನಪತ್ರಿಕೆಯಲ್ಲಿ ಶ್ರೀ ಹೆಗಡೆಯವರು ಬರೆಯುತ್ತಿದ್ದ "ಅರ್ಥಗರ್ಭಿತ ವಾರ್ತೆಗಳು" ಬಹಳ ಅರ್ಥವತ್ತಾಗಿ ವ್ಯಂಗ್ಯಭರಿತವಾಗಿತ್ತು. ಇದು ಅವರ ಬಹು ದೊಡ್ಡ ಸಾಧನೆ. ಅವು ಸಂಕಲನವಾಗಿ ಪ್ರಕಟವಾಗಿದ್ದರೆ ಬಹಳ ಮೌಲ್ಯಭರಿತವಾಗಬಹುದಿತ್ತು. ಅವರೊಬ್ಬ ಅಂಕಣಕಾರರಾಗಿ ಉತ್ತಮ ಪತ್ರಕರ್ತರಾಗಿ ವಿಡಂಬನಕಾರರಾಗಿ ಹೆಸರಾಗಿದ್ದಾರೆ.

ಜೀವನ ಸಂಗೀತದ ಕವಿ

ಶ್ರೀ ಬಿ. ವಿಠಲದಾಸ ಶೆಟ್ಟರು

ಉತ್ತಮ ರಾಜಕಾರಣಿಯಾಗಿ ಸಚಿವರಾಗಿ - ಸಮಾಜ ಸೇವಕರಾಗಿ ಶ್ರೀ ಬಿ. ವಿಠಲದಾಸ ಶೆಟ್ಟರು ಉತ್ತಮ ಜೀವನ ನಡೆಸಿದರು.

ಇದಕ್ಕೆಲ್ಲಾ ಮೂಲ ಸೆಲೆ ಅವರ ಕವಿ ಹೃದಯ. ಅದು ಅವರಿಗೆ ವಿಶೇಷ ಅರ್ಹತೆಯನ್ನೊದಗಿಸಿ ಕೊಟ್ಟಿದೆಯೆನ್ನಬೇಕು. ಅವರೊಬ್ಬ ಉತ್ತಮ ವಾಗ್ಮಿ. ಸಮರ್ಥ ಬರೆಹಗಾರ, ಓದುಗ, ಚಿಂತಕ, ಸದಾ ಚಟುವಟಿಕೆಗಳ ವ್ಯಕ್ತಿ. ನಾನಾ ಮುಖಗಳಿಂದ ಅವರು ಆತ್ಮ ವಿಕಸನವನ್ನು ಸಾಧಿಸಿಕೊಂಡವರು. ಅವರ ಕವಿತಾ ಶಕ್ತಿಯ ಬಗ್ಗೆ ತಿಳಿದುಕೊಳ್ಳಲು ರಾಷ್ಟ್ರಕವಿ ಗೋವಿಂದ ಪೈಗಳು 'ಜೀವನ ಸಂಗೀತ'ಕ್ಕೆ ಬರೆದ ಮುನ್ನುಡಿಯನ್ನು ನಾವು ನೋಡಬಹುದು.

"ಇದೊಂದು ಸುಂದರವಾದ ಕವಿತಾ ಸಂಗ್ರಹ. ಕವಿಗೆ ಹೆಸರನ್ನು ತರತಕ್ಕಂಥ ಕವಿತಾ ಸಂಗ್ರಹ. ಇವರೊಂದಿಗೆ ಕನ್ನಡ ಕಾವ್ಯ ಸಾಹಿತ್ಯದಲ್ಲಿ ಮೂಡುವ ಈ ಕವಿಯನ್ನು ತ್ರಿಧಾ ಸ್ವಾಗತಿಸುತ್ತೇನೆ.

ಇದರಲ್ಲಿಯ ಕವಿತೆಗಳೆಲ್ಲವೂ ಚಲೋದಾಗಿವೆ. ಅವಲ್ಲಿ ಕೆಲವನ್ನೇ ಕುರಿವುದಾದರೆ ನಿವೇದನೆ, ಸ್ವಾತಂತ್ರ್ಯ ಪಡೆದೇನು, ರೈತರ ಹಾಡು ಅಳು - ನಗು ಮೊದಲಾದ ಹಲವು ಕವಿತೆಗಳು ಬಹಳ ಚೆನ್ನಾಗಿವೆ. ಹಾಗೂ ಕಂಬನಿಯ ಹಿಮಸ್ನಾನ, ಬಾಳಿಗೆ ಬಣ್ಣವ ಬಳಿಯೋಣ, ಮೊದಲಾದ ರೂಪಕಗಳು ಓದುಗರನ್ನು ತಲೆ ತೂಗಿಸುವಂಥ ರೂಪಕಗಳು, ಒಳದನಿಯಲ್ಲಿ ಹಳ್ಳಿಯ ಮಂದಿಯ ಮರೆತಿರುವಿ ಎಂದು ಕವಿಯನ್ನು ಎಚ್ಚರಿಸುವ ಮಾತು ಇಂದಿನ ಕಬ್ಬಿಗರು ಸೆರಗಿನಲ್ಲಿ ಕಟ್ಟಿಕೊಳ್ಳತಕ್ಕ ಮಾತು. ಸ್ವಾತಂತ್ರ್ಯ ಪಡೆದೇನು ಎಂಬ ಕವಿತೆ ಇಂದಿನ ನಾಗರಿಕರು ತಮ್ಮ ಮುಸುಕು ಕನ್ನಡಕಗಳನ್ನು ಉಜ್ಜುಜ್ಜಿ ಓದಬೇಕಾದ ಕವಿತೆ. ಇಂಥವನ್ನು ಬರೆದ ಕವಿಯನ್ನು ಪುನಃಪುನಃ ಅಭಿನಂದಿಸುತ್ತೇನೆ. "ಈ ಕವಿಗೆ ದೇವರು ದೀರ್ಘಾಯುಷ್ಯವನ್ನು ದೀರ್ಘಾರೋಗ್ಯವನ್ನು ದಯಪಾಲಿಸಿ ಈ ಮುಂದೆ ಇವರು ಮತ್ತು ಮೇಲು ಮೇಲಾದ ಕವಿತೆಗಳನ್ನು ಕಾವ್ಯಗಳನ್ನೂ ರಚಿಸುವಂತೆ ಅನುಗ್ರಹಿಸಲಿ ಎಂದು ಆತನನ್ನು ಪ್ರಾರ್ಥಿಸುತ್ತೇನೆ.

ಇತೀ ಶಮ್

ಗೋವಿಂದ ಪೈ

ಶ್ರೀ ಗೋವಿಂದ ಪೈಗಳು ಕಂಡುಕೊಂಡ ವಿಚಾರ ಲಹರಿ ಕಾವ್ಯದಲ್ಲಿ ಓತಪ್ರೋತವಾಗಿ ಹರಿದು ಬಂದಿದೆ. ಹಿರಿಯ ಸ್ವಾತಂತ್ರ್ಯ ಯೋಧ ಶ್ರೇಷ್ಠ ಬರೆಹಗಾರ ಶ್ರೀ ಕೆ. ಕೆ. ಶೆಟ್ಟರೂ ವಿಠಲ ದಾಸ ಶೆಟ್ಟರ ಬಗ್ಗೆ ಅಭಿಮಾನವಿರಿಸಿಕೊಂಡಿದ್ದರು. "ರಾಜಕೀಯ ತಿರುಗಣಿ - ಮಡುವಿನೊಳಗೆ ಸಿಲುಕಿ ಛಲತೊಟ್ಟು ಹೋರಾಡಿ ಕಠಿಣ ವಿಮರ್ಶಕತೆಯ ಬಿರುಸು ಬೀಸುವ ಅವರಲ್ಲಿ ಈ ಜೀವನ ಸಂಗೀತದ ಕವನಗಳಲ್ಲಿ ಕಾರಂಜಿಯಾಗಿ ರಂಜಿಸುವ ಭಾವ - ರಸತರಂಗಿಣಿಯು ಗುಪ್ತಗಾಮಿನಿಯಾಗಿರುವಳೆಂಬ

ಕಲ್ಪನೆ ಕೂಡಾ ನನಗೆ ಇರಲಿಲ್ಲ. ಎಂಬುದಾಗಿ ಕೆ. ಕೆ. ಶೆಟ್ಟರು ಅಚ್ಚರಿಯನ್ನು ವ್ಯಕ್ತಪಡಿಸಿದ್ದಾರೆ. "ಅವು ಮೊಳೆಯುವ ಕುಡಿ ಮೊಗ್ಗುಗಳು ಕೂಡಾ ಅಲ್ಲ, ಪರಿಮಳದ ಅರಳುಮಲ್ಲಿಗೆಗಳೆಂಬುದನ್ನು ಮನಗಂಡೆ"ನೆಂದು ಅವರು ಹೇಳುತ್ತಾರೆ.

ಕವಿಯ ಒಳದನಿ ಹೀಗೆ ಹೇಳುತ್ತದೆ.

'ಮನೆ ಮಾಡಿರುವೆನು ಈ ಹಳ್ಳಿಯಲಿ
ಮಣ್ಣಿನ ಮಕ್ಕಳ ಮಧ್ಯದಲಿ
ಅನ್ನವ ನೀಡುವ ನೆಲವಿಹುದು
ಹೊನ್ನಿನ ವರ್ಣದ ಪೈರಿಹುದು
ಬಣ್ಣದ ಬಾನಿನ ಚೆಲುವಿಹುದು
ಚಿನ್ನದ ಸೂರ್ಯನ ಸೊಗಸಿಹುದು
ಹಣ್ಣಿನ ಹಂಪಲು
ಕೋಗಿಲೆ ಗಿಳಿಗಳ ಬೀಡಿಲ್ಲಿ
ಹಾಡುತ ದುಡಿಯುವ ಹೆಣ್ಣಿಲ್ಲಿ
ನಲಿಯುತ ಹರಿಯುವ ತೋಡಿಲ್ಲಿ
ರಕ್ತದ ಮೋಡವು ತೇಲುತಿದೆ
ಕ್ರಾಂತಿಯ ಮಿಂಚದೋ ಹಾರುತಿದೆ'

ಇಂಥ ಕವಿತೆಗಳಿಂದ ಕ್ರಾಂತಿಕಾರಿ ಕವಿಗಳಾಗಿ ನಾಲ್ಕರ ದಶಕದಲ್ಲಿಯೇ ಮಿಂಚಿದ್ದಾರೆ.

"ಸತ್ಯದ ಹೆಸರು ಧರ್ಮದ ಹೆಸರಲಿ
ಅತ್ಯಾಚಾರವ ನಡೆಸುವರಿಲ್ಲಿ
ಕತ್ತನು ಹಿಸುಕುವ ಕಪಟಿಗಳಿಲ್ಲಿ
ದಲಿತರ ನೆತ್ತರು ಕುಡಿಯುವರಿಲ್ಲಿ"

ದಲಿತರ ಬಗ್ಗೆ ಕವಿಯ ಅನುಕಂಪ - ಆದರಗಳು ಅಂದಿನ ದಿನಗಳಲ್ಲಿ ಜಾಗೃತವಾಗಿದ್ದುದನ್ನು ನಾವು ಗಮನಿಸಬಹುದು. ದಲಿತ - ಬಂಡಾಯ ಮನೋವೃತ್ತಿ ಶ್ರೀ ವಿಠಲ ದಾಸ ಶೆಟ್ಟರಲ್ಲಿದ್ದುದನ್ನು ನಾವು ಕಾಣಬಹುದು.

ತೆಂಗಿನ ಕಂಗಿನ ತೋಟಗಳ
ಬೆಟ್ಟದ ಮಲೆಗಳ ನೋಟಗಳ
ಪಚ್ಚೆಯ ಪೈರಿನ ಬಯಲುಗಳ
ಕಿನ್ನರ ಖಗಗಳ ಕೂಟಗಳ
ಕವಿ ನೀ ವರ್ಣಿಸಿ ಬರೆದಿರುವಿ
ಹಾಡುತ ಹಾಡಿಸಿ ಮೆರೆದಿರುವಿ
ವಿಶ್ವವನೆಲ್ಲಾ ಒಲಿಸಿರುವಿ

ಹಳ್ಳಿಯ ಮಂದಿಯ ಮರೆತಿರುವಿ
ಸಾವಿನ ರೌದ್ರವ ನೃತ್ಯವ ನೋಡು
ತನು ಮನವೆಲ್ಲಾ ಸೇವೆಗೆ ನೀಡು
ದಲಿತರ ಪಾಲಿನ ಹಾಡನು ಹಾಡು"

ಇಂಥ ಮನೋಭಾವವು ಅವರನ್ನು ಸಾಮಾಜಿಕವಾಗಿ ರಾಜಕೀಯವಾಗಿ ಮುನ್ನುಗ್ಗುವಂತೆ ಪ್ರೇರಕವಾಗಿದೆ.

ಹಾಡುತಿರುವ ಹಕ್ಕಿಯನ್ನು
ಓಡುತಿರುವ ಹರಿಣಿಯನ್ನು ತಡೆದು ಹೇಳಿ ನಿನ್ನ ಹುಡುಕಿ ನೋಡಿರೆಂದು
ಬೇಡಿನಿಂದು
ಅಲೆಯುತಿರುವ ತುಂಬಿ ಯೊಡನೆ
ಅರಳುತಿರುವ ಹೂವಿನೊಡನೆ
ಸುಳಿಯುತಿರುವ ಅನಿಲನೊಡನೆ
ನಿನ್ನ ಕೇಳಿ ನೋಡಿದೆ"

ಎನ್ನುವ ಅವರ 'ಸ್ವಪ್ನ ಗಾನ'ವು 'ಊರ್ವಶಿ'ಯನ್ನರಸುವ ಪುರೂರವನನ್ನು ನೆನಪಿಗೆ ತರುತ್ತದೆ. ಕವಿ ಹೃದಯರ ಮೋಡಿ ಇಂಥ ಕವನಗಳಲ್ಲಿ ರಂಜಿಸಿದೆ. ಸ್ವಾತಂತ್ರ್ಯ ಸಮರದ ಅವರ ಅದಮ್ಯ ಉತ್ಸಾಹ 'ಸ್ವಾತಂತ್ರ್ಯ ಪಡೆದೇನು' ಎಂಬ ಕವನದಲ್ಲಿ ವ್ಯಕ್ತವಾಗಿದೆ.

ಸ್ವಾತಂತ್ರ್ಯ ಪಡೆದೇನು ಪರತಂತ್ರ ಮುರಿದೇನು
ಇಂದೇನು ? ಇಂದೇನು ? ನಿನ್ನಯ ಹಿಂದೇನು ?
ಇಂದೇನು ? ಇಂದು ?
ಒಡಲುರಿಯು ನಂದಿಲ್ಲ, ಬೆವರ ಮಳೆ ನಿಂದಲ್ಲ
ಬಾಳುವೆಯು ಬಸಿರೊಡನೆ ಬವರನು ಸಾರುತ್ತ
ಕೇಳುತಿದೆ ಮುಂದೇನು ?
ಎದೆಯುಗಲ ಬಾನಿನಲಿ ಹಳೆ ದಿನದ ಕನಸುಗಳು
ಸಿಡಿದೊಡೆದು ಗುಡುಗುತಿವೆ
ರಕ್ತಮಳೆ ಸುರಿಯುತಿದೆ ಮನವೆಂಬ ಹಕ್ಕಿಯದು
ಮಾಸುತ್ತ ಕೇಳುತಿದೆ ಆಶೆಯಾ ಬಾನಕ್ಕಿ
ಹಾರುತ್ತ ಹಾಡುತ್ತಿದೆ
ಸ್ವಾತಂತ್ರ್ಯ ಪಡೆದೇನು ಪರತಂತ್ರ ಮುರಿದೇನು.

ಸ್ವಾತಂತ್ರ್ಯ ಪಡೆಯುವುದರಲ್ಲಿ ದೀನದಲಿತರಿಗೆ ನ್ಯಾಯವೊದಗಿಸುವ ಹರಕೆಯನ್ನು ಕವಿ ಹೊತ್ತಿದ್ದಾರೆ.

'ರಕ್ತದಿಂ ಕ್ಷೀರವದು ಪುಟ್ಟದೆ ?

ದಲಿತ ಜನಸಕ್ತಿ ಮುಂದೋಡಿ
ಜನಜಾಗೃತಿಯ ರಾಜ್ಯವನು ಕಟ್ಟಿಹರು

ಕ್ರಾಂತಿಕಾರಿ ಮನೋಭಾವದೊಂದಿಗೆ ಜನಜಾಗೃತಿ ಹಂಬಲಿಸುವ ದಲಿತ ಶಕ್ತಿ ಮುಂದೆ ಸಾಗುವ ಆಕಾಂಕ್ಷೆ ಕವಿ ಹೃದಯದ ಎತ್ತರ - ಬಿತ್ತರಗಳನ್ನು ನಿರೂಪಿಸಿದೆ. ನಾಡಿನ ದುಃಸ್ಥಿತಿಯನ್ನು ಕಂಡು ಕವಿ ಮರುಗುವ ಪರಿಯನ್ನು ನೋಡಿ.

"ಎಲ್ಲಿಹುದು ಚೆಲು ನಾಡು ? ಇಲ್ಲಿಹುದು ಸುಡುಗಾಡು
ನೂರುಭೂತದ ಕಾಟ ನೂರು ಜಾತಿಯ ಕೂಟ
ಬಲ್ಲಿದರ ಪಿಕಲಾಟ, ತಮ್ಮೊಳಗೆ ಜಗಳಾಟ
ಎಲ್ಲಿಹುದು ಒಕ್ಕೂಟ ? ಇಲಿ ಬೆಕ್ಕಿನಾಟ
ರೈತರ ಹಾಡು ರೈತ ರಾಜ್ಯ ಕಟ್ಟುವ ಕನಸನ್ನು ಬಿಂಬಿಸಿದೆ.
ಬತ್ತದ ತೆನೆಗಳು, ತೆಂಗಿನ ಗೊನೆಗಳು
"ಬಾಳಿನ ಹಾಡನ್ನು ಹಾಡ್ಯಾವು
ಸುಖದಿಂದ ಬರಲೆಂದು ಬೇಡ್ಯಾವು
ಮನಸಿಗೆ ಹರುಷವ ನೀಡ್ಯಾವು
ಬದುಕನ್ನೇ ಬಂಗಾರ ಮಾಡ್ಯಾವು"
"ಹಕ್ಕಿಯಾಗಿ ಹಾರುವ ಮೇಘವನ್ನು ಏರುವ
ಬಾನ ಚೆಲುವು ನೋಡುವ ಹೊನ್ನ ದಿನವ ಕಳೆಯುವ
ಚಿನ್ನು ರವಿಯ ಬೀಡುವ ಇಳೆಯ ಹೊನ್ನು ಮಾಡುವ"
ತನಿಯಪ್ಪ, ತಿಮ್ಮಪ್ಪ, ರಾಮಪ್ಪ, ಸೋಮಪ್ಪ ರಣಡೋಲು ಬಡಿಯುತ್ತ ಬನ್ನಿ
ಬಡತನ ಭೂತವು ಕುನ್ನಿ ; ಎಲ್ಲಿದೆ ಹುಡುಕೋಣವೆನ್ನಿ ;
ಪಿಕ್ಕಾಸು ಹಾರೆಯ ತನ್ನಿ;

ರೈತರಿಗೆ ಅವರು ನೀಡಿದ ಕರೆ ರೈತ ಸಂಘ ಕಟ್ಟುವ ಮೂಲಕ ಕವಿಯಾಗಿ ಕೊಟ್ಟ ಕರೆಯನ್ನು ಸಾಮಾಜಿಕ ಕಾರ್ಯಕರ್ತನಾಗಿ ಅವರು ಸಾಧಿಸಿದ್ದಾರೆ.

"ಅಳು ನಗು" ಕವನ ಅವರ ಸ್ಥಿತ ಪ್ರಜ್ಞತೆಯನ್ನು ಸಾರಿದೆ.

ಸಿಹಿಯ ಹಣ್ಣು ಒಳಗಿದೆ, ಕಹಿಯ ಸಿಪ್ಪೆ ಹೊರಗಿದೆ
ಕಹಿಯು ಸಿಹಿಯು ಬೆರೆಸಿದೆ
ಬಿಳಿಯ ಚಂದ್ರ ಉದಿಸಿದೆ ಕರಿದು ಮೋಡ ಮುಸುಕಿದೆ
ಕರಿದು ಬಿಳಿದು ಬೆರೆಸಿದೆ
ಮೇಲೆ ಕಮಲವರಳಿದೆ ಕೆಳಗೆ ಕೆಸರು ಅಡಗಿದೆ
ಹೊಲಸು ಸೊಗಸು ಬೆರೆಸಿದೆ
ಅಳುವ ಹಿಂದೆ ನಗುವಿದೆ ನಗುವ ಹಿಂದೆ ಅಳುವಿದೆ
ಅಳುವು ನಗುವು ಬೆರೆಸಿದೆ.

ಶ್ರೀ ವಿಠಲದಾಸ ಶೆಟ್ಟರ ಜೀವನವನ್ನು ಈ ಕವನಗಳು ಸಮರ್ಥವಾಗಿ ಪ್ರತಿನಿಧಿಸಿವೆ. "ಕಣ್ಣೀರ ಕರಿ" ದಿನಗಳಲ್ಲಿ ಎಂಬ ಕಾದಂಬರಿ, "ಬಾಳಿನ ಬಾಗಿಲಲ್ಲಿ" ಎಂಬ ನೀಳ್ಗತೆ ಕೂಡಾ ಅವರು ರಚಿಸಿದ್ದಾರೆ. ಇವೆರಡೂ ಸ್ವಾತಂತ್ರ್ಯ ಸ್ಫೂರ್ತಿ, ಹಳ್ಳಿಯ ಸ್ಥಿತಿಗತಿಗಳನ್ನು ಬಿಂಬಿಸುವ ಕೃತಿಗಳಾಗಿವೆ. ಸಾಹಿತಿಯಾಗಿ ರಾಜಕಾರಣಿಯಾಗಿ ಅವರ ಸಾಧನೆ ಅಸಾಮಾನ್ಯ.

ಧರ್ಮಸ್ಥಳದ ಧರ್ಮಾಧಿಕಾರಿ ಮಂಜಯ್ಯ ಹೆಗಡೆಯವರು

ಮಾನ್ಯ ಶ್ರೀ ಧರ್ಮಸ್ಥಳದ ಧರ್ಮಾಧಿಕಾರಿ ಮಂಜಯ್ಯ ಹೆಗಡೆಯವರು ಮಾತನಾಡುವ ಮಂಜುನಾಥನಾಗಿ ಭಕ್ತರಿಗೆ ಆರಾಧನೀಯರಾಗಿದ್ದವರು. ಅವರು ಶ್ರೀ ಕ್ಷೇತ್ರದಲ್ಲಿ ನಡೆಸಿಕೊಂಡು ಬಂದ ಧರ್ಮ ಸಮ್ಮೇಳನ, ಸಾಹಿತ್ಯ ಸಮ್ಮೇಳನಗಳು ಅವರ ಧರ್ಮ - ಸಾಹಿತ್ಯಗಳ ಆಸಕ್ತಿಗೆ ದ್ಯೋತಕವಾಗಿವೆ. ಕಲಾವಿದರು, ಸಾಹಿತಿಗಳು ಅವರಿಗೆ ಆತ್ಮೀಯರಾಗಿದ್ದರು. ನಾಡಿನ ಹಿರಿಯ ಕಿರಿಯ ಸಾಹಿತಿಗಳೆಲ್ಲರನ್ನೂ ಅವರು ಬರಮಾಡಿಕೊಂಡು ಗೌರವಿಸುತ್ತಿದ್ದರು. ಪಂಜೆ, ಮುಳಿಯ, ಕಾರಂತ, ಕಡೆಂಗೋಡ್ಲು, ಅನಕೃ, ಮಾಸ್ತಿ, ಡಿ.ವಿ.ಜಿ., ಎಲ್ಲರೊಡನೆಯೂ ಅವರಿಗೆ ಸೌಹಾರ್ದವಿತ್ತು. ಅವರು ಅಂಥ ಪಾಂಡಿತ್ಯ, ಪ್ರತಿಭೆ, ಕ್ರತು ಶಕ್ತಿಗಳಿಂದ ಪರಿಪೂರ್ಣರಾಗಿದ್ದರು. ಕನ್ನಡ ಮಾತ್ರವಲ್ಲ ತುಳುವಿನಲ್ಲಿಯೂ ಅವರಿಗೆ ಅಪಾರ ಪ್ರೇಮವಿತ್ತು.

ದೇವೆರ್, ಅಂದೇ ಸ್ವಾಮಿ ಎಂಚಾ, ಜೈನೆರ್, ತುಳು ನಿತ್ಯ ವಿಧಿ ಎಂಬ ತುಳು ಕೃತಿಗಳನ್ನು ಅವರು ರಚಿಸಿದ್ದರು. ಆಗ ಇನ್ನೂ ತುಳುವಿಗೆ ಇಂದಿನಷ್ಟು ಗೌರವವಿರಲಿಲ್ಲ. ಅದಕ್ಕೆ ಬುನಾದಿ ಹಾಕಿದವರಲ್ಲಿ ಮಾನ್ಯ ಹೆಗಡೆಯವರೊಬ್ಬರು. ಸಂಕ್ಷಿಪ್ತ ಸ್ತೋತ್ರ, ಜನ ಸಂಗ್ರಹ, ಪಾಪ - ಪುಣ್ಯ ಎಂಬ ಎರಡು ರಚನೆಗಳನ್ನು ಅವರು ಪ್ರಕಟಪಡಿಸಿದ್ದಾರೆ.

ಅನೇಕ ಕವಿಗಳಿಗೆ ಸಾಹಿತಿಗಳಿಗೆ ಇವರು ಬರೆದ ಮುನ್ನುಡಿಯಿಂದ ಇವರ ವಿದ್ವತ್ತೆ ವ್ಯಕ್ತವಾಗುವಂತಿದೆ. ಇವರು ಚೈತನ್ಯ ಎಂಬ ಕವಿತೆ ರಚಿಸಿದ್ದಾರೆ. ಅದರ ಭಾಷೆ ಶೈಲಿ ಉಚ್ಚಮಟ್ಟದ್ದಾಗಿದೆ. ಅವರ ಮನಸ್ಸು ಉದಾರವಾದುದು. ವಿಚಾರ ಉನ್ನತ ಮಟ್ಟದ್ದು. ಚಿಂತನ ಶೈಲಿ ಅನ್ಯಾದೃಶ ! ನಾಡು - ನುಡಿಗಳ ಹಿತಚಿಂತನೆಯಲ್ಲಿ ಅವರು ಸದಾ ತತ್ಪರರು. !

ನಾಡೋಜ ಪಂಪನ ಬಗ್ಗೆ ಅವರು ಚಿತ್ರಿಸಿದ ಚಿತ್ರವು ಮಾದರಿಯಾದುದು. ದಿ.ತಿಮ್ಮಪ್ಪಯ್ಯನವರು ಪಂಪನ ಬಗ್ಗೆ ಮಾಡಿದ ಗಹನವಾದ ಅಧ್ಯಯನಕ್ಕೊಪ್ಪುವ ಚಿತ್ರವನ್ನು ಅವರು ರಚಿಸಿದ್ದರೂ ಅದನ್ನು ಕಂಡಾಗ ಅವರ ಕಲಾ ಪ್ರೌಢಿಮೆಗೆ ಯಾರಾದರೂ ತಲೆದೂಗಲೇ ಬೇಕು.

ಕನ್ನಡ ಸಾಹಿತ್ಯ ಪರಿಷತ್ತು ಕನ್ನಡದ ಬಗ್ಗೆ ಜನರ ನಾಡಿಯ ಮಿಡಿತದ ಬಗ್ಗೆ ಸ್ಪಂದಿಸಲು ಮಾದರಿಯಾಗಿ ಅವರ ಸಾಧನೆ ಧರ್ಮಸ್ಥಳದಲ್ಲಿ ಮೈದೋರಿದೆ. ಅದೇ ಪರಂಪರೆ ಇಂದಿಗೂ ಮುಂದುವರಿದಿದೆ. ಡಾ । ವೀರೇಂದ್ರ ಹೆಗಡೆಯವರು ಅವರ ಸಾಧನೆಗಳ ವಾರಸುದಾರರಾಗಿ ಯಶಸ್ಸು ಗಳಿಸಿದ್ದಾರೆ. ಮತ್ತಷ್ಟು ವಿಸ್ತಾರವಾಗಿ ಕಾರ್ಯ ಕ್ಷೇತ್ರವನ್ನು ಹೊಂದಿದ್ದಾರೆ.

ವಿಶ್ವಸಾಹಿತಿ - ಡಾ । ಶಿವರಾಮ ಕಾರಂತರು

ಕಡಲ ತೀರದ ಭಾರ್ಗವ, ನಡೆದಾಡುವ ವಿಶ್ವಕೋಶ, ವೈಜ್ಞಾನಿಕ, ವೈಚಾರಿಕ ಹಿನ್ನೆಲೆಯ ಅನುಭವದ ಸಾಗರ, ಸಾಹಿತ್ಯದ ಸರ್ವ ಪ್ರಕಾರಗಳಲ್ಲಿಯೂ ಅಪ್ರತಿಮ ಸಾಧನೆ ಮಾಡಿದ ಮಹಾ ಸಾಹಸಿ, ಸಂಶೋಧಕ, ಚಿಂತಕ ಡಾ । ಶಿವರಾಮ ಕಾರಂತರು ಕನ್ನಡದ ಹೆಮ್ಮೆಯ ಬಲು ದೊಡ್ಡ ಆಸ್ತಿ ! ಕನ್ನಡಕ್ಕೊಬ್ಬನೆ ಕಾರಂತ ಎನ್ನುವ ಮಾತನ್ನು ಯಥಾರ್ಥವಾಗಿಸಿದ ಶ್ರೀಯುತರು ಜ್ಞಾನಪೀಠ ಪ್ರಶಸ್ತಿಯಿಂದ ಪುರಸ್ಕೃತರಾಗಿ ನಾಡಿನ ಹೆಮ್ಮೆಯ ಸಾಹಿತಿಯಾಗಿದ್ದಾರೆ. ವಿಶ್ವ ಸಾಹಿತಿಗಳ ಸಾಲಿನಲ್ಲಿ ಗಣನೀಯರಾಗಿರುವ ಕಾರಂತರು ಕೈ ಹಾಕದ ಸಾಹಿತ್ಯ ಕಾರ್ಯಗಳಿಲ್ಲ ! ಆಡು ಮುಟ್ಟದ ಸೊಪ್ಪಿಲ್ಲ, ಕಾರಂತರು ಕೈಯಾಡಿಸದ ಪ್ರಕಾರಗಳಿಲ್ಲ ಎಂಬುದು ಹಿಂದಿನಿಂದಲೇ ಕೇಳಿ ಬಂದ ಮಾತು. ಆದರೆ ಪ್ರತಿಯೊಂದು ಅಂಶದಲ್ಲಿಯೂ ಅಪೂರ್ವ, ಅನಿತರ ಯಶಸ್ಸನ್ನು ಸಾಧಿಸಿದವರು ಕಾರಂತರು ಎಂಬುದು ಹೆಗ್ಗಳಿಕೆಯ ಮಾತು.

ಚಿಕ್ಕಂದಿನಿಂದಲೇ ಅನ್ವೇಷಣೆ, ವಿಷಯ ಸಂಗ್ರಹ, ಬಾಳನ್ನು ಅರಿತುಕೊಳ್ಳುವುದು ಜೀವನದ ಅನುಭವಗಳನ್ನು ಮೆಲುಕು ಹಾಕುವುದು ಅವರ ಜಾಯಮಾನ. ಊರೂರು ಅಲೆಯುವುದು, ಜೀವನದ ಶೈಲಿಯನ್ನು ಅರ್ಥ ಮಾಡಿಕೊಳ್ಳುವುದು ಪ್ರತಿಯೊಂದನ್ನೂ ವಿಚಾರದ ಮೂಸೆಗೆ ಹಚ್ಚಿ ತಿದ್ದುವುದು, ಅನುಭವದ ಮೂಸೆಯಲ್ಲಿ ಎರಕಹೊಯ್ದು ಅಪ್ಪಟ ಚಿನ್ನದ ಕುಸುರಿ ಕೆಲಸವನ್ನು ನೋಡಿ ಆನಂದಿಸುವುದು ಅವರ ಹಿರಿಮೆ. ಆದುದರಿಂದಲೇ ಸಾಹಿತಿಯಾಗಬಯಸುವವರಿಗೆ ಅವರ ಕಿವಿಮಾತು - ಅನುಭವದ ಸಾಕ್ಷಾತ್ಕಾರವಾಗಬೇಕೆಂಬುವುದು । ಏನಾದರೂ ಬರೆದು ಹೆಸರು ಗಳಿಸುವುದನ್ನು ಅವರೆಂದೂ ಸಹಿಸುವುದಿಲ್ಲ ! ಬರೆಯುವ ತುಡಿತ ಮಾನಸಿಕವಾಗಿ ಮೂಡಿ ಬಂದರೆ ಅನುಭವಗಳು ಗಮ್ಯವಾದುದನ್ನು ಬರೆಯುವುದು ಸೂಕ್ತ ಎಂಬುದು ಅವರ ಉಪದೇಶ.

ಮಕ್ಕಳ ಸಾಹಿತ್ಯದಿಂದ ವಿಜ್ಞಾನ, ಪಕ್ಷಿಪ್ರಪಂಚದ ತನಕ ಅವರ ಅನುಭವದ ವಿಸ್ತಾರ ಹರಿದಿದೆ. ಮಕ್ಕಳ ಮನಸ್ಸನ್ನು ಅರ್ಥ ಮಾಡಿ ಬರೆಯುವುದೇ ಮಕ್ಕಳ ಸಾಹಿತ್ಯ. ಅವರ ವಯೋಮಾನಕ್ಕೆ ತಕ್ಕುದಾದ ವಿಚಾರ. ಅವರ ಮನಸ್ಸನ್ನು ರಂಜಿಸುವ ರೀತಿಯಲ್ಲಿ ತನ್ಮೂಲಕ

ಅವರ ಅನುಭವವನ್ನು ವಿಸ್ತರಿಸುವ ನಿಟ್ಟಿನಲ್ಲಿ ಶಿಶು ಸಾಹಿತ್ಯ ಮೂಡಿ ಬರಬೇಕಾಗಿದೆ. ಇಂದಿನ ಶಿಕ್ಷಣ ಪದ್ಧತಿಯಿಂದ ಮಕ್ಕಳಿಗಾಗುವ ಚಿತ್ರಹಿಂಸೆಯನ್ನು ಕಂಡು ಕಾರಂತರು ಕುದಿಯುತ್ತಾರೆ. ಆಕ್ರೋಶ ವ್ಯಕ್ತಪಡಿಸುತ್ತಾರೆ.

ಕಾರಂತರು ಕಾದಂಬರಿ ರಚನೆಯಲ್ಲಿ ಮಾದರಿಯೆನಿಸಬಹುದಾದ ಕೃತಿಗಳನ್ನು ರಚಿಸಿದ್ದಾರೆ. ಮರಳಿ ಮಣ್ಣಿಗೆ, ಚೋಮನ ದುಡಿ, ಬತ್ತದ ತೊರೆ, ಕನ್ಯಾ ಬಲಿ, ಅಳಿದ ಮೇಲೆ, ಔದಾರ್ಯದ ಉರುಳು, ಒಂಟಿ ದನಿ, ಕುಡಿಯರ ಕೂಸು, ಮೈಮನಗಳ ಸುಳಿಯಲ್ಲಿ, ಧರ್ಮರಾಯನ ಸಂಸಾರ, ಅದೇ ಊರು ಅದೇ ಮರ, ಮೂಕಜ್ಜಿಯ ಕನಸುಗಳು ಮುಂತಾದ ಕಾದಂಬರಿಗಳನ್ನು ಬರೆದು ಜೀವನದ ವಿವಿಧ ಮಜಲುಗಳನ್ನು ಗುರುತಿಸಿ, ಚಿತ್ರಿಸಿ, ಜನ ಮನವನ್ನು ಸೆರೆಹಿಡಿದಿದ್ದಾರೆ. ಸಹಜ ಸುಂದರ ಚಿತ್ರಣ ಅನುಭವ ಪೂರ್ಣ ವಿಶ್ಲೇಷಣಾತ್ಮಕ ನಿರೂಪಣೆಗಳಿಂದ ಅವರು ಕಾದಂಬರೀ ಲೋಕಕ್ಕೆ ಹೊಸ ಆಯಾಮವನ್ನಿತ್ತಿದ್ದಾರೆ.

ಸಣ್ಣ ಕತೆಗಳನ್ನು ಬರೆದಿದ್ದಾರೆ. ನಾಟಕಗಳಲ್ಲಂತೂ ಅವರು ಎತ್ತಿದ ಕೈ. ಸ್ವತಃ ನಟರಾಗಿ, ಉತ್ತಮ ನಿರ್ದೇಶಕರಾಗಿ, ರಂಗತಜ್ಞರಾಗಿ ಪ್ರದರ್ಶನ ನೀಡಿದ್ದಾರೆ. ನಾಟ್ಯ ಅಭಿನಯಗಳನ್ನು ಸಮರ್ಥವಾಗಿ ಮೈಗೂಡಿಸಿಕೊಂಡಿದ್ದಾರೆ. ಯಕ್ಷಗಾನದಲ್ಲಿ ಹಲವಾರು ಸುಧಾರಣೆಗಳನ್ನು ಸಂಪ್ರದಾಯದ ಶೈಲಿಯನ್ನು ಮೆರೆದಿದ್ದಾರೆ. 'ಯಕ್ಷಗಾನ ಬಯಲಾಟ'ದಂಥ ಉದ್ಗ್ರಂಥ ಬರೆದು ಅಪೂರ್ವ ಸಂಶೋಧನೆ ನಡೆಸಿದ್ದಾರೆ. 'ಕಲೆಯ ದರ್ಶನ' ಅವರ ಕಲಾಸಕ್ತಿಯ ದ್ಯೋತಕವಾದ ಕೃತಿ. ವಿವಿಧ ಕಲೆಗಳನ್ನು ನಾಡಿನ ಆದ್ಯಂತ ಗುರುತಿಸಿ ವಿಶ್ಲೇಷಣೆ ನಡೆಸಿದ್ದಾರೆ. ಶಿಲ್ಪ, ಚಿತ್ರ, ವರ್ಣ ಪ್ರತಿಯೊಂದರಲ್ಲಿಯೂ ಅವರು ತಮ್ಮ ಕಲೆಗಾರಿಕೆಯನ್ನು ಅಚ್ಚೊತ್ತಿದ್ದಾರೆ. ಮಾನವರ ಬದುಕಿನ ಬಗ್ಗೆ ಮಾತ್ರ ಅವರ ದೃಷ್ಟಿ ಹರಿದುದಲ್ಲ. ಮೃಗ, ಖಗ, ಪಶು, ಪಕ್ಷಿಗಳನ್ನು ಅವರು ಅಧ್ಯಯನ ಮಾಡಿದ್ದಾರೆ. ಯಾವ ಹಕ್ಕಿ ಎಲ್ಲಿನದು ? ಅದರ ಕುಲಗೋತ್ರಗಳನ್ನು ಅವರು ಬಲ್ಲರು. ಜಗತ್ತಿನ ಯಾವ ಮೂಲೆಯ ಸಂಸ್ಕೃತಿ ಹೇಗಿದೆ ? ವಿಶ್ವದ ವಿವಿಧ ಜೀವನ ಕ್ರಮ, ಸಂಸ್ಕೃತಿಗಳನ್ನು ಅವರು ವಿವರಿಸಿದ್ದಾರೆ. ಆಯಾ ದೇಶದ ಕಲಾ ಮಾಧ್ಯಮವನ್ನು ಬಲ್ಲವರಾಗಿದ್ದಾರೆ. 'ಅಪೂರ್ವ ಪಶ್ಚಿಮ'ದಂಥ ಪ್ರವಾಸ ಕೃತಿಗಳಲ್ಲದೆ, ಬೇರೆ ಬೇರೆ ಬರಹಗಳಿಂದ ಅವರು ವಿಶ್ವದ ಕೃತಿಯನ್ನು ಅರ್ಥವಿಸಿಕೊಂಡು ಓದುಗರಿಗೆ ತಿಳಿಸಿದ್ದಾರೆ. ಆದುದರಿಂದಲೇ ಅವರು ಚಲಿಸುವ ವಿಶ್ವಕೋಶ ಎಂಬ ಅನ್ವರ್ಥ ಹೆಸರು ಹೊಂದಿರುತ್ತಾರೆ. ಜ್ಞಾನಪೀಠ ಪ್ರಶಸ್ತಿ ಅವರನ್ನು ಅರಸಿಕೊಂಡು ಬಂದಿದೆ. ನೋಬೆಲ್ ಬಹುಮಾನಕ್ಕೂ ಅರ್ಹರಾದವರು ಶ್ರೀ ಶಿವರಾಮ ಕಾರಂತರು ಎಂಬುದು ನಮಗೆ ಹೆಮ್ಮೆ.

ಕನ್ನಡ ಕಾಳಿದಾಸ
ಎಸ್. ವಿ. ಪರಮೇಶ್ವರ ಭಟ್ಟರು

ಶ್ರೀ ಪರಮೇಶ್ವರ ಭಟ್ಟರನ್ನು ಅಭಿನವ ಕಾಳಿದಾಸನೆನ್ನಲೇ ? ಅಭಿನವ ಭಾಸನೆನ್ನಲೇ ? ಅಭಿನವ ಶ್ರೀಹರ್ಷನೆನ್ನಲೇ ? ಈ ಮೂರೂ ಅವರ ಮಟ್ಟಿಗೆ ಸರಿಯಾದ ಪ್ರಯೋಗಗಳೇ ! ಕಾಳಿದಾಸನ ಎಲ್ಲಾ ಕೃತಿಗಳನ್ನು ಅವರು ಕನ್ನಡಿಸಿದ್ದಾರೆ. ಭಾಸ, ಶ್ರೀಹರ್ಷರ ರಚನೆಗಳನ್ನು ಕನ್ನಡಕ್ಕೆ ತಂದಿದ್ದಾರೆ. ಇಷ್ಟೊಂದು ವಿಸ್ತಾರವಾದ ಅನುವಾದ ಕಾರ್ಯ, ಸಾಧನೆ ಅವರದು. ಎಂತಲೇ ಅವರು ಕನ್ನಡಿಗರೆಲ್ಲರ ಕೃತಜ್ಞತೆಗೆ ಪಾತ್ರರಾಗಿದ್ದಾರೆ.

ಶ್ರೀಯುತರು ಹುಟ್ಟು ಕವಿಗಳು ! ಪಂಡಿತರು ! ವಿಮರ್ಶಕರು ! ಅನುವಾದಕರು ! ಪ್ರಾಧ್ಯಾಪಕರಾಗಿ ವಿಶ್ವವಿದ್ಯಾನಿಲಯದಲ್ಲಿ ದುಡಿದವರು. ಮಂಗಳೂರು ವಿಶ್ವವಿದ್ಯಾನಿಲಯದ ಆರಂಭದ ಆಧಾರ ಸ್ತಂಭರು. ಸ್ನಾತಕೋತ್ತರ ಕೇಂದ್ರದ ಮೂಲಕ ಮಂಗಳೂರು ಪರಿಸರದ ಸಾಹಿತ್ಯ ಕೈಂಕರ್ಯವನ್ನು ಕೈಗೊಂಡರು. ಎಷ್ಟೋ ವರ್ಷಗಳ ಕಾಲ ಮಂಗಳೂರಿನವರೇ ಆಗಿ ಸಾಹಿತ್ಯ ಗೋಷ್ಠಿ, ವಿದ್ವದ್ಗೋಷ್ಠಿ, ಸ್ನಾತಕೋತ್ತರ ಕೇಂದ್ರಗಳ ರೂವಾರಿಯಾಗಿದ್ದು, ಮಂಗಳೂರಿನ ಸಾಹಿತ್ಯ ಚಟುವಟಿಕೆಗಳಿಗೆ ಚಾಲನೆ ನೀಡಿದವರು. ಎಷ್ಟೋ ಬರಹಗಾರರನ್ನು ಕವಿಗಳನ್ನು, ವಿಮರ್ಶಕರನ್ನು ಬೆನ್ನು ತಟ್ಟಿ ಮೇಲೆ ತಂದವರು. ಶಿವಮೊಗ್ಗ ಜಿಲ್ಲೆಯಲ್ಲಿ ಜನಿಸಿದರೂ, ಸದ್ಯ ಉಡುಪಿಯಲ್ಲೇ ನೆಲೆಸಿದವರಾಗಿ ಮಂಗಳೂರಿನ ಸಂಪರ್ಕವನ್ನು ಬಹಳಷ್ಟು ಸಾಧಿಸಿ, ಸ್ವಯಂ ಮಾರ್ಗದರ್ಶಕರಾಗಿಯೂ ಇದ್ದವರು ಎಂದ ಮೇಲೆ ದ. ಕ. ಜಿಲ್ಲೆಯ ಸಾಹಿತ್ಯ ವೈಭವದಲ್ಲಿ ಅವರಿಗೆ ತಕ್ಕ ಸ್ಥಾನ ಮನ್ನಣೆ ಇದ್ದೇ ಇರುತ್ತದೆ.

ಭಾಸ - ಕಾಳಿದಾಸ - ಶ್ರೀಹರ್ಷ ಈ ಮೂವರು ಸಂಸ್ಕೃತದ ಕವಿರತ್ನತ್ರಯರು. ಇವರ ಕೃತಿಗಳ ಭಾಷಾಂತರವೆಂದರೆ ಅದೊಂದು ಬಲು ದೊಡ್ಡ ಸಾಧನೆ. ಮಹಾ ಕಾರ್ಯವೆನ್ನಲೇ ಬೇಕು. ಅವರನ್ನು ಎಷ್ಟು ಅಭಿನಂದಿಸಿದರೂ ಸಾಲದು. ಅವರ ಪಾಂಡಿತ್ಯ ಪ್ರತಿಭೆ, ಭಾಷಾ ಪರಿಣತಿಯನ್ನು ನೋಡಿ ತಲೆದೂಗಲೇ ಬೇಕು. ಭಾಸ - ಕಾಳಿದಾಸ - ಶ್ರೀಹರ್ಷರ ಹೆಸರು ಇರುವಷ್ಟು ಕಾಲವೂ ಕನ್ನಡದ ಕಾಳಿದಾಸ - ಭಾಸ - ಶ್ರೀಹರ್ಷ ಎಂಬುದಾಗಿ ಭಟ್ಟರು ಕೀರ್ತಿತರಾಗುತ್ತಾರೆ.

'ಸದಾಶಿವ ಗುರು'ವನ್ನು ನೆನಪಿಸುವ, ಆತನೊಡನೆ ಮಾತನಾಡುವ 'ಉಂಬರ' ಎಂಬ ಕವನಗಳಲ್ಲಿ ಪರಮೇಶ್ವರ ಭಟ್ಟರು ತಮ್ಮ ಆಳವಾದ ತಿಳಿವನ್ನು ಹೊರಚೆಲ್ಲಿದ್ದಾರೆ.

ನನ್ನ ಮನದೊಳಗಣ ಭಕ್ತಿಯ ಆಳದಷ್ಟು
ನಿನ್ನ ಮನದೊಳಗಣ ಕರುಣೆ ಇದ್ದಿತಾದೊಡೆ
ನನಗೆ ನಿನ್ನ ಅನುಗ್ರಹವಾದೀತೆ ?
ದೋಣಿಯೊಳಗಣ ಆಳದಷ್ಟು

ಕಡಲ ಒಳಗಣ ಆಳವಾದೊಡೆ ದೋಣಿ ತೇಲೀತೆ ಸದಾಶಿವ ಗುರು ?
ಮಗುವೇನ ಬಲ್ಲುದಯ್ಯ ? ತಂದೆ ತಾಯಿಗಳ ಮರೆತಾದರೂ
ಓಡುತ್ತದೆ ಆಟಿಕೆಯ ಕೈಗಾಡಿಯ ಹಿಂದೆ
ಮಗುವೇನ ಬಲ್ಲುದಯ್ಯ ?
ತಂದೆ ತಾಯಿಗಳ ಮರೆತಾದರೂ
ನಿಲ್ಲುತ್ತದೆ ಮಿಠಾಯಿ ಅಂಗಡಿ ಮುಂದೆ
ನಾನು ಅಂತಹ ಮಗು ಸದಾಶಿವ ಗುರು !
ಮಾತು ಬೆಳ್ಳಿ ಒಪ್ಪಿದೆ
ಮೌನ ಬಂಗಾರ ಒಪ್ಪಿದೆ
ಕಿವಿ ಕಚ್ಚಿ ಗುಸುಗುಸು ಎಂಬುದೆ ಕಬ್ಬಿಣ
ಒಪ್ಪುವೆಯ ಸದಾಶಿವ ಗುರು !
ಕತ್ತೆ ಬಲ್ಲುದೆ ಹೊತ್ತ ಕತ್ತುರಿಯ ಪರಿಮಳವ ಎಂಬುದು
ಕುದುರೆಗೆ ತಾನೆ ಏನು ಗೊತ್ತಿದೆ ?
ಕೆಲಕೆಲವು ಜಾತ್ಯಶ್ವಗಳು ಗೊತ್ತಿರುವಂತೆ ನಟಿಸಬಲ್ಲವು
ಸದಾಶಿವ ಗುರು !
ಈ ಕವನಗಳು ಡಿ. ವಿ. ಜಿ.
ಸರ್ವಜ್ಞರ ಸಾಲಿಗೆ ಸೇರುವಂಥವಾಗಿವೆ.

"ಶ್ರೀ ಭಟ್ಟರು ಉದ್ದಾಮ ಸಾಹಿತಿಗಳು. ಸಂಸ್ಕೃತ ಇಂಗ್ಲಿಷ್ ಕನ್ನಡ ಇವುಗಳಲ್ಲಿ ಪರಿಣತರು. ಕನ್ನಡ ನಾಡಿನ ಕವಿಗಳಲ್ಲಿ ಇವರು ಅಗ್ರಮಾನ್ಯ ಪಂಕ್ತಿಗೆ ಸೇರಿದವರು. ಅಶ್ವಘೋಷ, ಭಾಸ, ಕಾಳಿದಾಸ, ಭರ್ತೃಹರಿ, ಅಮರುಕ ಜಯದೇವ ಮುಂತಾದ ಕವಿಗಳ ಇಡೀ ಸಾಹಿತ್ಯವನ್ನೇ ಕನ್ನಡಕ್ಕೆ ನೀಡಿದವರು. ಸ್ವತಂತ್ರ ಕಾವ್ಯ ರಚನೆ, ಭಾವಗೀತೆಗಳು, ಚೌಪದಿಗಳು, ಗದ್ಯ ರಚನೆ ಎಲ್ಲ ಅಂಶಗಳಲ್ಲಿಯೂ ಅತ್ಯುತ್ತಮ ಸಾಧನೆ ಎಸಗಿದ್ದಾರೆ. ಕನ್ನಡ ನುಡಿಗೆ ಇವರೊಂದು ಅಪೂರ್ವ ವಜ್ರಾಭರಣ !"

ಶ್ರೀ ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರು ಭಟ್ಟರ ಬಗ್ಗೆ ನುಡಿದ ಮಾತುಗಳಿವು.

"ಕಾವ್ಯ ಪ್ರಬಂಧ, ಅನುವಾದ, ಮುಂತಾದ ಪ್ರಕಾರಗಳಲ್ಲಿ ಸಮೃದ್ಧವಾದ ಬರವಣಿಗೆಯಿಂದ ನನ್ನ ಮಾನ್ಯ ಮಿತ್ರರಾದ ಪ್ರೊ. ಎಸ್. ವಿ. ಪರಮೇಶ್ವರ ಭಟ್ಟರು ಆಧುನಿಕ ಸಾಹಿತ್ಯ ಲೋಕದಲ್ಲಿ ವಿಶಿಷ್ಟ ಸ್ಥಾನವನ್ನು ಪಡೆದಿದ್ದಾರೆ. ಅವರ ಕವನಗಳಲ್ಲಿ ವಿಜಯನಗರದ ಗಿಳಿಗಳು ಇದನ್ನು ನಾನು ಮೊಟ್ಟಮೊದಲು ಮೆಚ್ಚಿಕೊಂಡು ಅದರ ಬಗ್ಗೆ ಬರೆದಿದ್ದೆ. ಆ ಮೇಲೆ ಅವರ ಪ್ರತಿಭೆಯ ಗಿಳಿಗಳು ವಿಜಯನಗರದಿಂದ ಕನ್ನಡ ನಾಡಿನ ತುಂಬ ಕಡಲತೀರದಲ್ಲಿಯ ಹಸುರಿನೊಡನೆ ಹಸುರಾಗಿ ಜನ ಮೆಚ್ಚುಗೆಯನ್ನು ಅಪಾರವಾಗಿ ಪಡೆದಿರುತ್ತವೆ. ಪಾಮರ, ಉಪ್ಪು ಕಡಲು, ಇಂಥ ಸಂಕಲನಗಳಲ್ಲಿ ಅವರ ಚಿಂತನ ಶೀಲ ಮತ್ತು ಸಮಕಾಲೀನ ಜೀವನ ವಿಮರ್ಶೆಯುಳ್ಳ ಕಾವ್ಯಮಯ

ಗದ್ಯ ಹೆಚ್ಚಳಸಾಗಿ ಬಂದಿದೆ. ಸಂಸ್ಕೃತ ಕಾವ್ಯ ನಾಟಕಗಳ, ಅದರಲ್ಲಿಯೂ ಕಾಳಿದಾಸನ ಸಮಗ್ರ ವಾಙ್ಮಯದ ಕನ್ನಡೀಕರಣದಿಂದ ಮತ್ತು ಪ್ರಕಟಣೆಯ ಸಾಹಸದಿಂದ ಅವರು ತಮ್ಮದೇ ಆದ ವಿಕ್ರಮವನ್ನು ಸ್ಥಾಪಿಸಿದ್ದಾರೆ."

ಡಾ । ರಂ. ಶ್ರೀ ಮುಗಳಿಯವರು ಈ ಮಾತುಗಳಿಂದ ಭಟ್ಟರ ಕಾವ್ಯ ಸಾಹಿತ್ಯದ ಬಗ್ಗೆ ಹೆಚ್ಚಿನ ಬೆಳಕು ಚೆಲ್ಲಿದ್ದಾರೆ :

ಹೋರಾಟಗಾರ ಕವಿ
ಕಯ್ಯಾರ ಕಿಂಞ್ಞಣ್ಣ ರೈ

"ಹಸಿರುಡುಗೆ ಪಸೆದುಟ್ಟು ಸಿರಿಮುಡಿಗೆ ಹೂ ತೊಟ್ಟು
ಭುವನೇಶ್ವರಿಯೆ ನೀನು ಮೆರೆಯಬೇಕು
ಶುಭ ದಿನದ ಹೊಸಬೆಳಕಿನಾನಂದ ಶೋಭೆಯಲಿ
ನಿನ್ನ ಶ್ರೀಮುಖವನೊಮ್ಮೆ ನೋಡಬೇಕು"

ಐದು ದಶಕಗಳಿಂದಲೂ ಹಿಂದೆ ಕವಿ ಕಂಡ ಈ ಕನಸು ಶ್ರೀಮುಖದರ್ಶನದ ಆಕಾಂಕ್ಷೆ ಎಷ್ಟೊಂದು ಮನೋಹರ ! ಆದರೆ ಆದುದೇನು ? ಅದೇ ಕವಿಯ ಕನಸು ? "ಬೆಂಕಿ ಬಿದ್ದಿದೆ ಮನೆಗೆ ಓ ಬೇಗ ಬನ್ನಿ" ಕಾಸರಗೋಡಿನ ಕೇರಳೀಕರಣವಾದ ಸಂದರ್ಭದಲ್ಲಿ ಕವಿಯ ಶ್ರೀಮುಖ ದರ್ಶನದ ಆಸೆ ನುಚ್ಚುನೂರಾಗಿ ಕಾಸರಗೋಡಿನ ಮನೆಗೆ ಬೆಂಕಿ ಬಿದ್ದುದು ಕವಿಯ ಆಕ್ರಂದನದ ಧ್ವನಿಯನ್ನು ಹೆಚ್ಚಿಸಿದೆ. ಇದು ವಾರ್ಧಕ್ಯದಲ್ಲಿರುವ ಕವಿಯ ಹೃದಯದ ಕೂಗು ! ಅದೇ ನೋವು ! ಅದಕ್ಕಾಗಿ ಹೋರಾಟ !

ಹುಟ್ಟು ಹೋರಾಟಗಾರ, ಸ್ವಾತಂತ್ರ್ಯದ ಛಲಗಾರ, ಗಾಂಧೀವಾದಿ, ನಾಡು - ನುಡಿಗಳ ಅಪ್ರತಿಮ ಭಕ್ತ, ಆದರ್ಶ ಅಧ್ಯಾಪಕ ಲೇಖಕ, ಕವಿ, ವಿದ್ವಾಂಸ, ವಿಮರ್ಶಕ ಕಯ್ಯಾರ ಕಿಂಞ್ಞಣ್ಣ ರೈ. ಕನ್ನಡಿಗರ ಹೃದಯವನ್ನು ಸೂರೆಗೊಂಡ ಮಹಾ ಚೇತನ !

"ಐಕ್ಯವೊಂದೇ ಮಂತ್ರ, ಐಕ್ಯದಿಂದೆ ಸ್ವತಂತ್ರ
ಐಕ್ಯಗಾನದಿ ರಾಷ್ಟ್ರ ತೇಲುತಿರಲಿ"

ಹಿಂದೂ, ಮುಸ್ಲಿಂ, ಕ್ರೈಸ್ತರೆಂಬ ಭೇದವನ್ನು ಮರೆತು ಎಲ್ಲರೂ ರಾಷ್ಟ್ರ ವಾಹಿನಿಯಲ್ಲಿ ತೇಲಿ ಬರಲಿ ಎಂಬ ಕವಿಯ ಆಕಾಂಕ್ಷೆ ಸ್ವಾತಂತ್ರ್ಯ ಪೂರ್ವದಲ್ಲಿ ಮೊಳಗಿ ಕ್ರಾಂತಿಯನ್ನೆಬ್ಬಿಸಿದರೆ,

ಇಂದಿಗೂ ಆ ಹಾಡು ನಾಡಿನ ಜನತೆಗೆ ಮತ್ತೊಮ್ಮೆ ಕೇಳಬೇಕಾಗಿ ಬಂದಿದೆ. ಇಂಥ ಸಾರ್ವಕಾಲಿಕ ಸಂದೇಶವನ್ನು ಬಿತ್ತರಿಸಿದ ಕವಿಗೆ ನಾಡು ಋಣಿಯಾಗಿರಬೇಕು.

ನವಭಾವ, ಜನಜೀವನ, ನವಶಕ್ತಿ ತುಂಬಿಸುವ ಹಾಡೊಮ್ಮೆ ಹಾಡಬೇಕು ಎಂಬ ಕವಿಯ ಆಸೆಯೇ ಇದೀಗ ನಾಡಿನ ರಾಷ್ಟ್ರದ ಅಭಿಮಾನಿಗಳೆಲ್ಲರ ಆಸೆಯೂ ಆಗಿದೆ. ನವ್ಯ ಕಾವ್ಯದ ಮಾರ್ಗದಲ್ಲಿ ಪ್ರಗತಿವಾದಿ ಕವಿಗಳಾಗಿ ಶ್ರೀ ಮುಖ, ಐಕ್ಯಗಾನ, ಪುನರ್ನವ, ಚೇತನ, ಪಂಚಮಿ, ಶತಮಾನದ ಗಾನ, ಗಂಧವತಿ, ಪ್ರತಿಭಾಪಯಸ್ವಿನಿ, ಕೊರಗ ಮತ್ತು ಕೆಲವು ಕವನಗಳು ಎನ್ನಪ್ಪೆ ತುಳುವಪ್ಪೆ ಎಂಬ ತುಳು ಕವಿತೆಗಳ ಸಂಗ್ರಹ ಮೊದಲಾದ ಕವನ ಸಂಕಲನಗಳ ಮೂಲಕ ಖ್ಯಾತಿ ಗಳಿಸಿದ್ದಾರೆ.

ಶ್ರೀ ರೈಗಳು ಪಡೆದ ಪ್ರಶಸ್ತಿಗಳು ಅಸಂಖ್ಯ. ಶಿಕ್ಷಣ ಕ್ಷೇತ್ರದಲ್ಲಿ ಉತ್ತಮ ಅಧ್ಯಾಪಕರೆಂದು ರಾಷ್ಟ್ರ ಪ್ರಶಸ್ತಿ ಗಳಿಸಿದ್ದಾರೆ. ಶೃಂಗೇರಿ ಜಗದ್ಗುರುಗಳಿಂದ ಹಾಗೂ ನಾಡಿನ ವಿವಿಧ ಸಂಘ, ಸಂಸ್ಥೆ ಮಹನೀಯರುಗಳಿಂದ ಪುರಸ್ಕೃತರಾಗಿದ್ದಾರೆ. ಬದಿಯಡ್ಕ ಪಂಚಾಯತ್ ಅಧ್ಯಕ್ಷರಾಗಿ 15 ವರ್ಷಗಳಕಾಲ ದುಡಿದ ಶ್ರೀಯುತರು ಮಂಜೇಶ್ವರ ಬ್ಲೋಕ್ ಡೆವಲಪ್‌ಮೆಂಟ್ ಸಮಿತಿಯ ಚೇರ್‌ಮೆನ್‌ರಾಗಿಯೂ ಸೇವೆ ಸಲ್ಲಿಸಿದ ಸಾಮಾಜಿಕ ಕಾರ್ಯಕರ್ತರು. ಸ್ವಾತಂತ್ರ್ಯ ಹೋರಾಟದ ಕಾಲದಿಂದಲೂ ಸಾಹಿತ್ಯ ಕ್ಷೇತ್ರವನ್ನು ಸಾಮಾಜಿಕ ಕ್ಷೇತ್ರವನ್ನು ಸಮರ್ಥವಾಗಿ ಮೈಗೂಡಿಸಿಕೊಂಡು ಬಂದು ಶ್ರೀಯುತರು ಯಶಸ್ಸು ಗಳಿಸಿದ್ದಾರೆ.

ರಾಷ್ಟ್ರಕವಿ ಗೋವಿಂದ ಪೈ, ಮಲಯಾಳ ಸಾಹಿತ್ಯಚರಿತ್ರಂ, ಸಾಹಿತ್ಯ ದೃಷ್ಟಿ, ಸಂಸ್ಕೃತಿಯ ಹೆಗ್ಗುರುತುಗಳು, ರತ್ನರಾಶಿ, ಲಕ್ಷ್ಮೀಶನ ಕಥೆಗಳು, ಅನ್ನದೇವರು ಮತ್ತು ಇತರ ಕಥೆಗಳು, ಎ. ಬಿ. ಶೆಟ್ಟಿ (ಜೀವನ ಚರಿತ್ರೆ) ಕಾರ್ನಾಡ್ ಸದಾಶಿವ ರಾವ್ (ಜೀವನ ಚರಿತ್ರೆ), ನಾರಾಯಣ ಕಿಲ್ಲೆ (ಜೀವನ ಚರಿತ್ರೆ) ಮುಂತಾದ ಎಷ್ಟೋ ಕೃತಿಗಳು, ಸಾವಿರಾರು ಬರಹಗಳು ಇವರ ಬಹುಮುಖ ಪ್ರತಿಭೆಗೆ ಸಾಕ್ಷಿಗಳಾಗಿವೆ.

ದೇಶ ಭಕ್ತಿ ಪ್ರಚೋದಕ ಗೀತೆಗಳು ರೈ ಅವರ ವಿಶಿಷ್ಟತೆ. 'ಜಾಗೃತಿ' ಕವನದಿಂದ ಅವರು ಜನಜಾಗೃತಿಯನ್ನು ಮೂಡಿಸಿದ್ದಾರೆ. ವೀರರಸದ ಆವೇಶ ಪುಟಿದೆದ್ದಿದೆ ಅವರ ಕವನಗಳಲ್ಲಿ. ಅವರೊಬ್ಬ ರಾಷ್ಟ್ರೀಯ ವಾದಿ ಕವಿಯಾಗಿ ನಾಡು ನುಡಿಗಳ ಆರಾಧಕರಾಗಿ ಗಣ್ಯರಾಗಿದ್ದಾರೆ.

ಉಪನಿಷತ್ತು ವೇದಗಳ ಅರ್ಥವನ್ನು ಬಲ್ಲ ಪ್ರಕಾಂಡ ಪಂಡಿತರಾಗಿ ಕನ್ನಡದಲ್ಲಿ ಉತ್ತಮ ಕವಿತೆಗಳನ್ನು ಅವರು ಸೃಜಿಸಿ ಅವುಗಳ ಸಾರ ಸರ್ವಸ್ವವನ್ನು ರಹಸ್ಯವನ್ನು ಲೋಕಕ್ಕಾಗಿ ನೀಡಿದ್ದಾರೆ. ಪ್ರಾಚೀನ ಕಾವ್ಯಗಳ ಆಳವಾದ ಅಧ್ಯಯನ ಸಂಸ್ಕೃತದ ಅಮೋಘ ಪಾಂಡಿತ್ಯ ಅವರಲ್ಲಿ ಅಸಾಧಾರಣ ರೀತಿಯಲ್ಲಿ ತುಂಬಿ ತುಳುಕಿಕೊಂಡಿದೆ.

ಸಾಹಿತ್ಯದ ವಿವಿಧ ಮುಖಗಳಲ್ಲಿ ಅವರು ಕೆಲಸ ಮಾಡಿದ್ದಾರೆ. ಉತ್ತಮ ವಿಮರ್ಶೆ ನೀಡಿದ್ದಾರೆ. ಮಕ್ಕಳಿಗಾಗಿ ಕೃತಿ ರಚಿಸಿದ್ದಾರೆ. ಪಠ್ಯ ಪುಸ್ತಕಗಳನ್ನು ರಚಿಸಿ ಮಕ್ಕಳ ಮಟ್ಟವನ್ನು ಎತ್ತರಿಸುವ ಸಾಧನೆ ತೋರಿದ್ದಾರೆ. ರಾಷ್ಟ್ರೀಯತೆಯನ್ನೇ ಉಸಿರಾಗಿಟ್ಟುಕೊಂಡು ರಾಷ್ಟ್ರದ ಬಂಧ ವಿಮೋಚನೆಗಾಗಿ ತನ್ನನ್ನು ಅರ್ಪಿಸಿಕೊಂಡಿದ್ದಾರೆ. ಪತ್ರಕರ್ತರಾಗಿ ಅಪೂರ್ವ ಸಾಧನೆ ತೋರಿದ್ದಾರೆ.

ಕಾಸರಗೋಡಿಗಾಗಿ ಅವರು ನಡೆಸುತ್ತಿರುವ ಹೋರಾಟ ಈ ಇಳಿ ವಯಸ್ಸಿನಲ್ಲಿಯೂ ಪ್ರಚಂಡವಾಗಿಯೇ ಇದೆ. ಇನ್ನೂ ಅವರು ಕಾಸರಗೋಡಿನ ಬಗ್ಗೆ ಆಶಾವಾದಿಗಳಾಗಿ ಹೋರಾಡುತ್ತಲೇ ಇದ್ದಾರೆ. ಕರ್ನಾಟಕದ ಮುಖ್ಯ ಮಂತ್ರಿಗಳು ಮನ ಮಾಡಿದರೆ ಕಾಸರಗೋಡಿನ ವಿಮೋಚನೆ ಅಸಾಧ್ಯವೇನಲ್ಲ. ಎಂಬ ಆಶಾವಾದ ಅವರದು. ಆ ಬಗ್ಗೆ ಎಂಥ ತ್ಯಾಗಕ್ಕಾದರೂ ಸಿದ್ಧರೇ. ಅರುವತ್ತಾರನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಪೀಠದ ಗೌರವ ಅವರಿಗೆ ಕನ್ನಡಿಗರು ನೀಡಿದ ರತ್ನ ಕಿರೀಟ.

ಕವಿ ಅಮ್ಮೆಂಬಳ ಶಂಕರನಾರಾಯಣ ನಾವಡರು

"ನಲ್ಲೆಯ ನಗುಮೊಗ ಬಳಿಯಲ್ಲಿದ್ದರೆ
ಮನೆಯೆಲ್ಲಾ ಬೆಳಗು
ಮನೆಯಲ್ಲಿರದಿರೆ ಭಣಭಣ ಶೂನ್ಯವು
ಮನವೆಲ್ಲಾ ಕೊರಗು
ಆಕೆಯ ನಗೆಯೇ ಸೋತಿಹ ಜೀವಕೆ
ಸವಿಸಂಜೀವನವು
ಬರಿದಾಗಿಹ ಬಗೆ ಭಾವನೆಗಳಿಗೆ
ಅಮೃತದ ಸೇಚನವು

. . . .

ಎಂದೆಂದೂ ಬೆಳುಮೊಗವಿದ್ದರೆ
ಬಾಳ್ವೆಯು ಮಧುಮಾಸ
ನಲ್ಲೆಯ ಮಧುರ ಪ್ರಸನ್ನತೆಯೆಂದರೆ
ಶೃಂಗಾರದ ಹಾಸ

ರಸಿಕತೆ ಪವಿತ್ರ ಶೃಂಗಾರದ ಪರಿಚಯದಿಂದ ಅಮ್ಮೆಂಬಳರು ರಸಿಕ ಕವಿಯಾಗಿ ಮನಸ್ಸನ್ನು ಸೂರೆಗೊಳ್ಳುತ್ತಾರೆ.

"ತಿಂಗಳ ಬೆಳಕಿಗೆ ಬಾ ಗೆಳತೀ

ತಂಗದಿರನ ಕಾಣೆ ಬಗೆಯೊಡತೀ"
"ನನ್ನೀ ಹೆಣ್ಣನು ಬಣ್ಣಿಪೆನೆಂತು ?
ನಾಚಿಕೆಯವಳಿಗೆ ಸಿಂಗಾರ
ಕಡೆಗಣ್ಣೋಟದ ಕೊಂಕೇ ಬಿಂಕ
ಮೌನದ ಮೋಡಿಯೆ ವೈಯಾರ"
"ನಲ್ಲೆ ಎಂದೈ ತರುವೆಯಾ ಬಗೆಗೆ ಸೊಗವೆನ್ನೀವೆಯಾ
ಚೊಚ್ಚಲು ಬಸಿರಿನ ಸಂಭ್ರಮದಿಂದ
ಮಡದಿಯು ತವರಿಗೆ ಸಾಗಿಹಳು
ಅಗಲಿಕೆಯುರಿಯಲು ಬೇಯುತ ನಾನಿಹೆ
ಕನಸಿನ ಲೋಕದಿ ಕಾಣುವಳು
ಹೋಟೇಲ್ ಮಾಣಿಯು ಬಳಸುವ ಸೌಟು
ಕಣ್ಣಿಗೆ ಹಿತವನು ಮಾಡದಿರೆ
"ಪ್ರೇಮದೊದು ಮೌನ ಮಂತ್ರ
ವಾಗಿಯರಳಿಸಿನ್ನದೆ
ಜವ್ವನದ ಬಟ್ಟಲಲಿ ಪ್ರೇಮಸುಧೇಯನ್ನೆತಿದು
ಕುಡಿಸುತಿಹ ನನ್ನಾಕೆಯಿರೆ ಸಗ್ಗವೇಕೆ "

ಇಂಥ ರಸವತ್ತಾದ ಶೃಂಗಾರ ಕವನಗಳಿಂದ ಕಾವ್ಯ ರಸಿಕರ ಮಾತ್ರವಲ್ಲ ಯುವಜನತೆಯ ಬಗೆಯನ್ನು ಸ್ವಾಧೀನ ಪಡಿಸಿಕೊಂಡ ಅಮ್ಮೆಂಬಳರು ನಾಡಿನ ಪ್ರಸಿದ್ಧ ಕವಿಗಳಲ್ಲೊಬ್ಬರು. ಇವರ 'ಬಾಳ ಗೆಳತಿ' ಶೃಂಗಾರ ಪ್ರಧಾನ ಕಾವ್ಯವಾದರೆ 'ಸರ' ಬಹುಮುಖಿಯಾದ ಕವಿಧರ್ಮವನ್ನರಸುವ ಸಂಕಲನ ! ಗಾಂಧೀಜಿಯವರು ಕನ್ನಡದ ವಿಶ್ವರೂಪ, ಉಷೆ, ಎಳನೇಸರು, ತಂದದಿರ ಕಗ್ಗಲ್ಲ ಕಾವ್ಯ, ವಿಜಯನಗರ, ಕೋಗಿಲೆ, ದ್ವಂದ್ವಗಳು ಇವರ ಕಾವ್ಯದ ವಸ್ತುವಾಗಿವೆ. ಉತ್ತಮ ಉದಾತ್ತ ಭಾವಗಳ ಕವಿಯಾಗಿ ಇವರು ಹೆಸರಾಗಿದ್ದಾರೆ. 'ಜೇನು ಹನಿ'ಯಲ್ಲಿ ಸುಭಾಷಿತಗಳು, ಮುಕ್ತಕಗಳು, ಚೌಟು ಶ್ಲೋಕಗಳು, ಸೂಕ್ತಿಗಳು ಸಂಸ್ಕೃತದ ಮೂಲದೊಂದಿಗೆ ಕನ್ನಡಕ್ಕೆ ಸೊಗಸಾಗಿ ಇಳಿದು ಬಂದಿವೆ. ಇವರ ಕನ್ನಡ ಕುಮಾರ ಸಂಭವವನ್ನು ಸ್ವಯಂ ಮಾಸ್ತಿಯವರೇ ಮೆಚ್ಚಿ "ಜೀವನ"ದಲ್ಲಿ ಪ್ರಕಟಿಸಿದ್ದಲ್ಲದೆ ಸಂಭಾವನೆ ನೀಡಿ ಪುರಸ್ಕರಿಸಿದ್ದಾರೆ. ಮದ್ರಾಸ್ ಸರಕಾರವು ಪಾಠ್ಯವನ್ನಾಗಿ ಮಾಡಿದೆ.

ಚೆಂಡು (ಆಯ್ದ ಕವನಗಳು) ಇವರ ಕವಿತಾ ವರ್ಚಸ್ಸನ್ನು ಹೆಚ್ಚಿಸಿದೆ. ಕಿಶೋರ ರಾಮಾಯಣ, ಅದ್ಭುತ ರಾಮಾಯಣದ ಕಥೆ, ಮಂಜೇಶ್ವರ ಗೋವಿಂದ ಪೈ, ಮಂಜಯ್ಯ ಹೆಗ್ಗಡೆ, ಕನ್ನಡ ಶ್ರೀ ರಾಮೋದಂತ, ನೇತ್ರಾವತಿ (ಮಕ್ಕಳ ಪದ್ಯಗಳು) 'ವನಜ್ಯೋತ್ಸ್ನೆ' ಬಹುಮಾನಿತ ಗೀತ

ರೂಪಕವಾಗಿದೆ. ಮಾಲವಿಕಾಗ್ನಿಮಿತ್ರ ನಾಟಕ, ಉನ್ಮತ್ತ ರಾಘವ ನಾಟಕಗಳು ಉತ್ತಮ ಅನುವಾದಗಳಾಗಿವೆ. ಕನ್ನಡವೇಣಿ ಸಂಹಾರ ಇನ್ನೂ ಅಪ್ರಕಟಿತ ! ಉಪನಿಷತ್ತಿನ ಸಣ್ಣ ಕತೆಗಳು ಬಹುಮಾನ ಪಡೆದ ಕೃತಿ. ಶ್ರದ್ಧಾ ಪಂಚಮಿ, ದೇವರು ಶ್ರದ್ಧಾ ಸ್ವರೂಪ, ಭಕ್ತಿ ಸಾಧನೆಯ ಕೃತಿಗಳು.

ತೆಕ್ಕುಂಜ ಶಂಕರ ಭಟ್ಟರ ಸಂಸ್ಮರಣೆಂಕಾದ ಗುರುದಕ್ಷಿಣೆ, ಕಾಳಿದಾಸ ದರ್ಶನ, ಕಡೆಂಗೋಡ್ಲು ಅವರ 'ಪತ್ರಪುಷ್ಪ' ಗುರುವಾದಿರಾಜರ ಕೀರ್ತನೆಗಳು ಇವರ ಸಂಪಾದಿತ ಕೃತಿಗಳು. ಸ್ಥಳ ಪುರಾಣಕ್ಕೆ ಸಂಬಂಧಿಸಿ ಪೂರಕವಾದ ಕೃತಿಗಳು ಇನ್ನೂ ಅನೇಕ ಅಪ್ರಕಟಿತವಾಗಿವೆ.

ಸಾಹಿತ್ಯಾಂಜಲಿ ಗ್ರಂಥ ಮಾಲೆ ಇವರು ನಡೆಸಿಕೊಂಡು ಬಂದ ಪ್ರಕಾಶನ ಸಂಸ್ಥೆ ! ಉತ್ತಮ ಅಧ್ಯಾಪಕರೆಂದು ಹೆಸರಾದ ಅಮ್ಮೆಂಬಳರು ಅಪಾರ ಶಿಷ್ಯವೃಂದವನ್ನು ಪೊಂದಿರುತ್ತಾರೆ. ಕುಂದಾಪುರ ದ. ಕ. ಜಿಲ್ಲಾ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಪದವಿಯಿಂದ ಪುರಸ್ಕೃತರಾಗಿದ್ದಾರೆ. ಸರಳ, ಸಜ್ಜನ ವಿದ್ವದ್ಭೂಷಣ ಗುಣ ಸಂಪೂರ್ಣ ಅಮ್ಮೆಂಬಳರು ಕನ್ನಡದ ಅಭಿಮಾನಿಗಳಿಗೆ ಅಚ್ಚುಮೆಚ್ಚಿನ ಕವಿಯಾಗಿದ್ದಾರೆ.

ಪ್ರಿನ್ಸ್‌ಪಾಲ್ ಖಂಡಿಗೆ ಶಾಮ ಭಟ್ಟರು

ಪ್ರಿನ್ಸಿಪಾಲ್ ಖಂಡಿಗೆ ಶಾಮ್ ಭಟ್ಟರೆಂದರೆ ಬರೇ ನೀರ್ಚಾಲು ಪರಿಸರ ಸಂಸ್ಕೃತ ಕಾಲೇಜು, ಕಾಸರಗೋಡು ಪ್ರದೇಶಗಳವರೆಗಷ್ಟೇ ಬೇಕಾದವರಲ್ಲ, ನಾಡಿನ ಉದ್ದಗಲಕ್ಕೂ ಅವರ ಬಗ್ಗೆ ಅಪಾರ ವಿಶ್ವಾಸ, ಪ್ರೇಮ, ಗೌರವ ! ಕನ್ನಡಿಗರಿಗೆ ಅವರು ಉಜ್ಜ್ವಲ ಕನ್ನಡ ಅಭಿಮಾನಿ. ಕನ್ನಡದ ಕಟ್ಟಾಳು, ಸಂಸ್ಕೃತ ಪ್ರಿಯರಿಗೆ ಅವರೊಬ್ಬ ಕಾಮಧೇನು ! ತುಳು ಮಲಯಾಳ ಎಲ್ಲಾ ಭಾಷೆಗಳವರಿಗೂ ಅವರ ಕುರಿತು ಅನನ್ಯ ಅಭಿಮಾನ. ಅವರ ಸರಳ ಸೌಜನ್ಯ ಅಪಾರವಾದ ವಿದ್ವತ್ತು, ಅಕೃತಿಮವೂ ಅಚಲವೂ ಆದ ರಾಷ್ಟ್ರ ನಿಷ್ಠೆ, ದೀನರ ಬಗೆಗಿನ ಅನುಕಂಪ, ಅವರನ್ನು ಎತ್ತರಕ್ಕೇರಿಸಿವೆ. ಅಗರ್ಭ ಶ್ರೀಮಂತರಾದರೂ ಜೀವನದ ಕಷ್ಟ ಸುಖಗಳನ್ನು ಅವರು ಬಲ್ಲವರಾಗಿ, ಸಮಾಜದ ಒಳಿತಿಗಾಗಿ ನಿರಂತರ ಶ್ರಮಿಸುತ್ತಿದ್ದಾರೆ. ರಾಷ್ಟ್ರದಾದ್ಯಂತ ವಿಪುಲವಾದ ಶಿಷ್ಯ ವರ್ಗವನ್ನು ಹೊಂದಿರುವ ಅವರೊಬ್ಬ ಅಜಾತ ಶತ್ರು ! ನಿಃಸ್ಪೃಹ ಸಮಾಜ ಸೇವಕರು ಕೂಡಾ

ಪೆರಡಾಲ ಮಹಾಜನ ಸಂಸ್ಕೃತ ಕಾಲೇಜು ಈ ಶತಮಾನದ ದೊಡ್ಡ ಸಾಧನೆಯ ಹೆಗ್ಗಳಿಕೆಯ ಸಂಸ್ಥೆ. ಭಾರತದ ವಿವಿಧ ಭಾಗಗಳಲ್ಲಿ ಈ ವಿದ್ಯ ಸಂಸ್ಥೆಯಲ್ಲಿ ಓದಿದವರು ಇಂದಿಗೂ ಕಾಣಸಿಗುತ್ತಾರೆ. ಸಾಹಿತ್ಯಕ್ಕೆ ಕನ್ನಡ ಸಂಸ್ಕೃತ ಭಾಷೆಗಳಿಗೆ ಈ ಸಂಸ್ಥೆಯ ಸೇವೆ ಅಮೋಘವಾದುದು! ಈ ಸಂಸ್ಥೆಯ ಸ್ಥಾಪಕರು ಶಾಮ ಭಟ್ಟರ ಹಿರಿಯರು. ತಂದೆ ಮಹಾಲಿಂಗ ಭಟ್ಟರು ಹಾಗೂ

ಹಿರಿಯರೆಲ್ಲರ ಹರಕೆಗಳನ್ನು ಹೊತ್ತುಕೊಂಡು ಈ ಸಂಸ್ಥೆಯನ್ನು ಶಾಮ ಭಟ್ಟರು ನಡೆಸಿದ್ದಾರೆ. ಪ್ರಿನ್ಸಿಪಾಲರಾಗಿ ಅವರು ವಿದ್ಯಾರ್ಥಿಗಳೊಡನೆ ಬೆರೆಯುತ್ತಿದ್ದ ರೀತಿ ಅಪೂರ್ವವಾದುದು. ಅವರ ಪಾಠ ಪ್ರವಚನ ಕೇಳುವುದೆಂದರೆ ಅದೊಂದು ರಸಗವಳ. ಸಂಸ್ಕೃತ, ಕನ್ನಡ, ಇಂಗ್ಲಿಷ್ಈ ಮೂರು ಭಾಷೆಗಳ ಪಾಂಡಿತ್ಯದಿಂದ ಹದಗೊಂಡ, ಪರಿಪಕ್ವ ವಿಚಾರಧಾರೆಯಿಂದ ಅವರು ವಿದ್ಯಾರ್ಥಿಗಳಲ್ಲಿ ವಿಶಿಷ್ಟ ಪ್ರಭಾವವನ್ನು ಬೀರಿದ್ದಾರೆ. 'ಹಳತೆಲ್ಲಾ ಚಿನ್ನವಲ್ಲ, ಹೊಸತೆಲ್ಲಾ ದುಷ್ಟವೂ ಅಲ್ಲ' ಎಂಬುದನ್ನು ಅವರು ಸಂಸ್ಕೃತದ 'ಪುರಾಣಮಿತ್ಯೇವನಸಾಧು ಸರ್ವಂ ನ ಚಾಪಿ ಕಾವ್ಯಂ ನವ ಮಿತ್ಯವದ್ಯಂ' ಎಂದೂ ತಿಳಿಸಬಲ್ಲರು. Old is not gold ಎಂತಲೂ ವಿವರಿಸಬಲ್ಲರು. ಅವರ ತ್ರಿಭಾಷಾ ಪಾಂಡಿತ್ಯದ ಪರಿಪಕ್ವತೆಯ ಲಾಭವನ್ನು ಅನುಭವಿಸಿದ ನನ್ನಂಥವರು ಸಾವಿರ ಸಾವಿರ ಮಂದಿ ಅವರನ್ನೆಂದೂ ಮರೆಯಲು ಸಾಧ್ಯವಿಲ್ಲ !

ಅವರು ಕಾಸರಗೋಡು ಬೇರ್ಪಡೆಯಾದಾಗ ಕನ್ನಡ ಪರ ಹೋರಾಟದಲ್ಲಿ ಪಾಲ್ಗೊಂಡಿದ್ದಾರೆ. ಕರ್ನಾಟಕ ಪ್ರಾಂತೀಕರಣ ಸಮಿತಿಯ ಸ್ಥಾಪನೆ ಹೋರಾಟಗಳಲ್ಲಿ ನಿರ್ಣಾಯಕ ಪಾತ್ರ ವಹಿಸಿದ್ದಾರೆ. ಸ್ವಯಂ ಕರ್ನಾಟಕ ಸಮಿತಿಯ ಅಭ್ಯರ್ಥಿಯಾಗಿ ಚುನಾವಣೆಯಲ್ಲಿ ಹೋರಾಡಿದ್ದಾರೆ. ಸಂಸ್ಕೃತ ಭಾಷೆಯ ಬೆಳವಣಿಗೆಗಾಗಿ ನಿರಂತರ ಶ್ರಮಿಸಿದ್ದಾರೆ. ಸಂಸ್ಕೃತ, ಇಂಗ್ಲಿಷ್ ಎರಡೂ ಭಾಷೆಗಳಲ್ಲಿ ಅವರು ಎಂ. ಎ. ಮಾಡಿ ಕೊಂಡಿದ್ದಾರೆ. ಅಪಾರವಾದ ಗ್ರಂಥಾಧ್ಯಯನ ನಡೆಸಿದ್ದಾರೆ. ತಮ್ಮ ಹಿರಿಯರು ಸ್ಥಾಪಿಸಿದ ಮಾತೃ ಶಾಲೆಯ ಉದ್ಧಾರಕ್ಕಾಗಿ ಮಿಕ್ಕ ಅಧಿಕಾರ ಸ್ಥಾನಮಾನಗಳನ್ನು ಕಡೆಗಣಿಸಿದ್ದಾರೆ. ಸಂಸ್ಕೃತದ ವಿವಿಧ ಪರಿಷತ್ತು ಗೋಷ್ಠಿಗಳಲ್ಲಿ ಭಾಗವಹಿಸಿ ವಿಚಾರಗಳನ್ನು ಮಂಡಿಸಿದ್ದಾರೆ. ತಮ್ಮ ಜನ್ಮ ಭೂಮಿಯ ಬಗ್ಗೆ ಅನನ್ಯ ಕಾಳಜಿ ವಹಿಸಿರುವ ಅವರ ದುಡಿಮೆಯ ಫಲ ನಾಡಿಗೆ ಲಭ್ಯವಾಗಿದೆ. ಕರ್ನಾಟಕ ಬ್ಯಾಂಕಿನ ನಿರ್ದೇಶಕರಾಗಿ ನಾಡಿನಾದ್ಯಂತ ಹಲವಾರು ಸಂಸ್ಥೆಗಳ ಏಳಿಗೆಗೆ ದುಡಿದಿದ್ದಾರೆ. ಮಣಿಪಾಲ ಪೈ ಬಂಧುಗಳಿಗೂ ಶ್ರೀಯುತರ ಸಹಕಾರ ಮಾರ್ಗದರ್ಶನ ಬೇಕಾಗಿದೆ. ಎಂತಲೇ ಫೈನಾನ್ಸ್‌ನಲ್ಲಿ ಇವರು ನಿರ್ದೇಶಕರಾಗಿದ್ದರು. ಸದಾ ಹಸನ್ಮುಖದ ಸೇವೆಗೆ ಹೆಸರಾದ ಶ್ಯಾಮ ಭಟ್ಟರು ನಾಡಿನ ಬಹು ದೊಡ್ಡ ತವನಿಧಿ.

ಶ್ರೀಯುತರು ಕನ್ನಡಮ್ಮನ ಸೇವೆಯಲ್ಲಿ ತತ್ಪರರಾಗಿದ್ದಾರೆ. ಕಾಸರಗೋಡಿನ ಪರವಾದ ಹೋರಾಟದಲ್ಲಿ ಮುಂಚೂಣಿಯವರೂ ಗಣ್ಯರೂ ಆಗಿದ್ದಾರೆ. ಈ ಶತಮಾನದಲ್ಲಿ ದಕ್ಷಿಣ ಕನ್ನಡ, ಕೊಡಗು - ಚಿಕ್ಕಮಗಳೂರು, ಉ.ಕ. ಶಿವಮೊಗ್ಗಗಳಲ್ಲೆಲ್ಲಾ ಕನ್ನಡ - ಸಂಸ್ಕೃತ ಪಂಡಿತರಾಗಿ ರುವವರು. ಇವರ ವಿದ್ಯಾಲಯದಿಂದ ಹೊರ ಬಂದವರು ಎಂಬುದು ಇವರ ಹಿರಿಮೆ ಗರಿಮೆಗೆ ಸಾಕ್ಷಿ!

ಧರ್ಮದರ್ಶಿ ಶ್ರೀ ಹರಿಕೃಷ್ಣ ಪುನರೂರು

ಜಿಲ್ಲೆಯ ಸಾಮಾಜಿಕ - ಸಾಂಸ್ಕೃತಿಕ - ಸಾಹಿತ್ಯಿಕ ಚಟುವಟಿಕೆಗಳ ಪರ್ಯಾಯ ನಾಮವಾಗಿ ಇಂದು ಬಳಕೆಯಲ್ಲಿರುವ ಹೆಸರು ಶ್ರೀ ಹರಿಕೃಷ್ಣ ಪುನರೂರು. ಅವರೊಬ್ಬ ನಿಗರ್ವಿ ಸಮಾಜ ಸೇವಕರಾಗಿರುವಂತೆ ಸಾಹಿತ್ಯಾರಾಧಕರೂ ಹೌದು. ಧರ್ಮದರ್ಶಿ ಎಂಬುದು ಅವರ ಅರ್ಹತೆಗೆ ಸಂದ ಬಿರುದು. ಅದಿಂದು ಯಾವ ರೀತಿಯಿಂದಲೂ ಬೇರ್ಪಡದಷ್ಟು ಅವರೊಡನೆ ಬೆಸೆದಿದೆ. ಶ್ರೀ ಕೊಲ್ಲೂರು ಮೂಕಾಂಬಿಕಾ ಕ್ಷೇತ್ರ, ಬಪ್ಪನಾಡು ಕ್ಷೇತ್ರಗಳ ಆಡಳಿತ ಧರ್ಮದರ್ಶಿಗಳಾಗಿದ್ದುದಲ್ಲದೆ ಮಂಗಳೂರಿನ ಕಾರಣಿಕ ಹನುಮಂತ ದೇವಸ್ಥಾನದ ಆಡಳಿತ ಮೊಕ್ತೇಸರರಾಗಿಯೂ ದುಡಿಯುತ್ತಿದ್ದಾರೆ. ನಾಡಿನ ದೇವಸ್ಥಾನಗಳ ಜೀರ್ಣೋದ್ಧಾರ, ಬ್ರಹ್ಮ ಕಲಶ, ಸಾಂಸ್ಕೃತಿಕ ಸಮಾರಂಭಗಳಿಗೆ ಅವರು ಜೀವ ತುಂಬುತ್ತಾರೆ. ಸರಳ ಸಾತ್ವಿಕ ಜೀವಿಯಾದ ಶ್ರೀಯುತರು ಢಾಂಭಿಕ ಮನೋವೃತ್ತಿಯಿಲ್ಲದ ಧರ್ಮನಿಷ್ಠ ಸಜ್ಜನರು. ಅವರ ಕಂಠಸ್ಥವಾಗಿರುವ ಸ್ತುತಿ ಶ್ಲೋಕಗಳು ಅವರ ದೈವ ಭಕ್ತಿಗೆ ಸಾಕ್ಷಿಗಳಾಗಿವೆ.

ಉದ್ಯಮಿಯಾಗಿ ಅವರು ಸಾಕಷ್ಟು ಯಶಸ್ಸನ್ನು ಕಂಡಿದ್ದಾರೆ. ಹೋಟೇಲ್ ಉದ್ದಿಮೆ, ಪೆಟ್ರೋಲ್ ಪಂಪ್, ಟೂರಿಸ್ಟ್ ಹೋಂಗಳನ್ನು ನಡೆಸುತ್ತಿದ್ದಂತೆ ಅವುಗಳಲ್ಲಿಯೂ ಶಿಸ್ತು, ಪ್ರಾಮಾಣಿಕತೆಗಳನ್ನು ಮೈಗೂಡಿಸಿಕೊಂಡು ಬಂದಿದ್ದಾರೆ. ಬಡವರ ಮೇಲಿನ ಅನುಕಂಪ ಪರೋಪಕಾರೀ ಪ್ರವೃತ್ತಿ ಸಾಮಾಜಿಕ ಹಿತಚಿಂತನೆ ಅವರಲ್ಲಿ ಮನೆಮಾಡಿಕೊಂಡಿದೆ. ಧಾರ್ಮಿಕ ಸತ್ಕಾರ್ಯಗಳಲ್ಲಿ ತಮ್ಮನ್ನು ಪೂರ್ಣವಾಗಿ ತೊಡಗಿಸಿಕೊಂಡ ಶ್ರೀಯುತರು ತ್ಯಾಗಜೀವಿ ಎನಿಸಿದ್ದಾರೆ.

ಸಾಹಿತ್ಯದ ಮೇಲೆ ಅವರ ಪ್ರೀತಿ ಅನ್ಯಾದೃಶವಾದುದು. ಸಾಹಿತಿಗಳ ಒಡನಾಟ ಪರಿಚಯ ಅವರೊಡನೆ ಸಮಯ ಕಳೆಯುವುದರಲ್ಲಿ ಪುನರೂರು ಅವರಿಗೆ ವಿಶೇಷ ಆಸಕ್ತಿಯಿದೆ. ನಾಡಿನ ಸಮಸ್ತ ಸಾಹಿತಿಗಳಿಗೂ ಅವರು ಚಿರಪರಿಚಿತರಾಗಿದ್ದಾರೆ. ಸ್ವತಃ ಬರಹಗಾರರಲ್ಲದಿದ್ದರೂ ಅವರ ಸಾಹಿತ್ಯ ಪ್ರೇಮ ಸಹೃದಯತೆ ಮೆಚ್ಚುವಂಥದು ! ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷತೆಯನ್ನು ವಹಿಸಿಕೊಂಡ ತರುವಾಯ ಅವರು ನಡೆಸಿದ ಕಾರ್ಯಕ್ರಮಗಳು ನಾಡಿಗೇ ಮಾದರಿಯೆನಿಸಿವೆ. ತಾಲೂಕು, ಜಿಲ್ಲಾವಾರು ಸಮ್ಮೇಳನಗಳಿಗೆ ಚಾಲನೆ ಕೊಟ್ಟು ಹಳ್ಳಿಯ ಮೂಲೆ ಮೂಲೆಗೆ ಸಾಹಿತ್ಯ ಸಂದೇಶವನ್ನು ಸಾರಿದ ಹರಿಕಾರರೆನಿಸಿದ್ದಾರೆ. ಯಾವುದೇ ತೆರನಾದ ಪ್ರೋತ್ಸಾಹವಿಲ್ಲದೆ ಮೂಲೆಗುಂಪಾದ ಎಷ್ಟೋ ಜನ ಸಾಹಿತಿಗಳನ್ನು ಬೆಳಕಿಗೆ ತಂದಿದ್ದಾರೆ. ಪ್ರತಿಭಾವಂತರನ್ನು ಗುರುತಿಸಿ ಗೌರವಿಸುವ ಸಂಪ್ರದಾಯಕ್ಕೆ ನಾಂದಿ ಹಾಡಿದ್ದಾರೆ. ಸತತ ಅದನ್ನು ಮುಂದುವರಿಸಿಯೂ ಇದ್ದಾರೆ. ಪುಸ್ತಕ ಬರೆದು ಪ್ರಕಟಿಸುವ ಲೇಖಕರಿಗೆ ಧನ ಸಹಾಯ ಮಾಡಿದ್ದಾರೆ. ಸಾಹಿತ್ಯ ಚಟುವಟಿಕೆಗಳಿಗೆ ಅಪಾರ ಹಣ ಖರ್ಚು ಮಾಡಿದ್ದಾರೆ. ಸಾಹಿತಿಗಳಿಗಾಗಿ ಸಾಹಿತ್ಯ ಸೇವೆಗಾಗಿ ತಮ್ಮ ಸ್ವಂತ ಕಾರು ಟ್ಯಾಕ್ಸಿಗಳನ್ನೋಡಿಸಿ ಸಮ್ಮೇಳನಗಳ ಸಂಘಟನೆ ನಡೆಸಿದ್ದಾರೆ. ಐದಾರು ಜಿಲ್ಲಾ ಸಮ್ಮೇಳನಗಳು ಅವರ ಸಾಧನೆಗಳಾಗಿವೆ. ರಾಜ್ಯಕ್ಕೆ ಮಾದರಿಯಂತಿವೆ.

ಮಂಗಳೂರಲ್ಲಿ ಜರಗುತ್ತಿರುವ 66ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೂ ಅವರೇ ಸ್ಫೂರ್ತಿ ಹಾಗೂ ಕಾರಣ ಪುರುಷರು ! ಸೂತ್ರಧಾರರು ಕೂಡಾ !

ಸಾಹಿತ್ಯದ ಕೈಂಕರ್ಯದಲ್ಲಿ ಅವರಿಗೆ ಮೇಲು ಕೀಳು ಎಂಬ ಭೇದವಿಲ್ಲ. ಉದ್ಘಾಟನಾವಸರದಲ್ಲಿ ಹಚ್ಚಿದ ದೀಪದ ಎಣ್ಣೆ ಮುಗಿದು ಆರತೊಡಗಿದರೆ ಅದು ಎಲ್ಲರಿಗಿಂತ ಮೊದಲೇ ಅವರ ಕಣ್ಣಿಗೆ ಬೀಳುತ್ತದೆ. ಅದಕ್ಕೆ ಅವರು ಯಾರನ್ನಾದರೂ ಕರೆದು ಹೀಗೆ ಮಾಡಿ ಎಂದು ಹೇಳುವುದಿಲ್ಲ. ತಾವೇ ವೇದಿಕೆಯಿಂದ ಎದ್ದು ಹೋಗಿ ಬೆಳಗಿಸುವ ಕೆಲಸ ಮಾಡುತ್ತಾರೆ. ಸಾಹಿತ್ಯದ ಜ್ಯೋತಿ ಆರಿಹೋಗಬಾರದೆಂಬ ಕಳಕಳಿ ಅವರದು !

ಸಾಹಿತ್ಯ ಪರಿಷತ್ತಿಗೆ ಅಮೃತ ನಿಧಿ ಸಂಗ್ರಹದಲ್ಲಿಯೂ ಅವರು ದಾಖಲೆ ಸ್ಥಾಪಿಸಿದ್ದಾರೆ. ಇಡೀ ಕರ್ಣಾಟಕವೇ ಅವರ ಚಟುವಟಿಕೆಗಳನ್ನು ಸೂಕ್ಷ್ಮವಾಗಿ ಗಮನಿಸುತ್ತಿದೆ. ಕಳೆದ ವರ್ಷ ಮೂಲ್ಕಿಯಲ್ಲಿ ಜರಗಿದ ಕನ್ನಡ ಸಾಹಿತ್ಯ ಪರಿಷತ್ತಿನ ಸರ್ವ ಸದಸ್ಯರ ಸಭೆಗೆ ನಾಡಿನ ಸಾಹಿತ್ಯಾರಾಧಕರನ್ನು ಕರೆಸಿ ಕಟೀಲು ಮುಂತಾದ ಕ್ಷೇತ್ರಗಳಿಗೂ ಕರೆದುಕೊಂಡು ಹೋಗಿ ಸಾಹಿತ್ಯಾಭಿಮಾನಿಗಳ ಆದರಕ್ಕೆ ಪಾತ್ರರಾಗಿದ್ದಾರೆ.

ವಿದ್ಯಾ ಕ್ಷೇತ್ರಕ್ಕೆ ಅವರು ಅಪಾರ ಸೇವೆ ನೀಡಿದ್ದಾರೆ. ಬಿಜಾಪುರ ನಿರ್ಗತಿಕ ಕುಟುಂಬಿಕರಿಗೆ ಒಂದು ಶಾಲಾ ಕೊಠಡಿಯನ್ನು ರಚಿಸಿ ಸರಕಾರಕ್ಕೆ ನೀಡಿದ್ದಾರೆ. ಮುಲ್ಕಿ ಎಜ್ಯುಕೇಶನ್ ಸೊಸೈಟಿ, ಶಾರದಾ ಎಜ್ಯುಕೇಶನಲ್ ಸೊಸೈಟಿ, ವಠೇಲ್ ವಾಸುದೇವ ರಾವ್ ಮೆಮೋರಿಯಲ್ ಟ್ರಸ್ಟ್ ಮೂಲಕ ಹೈಸ್ಕೂಲ್, ಹೈಯರ್ ಪ್ರೈಮರಿ ಶಾಲೆಗಳನ್ನು ನಡೆಸುತ್ತಿರುವುದು ನೂರಾರು ಬಡ ಮಕ್ಕಳಿಗೆ ಉಚಿತ ಸಮವಸ್ತ್ರ, ಪುಸ್ತಕ, ಕಾಲೇಜು ಫೀಯನ್ನು ನೀಡುತ್ತಿರುವುದು, ಮಕ್ಕಳಿಗಾಗಿ ರಾಗತರಂಗ ಸಂಸ್ಥೆಯನ್ನು ಹುಟ್ಟು ಹಾಕಿ ಸಂಗೀತ, ನೃತ್ಯ ನಾಟಕಗಳ ಬಗ್ಗೆ ಶಾಲೆಯನ್ನು ತೆರೆಯುವ ಮೂಲಕ ಪ್ರತಿಭಾ ವಿಕಸನ ನಡೆಸುತ್ತಿರುವುದು ಇವರ ಶೈಕ್ಷಣಿಕ ರಂಗದ ಸಾಧನೆಗಳು. ಮಂಗಳೂರು ಯೋಗಪೀಠ, ಶ್ರೀ ದೇವಿ ನೃತ್ಯ ಕೇಂದ್ರಗಳ ಸಂಚಾಲಕತ್ವ, ಯಕ್ಷಭಾರತಿಯ ಅಧ್ಯಕ್ಷತೆ, ಯಕ್ಷಗಾನ ಅಧ್ಯಾಪನ ಕೇಂದ್ರ, ಮಂಗಳೂರು ತಾಲೂಕು ವ್ಯವಸಾಯ ಸೇವಾ ಸಹಕಾರಿ ಸಂಘ, ಕಿನ್ನಿಗೋಳಿ ಗ್ರಾಮೀಣ ವ್ಯವಸಾಯ ಸಂಘ, ಮೂಲ್ಕಿ ವಿಜಯ ರೈತ ವ್ಯವಸಾಯ ಸಂಘಗಳ ನಿರ್ದೇಶಕತ್ವ ಇವರ ಸಾಮಾಜಿಕ ಕಳಕಳಿಯ ಗುರುತುಗಳಾಗಿವೆ. ಲಯನ್ಸ್ ಅಂತರಾಷ್ಟ್ರೀಯ ಸಂಸ್ಥೆಯ 324 - ಡಿ4ರ ರಾಜ್ಯಪಾಲರಾಗಿ ಗಳಿಸಿದ ಅಂತರಾಷ್ಟ್ರೀಯ ಮನ್ನಣೆ, ನೇತ್ರ ಚಿಕಿತ್ಸಾ ಶಿಬಿರಗಳ ನಿರ್ವಹಣೆ, ಕನ್ನಡಕದ ದಾನ, ಪ್ರಕೃತಿ ವಿಕೋಪಕ್ಕೆ ಒಳಗಾದ ಸುಮಾರು 500 ಮಂದಿಗೆ ಮನೆಕಟ್ಟುವವರಿಗೆ ಸಲಕರಣೆ ನೀಡಿದುದು ಸದ್ಯ 2 ಕೋಟಿ ವೆಚ್ಚದಲ್ಲಿ ನೂರು ಮನೆಗಳನ್ನು ನಿರ್ಗತಿಕರಿಗಾಗಿ ನಿರ್ಮಿಸುವ ಬೃಹತ್ ಕಾರ್ಯಕ್ರಮ ಇವರ ಸಾಧನೆಗೆ ಗರಿ ಮೂಡಿಸಿದೆ. ಕನ್ಯಾನದ ಭಾರತ ಸೇವಾಶ್ರಮದ ಗೌರವಾಧ್ಯಕ್ಷರಾಗಿ ಅನಾಥ ಸೇವೆಯ ವ್ರತ ತತ್ಪರರಾಗಿದ್ದಾರೆ.

ಸಾಹಿತ್ಯೋಪಾಸಕ ವೀರಪ್ಪ ಮೊಯಿಲಿ

ಶ್ರೀ ವೀರಪ್ಪ ಮೊಯಿಲಿಯವರು ರಾಜಕಾರಣಿಯಾಗಿ ರಾಜ್ಯದ ಮುಖ್ಯ ಮಂತ್ರಿಯಾಗಿ ಹೆಸರಾದವರು. ಅದೇ ಪ್ರಕಾರದಲ್ಲಿ ಸಾಹಿತ್ಯರಂಗದಲ್ಲಿಯೂ ಆಸಕ್ತರಾಗಿದ್ದವರು ಎಂಬುದು ಸಂತಸದ ವಿಚಾರ. ಉತ್ತಮ ಸಾಹಿತ್ಯಾಭಿರುಚಿ ಇದ್ದುದ್ದು. ರಾಜಕೀಯವಾಗಿ ಅವರಿಗೂ ಲಾಭ ತಂದಿರಬಹುದು. ಕನ್ನಡದ ಜನರಿಗೆ ಹಾಗೂ ಕನ್ನಡ ಸಾಹಿತ್ಯಕ್ಕೆ ಲಾಭವಂತೂ ಆಗಿರುವದು ನಿಶ್ಚಿತ. ಆದುದರಿಂದಲೇ ದ. ಕನ್ನಡದ ಸಾಹಿತ್ಯೋಪಾಸಕರ ಸಾಲಿನಲ್ಲಿ ಅವರಿಗೂ ಮನ್ನಣೆಯ ಮಣೆ ಕೊಡಬೇಕಾಗಿದೆ.

ದೇವರಾಜ ಅರಸರ ಕಾಲದಲ್ಲಿ ಸಾಹಿತಿಗಳಿಗೆ ಮಾಸಾಶನ - ಪ್ರೋತ್ಸಾಹ ಕೊಡುವ ಯೋಜನೆ ಜಾರಿಗೆ ಬಂದಿತ್ತು. ಗುಂಡೂರಾಯರ ಕಾಲದಲ್ಲಿ ಅದು ಸಾಕಷ್ಟು ಹೆಚ್ಚಾಗಿ ವಿಶ್ವ ಕನ್ನಡ ಸಮ್ಮೇಳನದ ತಯಾರಿ ಗ್ರಂಥ ಪ್ರಕಟನೆಗಳೆಲ್ಲಾ ನಡೆದವು. ಸಾಹಿತ್ಯ ಕ್ಷೇತ್ರ ಮತ್ತೆ ಜೀವ ಪಡೆದುದು ಶ್ರೀ ಮೊಯಿಲಿಯವರ ಕಾಲದಲ್ಲಿ. ಕನ್ನಡ ಪುಸ್ತಕ ಪ್ರಾಧಿಕಾರದ ರಚನೆ ಅವರ ಬಹು ದೊಡ್ಡ ಕೆಲಸ. ಉತ್ತಮ ಗ್ರಂಥಗಳು, ಹಸ್ತ ಪ್ರತಿಗಳ ಮುದ್ರಣ, ಪ್ರಕಟಣೆ ಲೇಖಕರು ಬರೆದ ಪುಸ್ತಕ ಕೊಳ್ಳುವುದನ್ನು ಜಾರಿಗೆ ತಂದವರು ಅವರು ! ಒಬ್ಬ ಲೇಖಕನ ಒಂದು ಪುಸ್ತಕ ರೂ. 6,000.00ಗಳಷ್ಟು ಖರೀದಿಸುವುದು, ಹೆಚ್ಚು ಕೃತಿಗಳಿದ್ದರೆ ಸುಮಾರು ಮೂವತ್ತು ಸಾವಿರಗಳಷ್ಟು ಬೆಲೆಯ ಪುಸ್ತಕಗಳನ್ನು ಖರೀದಿಸುವುದು ಅವರು ತಂದ ಯೋಜನೆ.

ಅವರು ಮಾಡಿದ ಇನ್ನೊಂದು ಸಾಧನೆ 'ತುಳು ಅಕಾಡೆಮಿ'. ಹಿಂದೆ ಪಣಿಯಾಡಿ, ಶೀನಪ್ಪ ಹೆಗಡೆ, ಕಿಲ್ಲೆ ಮೊದಲಾದವರು ತುಳುವಿನ ಬಗ್ಗೆ ಸಾಧನೆ ನಡೆಸಿದ್ದರೆ ಮೊಯಿಲಿ ಅಂಥ ಸಾಧನೆಗೊಂದು ಮೂರ್ತ ಸ್ವರೂಪ ನೀಡಿದ್ದಾರೆ. ತುಳು ಭಾಷೆಯ ಅಭಿವೃದ್ಧಿ ಬಗ್ಗೆ ಅವರು ವಿಶೇಷ ಕಾಳಜಿ ವಹಿಸಿದ್ದಾರೆ. ಬರೋಡಾ ತುಳು ಸಂಘದವರು ಇದಕ್ಕಾಗಿ ಅವರನ್ನು ವಿಶೇಷವಾಗಿ ಅಭಿನಂದಿಸಿದ್ದಾರೆ.ಅವರು ಶಿಕ್ಷಣ ಸಚಿವರಾಗಿದ್ದಾಗ ಶಾಲಾ ಶಿಕ್ಷಕರ ನೇಮಕಾತಿಯ ಪ್ರಕ್ರಿಯೆಯನ್ನು ಜಾರಿಗೆ ತಂದರು. ಶಿಕ್ಷಣ ಕ್ಷೇತ್ರದಲ್ಲಿ ಕಾರಂತರಂಥವರ ಮಾರ್ಗದರ್ಶನದಿಂದ ಕೆಲಸ ಮಾಡಿದ್ದಾರೆ.

'ಕೊಟ್ಟ' ಕಾದಂಬರಿಯನ್ನು ಕೊಟ್ಟ ಮೊಯಿಲಿ ಕವನ ಸಂಗ್ರಹವನ್ನು ನೀಡಿದ್ದಾರೆ. ಚಲನಚಿತ್ರದಲ್ಲಿಯೂ ಅವರು ಕಥೆ ಲೇಖನಗಳಿಂದ ಯಶಸ್ಸು ಗಳಿಸಿದ್ದಾರೆ. ಅವರು ಬರಹಗಾರರಾಗಿ ಸಾಹಿತ್ಯೋಪಾಸಕರಾಗಿ ನಾಡು ನುಡಿಗಳಿಗೆ ಸಲ್ಲಿಸುತ್ತಿರುವ ಸೇವೆ ಸದಾ ಸ್ಮರಣೀಯವೇ ಸರಿ.

ರಾಜರ್ಷಿ ಡಾ। ಧರ್ಮಸ್ಥಳ ವೀರೇಂದ್ರ ಹೆಗಡೆ


ಶ್ರೀ ಕ್ಷೇತ್ರ ಧರ್ಮಸ್ಥಳದ ಧರ್ಮಾಧಿಕಾರಿಯಾಗಿರುವ ಶ್ರೀ ವೀರೇಂದ್ರ ಹೆಗಡೆಯವರು, ದಿವಂಗತ ಮಂಜಯ್ಯ ಹೆಗಡೆ ಹಾಗೂ ತಮ್ಮ ತೀರ್ಥರೂಪರಾದ ರತ್ನ ವರ್ಮ ಹೆಗಡೆಯವರ ಮಾರ್ಗದಲ್ಲೆ ಸಾಗುತ್ತಿರುವ ಅನನ್ಯ ಮೇಧಾವಿ. ಎಳೆಯ ವಯಸ್ಸಿನಲ್ಲಿಯೇ ಧರ್ಮಾಧಿಕಾರದ ಪಟ್ಟವನ್ನೇರಿ ವಿನಯ - ಸೌಜನ್ಯ - ಸಹೃದಯತೆಗಳಿಂದ ಜನಾನುರಾಗವನ್ನು ಗಳಿಸಿ ಹಿರಿಯರು ಹಾಕಿಕೊಟ್ಟ ಮಾರ್ಗದಲ್ಲಿ ಸಾಗುತ್ತಿದ್ದಾರೆ. ತಾವೇ ಉತ್ತಮ ಯೋಜನೆಗಳನ್ನು ರೂಪಿಸಿ ಜನಹಿತವನ್ನು ಸಾಧಿಸುತ್ತಿದ್ದಾರೆ. ಇಂದು ರಾಷ್ಟ್ರದಾದ್ಯಂತ ಶ್ರೀ ಕ್ಷೇತ್ರದ ಹೆಸರು ಪ್ರಸಿದ್ಧವಾಗಿದೆ. ಶ್ರೀ ವೀರೇಂದ್ರ ಹೆಗಡೆಯವರು ರಾಷ್ಟ್ರೀಯ ವ್ಯಕ್ತಿಯ ಸಾಲಿಗೆ ಸೇರಿದ್ದಾರೆ.

ಶ್ರೀ ಕ್ಷೇತ್ರದಲ್ಲಿ ದೈವಿಕ - ಧಾರ್ಮಿಕ ಪ್ರಕ್ರಿಯೆಗಳು ಎಂದಿನಂತೆ ನಡೆಯುತ್ತಿವೆ. ಅನ್ನದಾನೋಹವಂತೂ ಪ್ರತಿದಿನ ನಡೆಯುತ್ತಲೇ ಇದೆ. ಅತಿಥಿಗಳಿಗೆ ವಸತಿ ಸೌಕರ್ಯ, ಶ್ರೀಕ್ಷೇತ್ರಕ್ಕೆ ಸಂಚಾರ ಸೌಕರ್ಯ, ಆಸ್ಪತ್ರೆ, ಮೊದಲಾದ ಸಕಲ ಸೌಲಭ್ಯಗಳೂ ಸಮಗ್ರ ನಾಗರಿಕ ಸಂಪರ್ಕಗಳು ಇಂದಿಲ್ಲಿ ಲಭ್ಯವೆನಿಸಿವೆ. ಶ್ರೀ ಕ್ಷೇತ್ರದ ಆರ್ಥಿಕ ಸ್ಥಿತಿ ವೃದ್ಧಿಸಿದೆ. ದಾನ ಧರ್ಮ ಹೆಚ್ಚಿದೆ. ಸಾಹಿತ್ಯ ಸಮಾಜ ಸೇವೆ ನಿರಂತರ ನಡೆಯುತ್ತಿದೆ.

ಶ್ರೀ ಧರ್ಮಸ್ಥಳ ಸಾಂಸ್ಕೃತಿಕ ಪ್ರತಿಷ್ಠಾನವು ಸಾಹಿತ್ಯಿಕವಾಗಿ ಪ್ರಮುಖವಾಗಿದೆ. ವಿಶಾಲವಾದ ಗ್ರಂಥಾಲಯವಿದೆ. ಮಂಜುವಾಣಿ ಎಂಬ ಮಾಸ ಪತ್ರಿಕೆ ಸಾಂಸ್ಕೃತಿಕ ವಿಚಾರಗಳನ್ನು ನಿರೂಪಿಸುತ್ತಿದೆ. ಧರ್ಮಾಧಿಕಾರಿಗಳ ಧರ್ಮವಾಣಿ ಇಲ್ಲಿಂದ ಮೊಳಗಿ ಬರುತ್ತಿದೆ. ಉತ್ತಮ ಗ್ರಂಥಗಳ ಪ್ರಕಟಣೆಯ ಯೋಜನೆಯಿದೆ. ಸಾಹಿತ್ಯ ಸಮ್ಮೇಳನ ಧರ್ಮ ಸಮ್ಮೇಳನಗಳು ಹಿಂದಿನಿಂದ ನಡೆದು ಬಂದಂತೆ ಪ್ರತಿ ವರ್ಷವೂ ವಿಶಿಷ್ಟ ರೀತಿಯಲ್ಲಿ ನಡೆಯುತ್ತಿದೆ. ಸಾಹಿತಿಗಳಿಗೆ ಸಮರ್ಪಕವಾದ ಪುರಸ್ಕಾರ ನೀಡಲಾಗುತ್ತಿದೆ.

ವಿದ್ಯಾ ಸಂಸ್ಥೆಗಳು ತಲೆಯೆತ್ತಿವೆ. ಮಂಜಯ್ಯ ಹೆಗಡೆಯವರು ಸ್ಥಾಪಿಸಿದ ಸಿದ್ಧವನ ಗುರುಕುಲ ಉತ್ತಮ ರೀತಿಯಲ್ಲಿ ನಡೆಯುತ್ತಿದೆ. ಅವರು ಸ್ಥಾಪಿಸಿದ ಮಂಜುನಾಥೇಶ್ವರ ಹೈಸ್ಕೂಲ್ (ಉಜ್ರೆ) ಉತ್ತಮ ಕಾಲೇಜಾಗಿ ರೂಪುಗೊಂಡಿದೆ. ಧಾರವಾಡದಲ್ಲಿ ಇಂಜಿನಿಯರಿಂಗ್ ಕಾಲೇಜಿದೆ. ಆಯುರ್ವೇದ ಕಾಲೇಜುಗಳು, ಉಡುಪಿ - ಹಾಸನಗಳಲ್ಲಿವೆ. ಪ್ರಕೃತಿ ಚಿಕಿತ್ಸೆಯ ಕೇಂದ್ರವಿದೆ. ಧರ್ಮಸ್ಥಳ ಮಂಜುನಾಥೇಶ್ವರ ಸಂಚಾರಿ ಆಸ್ಪತ್ರೆಯಿದೆ. ಕ್ಷಯ ರೋಗಿಗಳಿಗೆ ಶುಶ್ರೂಷಾಲಯವಿದೆ. ಹೀಗೆ ನಾಡಿನ ಆದ್ಯಂತ ವಿದ್ಯಾಸಂಸ್ಥೆಗಳು, ಸೇವಾಕೇಂದ್ರಗಳಿವೆ. ಇದು ವೀರೇಂದ್ರ ಹೆಗಡೆಯವರ ಅತ್ಯಮೋಘ ಸಾಧನೆ. ಧರ್ಮಸ್ಥಳದಲ್ಲಿ ಬಾಹುಬಲಿ ಪ್ರತಿಷ್ಠೆ ಮಾಡಿಸಿದ ಕೀರ್ತಿ ಶ್ರೀ ಹೆಗಡೆಯವರಿಗೆ ಸಲ್ಲುತ್ತದೆ. ಉತ್ತಮ ಶಿಲ್ಪಿಗಳಿಂದ ಭವ್ಯವಾದ ಮೂರ್ತಿಯನ್ನು ತಯಾರಿಸಿ ಶ್ರೀಧರ್ಮಸ್ಥಳದಲ್ಲಿ ಸ್ಥಾಪನೆ ಮಾಡಿದ ಅವರ ಸಾಹಸ ಆಶ್ಚರ್ಯಜನಕವಾಗಿದೆ. 'ಅಭಿನವ ಚಾವುಂಡರಾಯ' ಎಂಬ ಬಿರುದಿಗೆ ಅವರು ಭಾಜನರಾಗಿದ್ದಾರೆ.

ಅವರ ಇನ್ನೊಂದು ಆದರ್ಶದ ಕೆಲಸವೆಂದರೆ ಶ್ರೀ ಧರ್ಮಸ್ಥಳ ಗ್ರಾಮೀಣ ಅಭಿವೃದ್ಧಿ ಯೋಜನೆ. ದಕ್ಷಿಣ ಕನ್ನಡ ಶಿವಮೊಗ್ಗ ಮೊದಲಾದ ಜಿಲ್ಲೆಗಳಿಗೆ ಈ ಯೋಜನೆಯ ಮೂಲಕ ಶಾಲಾ ಕೊಠಡಿಗಳನ್ನು ಸಹಾಯಧನವನ್ನೂ ಗ್ರಾಮೀಣ ಶೌಚಾಲಯಗಳ ನಿರ್ಮಾಣಕ್ಕೆ ಆರ್ಥಿಕ ನೆರವನ್ನು ನೀಡುತ್ತಿರುವುದು ಆ ಮಹಾ ಸಾಧನೆ. ಬೆಳ್ತಂಗಡಿ ತಾಲೂಕನ್ನೇ ದತ್ತು ಸ್ವೀಕಾರ ಮಾಡಿ ಗ್ರಾಮೀಣಾಭಿವೃದ್ಧಿ ಸಾಧಿಸುತ್ತಿರುವುದು ಅವರ ಸೇವಾ ಮನೋಭಾವ - ರಾಷ್ಟ್ರೀಯ ವ್ಯಕ್ತಿತ್ವಕ್ಕೂ, ಸಾಮಾಜಿಕ ಕಳಕಳಿಗೂ ಸಂಕೇತವಾಗಿದೆ. ಒಂದು ಬ್ಲೋಕ್ ಡೆವಲಪ್‌ಮೆಂಟ್ ಕಾರ್ಯಾಲಯವನ್ನೇ ಅವರು ಕ್ಷೇತ್ರದ ಪರವಾಗಿ ನಡೆಸುತ್ತಿದ್ದಾರೆ. ಹೀಗೆ ಬಡವರಿಗಾಗಿ, ದೀನ ದಲಿತರಿಗಾಗಿ ಸವಲತ್ತನ್ನು ವ್ಯಯಿಸಿ ಅಹರ್ನಿಶಿ ಲೋಕ ಕಲ್ಯಾಣವನ್ನು ಧಾರ್ಮಿಕ ಚಿಂತನೆಯನ್ನು ನಡೆಸುತ್ತಿರುವ ಶ್ರೀ ವೀರೇಂದ್ರ ಹೆಗಡೆಯವರಂಥ ಕರ್ಮಯೋಗಿಗಳು ನಾಡಿನ ಭಾಗ್ಯದಿಂದ ಉದಯಿಸುತ್ತಾರೆ ಎಂಬುದರಲ್ಲಿ ಸಂದೇಹವಿಲ್ಲ. ಸಾಹಿತ್ಯೋಪಾಸಕರಾಗಿ ಇಂದು ಜಿಲ್ಲೆಯ ಸಾಹಿತ್ಯ - ಸೌಭಾಗ್ಯವನ್ನು ಇವರು ಹೆಚ್ಚಿಸಿದ್ದಾರೆ. ಅರುವತ್ತಾರನೆಯ ಅಖಿಲ ಭಾರತ ಕನ್ನಡ ಸಾಹಿತ್ಯಸಮ್ಮೇಳನದ ಗೌರವಾಧ್ಯಕ್ಷರಾಗಿದ್ದಾರೆ. ಈ ಹಿಂದೆ ಧರ್ಮಸ್ಥಳದಲ್ಲಿ ಇಂಥ ಸಾಹಿತ್ಯ ಸಮ್ಮೇಳನವನ್ನು ಅಡಿಗರ ಅಧ್ಯಕ್ಷತೆಯಲ್ಲಿ ನಡೆಸಿದ ಕೀರ್ತಿಯಂತೂ ಇವರಿಗೆ ಎಂದಿಗೂ ಇರುತ್ತದೆ.



ಶ್ರೀ ನೀರ್ಪಾಜೆ ಭೀಮ ಭಟ್ಟರು ಸಂಸ್ಕೃತ, ಕನ್ನಡ, ಹಿಂದಿ ಭಾಷೆಗಳ ಪ್ರಭುತ್ವವುಳ್ಳ ಸಮರ್ಥ ಲೇಖಕರು. ಪ್ರಸಿದ್ಧ ಚಾರಿತ್ರಿಕ ಕಾವ್ಯವಾದ ಕಲ್ಹಣನ 'ರಾಜತರಂಗಿಣಿ'ಯನ್ನು ಕನ್ನಡಕ್ಕೆ ಅನುವಾದಿಸಿದ ಇವರ ಸಾಹಸ ಸರ್ವತ್ರ ಅಭಿನಂದನೆಗೆ ಪಾತ್ರವಾಗಿದೆ. ಇವರ ಕಾವ್ಯ ಸಂಸಾರ, ಕಾಳಿದಾಸ ಸಮೀಕ್ಷೆ, ರಸವತ್ ಪ್ರಬಂಧಗಳು ಮನನೀಯ ಕೃತಿಗಳಾಗಿವೆ. ಉತ್ತಮ ವಿಡಂಬನಕಾರರಾಗಿಯೂ ಇವರು ಹೆಸರಾಗಿದ್ದಾರೆ. ಸಂಸ್ಕೃತದ ಪ್ರಸಿದ್ಧ ನಾಟಕಗಳನ್ನು ಕನ್ನಡದ ಸಾಮಾನ್ಯ ಓದುಗರಿಗೂ ಅರ್ಥವಾಗುವಂತೆ ರಚಿಸಿದ್ದಾರೆ. ಮಹಾಕವಿ ಬಿಲ್ಹಣನ ವಿಕ್ರಮಾಂಕದೇವಚರಿತಂ ಎಂಬ ಮಹಾಕಾವ್ಯವನ್ನು ಇವರು ಕನ್ನಡ ಗದ್ಯ ರೂಪದಲ್ಲಿ ಅನುವಾದಿಸಿದ್ದು, ಸದ್ಯವೇ ಪ್ರಕಟವಾಗಲಿದೆ.

ಉತ್ತಮ ಸಮಾಜ ಸೇವಕರೂ, ಸಹೃದಯಚಿಂತಕರೂ, ಉತ್ತಮ ಲೇಖಕರೂ ಆಗಿರುವ ಶ್ರೀಯುತರು ದಕ್ಷಿಣ ಕನ್ನಡದ ಸಾಹಿತ್ಯೋಪಾಸಕರನ್ನು ಪರಿಚಯಿಸುವ ಸಾಹಸವನ್ನು ಸುಂದರವಾಗಿ ನಿರ್ವಹಿಸಿದ್ದಾರೆ.

'ಅಭಿಮಾನಿ'